ರವೀಂದ್ರನಾಥ ಠಾಕೂರ್

ಬಾಲಸಾಹಿತ್ಯ

VEC, Library
001332
ಹೊಸಗನ್ನಡ
ಕಾವ್ಯ

VEC, Library
001332
448

VECKAN895

ರವೀಂದ್ರನಾಥ ಠಾಕೂರ್

ಬಾಲಸಾಹಿತ್ಯ

VIJAYA EVENING COLLEGE
LIBRARY
BANGALORE-4.
ACCN. NO. 1332
SECTION.
COST 6=00
Date 23.8.69 Librarian.

ರವೀಂದ್ರನಾಥ ಠಾಕೂರ್

ಬಾಲಸಾಹಿತ್ಯ

ಬಂಗಾಲಿಯಿಂದ ಅನುವಾದ

ಎಸ್. ಜಿ. ಕುಲಕರ್ಣಿ

ಸಾಹಿತ್ಯ ಅಕಾದೆಮಿ
ನವದೆಹಲಿ

Bala Sahitya—A selection of Rabindranath Tagore's writings for children, compiled and edited by Lila Majumdar and Kshitis Roy. Translated into Kannada by S. G. Kulkarni. Introduction carries a biographical sketch of Tagore by Lila Majumdar, translated into Kannada by S. Balu Rao. Sahitya Akademi, New Delhi, 1965

Price : Rs. 6

© ಸಾಹಿತ್ಯ ಅಕಾದೆಮಿ, ನವದೆಹಲಿ

ಮೊದಲ ಮುದ್ರಣ : 1965

ಮಾರಾಟಗಾರರು

ಕಾವ್ಯಾಲಯ, ಮೈಸೂರು—4

Also available at :
SAHITYA AKADEMI
Rabindra Bhavan, New Delhi-1
38/B, Mount Road, Madras-6

ಮುದ್ರಕರು :

ವೆಸ್ಲಿ ಪ್ರೆಸ್, ಮೈಸೂರು

ಬೆಲೆ : ರೂ. 6

ಕಥೆ

ವಿಷಯಸೂಚಿಕೆ

		ಪುಟ
	ನಮ್ಮ ಕವಿ	1
1.	ದೇಶದ ಮಣ್ಣು	15
2.	ರಾಜನ ಮನೆ	17
3.	ದೂರದ ಅಂಚೆ	20
4.	ಮಳೆ ಬಂದಿತು ತಟಪಟ	22
5.	ಶಂಭು	25
6.	ಕಾಳರಾತ್ರಿಯು ಕಳದೆ ಹೋಯಿತು	28
7.	ಮುತ್ತಿನ ಮಡುವು	29
8.	ಗಿಳಿಯ ಕತೆ	30
9.	ಗುರುಗಳು	34
10.	ವನವಾಸ	38
11.	ಶಿಷ್ಯನ ಪರೀಕ್ಷೆ	41
12.	ಮರದ ಬುಡದಲಿ ಅಂದು ಕಪ್ಪು ಕವಿದಿತ್ತು	44
13.	ಪುಷ್ಯದ ಜಾತ್ರೆ	45
14.	ವಿಚಿತ್ರ ಬಯಕೆ	48
15.	ಮ್ಯಾಜಿಸಿಯನ್	50
16.	ಅದರ ಭಯ, ಭಯಂಕರ	55
17.	ಮಾಸ್ಟರ ಬಾಬು	56
18.	ಮಾಸ್ಕೋದ ಪತ್ರ	58
19.	ಸಮದುಃಖಿ	60
20.	ಖ್ಯಾತಿಯ ವಿಡಂಬ	62
21.	ತಾಲವೃಕ್ಷ	71
22.	ಶಿಕ್ಷಣದ ಪ್ರಾರಂಭ	72
23.	ಮೂರ್ಖ	76
24.	ಕವಿತೆಯನ್ನು ಬರೆಯಲು ಪ್ರಾರಂಭಿಸಿದ್ದು	78
25.	ದಾರಿ ಕಳೆದುಕೊಂಡೆನು	81
26.	ಅಬ್ದುಲ್ ಅಂಬಿಗನ ಕತೆ	83

ಪುಟ

27. ರಾಜಾ ಮತ್ತು ರಾಣಿ 86
28. ಹುಲ್ಲಿನಲ್ಲಿ ವಿಟ್ಯಾಮಿನ್ 88
29. ಗೇಛೊ ಬಾಬಾ 89
30. ಅಕ್ಕ 94
31. ಈ ದೇಶದಲ್ಲಿ ಹುಟ್ಟಿದೆನ್ನ ಜನ್ಮ ಸಾರ್ಥಕ 96
32. ಕೃತ್ರಿಮ ಕೋಟೆ 97
33. ನಮ್ಮದೊಂದು ಚಿಕ್ಕ ನದಿ 99
34. ಲಕ್ಷ್ಮಿಯ ಪರೀಕ್ಷೆ 100
35. ಕ್ಷುದ್ರನ ಜಂಭ 134
36. ಕೌಟುಂಬಿಕ ವಿಚಾರ 135
37. ಭಕ್ತಿ ಪಾತ್ರ 136
38. ಮಧ್ಯಮನ ಜಾಗರೂಕತೆ 137
39. ಮೋಹ 138
40. ವಿಷಮ ವಿಪತ್ತು 139
41. ದಳ್ಳುರಿ 141
42. ಕಿರಿಯ-ಹಿರಿಯ 142
43. ಮುಕುಟ 145
44. ಪ್ರಾರ್ಥನೆ 164
45. ನಿನ್ನ ಧ್ವಜವನು ಎತ್ತಿ ಹಿಡಿಯುವ 165
46. ರಾಜರ್ಷಿ 166
47. ಭಾರತತೀರ್ಥ 176
48. ದುಗುಡದಿಂದ ಪಾರುಮಾಡು 180
49. ಸ್ವದೇಶಿಕತೆ 181
50. ಅಪರಿಚಿತರ ಪರಿಚಯ 189
51. ಪ್ರವಾಸಿ 190
52. ನಿನ್ನ ಕರೆಯ ಕೇಳಿ 195
53. ಪುಕುರಪಾಡು ಎಂಬ ಊರು 196
54. ಅನಧಿಕಾರ ಪ್ರವೇಶ 198
55. ಜಗವು ಮುಕ್ತಕಂಠದಿಂದ 204
56. ಪುರಾತನ ಭೃತ್ಯ 205
57. ಇಂದು ನಾನು ಬೆಳಗಿನಲ್ಲಿ 210
58. ಇಚ್ಛಾಪೂರ್ಣ 212
59. ನಗುನಗುತ ಬೇಸಾಯ ಗೈಯುವೆವು ನಾವು 219

				ಪುಟ
60.	ಮೋಡದ ಅಂಚಿಗೆ ನಗುತಿದೆ ಬಿಸಿಲು	....	....	220
61.	ಗುಪ್ತಧನ	....	....	221
62.	ಪಾದರಕ್ಷೆಯ ಸಂಶೋಧನ	....	....	244
63.	ಕಠಿಣ ಕಬ್ಬಿಣವು ಮಲಗಿತ್ತು	....	....	249
64.	ಮುಂಬೈ ನಗರ	....	....	250
65.	ಪುಸ್ತಕ ವಿಕ್ರಯ	....	....	255
66.	ಪ್ರತಿಷ್ಠಾ ದಿನದ ಉಪದೇಶ	....	....	259
67.	ವೀರಪುರುಷ	....	....	263
68.	ಚಲಿಸುವ ಕಲಕತ್ತ	....	....	266
69.	ಪೂಜಾರಿಣಿ	....	....	269
70.	ಆಶ್ರಮದ ಸ್ವರೂಪ ಮತ್ತು ವಿಕಾಸ	....	....	274
71.	ಸುಖ-ದುಃಖ	....	....	281
72.	ಸ್ಪರ್ಶಮಣಿ	....	....	283

ನಮ್ಮ ಕವಿ

ಕಲಕತ್ತೆಯ ಉತ್ತರ ಭಾಗದಲ್ಲಿ ಹಳೆಯ ಕಾಲದ ಕಿಕ್ಕಿರಿದ ರಸ್ತೆಯೊಂದಿದೆ. ಟ್ರಾಮು, ಬಸ್ಸು, ಕಾರು, ಎತ್ತಿನ ಗಾಡಿ, ಜನ — ಅಲ್ಲಿ ಎಲ್ಲವೂ ಎಣಿಸಲಾರದಷ್ಟು. ರಸ್ತೆಯ ಎರಡೂ ಕಡೆ ಮನೆಗಳು ಹೆಗಲಿಗೆ ಹೆಗಲು ತಾಕಿಸಿ ನಿಂತಿರುತ್ತವೆ. ಅವುಗಳ ನಡುವೆ ಎಲ್ಲೂ ಚೂರು ಬಯಲು ಜಾಗವಿಲ್ಲ. ಆ ರಸ್ತೆಯಿಂದ ಒಂದು ಓಣಿ ಹೊರಡುತ್ತದೆ. ಅಲ್ಲಿ ಮೊದಲು ಕೆಲವು ಮನೆಗಳು, ಆಮೇಲೆ ಒಂದು ಸಣ್ಣ ಗುಡಿ, ಇನ್ನೂ ಕೆಲವು ಮನೆಗಳು. ನಂತರ ಆ ಓಣಿ ಒಂದು ಹೆಬ್ಬಾಗಿಲಿನ ಮುಂದೆ ಬಂದು ನಿಲ್ಲುತ್ತದೆ.

ಹೆಬ್ಬಾಗಿಲಿಗೆ ಎದುರಾಗಿ ಮೂರು ಅಂತಸ್ತಿನ ಒಂದು ಬಂಗಲೆಯಿದೆ. ಅದಕ್ಕೆ ಸಾಲು ಸಾಲು ಕಿಟಕಿಗಳು, ಉದ್ದವಾದ ಬಾಲ್ಕನಿಗಳು. ತೊಂಬತ್ತು ವರ್ಷ ಅಥವಾ ಅದಕ್ಕೂ ಹಿಂದಿನ ಮಾತು. ಮಳೆಗಾಲದ ಎಷ್ಟೋ ದಿನ ತೆಳ್ಳಗೆ ಬೆಳ್ಳಗೆ ಸುಂದರನಾಗಿದ್ದ ಹುಡುಗನೊಬ್ಬನು ಓಣಿಯ ಕಡೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಅಲ್ಲಿ ನಿಂತಿರುತ್ತಿದ್ದ. "ಮಳೆಯ ನೆಪ ಮಾಡಿ, ಇವತ್ತು ಪಾಠದ ಮೇಷ್ಟರು ಬರದೇ ಇದ್ದರೆ ಎಷ್ಟು ಚೆನ್ನ" ಎಂದು ಬಯಸುತ್ತಿತ್ತು ಅವನ ಮನಸ್ಸು. ಆದರೆ ಅಯ್ಯೋ! ಕೈಯಲ್ಲೊಂದು ದೊಡ್ಡ ಕೊಡೆ ಹಿಡಿದು, ಜೋಪಾನವಾಗಿ ತಮ್ಮನ್ನು ತಾವು ಮಳೆಯಿಂದ ರಕ್ಷಿಸಿಕೊಳ್ಳುತ್ತ ಹೊತ್ತಿಗೆ ಸರಿಯಾಗಿ ಓಣಿಯ ತಿರುವಿನಲ್ಲಿ ಕಾಣಿಸಿಕೊಳ್ಳುತ್ತಿದ್ದರು ಆ ಮೇಷ್ಟರು.

ಆ ಪುಟ್ಟ ಹುಡುಗನ ಹೆಸರು ರವೀಂದ್ರನಾಥ ಠಾಕೂರ್; ಮನೆಯಲ್ಲಿ ಮುದ್ದಿಗೆ ಕರೆಯುತ್ತಿದ್ದುದು 'ರವಿ' ಎಂದು. ಅವರಿದ್ದ ಓಣಿ, ದೇವೇಂದ್ರನಾಥ ಠಾಕೂರ್ ಓಣಿ. ಆ ಹಳೆಯ ರಸ್ತೆ ಕಲಕತ್ತೆಯ ಚಿತಪುರದ ದೊಡ್ಡ ರಸ್ತೆ. ಬಂಗಲೆ ಜೋರಾಸಾಂಕೋವಿನ ಠಾಕೂರರ ಪೂರ್ವಿಕರದು.

ಹುಟ್ಟಿದಾಗಿನಿಂದ ಪುಟ್ಟ ರವಿ ಅಲ್ಲೇ ವಾಸಿಸಿದ್ದರೂ ಅವನು ಬಂಗಲೆಯೆಲ್ಲವನ್ನೂ ಪೂರ್ತಿಯಾಗಿ ನೋಡಿರಲಿಲ್ಲ. ಅಷ್ಟು ವಿಶಾಲವಾಗಿತ್ತು ಅದು. ಇಲ್ಲೊಂದು ತುಣುಕು ಅಂಗಳ, ಅಲ್ಲೊಂದು ಕತ್ತಲ ಕೋಣೆ, ಅದರ ಆ ಕಡೆ ಮೇಲೆ ಯಾವದೋ ಕಾಣದ ಲೋಕಕ್ಕೆ ಕರೆದೊಯ್ಯುವ ಕಿರಿದಾದ ಸುತ್ತು ಬಳಸಿನ ಮಹಡಿ, ಅಲ್ಲಿ ಬದಿಯಲ್ಲೇ ಅಂದವಾಗಿ ಸಜ್ಜುಗೊಳಿಸಿದ ವಿಶಾಲವಾದ ಹಜಾರ, ಒಂದೆಡೆ ಸಂಗೀತ ಕಚೇರಿ ನಡೆಯುತ್ತಿದ್ದರೆ ಇನ್ನೊಂದೆಡೆ ಯಾವದೋ ನಾಟಕದ ಸಿದ್ಧತೆ. ಮತ್ತೊಂದೆಡೆ ಇಳಿರಾತ್ರಿಯಾದರೂ ಇನ್ನೂ ಮುಗಿಯದ ಅತಿಥಿ ಮಹಾಶಯರ ಮಾತುಕತೆ—ಹೀಗೆ ದಂಗು ಬಡಿಸುತ್ತಿತ್ತು ಆ ಮನೆಯ ವ್ಯವಹಾರ.

ಇವೆಲ್ಲದರ ನಡುವೆ ರವಿ ಬೆಳೆದು ದೊಡ್ಡವನಾದ. ಅವನಿಗೆ ಹದಿಮೂರು ಜನ ಅಣ್ಣ ಅಕ್ಕಂದಿರು ; ಒಬ್ಬ ತಮ್ಮ. ಆ ತಮ್ಮ ಮುಂದೆ ಒಂದು ವರ್ಷದ ಪ್ರಾಯದಲ್ಲೇ ತೀರಿಕೊಂಡ.

ಠಾಕೂರರದು ಬ್ರಾಹ್ಮಣ ಮನೆತನ. ಪಾಂಡಿತ್ಯ ಸಂಸ್ಕೃತಿಗಳಲ್ಲಿ ಇತರರೆಲ್ಲರಿಗಿಂತ ಬಹಳ ಮುಂದಿದ್ದ ಅವರು ಆ ಕಾಲದಲ್ಲಿ ಸಮಾಜದ ಮುಖಂಡರಾಗಿದ್ದರು. ಆದರೂ ಮಡಿವಂತರು ಮಾತ್ರ ಅವರನ್ನು 'ಪೀರಾಲಿ ಬ್ರಾಹ್ಮಣ' ರೆಂದು ತಾತ್ಸಾರ ಮಾಡುತ್ತಿದ್ದರು. ಠಾಕೂರರ ಪೂರ್ವಿಕರು ಮುಸಲಮಾನರೊಡನೆ ಹೋಗಿಬರುವ ರೂಢಿಯಿಟ್ಟುಕೊಂಡಿದ್ದು, ಅದರಿಂದ ಅವರ ಜಾತಿ ಕೆಟ್ಟಿತ್ತೆಂದು ಹೇಳಲಾಗುತ್ತಿದ್ದುದೇ ಇದಕ್ಕೆ ಕಾರಣ.

ರವಿಯ ತಾತನನ್ನು ಎಲ್ಲರೂ ರಾಜಕುಮಾರ ದ್ವಾರಕಾನಾಥ್ ಎಂದು ಕರೆಯುತ್ತಿದ್ದರು. ಅವರ ಐಶ್ವರ್ಯ ಅಂತಸ್ತುಗಳು ಈ ದೇಶದಲ್ಲಷ್ಟೇ ಏಕೆ, ಯೂರೋಪಿನಲ್ಲೂ ಹೆಸರುವಾಸಿಯಾಗಿದ್ದವು. ಅವರಿಗಿಂತಲೂ ಒಂದು ಕೈ ಹೆಚ್ಚು ಪ್ರಸಿದ್ಧರಾಗಿದ್ದವರೆಂದರೆ ರವಿಯ ತಂದೆ ದೇವೇಂದ್ರನಾಥರು. ಅವರ ಜ್ಞಾನ, ಪಾಂಡಿತ್ಯ, ಋಷಿ ಗುಣಗಳನ್ನು ಗಮನಿಸಿ ಜನ ಅವರನ್ನು 'ಮಹರ್ಷಿ' ಎಂದು ಕರೆಯುತ್ತಿದ್ದರು.

ಒಂದು ಕಾಲದಲ್ಲಿ ಠಾಕೂರ ಮನೆತನದ ಐಶ್ವರ್ಯ ಹೇಳತೀರದಷ್ಟಿತ್ತು. ಅವರದು ಬಹು ದೊಡ್ಡ ಜಮೀನುದಾರಿ. ಜೋರಾಸಾಂಕೋವಿನ ಮನೆಯನ್ನು ಕಟ್ಟಿದ್ದವರು ರವಿಯ ತಾತನ ತಾತ. ಅವರ ಕಾಲದಿಂದೀಚೆಗೆ ಮನೆತನದ ಸ್ಥಿತಿಗತಿಗಳು ಇಳಿಮುಖವಾಗಿದ್ದರೂ ಕಳೆದು ಉಳಿದಿದ್ದುದೇನೂ ಕಡಿಮೆಯಲ್ಲ. ಇಷ್ಟಾದರೂ ರವಿಯ ಬಾಲ್ಯ ಜೀವನ ಮಾತ್ರ, ಕುಟುಂಬದ ಇತರ ಜೊತೆ ಹುಡುಗರದಂತೆಯೇ ತೀರಾ ನಿರಾಡಂಬರವಾಗಿ ಕಳೆಯಿತು. ಅವನು ಚಳಿಗಾಲದಲ್ಲಿ ಉಡುತ್ತಿದ್ದುದು ಸಹ ಸಾಧಾರಣವಾದ ಹತ್ತಿಯ ಬಟ್ಟೆಯನ್ನೇ. ಬೂಟು ಕಾಲಚೀಲಗಳ ಮುಖ ನೋಡಿದ್ದು ಮುಂದೆ ಯಾವಾಗಲೋ. ತಿನ್ನುತ್ತಿದ್ದ ಆಹಾರ ಯಾವ ಅರ್ಥದಲ್ಲೂ ಸೊಗಸಿನದೆಂದು ಕರೆಸಿಕೊಳ್ಳುವಂತಿರಲಿಲ್ಲ.

ರವಿಯ ಜೀವನ ತುಂಬ ಸಾಧಾರಣವಾಗಿದ್ದು, ಆಧುನಿಕ ಜೀವನಮಟ್ಟಕ್ಕೆ ಹೋಲಿಸಿ ನೋಡಿದಾಗ ಕಠಿನವೆಂದೆನಿಸಿಕೊಳ್ಳುವಂತಿದ್ದರೂ ಮನೆಯಲ್ಲಿ ಮಾತ್ರ ಸದಾ ಹಬ್ಬದ ಸಂಭ್ರಮ ತುಳುಕಾಡುತ್ತಿರುತ್ತಿತ್ತು. ಆದರೆ ಹಬ್ಬ ಉತ್ಸವಗಳೆಲ್ಲವೂ ಮನೆಯ ಹಿರಿಯರಿಗೆ ಮೀಸಲು. ಅದರಲ್ಲಿ ಮಕ್ಕಳಿಗೆ ಪಾಲಿಲ್ಲ. ಎಲ್ಲೋ ಒಮ್ಮೊಮ್ಮೆ ಹಾಡಿನ ಒಂದು ನುಡಿಯೋ ನಾಟಕದ ಒಂದು ಮಾತೋ ಮಕ್ಕಳ ಕಿವಿಯವರೆಗೂ ತೇಲಿ ಬಂದು ಅವರ ಸಂತೋಷ ಕುತೂಹಲಗಳನ್ನು ಕೆರಳಿಸುತ್ತಿತ್ತು. ಮಕ್ಕಳು ಸಂಯಮ ಕಲಿಯಲು ಇದೂ ಒಂದು ಒಳ್ಳೆಯ ಮಾರ್ಗವೇ !

ಇನ್ನೂ ತೊಟ್ಟಿಲು ಬಿಟ್ಟೆಳೆಯುವುದಕ್ಕಿಲ್ಲ, ರವಿಗೆ ಒಳಮನೆಯ ಹೆಂಗಸರ ಪೋಷಣೆ ತಪ್ಪಿ, ಅವನು ಮನೆಯ ಹೊರಗಿನ ಕೋಣೆಗಳಲ್ಲಿ ಆಳುಗಳ ಮೇಲ್ವಿಚಾರಣೆಯಲ್ಲಿ ಬೆಳೆಯುವಂತಾಯಿತು. ಇದು ಆ ಕಾಲದ ಶ್ರೀಮಂತ ಕುಟುಂಬಗಳಲ್ಲಿನ

ಸಂಪ್ರದಾಯ. ರವಿಗೆ ಊಟ ತಿಂಡಿ ಕೊಡುತ್ತಿದ್ದವರು ಸಹ ಆಳುಗಳೇ. ರಾತ್ರಿಯ ಹೊತ್ತು ಮಲಗಲು ಮಾತ್ರ ರವಿ ಒಳಗೆ ತಾಯಿಯ ಕೋಣೆಗೆ ಹೋಗುತ್ತಿದ್ದ. ಅಲ್ಲಿ ಮನೆಯ ಮುದಿ ಅತ್ತೆಯೊಬ್ಬರು ಅವನಿಗೆ ಕಥೆ ಹೇಳುತ್ತಿದ್ದರು. ಈ ಆಳುಗಳ ಕೈಕೆಳಗೆ ರವಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಮುಂದೆ ಬಾಲ್ಯದ ಅನುಭವಗಳನ್ನು ನೆನಸಿಕೊಳ್ಳುತ್ತ ರವಿ ಕರೆದಂತೆ ಅದು 'ನೌಕರ ಪ್ರಭುತ್ವ' ವಾಗಿತ್ತು.

ಆಳುಗಳಲ್ಲೊಬ್ಬ ತನ್ನ ಗೆಳೆಯರನ್ನು ಕಂಡುಬರಲು ಆಗಾಗ ಕದ್ದು ಹೊರಟು ಬಿಡುತ್ತಿದ್ದ. ಹೋಗುವ ಮೊದಲು ರವಿಯ ಸುತ್ತಲೂ ಸೀಮೆಸುಣ್ಣದಿಂದ ಗೆರೆ ಎಳೆದು, 'ಇದರಾಚೆ ಕಾಲಿಟ್ಟರೆ ಜೋಕೆ!' ಎಂದು ಬೆದರಿಕೆ ಹಾಕಿ ಹೋಗುತ್ತಿದ್ದ. ಹೀಗೆ ಗಂಟೆಗಟ್ಟಲೆ ಕೂತಲ್ಲೇ ಕೂತಿರಬೇಕಾಗುತ್ತಿತ್ತು ರವಿ. ಅದೃಷ್ಟವಶಾತ್ ಅಲ್ಲಿ ಹತ್ತಿರದಲ್ಲೇ ಒಂದು ಕಿಟಕಿಯಿತ್ತು. ರವಿ ಅದರ ಬಳಿ ನಿಂತು ಅದರಾಚೆಗಿದ್ದ ಕೊಳವನ್ನು, ಅಲ್ಲಿಗೆ ಸ್ನಾನಕ್ಕೆ ಬರುವವರನ್ನು, ಬದಿಯಲ್ಲಿ ಬೆಳೆದಿದ್ದ ಆಲದ ಮರವನ್ನು ನೋಡುತ್ತ ಕಾಲ ದೂಡುತ್ತಿದ್ದ. ಮುಂದೆ ಈ ನೆನಪುಗಳೆಲ್ಲವೂ ಕಾವ್ಯವಾಗಿ, ಗದ್ಯವಾಗಿ ಅರಳಿದವು.

ರವಿಗಿದ್ದವರೆಂದರೆ ಇಬ್ಬರು ಸ್ನೇಹಿತರು—ಒಬ್ಬ ಅಣ್ಣ, ಇನ್ನೊಬ್ಬ ಸೋದರಳಿಯ. ವಯಸ್ಸಿನಲ್ಲಿ ಅವರಿಬ್ಬರೂ ರವಿಗಿಂತ ಸ್ವಲ್ಪ ಹಿರಿಯರು. ಅವರು ಶಾಲೆಗೆ ಹೊರಟಾಗ ಅವರನ್ನು ಕರೆದೊಯ್ಯಲು ಬರುತ್ತಿದ್ದ ಗಾಡಿಯನ್ನು ಕಂಡು ರವಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ— ತಾನೂ ಶಾಲೆಗೆ ಹೋಗಬೇಕೆಂದು. ಮನೆಯ ಮೇಷ್ಟರು ಎಷ್ಟೇ ಸಮಾಧಾನ ಮಾಡಿದರೂ ಕೇಳುತ್ತಿರಲಿಲ್ಲ. ಕೊನೆಗೆ ಕೋಪದಿಂದ ಅವರು ರವಿಯ ಕೆನ್ನೆಗೆ ಎರಡು ಬಿಗಿದು ಅನ್ನುತ್ತಿದ್ದರು, "ಶಾಲೆಯ ಕಾಟ ತಪ್ಪಿದರೆ ಸಾಕೆಂದು ಇದಕ್ಕೂ ಹೆಚ್ಚು ಅಳುವ ಕಾಲ ಬರುತ್ತದೆ, ನೋಡುತ್ತಿರು." ಅದು ಆದದ್ದೂ ಹಾಗೇ.

ಶಾಲೆಗೆ ಸೇರಿದ ಮೇಲೆ ರವಿಗೆ ಅದೊಂದು ಸೆರೆಮನೆ ಅನ್ನಿಸಿತು. ಅಂದಚಂದವಿಲ್ಲದ ಒಂದು ಕೋಣೆಯಲ್ಲಿ ಬೆಂಚಿಗೆ ಅಂಟಿ ಕುಳಿತಿರುವುದು ಅವನಿಂದಾಗಲಿಲ್ಲ. ಸದಾ ಅಲ್ಲಿಂದ ತಪ್ಪಿಸಿಕೊಂಡು ಬರುವುದು ಹೇಗೆಂಬುದೊಂದೇ ಯೋಚನೆ. ಒಂದರ ಮೇಲೊಂದರಂತೆ ಮೂರು ಶಾಲೆಗಳ ಕಟ್ಟೆಹತ್ತಿ, ಕೊನೆಗೆ ಹೋಗುವುದನ್ನೇ ನಿಲ್ಲಿಸಿದ ರವಿ. ಮನೆಯ ಹಿರಿಯರಿಗೆ ಬಹಳ ಬೇಸರವಾಯಿತು. ಹುಡುಗ ನಿರುಪಯೋಗಿಯಾಗುವನೆಂದುಕೊಂಡರು ಅವರು.

ರವಿಯ ದ್ವೇಷ ಶಾಲೆಯ ಮೇಲೆಯೇ ಹೊರತು ಓದಿನ ಮೇಲಲ್ಲ. ಅವನು ಇಡೀ ದಿನ ಕಲಿಯುತ್ತಿದ್ದ—ಮೊದಲೊಂದು ಗಂಟೆ ಕಾಲ ಕುಸ್ತಿ, ಕಸರತ್ತು; ಆಮೇಲೆ ಬಂಗಾಳೀ, ಸಂಸ್ಕೃತ, ಚರಿತ್ರೆ, ಭೂಗೋಳ, ವಿಜ್ಞಾನ, ಆರೋಗ್ಯಶಾಸ್ತ್ರ, ಸಂಗೀತ, ಚಿತ್ರಕಲೆ; ಕಡೆಯಲ್ಲಿ ಇಂಗ್ಲಿಷು. ಕಲಿಸಿದ್ದೆಲ್ಲವನ್ನೂ ಒಮ್ಮೆಲೇ ಗ್ರಹಿಸುವಷ್ಟು ಚುರುಕು ಬುದ್ಧಿ ಅವನದು. ಶಾಲೆಯ ನಾಲ್ಕು ಗೋಡೆಗಳೊಳಗೆ ಕೂಡಿಹಾಕಿಸಿಕೊಂಡು ಕಲಿಯುವುದೆಂದರೆ ಅವನಿಗಾಗದು. ಅದರಿಂದ ದಿನದ ಎಷ್ಟೊಂದು ಹೊತ್ತು ವೃಥಾ ಹಾಳಾಗುತ್ತಿತ್ತು.

ಹನ್ನೊಂದು ವರ್ಷ ತುಂಬಿದ ಕೆಲವು ದಿನಗಳಲ್ಲೇ ರವಿಗೆ ಮುಂಜಿಯಾಯಿತು.

ಮುಂಜಿಯ ನಂತರ ತಂದೆ ದೇವೇಂದ್ರನಾಥರು ಮಗನಿಗೆ ಹಿಮಾಲಯದ ಯಾತ್ರೆ ಮಾಡಿಸಿ ಬರಲು ಕರೆದೊಯ್ದರು. ರವಿ ಸಂತೋಷದಿಂದ ಅವರೊಡನೆ ಹೊರಟ. ಅವರು ಮೊದಲು ಪಶ್ಚಿಮ ಬಂಗಾಳದ ಬೋಲಪುರಕ್ಕೆ ಬಂದರು. ಅಲ್ಲಿ ಮಹರ್ಷಿ ದೇವೇಂದ್ರ ನಾಥರು ಶಾಂತಿ ಹಾಗೂ ಧ್ಯಾನಸಾಧನೆಗಳಿಗೆ ಅನುವಾಗಲೆಂದು ಒಂದು ಆಶ್ರಮ ಕಟ್ಟಿ ಅದಕ್ಕೆ 'ಶಾಂತಿನಿಕೇತನ'ವೆಂದು ಹೆಸರಿಟ್ಟಿದ್ದರು. 'ಶಾಂತಿನಿಕೇತನ'ವೆಂದರೆ 'ಶಾಂತಿಯ ನೆಲೆ' ಎಂದು ಅರ್ಥ. ಈ ಪ್ರವಾಸಕಾಲದಲ್ಲಿ ತಂದೆ ಮಗನಿಗೆ ಸಂಸ್ಕೃತ, ಇಂಗ್ಲಿಷು ಮತ್ತು ಖಗೋಳ ಶಾಸ್ತ್ರಗಳಲ್ಲಿ ಪಾಠ ಹೇಳಿದರು. ಮಗ ತಂದೆಗೆ ಜವಾಬ್ದಾರಿಯ ಕೆಲಸಗಳನ್ನು ಮಾಡಿಕೊಡಲು ಕಲಿತ. ಈ ಪ್ರವಾಸದಲ್ಲೇ ರವಿ ದೊರೆ ಪೃಥ್ವಿರಾಜನ ಇತಿಹಾಸ ಪ್ರಸಿದ್ಧವಾದ ಸೋಲಿನ ಮೇಲೆ ಒಂದು ಪದ್ಯನಾಟಕವನ್ನೂ ಬರೆದ. ಅದನ್ನು ಓದಿದರೆ ಈ ತರುಣ ಕವಿ ಎಷ್ಟು ಹಿಂದೆಯೇ ತನ್ನ ರಾಷ್ಟ್ರದ ಮುಂದೆಸೆಯನ್ನು ಕುರಿತು ಚಿಂತಿಸಿದ್ದನೆಂಬುದು ಕಂಡು ಬರುತ್ತದೆ.

ಹಿಮಾಲಯದಿಂದ ಹಿಂದಿರುಗಿ ಬಂದ ಮೇಲೆ ರವಿಯಲ್ಲಿ ಅದ್ಭುತ ಬದಲಾವಣೆಗಳಾದವು. ಶಾಲೆಯ ಬಗ್ಗೆ ರವಿಗೆ ಎಂದಿನಂತೆ ಬೇಸರವಿದ್ದರೂ ಇನ್ನು ಅವನನ್ನು ಮಗು ಅನ್ನುವಂತಿರಲಿಲ್ಲ.

ಮರುವರ್ಷ ರವಿಯ ತಾಯಿ ತೀರಿಕೊಂಡರು. ಈ ನಷ್ಟ ಬೇರೆ ಒಂದು ರೀತಿಯಲ್ಲಿ ತುಂಬಿಬಂದಿತು ; ತಂದೆ, ಅಣ್ಣ, ಅಕ್ಕ, ಅತ್ತಿಗೆಯರೆಲ್ಲರೂ ಅವನನ್ನು ಹೆಚ್ಚು ಹೆಚ್ಚು ಮಮತೆಯಿಂದ ನೋಡತೊಡಗಿದರು. ಪ್ರೀತಿಗೇನೂ ಕೊರತೆಯಿರಲಿಲ್ಲ. ಇಲ್ಲಿಂದಾಚೆಗೆ ರವಿಯ ಕಾವ್ಯಪ್ರತಿಭೆ ಒಂದೇ ಸಮನೆ ಹೂ ಅರಳಿದಂತೆ ಅರಳಿತು.

ರವಿಯ ಅಣ್ಣಂದಿರೂ ಅವರ ಗೆಳೆಯರೂ 'ಹಿಂದು ಮೇಳ' ವೆಂಬ ಹೆಸರಿನಲ್ಲಿ ವರ್ಷವರ್ಷವೂ ಒಂದು ರಾಷ್ಟ್ರೀಯ ಸಮಾರಂಭವನ್ನು ನಡೆಸುತ್ತಿದ್ದರು. ರವಿ ಹದಿನೈದನೇ ವರ್ಷದವನಿದ್ದಾಗ ತಾನೇ ರಚಿಸಿದ ದೇಶಪ್ರೇಮದಿಂದ ತುಂಬಿದ ಕವಿತೆಯೊಂದನ್ನು ಅಲ್ಲಿ ಓದಿ ಎಲ್ಲರನ್ನೂ ಮುಗ್ಧಗೊಳಿಸಿದ. ಆಗಲೇ ಪದ್ಯರೂಪದಲ್ಲಿ ಕಥೆ ಹೇಳುವ 'ಬನಫೂಲ್' (ಕಾಡು ಹೂ) ಎಂಬ ನೀಳ್ಗವನವನ್ನು ಬರೆದ. ಮಧ್ಯಯುಗದ ವೈಷ್ಣವ ಕವಿಗಳ ಮಾದರಿಯನ್ನು ಅನುಕರಿಸಿ 'ಬಾನುಸಿನ್ಹೇರ್ ಪದಾವಳಿ' ಎಂಬ ಹೆಸರಿನಲ್ಲಿ ಒಂದು ಅದ್ಭುತ ಗೀತಮಾಲೆಯನ್ನೂ ರಚಿಸಿದ. ರವಿ ಈ ಪದಾವಳಿಯನ್ನು ತನ್ನ ಸ್ವಂತ ಹೆಸರಿನ ಬದಲು, 'ಭಾನು' ಎಂಬ ಕಾವ್ಯನಾಮದಿಂದ ಬರೆದಿದ್ದ. ('ರವಿ'ಯಂತೆಯೇ 'ಭಾನು'ವಿಗೂ ಸೂರ್ಯನೆಂದು ಅರ್ಥ.) ವ್ರಜ ಭಾಷೆಯಲ್ಲಿದ್ದ ಈ ಸುಂದರ ಕವಿತೆಗಳು ನೂರಾರು ವರ್ಷ ಹಿಂದಿನ ಯಾವನೋ ಭಾನುಸಿಂಹನೆಂಬ ಸುಪ್ರಸಿದ್ಧ ಕವಿ ಬರೆದದ್ದೆಂದು ಜನ ನಂಬಿಕೊಂಡರು. ಕಡೆಗೆ ನಿಜಸ್ಥಿತಿ ಹೊರಬಿದ್ದಾಗ, ಒಬ್ಬ ಪುಟ್ಟ ಹುಡುಗ ಇಷ್ಟು ಮುದ್ದಾಗಿ ಕವಿತೆ ಕಟ್ಟಬಲ್ಲನೆಂದು ಅವರು ನಂಬದಾದರು.

ರವಿಗೆ ಒಳ್ಳೆಯ ನಟನಾಶಕ್ತಿಯೂ ಇತ್ತು. ಅಣ್ಣಂದಿರೂ ಅವರ ಗೆಳೆಯರೂ ಕೂಡಿ, ತಾವೇ ಬರೆದು ಆಡುತ್ತಿದ್ದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದ. ಕೆಲವು

ವರ್ಷಗಳ ಮೇಲೆ ರವಿ ಸಾರ್ವಜನಿಕ ರಂಗಭೂಮಿಯ ಮೇಲೂ ಕಾಣಿಸಿಕೊಂಡ, ಅದೂ ತಾನೇ ಬರೆದ ನಾಟಕಗಳಲ್ಲಿ ಪಾತ್ರ ಧರಿಸಿ.

ಬಾಲ್ಯದಿಂದಲೂ ರವಿಯ ಮನಸ್ಸು ಗಾನಲೀನವಾಗಿತ್ತು. ಅವನ ಕಂಠ ಸಹ ಮಧುರ. ತೀರಾ ಚಿಕ್ಕಂದಿನಲ್ಲೇ ಅವನು ಹಾಡುಗಳನ್ನು ಕಟ್ಟಿ ಅವಕ್ಕೆ ರಾಗ ತಾಳ ಹಾಕಿ, ಕೇಳುವವರು ಮರುಳಾಗುವಂತೆ ಇಂಪಾಗಿ ಹಾಡಿ ತೋರಿಸುತ್ತಿದ್ದ. ಜೀವನ ಪೂರ್ತಿ ರವಿ ಬಗೆಬಗೆಯ ಗೀತೆಗಳನ್ನು ರಚಿಸಿದ. ದೇವರ ನಾಮಗಳು, ಪ್ರಕೃತಿ ಗೀತೆಗಳು, ರಾಷ್ಟ್ರೀಯ ಗೀತೆಗಳು, ಬೇರೆಬೇರೆ ಸಂದರ್ಭಕ್ಕಾಗಿ ಬರೆದವು—ಹೀಗೆ ಅವನಷ್ಟು ಗೀತೆಗಳನ್ನು ಬರೆದವರು ಅಪರೂಪ.

ಒಂದು ಸಲ ರವಿ ಹಾಡುವುದನ್ನು ಅವನ ತಂದೆ ಕೇಳಿದರು. ಅದೊಂದು ಸುಂದರವಾದ ದೇವರ ನಾಮ :

"ನಯನ್ ತೊಮಾರೆ ಪಾಯ್ ನಾ ದೇಖಿತೇ
ರಯೇಛ್ ನಯನೆ ನಯನೇ . . . ."

ಕಂಡನುಭವಿಸದು ಕಣ್ಣು ನಿನ್ನನು,
ಕಣ್ಣುಕಣ್ಣಲೂ ನೀನಿರುವೆ . . . .

ಕೇಳಿ ತಂದೆಯ ಎದೆ ಕರಗಿತು. ಕಣ್ಣಲ್ಲಿ ನೀರೊಡೆಯಿತು. "ಈ ದೇಶದ ದೊರೆ ನಮ್ಮವನೇ ಆಗಿದ್ದಿದ್ದರೆ ಅವನು ನಿನಗೆಷ್ಟು ಮರ್ಯಾದೆ ಮಾಡುತ್ತಿದ್ದನೊ! ಸದ್ಯಕ್ಕೆ ನಾನು ಈ ಪುಟ್ಟ ಬಹುಮಾನವನ್ನು ಮಾತ್ರ ಕೊಡಬಲ್ಲೆ, ತೊಗೋ" ಎಂದು ಹಣ ತುಂಬಿದ ಒಂದು ಚೀಲವನ್ನು ಕೊಟ್ಟರು.

ಹೀಗೆ ಈ ಬಾಲಕವಿ ಮುಂದೆ ತನ್ನ ಜನಪದದ ಕವಿಯಾಗುವ ಭಾಗ್ಯ ಪಡೆಯಲು ಸ್ವಲ್ಪ ಸ್ವಲ್ಪವಾಗಿ ಸಿದ್ಧತೆ ಮಾಡಿಕೊಂಡ. ಆದರೆ ಮನೆಯ ಹಿರಿಯರು "ಮಕ್ಕಳು ಬೆಳೆಯಬೇಕಾದ ಬಗೆ ಇದಲ್ಲ. ದೊಡ್ಡ ದೊಡ್ಡ ಪರೀಕ್ಷೆ ಪಾಸುಮಾಡಿ, ದೊಡ್ಡ ದೊಡ್ಡ ಕೆಲಸ ಹಿಡಿಯಬೇಕು" ಎಂದು ನಿರಾಶೆಗೊಳ್ಳುವುದು ಮಾತ್ರ ತಪ್ಪಲಿಲ್ಲ. ಭವಿಷ್ಯದಲ್ಲಿ ದೊಡ್ಡ ಬ್ಯಾರಿಸ್ಟರೋ ಸರಕಾರೀ ಅಧಿಕಾರಿಯೋ ಆಗುವ ನೆಂಬ ಆಸೆಯಿಂದ ಅವರು ರವಿಯನ್ನು ಇಂಗ್ಲೆಂಡಿಗೆ ಕಳಿಸಿದರು. ಆಗ ರವಿಗೆ ಹದಿನೇಳು ವರ್ಷ ವಯಸ್ಸು.

ಇಂಗ್ಲೆಂಡಿನಲ್ಲಿ ಜನಗಳ ಗುರುತು ಮಾಡಿಕೊಳ್ಳುವುದು, ನರ್ತನ ಸಂಗೀತ ಗಳಲ್ಲಿ ಭಾಗ ವಹಿಸುವುದು, ಹೊಸ ಹೊಸ ಸ್ಥಳ ನೋಡಿ ಬರುವುದು—ಹೀಗೆ ರವಿ ಅಲ್ಲಿನ ಸಾಮಾಜಿಕ ಜೀವನದಲ್ಲಿ ಬೆರೆತುಹೋದ. ಎಷ್ಟು ಜಾಣ್ಮೆ ಹಾಗೂ ಸೂಕ್ಷ್ಮ ದೃಷ್ಟಿಗಳಿಂದ ಅವನು ಅಲ್ಲಿನ ಜನರ ಜೀವನ ಮತ್ತು ನಡವಳಿಕೆಗಳನ್ನು ಗಮನಿಸು ತ್ತಿದ್ದನೆಂಬುದು ಆಗ ಅವನು ಮನೆಗೆ ಬರೆದ ಪತ್ರಗಳಿಂದ ತಿಳಿದು ಬರುತ್ತದೆ. ಅವು 'ಯೂರೊಪ್ ಪ್ರವಾಸೀರ್ ಪತ್ರ' ಎಂಬ ಹೆಸರಿನಲ್ಲಿ ಪ್ರಕಟವಾಗಿವೆ.

1880 ರಲ್ಲಿ ಇನ್ನೂ ಓದು ಮುಗಿಯುವ ಮೊದಲೇ ರವಿ ಸ್ವದೇಶಕ್ಕೆ ಹಿಂದಿರುಗ

ಬೇಕಾಯಿತು. ಹಾಗೆ ಮರಳಿದ ಕೂಡಲೇ ಅವನು 'ವಾಲ್ಮೀಕಿ ಪ್ರತಿಭಾ' ಎಂಬ ಗೀತನಾಟಕವನ್ನು ಬರೆದ. ಒಂದು ಕಾಲದಲ್ಲಿ ಕಳ್ಳರ ಮುಂದಾಳಾಗಿದ್ದು, ಆಮೇಲೆ ಮಹಾಕವಿಯಾಗಿ, ರಾಮಾಯಣವನ್ನು ರಚಿಸಿದ ವಾಲ್ಮೀಕಿಯ ಜೀವನಕಥೆಯೇ ಈ ನಾಟಕದ ವಸ್ತು. ಗೀತನಾಟಕಗಳಲ್ಲಿ ಗದ್ಯ ನಾಟಕಗಳಂತೆ ಸಂಭಾಷಣೆಗಳನ್ನು ಆಡುವುದಿಲ್ಲ, ಹಾಡುತ್ತಾರೆ. ರವಿ ಇಂತಹ ಅನೇಕ ಗೀತನಾಟಕಗಳನ್ನು ಬರೆದ. ಕೆಲವಕ್ಕೆ ನೃತ್ಯವನ್ನೂ ಹೊಂದಿಸಿ 'ನೃತ್ಯನಾಟಕ'ಗಳನ್ನು ರಚಿಸಿದ.

ಮಾರನೆಯ ವರ್ಷ ರವಿಯನ್ನು ಮತ್ತೊಮ್ಮೆ ಇಂಗ್ಲೆಂಡಿಗೆ ಕಳಿಸುವ ಇನ್ನೂ ಒಂದು ವ್ಯರ್ಥ ಪ್ರಯತ್ನ ನಡೆಯಿತು. ಈ ಮಧ್ಯೆ ತರುಣ ಕವಿಗೆ ಸ್ವಲ್ಪ ಸ್ವಲ್ಪವಾಗಿ ಪ್ರಸಿದ್ಧಿ ದೊರೆಯಿತು. ರವಿ ರವೀಂದ್ರರಾದರು. ಅವರ 'ಪ್ರಭಾತ ಸಂಗೀತ,' 'ಸಂಧ್ಯಾ ಸಂಗೀತ' ಎಂಬ ಎರಡು ಕವಿತಾಸಂಗ್ರಹಗಳು ತುಂಬ ಮೆಚ್ಚಿಗೆ ಗಳಿಸಿದವು. ರವೀಂದ್ರರು ತಮ್ಮ 'ನಿರ್ಝರೇರ್ ಸ್ವಪ್ನಭಂಗ' (ಕಾರಂಜಿಯ ಕನಸು ಹರಿಯಿತು) ಎಂಬ ಕವಿತೆಯಲ್ಲಿ ಬಿಸಿಲಿನ ಶಾಖಕ್ಕೆ ಹಿಮ ಕರಗಿ, ನೀರು ಸ್ವೇಚ್ಛೆ ಸಂತೋಷ ಗಳಿಂದ ಮೇಲೆ ನೆಗೆಯುವುದನ್ನು ವರ್ಣಿಸಿದ್ದರು. ಅದನ್ನು ಓದಿದಾಗ ಅದು ಕವಿಯ ಸ್ವಂತ ಅನುಭವವೇ ಎಂಬುದು ಜನಕ್ಕೆ ಹೊಳೆಯಿತು. ಕವಿಯ ಹೃದಯದಲ್ಲೂ ಅಂತಹದೇ ಒಂದು ಕಾರಂಜಿ ಉಕ್ಕಿ, ಜೀವನಪೂರ್ತಿ ಸೂಸಿ ಹರಿಯಿತು.

ರವೀಂದ್ರರ ಮೊಟ್ಟಮೊದಲ ಮಕ್ಕಳ ಕವನವಾದ 'ಬಿಷ್ಟಿ ಪಡೇ ಟಾಪುರ್ ಟುಪುರ್' (ಬಿತ್ತು ಮಳೆ ಟಪಟಪನೆ) ಇದೇ ಹೊತ್ತಿಗೆ ರಚಿತವಾಯಿತು. ಅವರು ಮುಂದೆ 'ಶಿಶು,' 'ಶಿಶು ಭೋಲಾನಾಥ' ಮುಂತಾದ ಅನೇಕ ಮಕ್ಕಳ ಕಥೆ ಕವನ ಗಳನ್ನು ಬರೆದರು.

ಮುಂದಿನ ಕೆಲವು ವರ್ಷಗಳನ್ನು ರವೀಂದ್ರರು ಭಾರತ ಸಂಚಾರದಲ್ಲಿ ಕಳೆದರು. ಅವರಿಗೆ ಮದುವೆಯಾದದ್ದು ಇಪ್ಪತ್ತೆರಡನೆಯ ವಯಸ್ಸಿನಲ್ಲಿ. ಪತ್ನಿಯ ಹೆಸರು ಮೃಣಾಲಿನೀ ದೇವಿ. ಮದುವೆಯಾದ ಕೆಲವು ದಿನಗಳಲ್ಲೇ ಅವರು ಮತ್ತೊಮ್ಮೆ ಇಂಗ್ಲೆಂಡಿಗೆ ಹೋದರು. ಈ ಕಾಲದಲ್ಲಿ ಅವರು ಇನ್ನೂ ಹಲವಾರು ಗಮನಾರ್ಹ ಗ್ರಂಥಗಳನ್ನೂ ಮಕ್ಕಳಿಗಾಗಿ 'ರಾಜರ್ಷಿ' ಎಂಬ ಕಾದಂಬರಿಯನ್ನೂ ಬರೆದರು. ಇದರಲ್ಲಿ ದೇವರಿಗೆ ಪ್ರಾಣಿ ಬಲಿಕೊಡುವುದು ಎಂತಹ ಕ್ರೌರ್ಯ ಹಾಗೂ ಮೂರ್ಖತನ ವೆಂಬುದನ್ನು ಅವರು ಎತ್ತಿ ತೋರಿಸಿದರು. ಮುಂದೆ ಇದೇ ಕಾದಂಬರಿ ನಾಟಕರೂಪ ಪಡೆದು 'ವಿಸರ್ಜನ' ಎಂಬ ಹೆಸರಿನಲ್ಲಿ ಹೊರಬಿದ್ದಿತು. ಹೀಗೆ ಕೊಳದಲ್ಲಿ ತಾವರೆ ಹೂ ಅರಳಿದಂತೆ ರವೀಂದ್ರರ ಮನಸ್ಸಿನಲ್ಲಿ ಒಂದರ ಮೇಲೊಂದು ಕಥೆ ಕವನಗಳು ಅರಳುತ್ತ ಬಂದವು.

ತಮ್ಮ ನಡುವೆ ಇರುವವನು ಬರಿಯ ಮಹಾಕವಿಯಷ್ಟೇ ಅಲ್ಲ, ಅವನು ವಿಚಾರವಂತ ಹಾಗೂ ಸುಧಾರಕ ಸಹ ಎಂಬುದರ ಅರಿವು ದಿನ ಕಳೆದಂತೆ ಜನರಲ್ಲಿ ಮೂಡಿತು. ರವೀಂದ್ರರನ್ನು ಹೊಗಳುವವರು ಇದ್ದಂತೆ ತೆಗಳುವವರೂ ಇದ್ದರು. ತರುಣ ಕವಿಯೊಬ್ಬನು ಹಳೆಯ ಜಾಡನ್ನು ತೊರೆದು ಹೊಸ ಹೊಸ ವಿಷಯಗಳನ್ನು ಹೊಸ ಬಗೆಯಲ್ಲಿ, ರೂಢಿಯಲ್ಲಿಲ್ಲದ ಸುಲಭವೂ ಕಿವಿಗಿಂಪೂ ಆದ ನವ್ಯ ಬಂಗಾಳೀ

ಭಾಷೆಯಲ್ಲಿ ಚಿತ್ರಿಸುವ ಸಾಹಸ ಮಾಡಿದುದು ಆ ಜನಕ್ಕೆ ಸಹಿಸಲಿಲ್ಲ. ಅವರು ಪತ್ರಿಕೆಗಳಲ್ಲಿ ಕಠೋರವಾಗಿ ಟೀಕೆ ನಡೆಸಿದರು. ರವೀಂದ್ರರು ಆ ದೂಷಣೆಗಳೊಂದಕ್ಕೂ ಗಮನ ಕೊಡದೆ ತಮ್ಮದೇ ರೀತಿಯಲ್ಲಿ ನಿರ್ಭಯವಾಗಿ ಬರೆಯುತ್ತ ಮುನ್ನಡೆದರು.

ರವೀಂದ್ರರಿಗೆ ಭಾರತವೆಂದರೆ ಪ್ರಾಣ. ತಮ್ಮ ದೇಶದ ಆದರ್ಶಗಳಲ್ಲಿ, ತಮ್ಮ ಜನರ ಭಾಷೆ ಪಾಂಡಿತ್ಯಗಳಲ್ಲಿ ಅವರಿಗೆ ಅಪಾರ ಗೌರವ. ಹಾಗೆಯೇ ಜ್ಞಾನದ ಬೆಳಕು ಎತ್ತಲಿಂದ ಬರಲಿ, ಅದನ್ನು ಸ್ವಾಗತಿಸದೆ ಬಿಡುತ್ತಿರಲಿಲ್ಲ. ವಿಜ್ಞಾನ ಮತ್ತು ವಿಚಾರ ಸ್ವಾತಂತ್ರ್ಯಗಳನ್ನು ಬೆಳಗಿಸಿದ ಪಶ್ಚಿಮ ದೇಶಗಳಿಗೆ ಅವರು ತುಂಬ ಮರ್ಯಾದೆ ಕೊಡುತ್ತಿದ್ದರು.

ಕಾಲಕ್ರಮದಲ್ಲಿ ರವೀಂದ್ರರಿಗೆ ಐದು ಮಕ್ಕಳಾದವು. ಅದೇನು ಸಣ್ಣಪುಟ್ಟ ಹೊಣೆಯೇ? ಚಿಕ್ಕಂದಿನಲ್ಲಿ ತಾವು ಶಾಲೆಗೆ ಹೋಗಲು ಪಡುತ್ತಿದ್ದ ಕಷ್ಟವನ್ನು ನೆನೆದು, ಮಕ್ಕಳಿಗೆ ಮನೆಯಲ್ಲೇ ಪಾಠಕ್ಕೆ ಗೊತ್ತುಮಾಡಿದರು.

ರವೀಂದ್ರರ ತಂದೆ ಅವರನ್ನು ಮನೆತನದ ಆಸ್ತಿಪಾಸ್ತಿಯ ಮೇಲ್ವಿಚಾರಣೆಗೆ ಬಿಟ್ಟಿದ್ದರು. ಇದಕ್ಕಾಗಿ ಅವರು ಉತ್ತರ ಮತ್ತು ಪೂರ್ವ ಬಂಗಾಳ ಹಾಗೂ ಒರಿಸ್ಸಾಗಳ ಹಳ್ಳಿಗಳಲ್ಲಿ ಬಹಳ ಅಲೆದಾಡಬೇಕಾಗುತ್ತಿತ್ತು. ಆಗಾಗ ಪದ್ಮಾ ನದಿಯ ಮೇಲೆ (ಪೂರ್ವ ಬಂಗಾಳದ ಕಡೆಯಿಂದ ಹರಿದು ಬರುವ ಗಂಗಾನದಿಯ ಹೆಸರು ಇದು) ತಮ್ಮ ದೋಣಿಯಲ್ಲೇ ಮನೆ ಮಾಡಿಕೊಂಡು ತಿಂಗಳಗಟ್ಟಲೆ ಇರುತ್ತಿದ್ದರು. ಆಗ ಅವರು ನದೀತೀರದ ಜನಜೀವನದ ವಿವಿಧ ಮುಖಗಳನ್ನು ನೋಡುತ್ತ, ಮಣ್ಣಿನ ಮಕ್ಕಳ ಸುಖದುಃಖಗಳನ್ನು ತಿಳಿಯುತ್ತ ಕಾಲಹಾಕುತ್ತಿದ್ದರು. ಹೀಗೆ ರವೀಂದ್ರರಿಗೆ ಬಂಗಾಳದ ಹಳ್ಳಿಗಳ ಹಾಗೂ ಅಲ್ಲಿನ ರೈತಜೀವನದ ನಿಕಟ ಪರಿಚಯವಾಯಿತು. ಆ ಕಾಲದಲ್ಲಿ ಅವರು ಬರೆದ ಸುಂದರವಾದ ಸಣ್ಣ ಕಥೆಗಳು ಈ ನಿಕಟತೆಯ ಫಲವೆನ್ನಬೇಕು. ಗ್ರಾಮೀಣ ಸಮಸ್ಯೆಗಳ ಬಗೆಗೆ ರವೀಂದ್ರರಿಗಿದ್ದ ಅರಿವು, ರೈತರ ಹಾಗೂ ಹಳ್ಳಿಯ ಕೈಕಸುಬಿನವರ ಹಿತರಕ್ಷಣೆಯಲ್ಲಿ ಅವರು ತೋರಿಸುತ್ತಿದ್ದ ಉತ್ಕಟ ಆಸಕ್ತಿಗಳು ಸಹ ಈ ನೇರವಾದ ಪರಿಚಯದಿಂದ ಬಂದವುಗಳೇ.

ಇದೇ ಸಮಯದಲ್ಲಿ ಶಿಕ್ಷಣಸಂಬಂಧವಾದ ಒಂದು ವಿಶಿಷ್ಟ ವಿಚಾರ ಸಹ ಅವರಲ್ಲಿ ರೂಪಗೊಂಡಿತು; ಪೂರ್ವಕಾಲದ ಆಶ್ರಮಜೀವನದ ಆದರ್ಶದ ಮೇರೆಗೆ, ಮಕ್ಕಳನ್ನು ಹಳ್ಳಿಯ ಸುತ್ತುಮುತ್ತಿನ ವಾತಾವರಣದಲ್ಲಿ, ಪ್ರಕೃತಿಯ ಮಡಿಲಲ್ಲೋ ಎಂಬಂತೆ ಬೆಳೆಸಬೇಕೆಂಬುದೇ ಆ ವಿಚಾರ. ಕೊನೆಗೆ ರವೀಂದ್ರರು ಶಾಂತಿನಿಕೇತನದಲ್ಲಿ ತಮ್ಮ ಮನ ಮೆಚ್ಚುವಂತಹ ಶಾಲೆಯೊಂದನ್ನು ಸ್ಥಾಪಿಸಿದರು. ಅದಕ್ಕಾಗಿ ಅವರು ಬಹಳ ತ್ಯಾಗ ಮಾಡಬೇಕಾಯಿತು. ಪುರಿಯಲ್ಲಿದ್ದ ಮನೆ ಕೈ ಬಿಟ್ಟಿತು. ಪತ್ನಿ ಮೃಣಾಲಿನೀ ಒಡವೆತೊಡವೆಗಳನ್ನು ತೊರೆದರು. ಹೀಗೆ 1901 ರಲ್ಲಿ ಶಾಲೆ ಶುರುವಾಯಿತು. ಕಾಲಾಂತರದಲ್ಲಿ ಆ ಸಣ್ಣ ಶಾಲೆ ಬೆಳೆದು ಈಗ 'ವಿಶ್ವಭಾರತಿ' ಎಂಬ ಹೆಸರಿನ ದೊಡ್ಡ ವಿದ್ಯಾಪೀಠವಾಗಿದೆ.

ಮೊದಲು ಮೊದಲಲ್ಲಿ ರವೀಂದ್ರರೇ ಪಾಠ ಹೇಳುತ್ತಿದ್ದರು. ಮನೆಗೆಲಸವೆಲ್ಲವೂ ಮೃಣಾಲಿನಿಯದು. ಶಾಲೆಯ ಜನ, ಇದ್ದ ಕೆಲವು ಇಟ್ಟಿಗೆ ಮನೆ, ಮಣ್ಣಿನ ಜೋಪಡಿ

ಗಳಲ್ಲಿ ವಾಸಿಸುತ್ತಿದ್ದರು. ಕೋಣೆಗಳೇ ಇಲ್ಲದ ಶಾಲೆ ಅದು. ತರಗತಿ ಕೂಡುತ್ತಿದ್ದುದು ಮರಗಳ ಕೆಳಗೆ.

ಕ್ರಮೇಣ ರವೀಂದ್ರರ ಮೇಧಾವೀ ಸ್ನೇಹಿತರನೇಕರು ಅವರ ಜೊತೆಗೂಡಿದರು. ಕವಿಯ ಕನಸನ್ನು ನನಸು ಮಾಡಲು ಅವರೆಲ್ಲರೂ ಐಹಿಕ ಯಶಸ್ಸಿನ ಆಸೆಯನ್ನು ಹಿಂದೆ ಬಿಟ್ಟು ಬಂದಿದ್ದರು. ವಿದ್ಯಾರ್ಥಿಗಳ ಸಂಖ್ಯೆ ನಿಧಾನವಾಗಿ ಹೆಚ್ಚಿತು; ಶಿಕ್ಷಣ ಪದ್ಧತಿಯಲ್ಲಿ ಹೊಸ ಹೊಸ ಪ್ರಯೋಗಗಳು ನಡೆದವು; ಶಾಲೆ ಬೆಳೆಯಿತು.

ಶಾಲೆಯ ಫೀಸೆಂದರೆ ಹೆಸರಿಗೆಷ್ಟೋ ಅಷ್ಟೇ. ಉಪಾಧ್ಯಾಯರು ಅತಿ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದರು. ಅವರ ಊಟ ಬಟ್ಟೆ ಸಾಧಾರಣ. ಯಾರೊಬ್ಬರ ಕಾಲಿಗೂ ಜೋಡು ಸಹ ಇರಲಿಲ್ಲ. ಆದರೂ ಅಲ್ಲಿ ಆನಂದಕ್ಕೆ ಕೊರತೆಯಿರಲಿಲ್ಲ. ಉಪಾಧ್ಯಾಯ ವಿದ್ಯಾರ್ಥಿಗಳ ನಡುವಿನ ಸಂಬಂಧದಲ್ಲಿ ಪ್ರೀತಿ ತುಂಬಿತ್ತು. ಅಲ್ಲಿ ಎಲ್ಲರ ಮನಸ್ಸು ಅರಳಲೂ ಅಪಾರ ಅವಕಾಶವಿತ್ತು.

ಶಾಲೆಯೆಂದರೆ ಅಲ್ಲಿ ಬರಿಯ ಪುಸ್ತಕ ಪಾಂಡಿತ್ಯವಷ್ಟೇ ಆಗಿರಲಿಲ್ಲ. ತೋಟಗಾರಿಕೆ, ಆಟ, ವ್ಯಾಯಾಮ, ಸಮಾಜಸೇವೆ, ಓದುಬರೆಹ, ಪ್ರಕೃತಿದರ್ಶನ, ಕಲೆಗಳ ಕಲಿಕೆ — ಇವೆಲ್ಲವೂ ಶಿಕ್ಷಣದಲ್ಲಿ ಸೇರಿದ್ದವು. ಕಷ್ಟದ ಜೀವನವಾದರೂ ಅದರಲ್ಲಿ ಸಂತೋಷ ತುಂಬಿತ್ತು. ಶಾಲೆಗೆ ಹಣದ ಕೊರತೆಯಿಲ್ಲದ ದಿನವೇ ಇಲ್ಲ. ರವೀಂದ್ರರು ತಮ್ಮದೆಲ್ಲವನ್ನೂ ಅದಕ್ಕೆ ಕೊಟ್ಟರು. ಗೆಳೆಯರು ಹಣ ಕೂಡಿಸಿದರು. ಆದಾಯ ವೆಚ್ಚಗಳನ್ನು ಹೇಗೋ ಸರಿದೂಗಿಸಲಾಗುತ್ತಿತ್ತು.

ಶಾಲೆ ಷುರುವಾಗಿ ಇನ್ನೂ ಒಂದು ವರ್ಷವಿಲ್ಲ, ಮೃಣಾಲಿನೀ ತೀರಿಕೊಂಡರು. ರವೀಂದ್ರರೇ ತಮ್ಮ ಮಕ್ಕಳ ತಾಯ್ತನವನ್ನೂ ಮಾಡಬೇಕಾಯಿತು. ಇಂಗ್ಲಿಷಿನ 'ದಿ ಕ್ರೆಸೆಂಟ್ ಮೂನ್' (ಬಾಲಚಂದ್ರ) ಎಂಬ ಪುಸ್ತಕದಲ್ಲಿ ಪ್ರಕಟವಾಗಿರುವ ಮಕ್ಕಳನ್ನು ಕುರಿತ ಸುಂದರ ಕವಿತೆಗಳನ್ನು ರವೀಂದ್ರರು ಬರೆದದ್ದು ಆಗಲೇ.

1903 ರಿಂದ ಹಿಡಿದು 1907 ರ ವರೆಗಿನ ಮಧ್ಯಕಾಲ ರವೀಂದ್ರರಿಗೆ ದುಃಖದ ಮೇಲೆ ದುಃಖವನ್ನು ತಂದೊಡ್ಡಿತು. ಎರಡನೆಯ ಮಗಳು ರೇಣುಕಾ, ಪೂಜ್ಯ ತಂದೆಯವರು, ಕಿರಿಯ ಮಗ ಶಮಿ — ಒಬ್ಬರ ಹಿಂದೆ ಒಬ್ಬರು ತೀರಿಕೊಂಡರು. ಆದರೆ ಸಂಸಾರದ ಈ ದುಃಖ ರವೀಂದ್ರರ ಎದೆಗುಂದಿಸಿ, ಅವರ ಮನಸ್ಸನ್ನು ಕಹಿಗೊಳಿಸಲಿಲ್ಲ. ಇದಕ್ಕೆ ಅವರು ಆಗ ರಚಿಸಿದ ಉತ್ಕೃಷ್ಟ ಕೃತಿಗಳೇ ಸಾಕ್ಷಿ.

ಸಂಸಾರದ ಯಜಮಾನರಾಗಿ ರವೀಂದ್ರರು ತಮ್ಮ ಕರ್ತವ್ಯಗಳೊಂದನ್ನೂ ಬಿಡದೆ ನೆರವೇರಿಸುತ್ತಿದ್ದರೂ ಸಂಸಾರದ ಕಟ್ಟಿಗೆ ಅವರು ಸಿಕ್ಕಿಬಿದ್ದಿರಲಿಲ್ಲ. ಬದಲು ದೇಶದ ಹಿತದ ಕಡೆಗೆ ಮನಗೊಟ್ಟು, ರಾಷ್ಟ್ರದ ಸ್ವಾತಂತ್ರ್ಯ ಚಳವಳಿಯ ಮುಂದಾಳಾದರು. ಬಂಗಾಳದ ವಿಭಜನೆಯ ವಿರುದ್ಧದ ಚಳವಳಿ ಹಾಗೂ ಇಡೀ ದೇಶಕ್ಕೊಂದು ರಾಷ್ಟ್ರೀಯ ಶಿಕ್ಷಣ ಏರ್ಪಡಬೇಕೆಂಬ ಚಳವಳಿಗಳಲ್ಲಿ ಅವರು ಹುರುಪಿನ ಪಾತ್ರ ವಹಿಸಿದರು.

ಭಾರತದ ಹಿರಿಮೆಯನ್ನು ಹೆಚ್ಚಿಸಬಲ್ಲ ಯಾವುದೇ ಕೆಲಸದಲ್ಲಾಗಲೀ ಅವರಿಗೆ

ಉತ್ಸಾಹವಿತ್ತು. ಆದರೂ ರಾಜಕಾರಣದ ಜಂಜಾಟ ಅವರಿಗೆ ಒಗ್ಗಿದ್ದಲ್ಲ. ಯಾವ ಬಗೆಯ ರಾಜಕೀಯ ಇಲ್ಲವೇ ಸಾಮಾಜಿಕ ಅಂಧಶ್ರದ್ಧೆಗಳೂ ಅವರಿಗೆ ಹಿಡಿಸುತ್ತಿರಲಿಲ್ಲ. ಕೆಲವು ದಿನಗಳಲ್ಲೇ ಅವರು ರಾಜಕೀಯ ರಂಗದಿಂದ ನಿವೃತ್ತರಾಗಿ ರಚನಾತ್ಮಕ ರೂಪದ ದೇಶಸೇವೆಯಲ್ಲಿ ನಿರತರಾದರು.

ಶೈಕ್ಷಣಿಕ, ಸಾಮಾಜಿಕ ಮುಂತಾದ ಇತರ ಚಟುವಟಿಕೆಗಳು ಎಷ್ಟೇ ಇರಲಿ, ಅವರ ಸಾಹಿತ್ಯಸೇವೆ ನಿಲ್ಲಲಿಲ್ಲ. ಬಿಡುವು ಕಾಣದ ಅವರ ಲೇಖನಿಯಿಂದ ಕಾವ್ಯ, ಗೀತೆ, ಕಾದಂಬರಿ, ನಾಟಕಗಳು ನಿರರ್ಗಳವಾಗಿ ಹರಿದವು. 'ಗೀತಾಂಜಲಿ' ಪುಸ್ತಕದಲ್ಲಿನ ಕವಿತೆಗಳನ್ನೂ ಈಗ ರಾಷ್ಟ್ರಗೀತೆಯಾಗಿರುವ 'ಜನಗಣಮನ'ವನ್ನೂ ಅವರು ಬರೆದದ್ದು ಈ ಸುಮಾರಿಗೇ. ನಿಜವಾದ ಕೀರ್ತಿಯಿನ್ನೂ ಮುಂದೆ ಬರುವುದಿದ್ದರೂ ಅವರ ಮೊದಲ ಐವತ್ತು ವರ್ಷಗಳ ಜೀವನ ಹುಲುಸಾದ ಬೆಳೆ ನೀಡಿತ್ತು.

ರವೀಂದ್ರರು ತಮ್ಮ ಜೀವನಕಾಲದಲ್ಲಿ ಒಟ್ಟು ಹನ್ನೊಂದು ಸಲ ವಿದೇಶ ಪ್ರವಾಸ ಮಾಡಿಬಂದರು. 1912 ರಲ್ಲಿ ಇಂಗ್ಲೆಂಡಿಗೆ ಹೋಗಿದ್ದಾಗ ಅಲ್ಲಿ ಅನೇಕ ಸಾಹಿತಿಗಳ, ಕಲಾವಿದರ ಹಾಗೂ ವಿಚಾರವಂತರ ಸ್ನೇಹ ಬೆಳೆಯಿತು. ಸುಪ್ರಸಿದ್ಧ ಕವಿ ಡಬ್ಲ್ಯು. ಬಿ. ಏಟ್ಸ್ ಮತ್ತು ಕಲಾವಿದ ರೊಥೆನ್‌ಸ್ಟೀನರು ರವೀಂದ್ರರ ಪ್ರತಿಭೆಗೆ ಮಾರುಹೋದರು. ತಮ್ಮ ಕವಿತೆ ಮತ್ತು ಗೀತೆಗಳಲ್ಲಿ ಕೆಲವನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸುವಂತೆ ಅವರಿಬ್ಬರೂ ರವೀಂದ್ರರನ್ನು ಹುರಿದುಂಬಿಸಿದರು. ಹಿಂದೆ ಬಂಗಾಳೀ ಭಾವಗೀತೆಗಳ ಸಂಗ್ರಹವೊಂದಕ್ಕೆ ಇಟ್ಟಿದ್ದ 'ಗೀತಾಂಜಲಿ' ಎಂಬ ಹೆಸರಿನಲ್ಲಿಯೇ ಈ ಇಂಗ್ಲಿಷ್ ಅನುವಾದ ಬೆಳಕು ಕಂಡಿತು. ಪಾಶ್ಚಾತ್ಯ ಓದುಗರ ಮೇಲೆ ಅದು ಅದ್ಭುತ ಪರಿಣಾಮ ಬೀರಿದ್ದಲ್ಲದೇ ಜಗತ್ತಿನಲ್ಲೇ ಅತ್ಯುನ್ನತವಾದ ಹಾಗೂ ಸಾಹಿತಿಗಳು ತಮ್ಮದಾಗಲೆಂದು ಬಯಸುವ ನೊಬೆಲ್ ಬಹುಮಾನವನ್ನು ರವೀಂದ್ರರಿಗೆ ತಂದುಕೊಟ್ಟಿತು.

ಬಹುಮಾನದ ಮೊತ್ತ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು. ರವೀಂದ್ರರು ಅವಷ್ಟನ್ನೂ ಶಾಂತಿನಿಕೇತನದ ಶಾಲೆಗೆ ಧಾರೆಯೆರೆದು ಕೊಟ್ಟರು. ಹಣವನ್ನು ಹಳ್ಳಿಯ ಸಹಕಾರೀ ಬ್ಯಾಂಕ್ ಒಂದರಲ್ಲಿ ಇಡಲಾಯಿತು. ಹಳ್ಳಿಗರು ಕಡಿಮೆ ಬಡ್ಡಿಯ ಮೇಲೆ ಹಣದ ಅನುಕೂಲ ಪಡೆಯಲೆಂಬುದೇ ಇದರ ಉದ್ದೇಶ. ಹೀಗೆ ರವೀಂದ್ರರು ತಮ್ಮ ಶಾಲೆಗೂ ತಮ್ಮ ಮೆಚ್ಚಿನ ಹಳ್ಳಿಗರಿಗೂ ಒಮ್ಮೆಲೇ ಸಹಾಯ ಮಾಡಿದರು.

ಬಂಗಾಳದ ಹಳ್ಳಿಗಳಿಗೆ ಹೊಸ ಜೀವ ತುಂಬುವ ಬಗೆ ಯಾವುದೆಂದು ರವೀಂದ್ರರು ಎಂದಿನಿಂದಲೂ ಯೋಚಿಸುತ್ತಿದ್ದರು. ಕೊನೆಗೆ ಶಾಂತಿನಿಕೇತನದಿಂದ ಒಂದು ಮೈಲಿ ದೂರದಲ್ಲಿರುವ ಸುರುಲ್ ಗ್ರಾಮದಲ್ಲಿ ಅವರ ಯೋಜನೆಗಳು ಮೈದಾಳಿದವು. ಅಲ್ಲಿ 'ಶ್ರೀನಿಕೇತನ' ವೆಂಬ ಹೆಸರಿನಲ್ಲಿ ಗ್ರಾಮ ಸುಧಾರಣಾ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಬೆಳೆಯನ್ನು ಉತ್ತಮಗೊಳಿಸುವ ಹಾಗೂ ಸ್ಥಳೀಯ ಕೈಕಸುಬುಗಳನ್ನು ಸುಧಾರಿಸುವ ವೈಜ್ಞಾನಿಕ ವಿಧಾನಗಳನ್ನು ಕುರಿತು ಅಲ್ಲಿ ಪ್ರಯೋಗ ಆರಂಭವಾಯಿತು; ಈಗಲೂ ನಡೆಯುತ್ತಿದೆ. ಶಾಂತಿನಿಕೇತನ, ಶ್ರೀನಿಕೇತನ—ಈ

ಎರಡು ಸೋದರ ಸಂಸ್ಥೆಗಳೂ ಜೊತೆಜೊತೆಯಾಗಿ ಕೆಲಸಮಾಡುತ್ತ, ಶಿಕ್ಷಣ ಮತ್ತು ಸಮಾಜ ಸುಧಾರಣೆಗಳ ಬಗ್ಗೆ ರವೀಂದ್ರರಲ್ಲಿದ್ದ ವಿಚಾರಗಳನ್ನು ಕೃತಿಗಿಳಿಸುತ್ತಿವೆ.

ರವೀಂದ್ರರಿಗೆ ಈಗ ಕೈತುಂಬ ಕೆಲಸ. ಅವರು ಜಗದ್ವಿಖ್ಯಾತರಾಗಿದ್ದರೂ ಶಾಂತಿನಿಕೇತನದಲ್ಲಿಯೇ ವಾಸಿಸುತ್ತ ಅಲ್ಲಿ ಮಕ್ಕಳಿಗೆ ಪಾಠ ಹೇಳುವುದರಲ್ಲಿ ನಿರತರಾಗಿದ್ದರು. ಅವರ ಸಾಹಿತ್ಯರಚನೆಗೂ ಹೊಸ ಹುರುಪು ಸಿಕ್ಕಿತ್ತು. ಬಂಗಾಳೀ ಸಾಹಿತ್ಯದಲ್ಲಿ ಹೊಸ ಹೊಸ ಹೆದ್ದಾರಿಗಳನ್ನು ಹಾಕಿಕೊಡುವಂತಹ ಸುಂದರ ಗದ್ಯ ಪದ್ಯಗಳ ಸೃಷ್ಟಿ ಮಾಡುತ್ತಿದ್ದರು. 1915 ರ ಆದಿಭಾಗ ಅದು. ಗಾಂಧೀಜಿ ಆಗ ಶಾಂತಿನಿಕೇತನದಲ್ಲಿ ತಂಗಿದ್ದ ತಮ್ಮ ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮವಾಸಿಗಳನ್ನು ಕಂಡುಹೋಗಲು ಅಲ್ಲಿಗೆ ಬಂದರು. ಗಾಂಧೀಜಿ ಮತ್ತು ರವೀಂದ್ರರಲ್ಲಿ ವೈಯಕ್ತಿಕವಾದ ಸ್ನೇಹ ಬೆಳೆಯಿತು. ಹೀಗೆ ಮೊದಲಾದ ಅವರ ಸ್ನೇಹ ದಿನ ಕಳೆದಂತೆ ಗಾಢವಾಯಿತು.

ಅದೇ ವರ್ಷ ಬ್ರಿಟಿಷ್ ಸರಕಾರ ರವೀಂದ್ರರಿಗೆ 'ನೈಟ್' ಪದವಿಯಿತ್ತು ಸನ್ಮಾನಿಸಿತು. ಆದರೆ 1919 ರಲ್ಲಿ, ಪಂಜಾಬಿನ ಜಾಲಿಯನ್ ವಾಲಾಬಾಗಿನಲ್ಲಿ, ಬ್ರಿಟಿಷ್ ಸೈನಿಕರು, ನಿರಪರಾಧಿಗಳೂ ನಿಶ್ಶಸ್ತ್ರಧಾರಿಗಳೂ ಆದ ಭಾರತೀಯರ ತಂಡವೊಂದರ ಮೇಲೆ ಗುಂಡಿಟ್ಟು ಹತ್ಯಾಕಾಂಡ ನಡಸಿದಾಗ ಅದನ್ನು ಕೇಳಿ ರವೀಂದ್ರರ ಹೃದಯ ದುಃಖ, ಕೋಪ, ಅವಮಾನಗಳಿಂದ ತುಂಬಿ ಬಂದು, ಅವರು 'ನೈಟ್' ಪದವಿಯನ್ನು ಹಿಂದಿರುಗಿಸಿದರು. ಅದರೊಡನೆ ತಮ್ಮ ಜನಕ್ಕಾದ ಅತ್ಯಾಚಾರವನ್ನು ಗಂಡುನುಡಿಗಳಲ್ಲಿ ಖಂಡಿಸಿ, ಭಾರತದಲ್ಲಿನ ಬ್ರಿಟಿಷ್ ವೈಸ್‌ರಾಯರಿಗೊಂದು ಪತ್ರ ಬರೆದರು. ಎಂದೆಂದಿಗೂ ಮರೆಯಲಾಗದಂತಹ ಪತ್ರ ಅದು.

ತಾವು ಕೈಗೊಂಡ ಹನ್ನೊಂದು ವಿದೇಶ ಪ್ರವಾಸಗಳಲ್ಲಿ ರವೀಂದ್ರರು ಬಹುತೇಕ ಪ್ರಪಂಚದ ಎಲ್ಲ ದೇಶಗಳಲ್ಲೂ ಸುತ್ತಾಡಿದ್ದರು. ಹಾಗೆ ಜಗತ್ತನ್ನು ನೋಡಿದಷ್ಟೂ, ದೇಶದೇಶಗಳ ನಡುವೆ ಸ್ನೇಹ ಸೌಹಾರ್ದ ಬೆಳೆದು ವಿಚಾರ ವಿನಿಮಯವಾಗದವರೆಗೆ ಶಾಂತಿ ಸಾಧಿಸುವುದು ಅಸಾಧ್ಯವೆಂಬುದು ಅವರಿಗೆ ಮನದಟ್ಟಾಯಿತು.

ಈ ಆದರ್ಶವನ್ನು ಮುಂದಿರಿಸಿಕೊಂಡು, 1921 ರಲ್ಲಿ ಅವರು ವಿಶ್ವಭಾರತಿ ವಿದ್ಯಾಪೀಠವನ್ನು ಸ್ಥಾಪಿಸಿದರು. ಪ್ರಪಂಚದ ಪ್ರತಿಯೊಂದು ದೇಶದ ಜ್ಞಾನ ಸಂಸ್ಕೃತಿಗಳ ರಾಯಭಾರಿಗಳೂ ಅಲ್ಲಿ ಕಲೆಯಲೆಂದು ಅವರು ಆಸೆಪಟ್ಟರು. ವಿದ್ಯಾಪೀಠದ ಧ್ಯೇಯಮಂತ್ರವಾಗಿ ಸಂಸ್ಕೃತದ ಒಂದು ಸೂಕ್ತಿಯನ್ನು ಆರಿಸಿದರು—"ಯತ್ರ ವಿಶ್ವಮ್ ಭವತಿ ಏಕನೀಡಮ್" (ಎಲ್ಲಿ ಇಡೀ ಜಗತ್ತೇ ಒಂದು ಹಕ್ಕಿಗೂಡಾಗಿ ಕೂಡುತ್ತದೋ . . . .) ಎಂಬುದೇ ಅದು.

ರವೀಂದ್ರರಿಗೆ ಕೆಲಸ ಮಾಡುವುದು ಹುಟ್ಟಿನಿಂದ ವರವಾಗಿ ಬಂದಿತ್ತು. ಉಸಿರಿರುವವರೆಗೂ ಅವರು ಮೈದಣಿಸಿ ದುಡಿದರು. ಜನ ಕವಿಗಳನ್ನು ಮೈಗಳ್ಳ ಕನಸುಗಾರರೆಂದೇಕೆ ಕರೆಯುತ್ತಾರೆ? ರವೀಂದ್ರರಿಗೆ ಎಪ್ಪತ್ತರ ತುಂಬು ವಯಸ್ಸು. ಅನೇಕರ ಪಾಲಿಗೆ ಕೊನೆಯ ನಮಸ್ಕಾರ ಹೇಳಿ ಹೊರಡುವ ವಯಸ್ಸದು. ಆದರೆ ಆಗ ರವೀಂದ್ರರು ಇನ್ನೂ ಒಂದು ಹೊಚ್ಚ ಹೊಸ ಸಾಹಸಕ್ಕೆ ಕೈಹಾಕಿದರು. ಅದೆಂದರೆ ಚಿತ್ರಕಲೆ.

ಒಂದಾದಮೇಲೆ ಒಂದರಂತೆ, ಜಗತ್ತನ್ನು ವಿಸ್ಮಯಕ್ಕೀಡುಮಾಡುವಂತಹ ಅನೇಕ ಅದ್ಭುತ ಚಿತ್ರಗಳನ್ನು ಅವರು ರಚಿಸಿದರು.

ಯಾವುದೋ ಒಳಗಿನ ಒತ್ತಡಕ್ಕೆ ಸಿಕ್ಕಿ ಅವರು ಚಿತ್ರ ರಚಿಸುತ್ತಿದ್ದರು. ಅವರಿಗೆ ಆ ಹೊತ್ತಿನಲ್ಲಿ ಒಂದು ಕ್ಷಣ ಹಾಳಾಗುವುದೂ ಸಹಿಸದು. ಚಿತ್ರ ಬರೆಯುವ ಕಾಗದ ಸಿಗದಿದ್ದರೆ ಹಳೆಯ ಪತ್ರಿಕೆಗಳ ಮೇಲುಹೊದಿಕೆ; ಬಣ್ಣ ಕುಂಚಗಳಿಲ್ಲದಿದ್ದರೆ ಮಸಿ, ಲೇಖನಿ—ಏನಾದರೆ ಅದೇ. ಹೀಗೆ ರವೀಂದ್ರರು ಎರಡು ಸಾವಿರಕ್ಕೂ ಮೇಲ್ಪಟ್ಟು ಚಿತ್ರಗಳನ್ನು ಬರೆದರು. ಒಂದೊಂದೂ ಒಂದೊಂದು ಬಗೆ; ಒಂದೊಂದೂ ಸುಂದರವೇ.

1930 ನೆಯ ಇಸವಿ. ಈ ವೇಳೆಗಾಗಲೇ ರವೀಂದ್ರರು ಇಡೀ ಜಗತ್ತಿನ ಮಾನ್ಯತೆ ಪಡೆದಿದ್ದರು. ಭಕ್ತಿ ಮೆಚ್ಚಿಕೆಗಳಿಂದ ತುಂಬಿದ ಬಂಗಾಳದ ಜನ ಕವಿಯ ಎಪ್ಪತ್ತನೆಯ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲು ಅಣಿಮಾಡಿಕೊಂಡರು. ಎಲ್ಲೆಲ್ಲೂ ಸಭೆ ಸಮಾರಂಭಗಳು, ರವೀಂದ್ರರ ನಾಟಕ ಹಾಗೂ ಚಿತ್ರಗಳ ಪ್ರದರ್ಶನ ಗಳು, ವಿಶೇಷ ಗ್ರಂಥ ಪ್ರಕಟನೆಗಳು, ಭಾಷಣಗಳು ನಡೆಯುತ್ತಿದ್ದವು. ದೂರದೇಶ ಗಳಿಂದೆಲ್ಲಾ ಅತಿಥಿಗಳು ಬರುತ್ತಿದ್ದರು.

ಉತ್ಸವ ಹೀಗೆ ಸಡಗರದಿಂದ ನಡೆದಿದ್ದಾಗ ಗಾಂಧೀಜಿ ಮತ್ತು ಇತರ ರಾಷ್ಟ್ರ ನಾಯಕರ ಬಂಧನವಾಯಿತೆಂಬ ಸುದ್ದಿ ಬಂದಿತು. ರವೀಂದ್ರರಿಗೆ ತುಂಬ ವ್ಯಥೆ ಯಾಯಿತು. ಉತ್ಸವವನ್ನು ಅಲ್ಲಿಗೇ ನಿಲ್ಲಿಸಲು ಹೇಳಿದರು. ಇದು ನಡೆದದ್ದು 1931 ರಲ್ಲಿ. ಆಗ ಗಾಂಧೀಜಿಯವರನ್ನು ಬಿಟ್ಟರೆ ರವೀಂದ್ರರಷ್ಟು ಜಗದ್ವಂದ್ಯರಾದ ಬೇರೆ ಒಬ್ಬ ವ್ಯಕ್ತಿ ಪ್ರಪಂಚದಲ್ಲೇ ಇರಲಿಲ್ಲ.

ವರ್ಷದ ಹಿಂದೆ ವರ್ಷ ಉರುಳಿತು. ಅವೆಲ್ಲವೂ ಕಷ್ಟದ ದಿನಗಳು. ದೇಶ ಗಾಂಧೀಜಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿತ್ತು. ಜಗತ್ತಿನಲ್ಲಿ ಎಲ್ಲೆಲ್ಲೂ ನಾಸಿಸಮ್, ಫ್ಯಾಸಿಸಮ್‌ಗಳಂತಹ ರಾಕ್ಷಸೀ ಶಕ್ತಿಯ ಪೆಡಂಭೂತಗಳು ತಲೆಯೆತ್ತಿ ಮಾನವನ ಹಕ್ಕುಬಾಧ್ಯತೆಗಳನ್ನು ಕಬಳಿಸತೊಡಗಿದ್ದವು. ರವೀಂದ್ರರು ಯಾವ ನಂಬಿಕೆಗಳಲ್ಲಿ ವಿಶ್ವಾಸವಿರಿಸಿದ್ದರೋ ಅವೇ ಈಗ ಧ್ವಂಸವಾಗು ತ್ತಿದ್ದವು. ಇದು ಅವರ ಚೇತನಕ್ಕೆ ಪ್ರಚಂಡ ವೇದನೆಯನ್ನುಂಟುಮಾಡಿತು. ಇವುಗಳ ಜೊತೆಗೆ ಇಳಿವಯಸ್ಸಿಗೆ ಸಹಜವಾದ ನೋವು ನರಳಿಕೆಗಳೂ ಸೇರಿಕೊಂಡವು. ಆದರೂ ಕವಿ ಕೊನೆಯವರೆಗೂ ಮಾನವತೆಯ ಭವಿಷ್ಯದಲ್ಲಿ ವಿಶ್ವಾಸ ತೋರೆಯದೆ, ಅದನ್ನು ಮೇಲೆತ್ತಿ ಹಿಡಿದರು. ಈ ಅಚಲ ವಿಶ್ವಾಸಕ್ಕೆ ಅವರು ಕೊನೆಗಾಲದಲ್ಲಿ ಆಡಿದ ಮಾತು ಗಳೇ ಉಜ್ವಲ ಸಾಕ್ಷಿ. ಕವಿ ಹೋಗುವ ಮುನ್ನ ತನ್ನ ಜನತೆಗೆ ಬಿಟ್ಟುಹೋದ ಅಂತಿಮ ಬಳುವಳಿಯಾಗಿ ಉಳಿಯುತ್ತವೆ, ಆ ಮಾತುಗಳು.

1941 ರ ಆಗಸ್ಟ್ ಏಳನೆಯ ತಾರೀಖು. ಶ್ರಾವಣ ಪೂರ್ಣಿಮೆಯ ದಿನ ಅವತ್ತು. ಎಂಬತ್ತು ವರ್ಷಗಳ ಹಿಂದೆ ಜೋರಾಸಾಂಕೋವಿನ ಯಾವ ಮನೆಯಲ್ಲಿ ರವೀಂದ್ರರು ಮೊಟ್ಟಮೊದಲು ಕಣ್ಣು ತೆರೆದಿದ್ದರೋ, ಅಲ್ಲೇ ಜಗತ್ತಿನಲ್ಲಿ ಎಲ್ಲೆಲ್ಲೂ ಅಪಾರ ಸೌಂದರ್ಯವನ್ನು ಕಂಡುಂಡ ಆ ಕಣ್ಣುಗಳನ್ನು ಮುಚ್ಚಿದರು. ಇಡೀ ದೇಶ

ದುಃಖದಲ್ಲಿ ಮುಳುಗಿತು. ಎರಡನೆಯ ಮಹಾಯುದ್ಧವಿನ್ನೂ ಮುಗಿದಿರಲಿಲ್ಲ. ಕವಿ ತಾವು ವಿಶ್ವಾಸವಿಟ್ಟಿದ್ದ ಸಂಚಿಕೆಗಳು ಗೆಲ್ಲುವುದನ್ನು, ತಾವು ಆಜೀವಪರ್ಯಂತ ನಡೆಸಿದ್ದ ಹೋರಾಟ ಫಲಿಸಿ ದೇಶ ಸ್ವತಂತ್ರವಾಗುವುದನ್ನು ನೋಡಲು ಉಳಿಯಲಿಲ್ಲ. ರವೀಂದ್ರರು ಹಿರಿದಾಗಿ ಬಾಳಿದರು, ನಿರ್ಭಯದಿಂದ ಸತ್ತರು. ಸಾವು ಸಮೀಪವಾಗುತ್ತಿದೆಯೆನಿಸಿದಾಗ ಜನ ತಮ್ಮ ಮರಣಶಯ್ಯೆಯ ಬಳಿ ಹಾಡಲೆಂದು ಅವರೊಂದು ಗೀತೆಯನ್ನು ಬರೆದರು. ಅದು ಹೀಗೆ ಮೊದಲಾಗುತ್ತದೆ:

"ಸಮುಖೆ ಶಾಂತಿ ಪಾರಾವಾರ
ಭಾಸಾವೊ ತರಣಿ, ಹೇ ಕರ್ಣಧಾರ."

ಹರಡಿದೆ ಶಾಂತಿಯ ಸಾಗರ ಮುಂದೆ
ನಡಸಲೆ ದೋಣಿಯ, ಓ ಚುಕ್ಕಾಣಿಗ ತಂದೆ.

ಹೀಗೆ ಸಾವಿನ ದೋಣಿಯಲ್ಲಿ ಕುಳಿತು, ತಾವು ಜೀವನಪರ್ಯಂತ ಪ್ರೀತಿಸಿ, ಪ್ರಿಯ, ಗೆಳೆಯ, ಮಾರ್ಗದರ್ಶಿ ಎಂದೆಲ್ಲ ಕರೆದಿದ್ದ ದೇವರನ್ನೇ ಚುಕ್ಕಾಣಿಗನನ್ನಾಗಿ ಮಾಡಿಕೊಂಡು ಕವಿ ರವೀಂದ್ರರು ಶಾಂತಿಯ ಸಾಗರದಲ್ಲಿ ಯಾನ ಹೊರಟರು — ಮಹಾ ಅಜ್ಞಾತದೆಡೆಗೆ.

ಒಬ್ಬನ ಜೀವನದ ಘಟನೆಗಳೆಲ್ಲವನ್ನೂ ವರದಿಮಾಡುವುದರಿಂದ ಅವನ ಜೀವನವನ್ನೇ ವರ್ಣಿಸಿದಂತಾಗುವುದಿಲ್ಲ. ರವೀಂದ್ರನಾಥ ಠಾಕೂರರದು ಎಂತಹ ವ್ಯಕ್ತಿತ್ವ? ಅವರದು ಎತ್ತರವೂ ಸುಂದರವೂ ಆದ ಶರೀರ; ಬಲವಾದ ಮೈಕಟ್ಟು; ಕಾಂತಿ ಬೀರುವ ಮೃದುವಾದ ಕಣ್ಣುಗಳು; ಆಳವೂ ಮಧುರವೂ ಆದ ಧ್ವನಿ; ಸ್ವಾರಸ್ಯದಿಂದ ಕೂಡಿದ ಹಾಸ್ಯಭರಿತವಾದ ಮಾತುಗಾರಿಕೆ. ಹಾಗೆ ಮಾತಿಗೆ ಕುಳಿತ ಹೊತ್ತಿನಲ್ಲಿ ಅವರ ಇಡೀ ಮುಖವೇ ಮಿಂಚುತ್ತಿತ್ತು. ಅದೇ ಬರವಣಿಗೆಯಲ್ಲಿ ಮುಳುಗಿದಾಗ, ಅವರು ಯಾವದೋ ಬೇರೆ ಲೋಕದಲ್ಲಿರುವರೇನೋ ಎಂಬಂತೆ ಭಾಸವಾಗುತ್ತಿತ್ತು. ಆಗ ಅವರಿಗೆ ಊಟ ನಿದ್ರೆ ಒಂದೂ ಬೇಡ. ನೆಚ್ಚಿನ ಆಳೊಬ್ಬನ ಹೊರತು ಬೇರೆ ಯಾರಿಗೂ ಅವರ ಹತ್ತಿರ ಸುಳಿಯುವ ಧೈರ್ಯವಾಗುತ್ತಿರಲಿಲ್ಲ.

ರವೀಂದ್ರರು ಬರೆದ ಪುಸ್ತಕಗಳು, ಕಟ್ಟಿದ ಗೀತೆಗಳು, ರಚಿಸಿದ ಚಿತ್ರಗಳು— ಇವಿಷ್ಟೇ ಅವರ ಸರ್ವಸ್ವವಲ್ಲ. ಅವರಿಗೆ ಇಡೀ ಬದುಕನ್ನೇ ಒಂದು ಕಲಾಕೃತಿಯನ್ನಾಗಿ ಮಾರ್ಪಡಿಸಬೇಕೆಂಬ ಬಯಕೆಯಿತ್ತು. ಕಲೆ ಸಹ ಅವರ ಪಾಲಿಗೆ ಬರಿಯ ಕಲೆಯಾಗಿ ಉಳಿಯದೆ, ಅದೊಂದು ಸತ್ಯ-ಪ್ರೇಮ-ಸೌಂದರ್ಯಗಳ ದರ್ಶನವಿಶೇಷವಾಗಿತ್ತು.

ಅವರು ಸೋಗಿನ ವ್ಯಕ್ತಿಯಾಗಿರಲಿಲ್ಲ. ತಾವು ಶ್ರದ್ಧೆಯಿಂದ ಯಾವುದರಲ್ಲಿ ನಂಬಿದ್ದರೋ ಅದನ್ನಷ್ಟೇ ಆಡಿದರು, ಮಾಡಿದರು. ಒಳ್ಳೆತನ ಶಕ್ತಿಯಲ್ಲಿ ಅವರಿಗೆ ಗಾಢವಾದ ನಂಬಿಕೆ. ತಮಗೆ ಸತ್ಯವೆಂದು ತೋರಿದುದಷ್ಟನ್ನೇ ಬರೆಯುತ್ತಿದ್ದರು. ಕೆಲವೊಮ್ಮೆ ಅವರಿಗೆ ತಮ್ಮ ಮೊದಲಿನ ಅಭಿಪ್ರಾಯಗಳು ಸರಿಯಲ್ಲವೆಂದು ಅನಿಸು

ತ್ತಿತ್ತು. ಆಗ ತಮ್ಮ ತಪ್ಪನ್ನು ತಾವು ತಿದ್ದಿಕೊಳ್ಳಲು ಹಿಂಜರಿಯುತ್ತಿರಲಿಲ್ಲ. ಸತ್ಯದಲ್ಲಿ ಅವರಿಗೆ ಇದ್ದ ಪ್ರೀತಿಗೆ ಇದೂ ಒಂದು ಸಾಕ್ಷಿಯೇ.

ಮಕ್ಕಳನ್ನು ಕಂಡರೆ ರವೀಂದ್ರರಿಗೆ ಮೇರೆ ಮೀರಿದ ಮಮತೆ. ಅವರು ಮಕ್ಕಳನ್ನು ಪ್ರೀತಿಸುತ್ತಿದ್ದುದಷ್ಟೇ ಅಲ್ಲ, ಅವರಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಅತ್ಯಂತ ಮರ್ಯಾದೆಯಿಂದ ಕಾಣುತ್ತಿದ್ದರು. ರವೀಂದ್ರರ ಪಾಲಿಗೆ ಮಕ್ಕಳು ಏನನ್ನೂ ಅರ್ಥಮಾಡಿಕೊಳ್ಳಲಾರದ ಮೂರ್ಖಪಶುಗಳಾಗಿರಲಿಲ್ಲ. "ಸುಲಭವಾದ ಭಾಷೆಯಲ್ಲಿ ಸರಿಯಾಗಿ ವರ್ಣಿಸಿ ಹೇಳಿದರೆ ಮಕ್ಕಳಿಗೆ ಅರ್ಥವಾಗದುದು ಯಾವುದು"? ಎಂದು ಅನ್ನುತ್ತಿದ್ದರು ಅವರು. ಮಕ್ಕಳನ್ನು ಗದರಿಸುವ ಬದಲು, ಅವರೊಡನೆ ಆಡುತ್ತ ಬುದ್ಧಿ ಹೇಳಿದರೆ, ಅವರಲ್ಲಿ ಅಡಗಿರುವ ಒಳ್ಳೆಯದೆಲ್ಲವೂ ಹೊರಬರುತ್ತದೆಂದು ರವೀಂದ್ರರ ನಂಬಿಕೆ. ಶಾಂತಿನಿಕೇತನದ ಶಾಲೆಯಲ್ಲಿ ಅವರು ಅನುಸರಿಸಿದ ಶಿಕ್ಷಣ ತತ್ವ ಇದೇ.

ರವೀಂದ್ರರಿಗೆ ಭೋಗವಿಲಾಸಗಳು ಬೇಕಾಗಿರಲಿಲ್ಲ. ಸರಳತೆಯಲ್ಲೇ ಸೌಂದರ್ಯ ವಿದೆಯೆಂದು ಅವರ ಮತ. ಜೀವನದಲ್ಲಿರುವ ಒಳ್ಳೆಯದೆಲ್ಲವನ್ನೂ ಅದು ಜೀವನವಿತ್ತ ಕಾಣಿಕೆಯೆಂದುಕೊಂಡು ಸವಿದರು. ಹಾಗೆ ಸವಿಯುವಾಗಲೂ ಅವರು ಅವಕ್ಕೆ ಅಂಟಿಕೊಂಡಿರುತ್ತಿರಲಿಲ್ಲ. ಬೇಕೆಂದಾಗ ಅವನ್ನು ತ್ಯಜಿಸಲೂ ಸಿದ್ಧರಿರುತ್ತಿದ್ದರು.

ರವೀಂದ್ರರಲ್ಲಿ ಎಳ್ಳಷ್ಟೂ ಕೃತಕತೆಯಿರಲಿಲ್ಲ. ಅವರ ದೇಶಪ್ರೇಮ ಉನ್ನತೋನ್ನತ ಎತ್ತರಕ್ಕೆ ಬೆಳೆಯಲು ಈ ಗುಣವೇ ಕಾರಣ. ವಿದೇಶೀಯರನ್ನು ಅವರಲ್ಲಿನ ಸದ್ಗುಣಗಳಿಗಾಗಿ ಗೌರವಿಸಿದರೂ ನಮ್ಮ ಜನ ಅವರ ನಡವಳಿಕೆಗಳ ಅಂಧಾನುಕರಣೆ ಮಾಡುವುದು ರವೀಂದ್ರರಿಗೆ ಸಹಿಸುತ್ತಿರಲಿಲ್ಲ. ಸತ್ತು ಮಣ್ಣಾದ ಯಾವುದೋ ಹಿಂದಿನದನ್ನಾಗಲೀ ಇತರರ ಜೀವನದ ರೀತಿನೀತಿಗಳನ್ನಾಗಲೀ ಅನುಕರಿಸಕೂಡ ದೆಂದು ಅವರು ಬಾಳಿದ ಬದುಕಿನಷ್ಟೇ ಅವರ ಕೃತಿಗಳೂ ಸಾರಿ ಹೇಳುತ್ತವೆ. ನಾವು ಅಕ್ಷರಶಃ ಭಾರತೀಯರಾದಾಗ ಮಾತ್ರವೇ ದೇಶದಲ್ಲಿ ಬಲಿಷ್ಠವೂ ಆರೋಗ್ಯಕರವೂ ಆದ ರಾಷ್ಟ್ರೀಯ ಸಂಸ್ಕೃತಿಯೊಂದನ್ನು ಕಟ್ಟಲು ಸಾಧ್ಯವಾಗುತ್ತದೆ. ಆ ಸಂಸ್ಕೃತಿಯೊಂದು ಮರವಿದ್ದಂತೆ. ಅದರ ಬೇರು ಭಾರತದ ಪ್ರಾಚೀನ ವಿವೇಕಾ ಮೃತದಲ್ಲಿ ಅದ್ದಿರಬೇಕು; ರೆಂಬೆ ಕೊಂಬೆಗಳು ಮೇಲೆ ಹರಡಿದ್ದು ಇಂದಿನ ಸೂರ್ಯ ರಶ್ಮಿಯನ್ನೂ ಹೀರುತ್ತಿರಬೇಕು.

ಈ ಮಾತಿಗೆ ರವೀಂದ್ರರ ಗೀತೆಗಳೇ ನಿದರ್ಶನವಾಗಿವೆ. ಅವುಗಳ ಭಾಷೆ ಹೊಸತು, ರಾಗ ಹೊಸತು. ಆದರೂ ಅವುಗಳಲ್ಲಿ ಕೇಳಿಬರುವುದು ಪೂರ್ವದ ಋಷಿ ವಾಣಿ. ಭಾಷೆ, ವಿಚಾರ ಹಾಗೂ ಸಂಗೀತಗಳ ಅಂತಹ ಪರಿಪೂರ್ಣ ಸಮನ್ವಯ ಮತ್ತೆಲ್ಲಿ ಕಾಣಸಿಗಬೇಕು?

ರವೀಂದ್ರರು ತಮ್ಮ ಜನತೆಗೆ ಬಿಟ್ಟುಹೋದಷ್ಟು ಅಮೂಲ್ಯ ಆಸ್ತಿಯನ್ನು, ಅಷ್ಟೊಂದು ಸುಂದರವಾದ ಕವಿತೆ, ಗೀತೆ, ಕಥೆ, ಕಾದಂಬರಿ, ಪ್ರಬಂಧ, ನಾಟಕ ಗಳನ್ನು, ಬೇರೆ ಯಾವ ದೇಶದಲ್ಲೇ ಆಗಲೀ ಯಾವ ಕಾಲದಲ್ಲೇ ಆಗಲಿ ಇನ್ನೊಬ್ಬ ವ್ಯಕ್ತಿ ತನ್ನ ಜನತೆಗೆ ಬಿಟ್ಟಿಲ್ಲ. ಇವುಗಳ ಜೊತೆಗೆ ಅದೇ ರವೀಂದ್ರರು ಶಿಕ್ಷಣ

ಸಮಾಜ ಸುಧಾರಣೆ ಹಾಗೂ ಲಲಿತ ಕಲೆಗಳ ಕ್ಷೇತ್ರಗಳಲ್ಲೂ ಅತಿಶಯವಾದ ಸಾಧನೆ ಮಾಡಿದರೆಂದರೆ ಅದನ್ನು ನಂಬುವುದು ಕಷ್ಟಸಾಧ್ಯ.

ರವೀಂದ್ರರು ಜನ್ಮವೆತ್ತಿದುದು 1861 ರ ಮೇ ಏಳನೆಯ ತಾರೀಖು. ಅವರು ಹುಟ್ಟಿ ನೂರು ವರ್ಷಗಳು ಸಂದಿವೆ. ಈ ಸುಸಂದರ್ಭದಲ್ಲಿ ಭಾರತದ ಜನ ತಮ್ಮ ಕವಿಯನ್ನು ಪ್ರೀತಿ ಕೃತಜ್ಞತೆಗಳಿಂದ ನೆನಸಿಕೊಳ್ಳುತ್ತಿರುವುದೇನೂ ಆಶ್ಚರ್ಯದ ಮಾತಲ್ಲ. ನಾವಷ್ಟೇ ಏಕೆ, ಪ್ರಪಂಚದ ಎಲ್ಲ ದೇಶಗಳವರೂ ಅವರನ್ನು ಈ ಹೊತ್ತು ನೆನೆಯುತ್ತಾರೆ. ಭಾರತವಿನ್ನೂ ಸ್ವತಂತ್ರ ರಾಷ್ಟ್ರವಾಗದಿದ್ದ ಒಂದು ಕಾಲದಲ್ಲಿ ರವೀಂದ್ರರು ತಮ್ಮ ತಾಯ್ನಾಡಿಗೆ ಇಡೀ ಜಗತ್ತೇ ಮೆಚ್ಚಿಕೆ ಮರ್ಯಾದೆಗಳನ್ನು ನೀಡುವಂತೆ ಮಾಡಿದರು. ಭಾರತದ ವಿಚಾರ ಧಾರೆ ಮತ್ತು ಸಂಸ್ಕೃತಿಗಳಲ್ಲಿದ್ದ ಅತ್ಯುತ್ತಮ, ಅತಿಯೋಗ್ಯ ಗುಣಗಳೆಲ್ಲವೂ ಅವರ ವ್ಯಕ್ತಿತ್ವದಲ್ಲೂ ತುಂಬಿದ್ದುದರಿಂದಲೇ ಅವರಿಗೆ ಇದು ಸಾಧ್ಯವಾಯಿತು.

1. ದೇಶದ ಮಣ್ಣು

ಎನ್ನ ದೇಶದ ಮಣ್ಣೆ
ನಿನ್ನ ಮೇಲೆಯೆ ಎನ್ನ
ತಲೆಯೆತ್ತಿ ನಿಂತಿಹುದು,
ನಿನ್ನಿಂದ ನಾನಿಂದು
ವಿಶ್ವಗುಣ ಅರಿತಿಹೆನು,
ವಿಶ್ವತ್ವದಾಚೆಸಲಿ
ನಿಂತುಕೊಂಡಿಹೆನು.

ನೀನೆನ್ನ ದೇಹದಲಿ
ನೀನೆನ್ನ ನರಗಳಲಿ
ತುಂಬಿ ಕೊಂಡಿರುವೆ.
ಎನ್ನ ಮನದಲಿ ನೀನೆ
ಎನ್ನ ಪ್ರಾಣದಿ ನೀನೆ
ವಾಸವಾಗಿರುವೆ.

ನಿನ್ನ ಶ್ಯಾಮಲ ದೇಹ
ನಿನ್ನ ಕೋಮಲ ಮೂರ್ತಿ
ಎನ್ನಂತರಂಗದಲಿ
ಒಳಮೂಡಿ ನಿಂತಿಹುದು.
ನಿನ್ನ ಉಡಿಯಲಿ ಎನ್ನ
ಜನ್ಮವಾಗಿಹುದು;
ನಿನ್ನ ಅಡಿಯಲಿ ಅಂತೆ
ಮರಣ ಅಡಗಿಹುದು.

ನಿನ್ನ ಮೇಲೆಯೆ ನಾನು
ಆಟವಾಡುವೆನು;
ಸುಖದುಃಖವೆರಡಲಿ
ನಿನ್ನೊಂದಿಗಿಹೆನು.

ಕೆಳಗೆ ಮುಖವನು ಮಾಡಿ
ಎನ್ನನೊಮ್ಮೆಯೆ ನೋಡಿ
ಪ್ರೀತಿಯಲಿ ನನ್ನನ್ನು
ಎತ್ತಿಕೊಂಡೆ!
ತಂಪು ತೀರ್ಥವನಿತ್ತು
ಸಂತೈಸಿದೆ.

ನೀನೆಲ್ಲ ಸಹಿಸಿರುವೆ
ನೀನೆಲ್ಲ ವಹಿಸಿರುವೆ
ಮಾತೆಯರ ಮಾತೆ ನೀ
ಅವತರಿಸಿ ಬಂದಿರುವೆ

ನಿನಗೆ ಪೂಜೆಯ ಮಾಡಿ
ನೈವೇದ್ಯವನ್ನಿತ್ತು
ನಿನ್ನನಾರಾಧಿಸಿದ
ಜನರೆಷ್ಟೊ ಇಹರು.
ನಾನೇನನಿತ್ತಿಹೆನು?
ನಾನೇನು ಮಾಡಿಹೆನು?
ಹಾಳಾಗಿಹೋಗಿಹುದು
ನನ್ನದೀ ಜನ್ಮ

ಏಕೆನಗೆ ಶಕ್ತಿಯನು
ಕೊಟ್ಟಿರುವೆ? ಓ ಎನ್ನ
ಶಕ್ತಿಮಾತಾ—ಶಕ್ತಿದಾತಾ

2. ರಾಜನ ಮನೆ

ನಮ್ಮ ರಾಜನ ಮನೆಯು
ಎಲ್ಲಿರುವುದೆಂಬುದನು
ಬಲ್ಲವರು ಒಬ್ಬರೂ ಇಲ್ಲವಲ್ಲ!
ಹೇಗಿರುವುದೆಂದವರು
ಹೇಳುತಿದ್ದರೊ ಏನೊ
ನನಗದುವೆ ಎಳ್ಳಷ್ಟು ಗೊತ್ತೆ ಇಲ್ಲ!

ಬೆಳ್ಳಿಯೇ ಮೇಲೆದ್ದು
ಗೋಡೆಯಾಗಿತ್ತು
ಬಂಗಾರ ಮಾಳಿಗೆಯು
ಥಳಥಳಿಸುತಿತ್ತು

ಆನೆಕೋರೆಯ ಕೊರೆದು
ಮಧ್ಯದಲಿ ಅಲ್ಲಲ್ಲಿ
ಕಟ್ಟಿಹರು ಮೆಟ್ಟಿಲಿನ
ಕಟ್ಟೆಗಳನು

ಏಳು ಮಾಳಿಗೆ ಏರಿ
ರಾಣಿಕುಳಿತಿಹಳಲ್ಲಿ
ಧರಿಸಿಹಳು ಕೊರಳಲ್ಲಿ
ಹಾರಗಳನು

ಏಳು ರಾಜರು ಇತ್ತ
ಮುತ್ತುಮಾಣಿಕಗಳು
ನೋಡಿದೊಡೆ ಕುಕ್ಕುವವು
ಕಣ್ಣುಗಳನು.

ಹೇಳುವೆನು ಕೇಳಮ್ಮ
ನಿನ್ನ ಕಿವಿಯೊಳು ನಾನು
ನಮ್ಮ ರಾಜನ ಮನೆಯು
ಎಲ್ಲಿರುವುದೆಂದು.
ಅಲ್ಲಿಯೇ ಪಕ್ಕದಲಿ
ತುಳಸಿ ಬೃಂದಾವನವು
ಇಹುದು ನೋಡಮ್ಮ

ರಾಜಕನ್ಯೆಯು ನಿತ್ಯ
ಸಪ್ತಸಾಗರ ಸುತ್ತಿ
ನಲಿದಾಡಿ ಹಿಂತಿರುಗಿ
ಬಹಳು ನೋಡಮ್ಮ
ನನ್ನ ಬಿಟ್ಟನ್ಯರಿಗೆ
ಅವಳು ನೋಡಲು ಸಿಗಳು
ನನಗೆ ಮುಕ್ತದ್ವಾರ
ಇಹುದು ಕೇಳಮ್ಮ

ಬಂಗಾರ ಬಳೆ ತೊಟ್ಟು
ಬೆಂಡೋಲೆಯನ್ನಿಟ್ಟು
ಮಂಚದಲಿ ಮಲಗುವಳು
ಕೂದಲಿಳಿಬಿಟ್ಟು
ಇಳಿಬಿದ್ದು ಹೊಳೆಯುವವು
ನೆಲಕೆ ಮುತ್ತಿಟ್ಟು

ನಿದ್ದೆಯಿಂದೆದ್ದವಳೆ
ಬಂಗಾರ ಬೆತ್ತವನು
ಗಾಳಿಯಲಿ ತಿರುವುತ್ತ
ಹೊರಗೆ ಹೋಗುವಳು
ಅವಳು ನಕ್ಕರೆ ಸಾಕು
ಮುತ್ತುಗಳು ಉದುರುವವು
ಸುತ್ತು ಮುತ್ತು

ಹೇಳುವೆನು ಕೇಳಮ್ಮ
ನಿನ್ನ ಕಿವಿಯೊಳು ನಾನು
ನಮ್ಮ ರಾಜನ ಮನೆಯು
ಎಲ್ಲಿರುವುದೆಂದು.

ಅಲ್ಲಿಯೇ ಪಕ್ಕದಲಿ
ತುಳಸಿ ಬೃಂದಾವನವು
ಇಹುದು ನೋಡಮ್ಮ

ನಿನ್ನಂತೆಯೇ ಅವಳು
ನಿತ್ಯ ನದಿ ತೀರಕ್ಕೆ
ಸ್ನಾನಕ್ಕೆ ಹೋಗುವಳು
ಇಲ್ಲಿ ಕೇಳಮ್ಮ !
ನಾನಾಗ ಹೋಗುವೆನು ;
ಮರೆಯಲ್ಲೆ ನಿಲ್ಲುವೆನು ;
ದಡದಲ್ಲಿ ಮರದ ಬಳಿ
ಅಡಗಿಕೊಳ್ಳುವೆನು.

ಚಿಕ್ಕ ಬೆಕ್ಕಿನ ಮರಿಯು
ಜೊತೆಗಾಡುತಿಹಳು
ಹಕ್ಕಿಗಳ ಹಾಡನ್ನು
ತಾ ಕೇಳುತಿಹಳು

ಹೇಳುವೆನು ಕೇಳಮ್ಮ
ನಿನ್ನ ಕಿವಿಯೊಳು ನಾನು
ನಮ್ಮ ರಾಜನ ಮನೆಯು
ಎಲ್ಲಿರುವುದೆಂದು
ಅಲ್ಲಿಯೇ ಪಕ್ಕದಲಿ
ತುಳಸಿಬೃಂದಾವನವು
ಇಹುದು ನೋಡಮ್ಮ

3. ದೂರದ ಅಂಚೆ

ಶಾಂತಿನಿಕೇತನ

ಕೆಲವು ಪಕ್ಷಿಗಳು ತಮ್ಮ ಗೂಡನ್ನು ಬಿಟ್ಟು ಆಗಾಗ ಸಮುದ್ರದ ಮೇಲೆ ಹಾರಿಹೋಗುತ್ತವೆ. ಇದನ್ನು ನಾನು ನಿಮ್ಮ ಪಠ್ಯಪುಸ್ತಕದಿಂದಲೇ ಅರಿತುಕೊಂಡೆ. ನಾನೂ ಕೂಡ ಆ ಜಾತಿಗೆ ಸೇರಿದ ಪಕ್ಷಿ. ಆಗಾಗ ನನಗೂ ದೂರ ದೇಶಗಳಿಂದ ಕಾಗದಗಳು ಬರುತ್ತವೆ. ಆಗ ನನ್ನ ರೆಕ್ಕೆಗಳು ಬಿಚ್ಚಿ ಹಾರತೊಡಗುತ್ತವೆ. ನಾನು ಇದೇ ವೈಶಾಖ ತಿಂಗಳ ಕೊನೆಯಲ್ಲಿ ಹಡಗಹತ್ತಿ ಪ್ರಶಾಂತ ಮಹಾಸಾಗರದಲ್ಲಿ ಪ್ರವಾಸ ಕೈಕೊಳ್ಳಲಿದ್ದೇನೆ. ಯಾವ ವಿಪತ್ತೂ ನಡುವೆ ಸಂಭವಿಸದಿದ್ದಲ್ಲಿ ಸುಖವಾಗಿ ನಾನು ನನ್ನ ಪ್ರವಾಸವನ್ನು ಮುಗಿಸುತ್ತೇನೆ. ಆ ದಡವನ್ನು ಸೇರುತ್ತೇನೆ.

ಯುದ್ಧದ ಈ ದಿನಗಳಲ್ಲಿ ಪಶ್ಚಿಮ ಸಮುದ್ರದಲ್ಲಿ ಕೈಕೊಂಡ ಪ್ರವಾಸವು ಸಹಸಾ ಸುಖವಾಗಿ ಕೊನೆಗೊಳ್ಳುವುದಿಲ್ಲ. ಆ ದಂಡೆಯನ್ನು ತಲುಪುವುದೇ ಇಲ್ಲ. ಮಧ್ಯ ಸಮುದ್ರದ ತಳಕ್ಕೆ ಅದರ ಎಳೆತ ಹೆಚ್ಚು.

ಪೂರ್ವಸಮುದ್ರಮಾರ್ಗವು ಈಗಂತೂ ತೆರೆದೇ ಇದೆ. ಆದರೆ ಅಲ್ಲಿಗೂ ಕೂಡ ಯುದ್ಧದ ಭಯವು ತಪ್ಪಿಲ್ಲ. ಇಂದಿಲ್ಲ ನಾಳೆ ಬಂದೇ ಬರುತ್ತದೆಂದು ತೋರುತ್ತದೆ. ಅದು ಏನೇ ಇರಲಿ;—ನೀನು ನನಗೆ ಕಾಶಿಗೆ ಬರಲು ಇತ್ತಿರುವ ಔತಣವನ್ನು ನಾನು ಮರೆಯುವೆನೆಂದು ಸರ್ವಥಾ ಭಾವಿಸಬೇಡ. ಅದರ ಪೂರ್ವ ಸಿದ್ಧತೆ ಈಗಿನಿಂದಲೇ ಚೆನ್ನಾಗಿ ನಡೆಯಲಿ. ನನ್ನ ಪ್ರವಾಸದ ಮಾರ್ಗದಲ್ಲಿ ಬರುವ ಆಸ್ಟ್ರಿಯಾ, ಜಪಾನ್, ಅಮೇರಿಕಾ, ಇತ್ಯಾದಿ ೩-೪ ದೊಡ್ಡ ದೊಡ್ಡ ಸ್ಥಳಗಳಲ್ಲಿಯ ಆಮಂತ್ರಣಗಳನ್ನು ಒಂದು ಸಲ ಮುಗಿಸಿಕೊಂಡು ನಂತರ ನೇರವಾಗಿ ನಿನ್ನಲ್ಲಿಗೆ ಬಂದು ಸ್ವಸ್ಥವಾಗಿ ಕುಳಿತು ಬಿಡುವೆ. ನನಗಾಗಿ ನೀನು ಕೇವಲ ಪುಠಾಣಿ ಹಿಟ್ಟು, ಕಡಲೆ ಬೇಳೆ, ಚಟ್ನಿ ಇತ್ಯಾದಿ ವ್ಯವಸ್ಥೆಮಾಡಿದರೆ ಸಾಲದು ; ಎಂದಿಗೂ ಇದು ನಡೆಯಲಾರದು.

ನಿಮ್ಮ ಅಡಿಗೆಯವ ಖಂಡಿತಕ್ಕೂ ಚೆನ್ನಾಗಿ ಅಡಿಗೆ ಮಾಡುತ್ತಾನೆ. ಆದರೆ ನನಗದು ಸಾಲದು. ಪ್ರಾರಂಭದಿಂದ ಪಾಯಸದ ವರೆಗೆ ಪೂರ್ತಿ ನೀನೇ ಅಡಿಗೆ ಮಾಡದಿದ್ದರೆ ಮುಂದೆ ಏನಾಗುವುದೊ ಇಂದು ನಾನು ಹೇಳಲಾರೆ. ನಾನು ಊಟ ಮಾಡದೆ ಮತ್ತೆ ಅದೇ ಕ್ಷಣಕ್ಕೆ ತಿರುಗಿ ಆಸ್ಟ್ರಿಯಾಕ್ಕೆ ಹೋಗಿ ಬಿಡುವೆ.

ಆದರೆ, ಮಾತುಕೊಟ್ಟಂತೆ ನಡೆದುಕೊಳ್ಳುವ ಮನಸ್ಸು ಇರುವುದರಿಂದ ಇದನ್ನೆಲ್ಲ ಮೊದಲೇ ಹೇಳಿದ್ದೇನೆ.

ಅಡಿಗೆ ಮಾಡುವ ಅಭ್ಯಾಸ ನಿನಗೆ ಇಲ್ಲವೆಂದು ತೋರುತ್ತದೆ. ಪುಸ್ತಕಗಳನ್ನು

ಓದಿ ಪಾಠಮಾಡಿಕೊಂಡಿರಬಹುದು. ಇರಲಿ, ಕೊನೆಗೆ ಒಂದು ವರ್ಷದ ಅವಧಿಯನ್ನು ಕೊಡುತ್ತೇನೆ. ಅಷ್ಟರಲ್ಲಿ ಅಮ್ಮನಿಂದ ಅಡಿಗೆಮಾಡುವುದನ್ನು ಕಲಿತುಕೊ. ಇಲ್ಲವಾದರೆ ನನಗೆ ಕೂಡಲೇ ಕಲಕತ್ತೆಗೆ ಹೋಗುವ ಪ್ರಸಂಗಬರಬಹುದು. ಮತ್ತೆ ಸಾಮಾನುಗಳನ್ನೆಲ್ಲ ಒಟ್ಟುಗೂಡಿಸಿ ಕಟ್ಟಿಕೊಳ್ಳಬೇಕಾಗಿ ಬರಬಹುದು.

ನಾನು ಈ ಪ್ಯಾಕಿಂಗ ಕೆಲಸ ಬಹು ಚೆನ್ನಾಗಿ ಈಗ ಮಾಡಬಲ್ಲೆ. ಒಂದೇ ಒಂದು ತೀರ ಸಾಮಾನ್ಯವಾದ ದೋಷವಿದೆ ನನ್ನಲ್ಲಿ. ಅತ್ಯವಶ್ಯವಾಗಿ ಬೇಕಾಗುವ ಮುಖ್ಯಮುಖ್ಯ ವಸ್ತುಗಳನ್ನೆಲ್ಲ ತೆಗೆದಿರಿಸಿ ಕೊನೆಗೆ ಪ್ಯಾಕ್‌ಮಾಡುವುದನ್ನೇ ಮರೆಯುತ್ತೇನೆ. ಯಾವಾಗ ಆ ಸಾಮಾನುಗಳ ಅವಶ್ಯಕತೆ ಅನಿಸುವುದೋ ಆಗ ನೋಡಿದರೆ ಅವು ಇರುವಹಾಗಿಲ್ಲ. ಇದರಿಂದ ಸಾಕಷ್ಟು ಕಷ್ಟವಾಗುವುದೇನೋ ನಿಜ; ಆದರೆ ಪ್ಯಾಕಿಂಗ ಮಾಡುವಾಗ ಆದ ತಮಾಷೆಯ ಸುಖವೂ ದೊರೆಯುತ್ತದೆ. ಅಲ್ಲದೆ ಪೆಟ್ಟಿಗೆಯಲ್ಲಿ ಸಾಕಷ್ಟು ಸ್ಥಳ ಖಾಲಿ ಉಳಿದುಬಿಡುತ್ತದೆ. ಪೆಟ್ಟಿಗೆಯ ಭಾರವೂ ಕಡಿಮೆಯಾಗಿ ರೇಲ್ವೆ ಚಾರ್ಜ ಹಾಗೂ ಹಡಗಿನ ಚಾರ್ಜ ಕೂಡ ಕಡಿಮೆಯಾಗುತ್ತದೆ. ಜೊತೆಗೆ ಆಗಾಗ ಅವುಗಳನ್ನು ಹೊರಗೆ ತೆಗೆಯುವ, ಒಳಗೆ ಇಡುವ ಕೆಲಸಗಳೂ ಕೂಡ ಇಲ್ಲದಾಗುತ್ತದೆ. ಅತ್ಯವಶ್ಯವೆಂದು ತಿಳಿದ ಸಾಮಾನುಗಳನ್ನು ಮರೆತುಹೋದರೆ ಅವುಗಳಿಗೆ ಹತ್ತಿದ ಅನೇಕ ಕೆಲಸಗಳೂ ಕೂಡ ಕಡಿಮೆಯಾಗುತ್ತವೆ. ಪ್ಯಾಕ್‌ಮಾಡಿ ಒಳಗೆ ಇರಿಸಿದ ಸಾಮಾನುಗಳೆಲ್ಲ ಹಾಗೇ ಇದ್ದುಬಿಡುತ್ತವೆ. ಒಂದು ವೇಳೆ ಪ್ರವಾಸದಲ್ಲಿ ಈ ಸಾಮಾನುಗಳು ಕಳೆದುಹೋದರೆ, ಕಳವು ಆದರೆ ಆಗ ನಮ್ಮ ಮನಸ್ಸಿನ ಮೇಲೆ ಆಘಾತವೂ ಹೆಚ್ಚಾಗಿ ಆಗುವುದಿಲ್ಲ; ಮನಸ್ಸಿನ ಶಾಂತಿಯೂ ಅಷ್ಟು ಕದಡುವುದಿಲ್ಲ.

ಇನ್ನು ಹೆಚ್ಚು ಬರೆಯಲು ಸಮಯವಿಲ್ಲ. ಏಕೆಂದರೆ ಇಂದೇ ಮೂರು ಗಂಟೆಯ ಗಾಡಿಗೆ ಹೊರಡಬೇಕಾಗಿದೆ. ಗಾಡಿ ತಪ್ಪಿಸಿಕೊಳ್ಳುವ ಪ್ರಸಂಗವೂ ಇದೆ; ಆದರೆ ಇಂದು ಗಾಡಿ ತಪ್ಪಿಸಿಕೊಳ್ಳುವ ಸ್ವಾತಂತ್ರ್ಯವೂ ಇಲ್ಲ. ಇರಲಿ. ನಿನಗೆ ಹೊಸ ವರ್ಷದ ಆಶೀರ್ವಾದಮಾಡಿ ನಾನು ತಿಕೀಟುಕೊಳ್ಳಲು ಓಡುತ್ತೇನೆ.

ಇತಿ : ೨ ವೈಶಾಖ, ವಿಕ್ರಮಶಕ ೧೩೨೫
" ಭಾನುಸಿಂಹನ ಪತ್ರಗಳು "
ಇದರಿಂದ ತೆಗೆದ ೩ ನೇ ಪತ್ರ

4. ಮಳೆ ಬಂದಿತು ತಟಪಟ

ದಿನದ ಬೆಳಕು ಇಳಿಯುತಿತ್ತು
ಕತ್ತಲಲ್ಲಿ ಮುಳುಗುತಿತ್ತು
ಕಪ್ಪುಮೋಡ ಕವಿಯುತಿತ್ತು
ಬಾನ ಬಯಲಲಿ
ಚಂದ್ರನಡಿಯಲಿ

ಪದರು ಪದರು ಮೋಡ ಬಂದು
ಬಣ್ಣ ಬಣ್ಣಗಳನು ತಂದು
ಮುಗಿಲ ಮುಚ್ಚಿ ಶೋಭೆ ಹೆಚ್ಚಿ
ಗುಡಿಯ ಗಂಟೆ ಮೊಳಗಿತು
ಅಲ್ಲಿ ದೀಪ ಬೆಳಗಿತು

ಅತ್ತಲಿಂದ ಮಳೆಯು ಬಂತು.
ಇತ್ತಲಿಂದ ಬೆಳಕು ನಿಂತು
ಮೋಡಕೆಲ್ಲ ಮುತ್ತುಗಳನು
ತೂರಿ ತೂರಿ ಎಸೆಯಿತು
ಮೋಡ ಶಿರದಿ ಧರಿಸಿತು.

ಹುಡುಗಾಟದ ಕೇಕೆಯಂತೆ
ಗುಡುಗುತಿತ್ತು ಮುಗಿಲ ಮೋಡ.
ನಡುಗುತಿತ್ತು ನದಿಯು ನೋಡ
ಮಳೆಬಂದಿತು ತಟಪಟ
ನೀರೇರಿತು ಚಟಚಟ

ಮುಗಿಲು ಮೋಡದಾಟವನ್ನು
ನಗುತ ಹೂಡಿ ನಲಿಯುತಿರಲು
ಅದಕೆ ಕೊನೆಯು ಇರಲೆ ಇಲ್ಲ.
ದೇಶದೇಶ ಆಡಿ ಬಂದ
ಮೋಡಗಳನು ತಡೆವರಿಲ್ಲ.

ಎನಿತೊ ಪುಷ್ಪ ಬನಗಳಲ್ಲಿ
ಮಳೆಯ ಸುರಿಸಿ ಬಂದಿವೆ
ಎಲೆಎಲೆಗೂ ಹೊಸ ಆಟವ
ಅಂತವಿಲ್ಲದಾಡಿವೆ.

ಮೋಡದಾಟಗಳನು ನೋಡಿ
ಆಡಿದಾಟ ನೆನೆಸಿಕೊಳುವೆ.
ಕಣ್ಣುಮುಚ್ಚಾಲೆಯಾಟ
ಆಡಿನಲಿದ ದಿನಗಳೇಸೊ !
ಕಂಡಕಂಡ ಮನೆಗಳಲ್ಲಿ
ಬಾಲ್ಯದಲ್ಲಿ ಹಿಗ್ಗಿನಿಂದ
ಹಾಡಿತೆಗೆದ ದಿನಗಳೇಸೊ !
ಮಳೆ ಬಂದಿತು ತಟಪಟ
ನೀರೇರಿತು ಚಟಚಟ

ಮನೆಯ ಬೆಳಕು ಅಮ್ಮ ನಿನ್ನ
ನಗೆಯ ಮುಖದ ಸ್ಮರಣೆಬಂತು
ಮೋಡ ಕರೆಯುತಿರುವ ಗುಡುಗು
ಹೊರಗಿನಿಂದ ಕೇಳಿಬಂತು

ಬೆಕ್ಕಿನ ಮರಿ ಹಾಸಿಗೆ ಬಳಿ
ಮಲಗಿ ನಿದ್ದೆಗೈಯ್ಯುತಿದೆ
ತಾಯಿಯೊಡನೆ ಗೈದ ತನ್ನ
ಪರಾಕ್ರಮವ ಮರೆತಿದೆ.

ತುಂಟಮಕ್ಕಳಿಲ್ಲಿ ಮನೆಯ
ಒಳಗೆ ಬೊಬ್ಬೆಹಾಕುತಿವೆ
ಅಲ್ಲಿ ಹೊರಗೆ ಮೋಡಗುಡುಗೆ
ಗಿಡಮರಗಳು ನಡುಗುತಿವೆ

ಮನದೊಳಾಗ ಅಮ್ಮ ನಿನ್ನ
ಗಾನ ಕೇಳಿ ಬರುತಿದೆ.
ಮಳೆ ಬಂದಿತು ತಟಪಟ
ನೀರೇರಿತು ಚಟಚಟ

ಸುರುಚಿ ಸುನೀತಿಯರ ಕಥೆಯು
ಮನದೊಳೊಮ್ಮೆ ಹಾಯ್ದುಹೋಯ್ತು
ಅಭಿಮಾನದ ಮೂರ್ತಿ ಕುಂತಿ
ಪಟ್ಟಕಷ್ಟ ಸುಳಿದು ಹೋಯ್ತು.

ಕೋಣೆಯಲ್ಲಿ ಮಿಣುಕು ದೀಪ
ಕತ್ತಲನ್ನು ಹೆಚ್ಚಿಸಿತ್ತು
ಗೋಡೆತುಂಬ ಬಿದ್ದ ನೆರಳು
ಕಪ್ಪುಮುಖವ ಹೋಲುತಿತ್ತು

ಮಳೆಯ ನೀರು ತುಂಬಿಹರಿದು
ಧಭಧಭಿಸುವ ಶಬ್ದ ಹೊರಗೆ
ಭಯವ ಬೀರಿ ಕಳ್ಳ ಜನರ
ನೆನಪು ತಂದುಕೊಟ್ಟಿತು.

ಮಳೆ ಬಂದಿತು ತಟಪಟ
ನೀರೇರಿತು ಚಟಚಟ

ಎಲ್ಲಿಂದೀ ಮಳೆ ಸುರಿಯಿತು?
ಹೇಗೆ ನದಿಯು ನೀರೇರಿತು?
ಶಿವನ ಮದುವೆಯಾಯಿತೇನೊ?
ಯಾರೊಂದಿಗೊ ತಿಳಿಯದೇನೊ?
ತ್ರಿಪುರಕನ್ಯೆ ಬಂದಳೇನೊ?
ಜೊತೆಗೆ ಮೋಡ ತಂದಳೇನೊ?
ಮಳೆ ಬಂದಿತು ತಟಪಟ
ನೀರೇರಿತು ಚಟಚಟ

5. ಶಂಭು

ಗುಪ್ತಿಪಾಡವೆಂಬ ಗ್ರಾಮದ ವಿಶ್ವಂಭರಬಾಬು ಪಾಲ್ಕಿಯಲ್ಲಿ ಕುಳಿತು ಸಪ್ತ ಗ್ರಾಮಕ್ಕೆ ಹೊರಟರು.

ಫಾಲ್ಗುಣಮಾಸ. ಆದರೆ ಇಲ್ಲಿ ತುಂಬಾ ಚಳಿ. ಒಂದು ವಾರ ಕಳೆದಿರಬಹುದು; ಮಳೆಯೂ ಬಂದು ಹೋಗಿತ್ತು. ವಿಶ್ವಂಭರಬಾಬು ಅವರ ಮೈಮೇಲೆ ದೊಡ್ಡದೊಂದು ಕಂಬಳಿಯೇ ಇತ್ತು.

ಪಾಲ್ಕಿಯ ಜೊತೆಗೆ ಅವರ ಕೆಲಸದವ ಶಂಭು, ಕೈಯ್ಯಲ್ಲೊಂದು ಉದ್ದವಾದ ಬಡಿಗೆಯನ್ನು ಹಿಡಿದು ಹೊರಟಿದ್ದ. ಪಾಲ್ಕಿಯ ದಿಂಡಿಗೆ ಔಷಧದ ಪೆಟ್ಟಿಗೆಯನ್ನು ಹಗ್ಗದಿಂದ ಬಿಗಿದು ಕಟ್ಟಿದ್ದರು.

ಶಂಭುವಿನ ಶರೀರದಲ್ಲಿ ಅಸಾಧಾರಣ ಅದ್ಭುತ ಶಕ್ತಿಯಿತ್ತು. ಒಂದುಸಲ "ಕುಂಭೀರ"ವೆಂಬ ಕಾಡಿನಲ್ಲಿ ಅವನನ್ನು ಭಲ್ಲೂಕ ಜನರು ಸಂಧಿಸಿದ್ದರು. ಶಂಭುವಿನ ಹತ್ತಿರ ಬಂದೂಕು ಇರಲಿಲ್ಲ. ಕೇವಲ ಒಂದು ಬಡಿಗೆಯಿಂದ ಬಲ್ಲೂಕ ಜನರೊಂದಿಗೆ ಅವನು ಯುದ್ಧ ಪ್ರಾರಂಭಿಸಿದ್ದನು. ಶಂಭುವಿನ ಬಡಿಗೆಯ ಹೊಡೆತವು ಭಲ್ಲೂಕ ಜನರ ಮೇರು ದಂಡವನ್ನೇ ತುಂಡರಿಸಿ ಹಾಕಿತು. ಅವರಿಗೆ ಇವನನ್ನು ಸೋಲಿಸುವುದು ಆಗಲೇ ಇಲ್ಲ.

ಮತ್ತೊಂದು ಸಲ ಶಂಭು ವಿಶ್ವಂಭರಬಾಬು ಅವರೊಂದಿಗೆ ಸ್ವರ್ಣಗಂಜಕ್ಕೆ ಹೋಗಿದ್ದ. ಅಲ್ಲಿ ಪದ್ಮಾ ನದಿಯ ಹುಲ್ಲುಗಾವಲಿನಲ್ಲಿ ಅಡಿಗೆಮಾಡುವುದಕ್ಕೆ ಒಲೆ ಹೂಡಬೇಕಾಗಿತ್ತು. ಬೇಸಿಗೆಯ ಮಧ್ಯಾಹ್ನದ ಸಮಯ. ಪದ್ಮಾನದಿಯ ಪ್ರವಾಹವು ನಡುನಡುವೆ ಬತ್ತಿಹೋಗಿ ಅನೇಕ ಶಾಖೆಗಳಾಗಿ ಹರಿಯುತ್ತಿತ್ತು. ಮಧ್ಯದ ಸ್ಥಳದಲ್ಲಿ ಗಿಡಗಳು ಬೆಳೆದು ನಿಂತಿದ್ದವು. ಅದರ ಒಣಗಿದ ಟೊಂಗೆಗಳು ಒಲೆಹೊತ್ತಿಸಲಿಕ್ಕೆ ಬೇಕಾಗಿದ್ದವು. ಕುಡುಗೋಲಿನಿಂದ ಗಿಡದ ಟೊಂಗೆಗಳನ್ನು ಕಡಿದು ಶಂಭು ಕಟ್ಟಿಗೆಯ ಒಂದು ಹೊರೆಯನ್ನು ಕಟ್ಟಿದ.

ಸಹಿಸಲಾಗದ ಉರಿಬಿಸಿಲು. ಶಂಭುವಿಗೆ ತುಂಬ ನೀರಡಿಕೆಯಾಯಿತು. ತುಸು ದೂರ ನಡೆದು ನೀರು ಕುಡಿಯಲೆಂದು ಕೆಳಗೆ ಇಳಿದುಹೋದ. ಅಲ್ಲಿ ನೋಡುತ್ತಾನೆ, ಮೊಸಳೆಯೊಂದು ಆಕಳ ಕರುವನ್ನು ಹಿಡಿದಿದೆ. ನೋಡಿದ್ದೇ ತಡ ಶಂಭು ನೀರಲ್ಲಿಜಿಗಿದ. ಮೊಸಳೆಯ ಬೆನ್ನೇರಿ ಕುಳಿತು ತನ್ನ ಕೈಯಲ್ಲಿದ್ದ ಕುಡಗೋಲಿನಿಂದ ಮೊಸಳೆಯ ಬಾಯಿಯನ್ನು ಕೊಯ್ಯಹತ್ತಿದ. ರಕ್ತದಿಂದ ನದಿಯ ನೀರು ಕೆಂಪು ಬಣ್ಣ ತಾಳಿತು. ಕೊನೆಗೆ ಶಂಭು ಮೊಸಳೆಯ ದವಡೆಯಿಂದ ಕರುವನ್ನು ಬಿಡಿಸಿದ. ತಾನೂ ಈಸಿ ದಂಡೆಗೆ ಬಂದ.

ವಿಶ್ವಂಭರಬಾಬು ವೈದ್ಯರಾಗಿದ್ದರು. ರೋಗಿಗಳನ್ನು ನೋಡುವುದಕ್ಕೆಂದು ಆಗಾಗ ತಮ್ಮ ಗ್ರಾಮದಿಂದ ಬಹುದೂರ ಹೋಗುವ ಪ್ರಸಂಗ ಅವರಿಗೆ ಬರುತ್ತಿತ್ತು. ಒಂದುಸಲ ಸ್ಟೀಮರಸ್ಟೇಶನಮಾಸ್ಟರ ಮಧುವಿಶ್ವಾಸ, ತಮ್ಮ ಚಿಕ್ಕ ಹುಡುಗಿಗೆ ಹೊಟ್ಟೆನೋವು ತೀರ ಕಷ್ಟ ಕೊಡುತ್ತಿದೆ ಎಂದು ಹೇಳಿ ಕಳಿಸಿದ್ದರಿಂದ ಕೂಡಲೇ ಅಲ್ಲಿಗೆ ವಿಶ್ವಂಭರರು ಹೊರಟರು.

ವಿಷ್ಣುಪುರದ ಪಶ್ಚಿಮದಿಕ್ಕಿನಲ್ಲಿರುವ ಹುಲ್ಲುಗಾವಲಿನ ವಿಸ್ತಾರ ಬಹಳ ಹೆಚ್ಚಾಗಿತ್ತು. ಅಲ್ಲಿಗೆ ವಿಶ್ವಂಭರರ ಮೇಣೆ ಹೋಗುವ ಸಮಯಕ್ಕೆ ಕತ್ತಲಾಯಿತು. ರಾಖಾಲನು ಆಕಳುಗಳನ್ನೆಲ್ಲ ಗೋದಲಿಯಲ್ಲಿ ಕಟ್ಟಲು ದನದ ಮನೆಗೆ ಹೊಡೆದುಕೊಂಡು ಹೋಗುತ್ತಿದ್ದ. ವಿಶ್ವಂಭರಬಾಬು ಅವನನ್ನು ಕರೆದು ಕೇಳಿದರು: "ಏನಯ್ಯಾ, ಸಪ್ತಗ್ರಾಮ ಇಲ್ಲಿಂದ ಎಷ್ಟುದೂರ ಹೇಳಬಲ್ಲೆಯಾ" ಎಂದು.

ರಾಖಾಲ ಹೇಳಿದ: "ಮಹಾಸ್ವಾಮಿ, ಅದು ಇಲ್ಲಿಂದ ಏಳು ಹರದಾರಿ ದೂರವಿದೆ. ಇಂದು ನೀವು ಅಲ್ಲಿಗೆ ಹೋಗಬೇಡಿ. ಮಾರ್ಗದಲ್ಲಿ ಭಯಂಕರವಾದ ಹುಲ್ಲುಗಾವಲು. ಎದೆ ಎತ್ತರ ಬೆಳೆದು ನಿಂತಿದೆ. ಅದರ ಬದಿಗೆ ಸ್ಮಶಾನ. ಅಲ್ಲಿ ಕಳ್ಳರ ಭಯವೂ ಇದೆ."

ವೈದ್ಯರೆಂದರು: "ರೋಗಿ ತುಂಬ ಕಷ್ಟದಲ್ಲಿದ್ದಾನೆ; ನಾವು ಅಲ್ಲಿಗೆ ಹೋಗಲೇಬೇಕು."

ತಿಲ್ಪಿನಿ ಕಾಲುವೆ ಹರಿದ ಕೊಳ್ಳಕ್ಕೆ ಪಾಲ್ಕಿಯು ತಲುಪುವಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಪಾಲ್ಕಿಯ ದಿಂಡಿಗೆ ಕಟ್ಟಿದ್ದ ಔಷಧದ ಪೆಟ್ಟಿಗೆ ಹಗ್ಗ ಹರಿದು ಬಿಚ್ಚಿಬಿತ್ತು. ಔಡಲ ಎಣ್ಣೆತುಂಬಿದ ಬಾಟಲಿಗಳಲ್ಲಿ ಕೆಲವು ಒಡೆದುಹೋದವು. ಪೆಟ್ಟಿಗೆಯನ್ನು ಮೇಲೆತ್ತಿ ಮತ್ತೆ ದಿಂಡಿಗೆ ಗಟ್ಟಿಯಾಗಿ ಬಿಗಿದು ಕಟ್ಟಿದರು. ಮುಂದೆ ಮತ್ತೊಂದು ವಿಪತ್ತು ಕಾದಿತ್ತೆಂದು ಆಗ ತಿಳಿದುಬರಲಿಲ್ಲ. ಎರಡು ಹರದಾರಿ ಇನ್ನೂ ಬಂದಿರಲಿಲ್ಲ ಮೇಣೆಯ ದಿಂಡೇ ಮುರಿದುಹೋಯಿತು. ಮೇಣೆ ನೆಲಕ್ಕೆ ಉರುಳಿತು. ವಿಶ್ವಂಭರಬಾಬು ಸ್ಥೂಲಕಾಯದವರು. ಅವರಿಗೆ ಆಗಾಗ ಇಂತಹ ಪ್ರಸಂಗಗಳು ಬರುತ್ತಿದ್ದವು. ಅವರು ಮೆಲ್ಲನೆ ಎದ್ದು ಸಮಾಧಾನತಂದುಕೊಂಡು ಕುಳಿತರು.

ಈ ಸಮಯಕ್ಕೆ ಬೋಯಿಗಳ ಮುಖ್ಯಸ್ಥ ಸರ್ದಾರ ಬುದ್ಧು ಬಂದು ಹೇಳಿದ: "ಅಗೋ ನೋಡಿ, ಯಾರೊ ಅಲ್ಲಿ ಬರುತ್ತಿದ್ದಾರೆ; ಅವರು ಕಳ್ಳರೇ ಇರಬೇಕು. ಇದರಲ್ಲಿ ಯಾವ ಸಂದೇಹವೂ ಇಲ್ಲ."

ವಿಶ್ವಂಭರಬಾಬು ಧೈರ್ಯತಂದುಕೊಂಡು "ಹೆದರುವಿಯೇಕೆ? ಅವರೆಲ್ಲರೂ ಬರಲಿ." ಎಂದು ಹೇಳಿ ನೆಟ್ಟ ನೋಟದಿಂದ ಆ ದಿಕ್ಕಿನ ಕಡೆಗೆ ನೋಡುತ್ತ ಕುಳಿತರು.

ಬುದ್ಧು ಹೇಳಿದ: "ಬಲ್ಲು ಓಡಿಹೋದ. ಪಲ್ಲು ಎಲ್ಲಿರುವನೊ ಗೊತ್ತಿಲ್ಲ. ಬಕ್ಸಿ ಆ ಗಿಡದ ಗುಂಪಿನಲ್ಲಿ ಅಡಗಿ ಕುಳಿತಿದ್ದಾನೆ. ಭಯದಿಂದ ವಿಷ್ಣುವಿನ ಕೈಕಾಲುಗಳು ಥರಥರ ನಡುಗುತ್ತಿವೆ.

ಇದನ್ನು ಕೇಳಿ ವೈದ್ಯರೂ ತುಸು ಹೆದರಿಕೊಂಡರು. ಕಂಪಿತಸ್ವರದಲ್ಲಿ ಕರೆದರು "ಶಂಭು" ಎಂದು. ಕೂಡಲೆ ಶಂಭು "ಏನಪ್ಪಣೆ" ಎಂದು ಮುಂದೆ ಬಂದು ನಿಂತನು.

ವೈದ್ಯರೆಂದರು : “ ಈಗೇನು ಉಪಾಯ ? ” ಎಂದು.

ಶಂಭು ಹೇಳಿದ : “ ಭಯವಿಲ್ಲ. ನಾನಿದ್ದೇನೆ.”

ವೈದ್ಯರೆಂದರು, “ ಅವರು ಐದು ಜನರಿದ್ದಾರೆ.”

ಶಂಭುಹೇಳಿದ : “ ನಾನು ಶಂಭು ಇದ್ದೇನೆ.” ಇಷ್ಟು ಹೇಳಿದವನೇ ಅಲ್ಲಿಯೇ ಮುರಿದುಬಿದ್ದಿದ್ದ ದಿಂಡನ್ನೆತ್ತಿಕೊಂಡು ಒಂದೇ ಜಿಗಿತ ಜಿಗಿದು ಕಳ್ಳರ ಮಧ್ಯದಲ್ಲಿ ಹೋದ. ಖಬರದಾರ್ ಎಂದು ಗುಡುಗುಹಾಕಿ ಅವರನ್ನು ಬೆದರಿಸಿದ.

ಕಳ್ಳರು ಅಟ್ಟಹಾಸದಿಂದ ನಗುತ್ತ ಶಂಭುವಿನ ಮೇಲೆ ಏರಿ ಬಂದರು. ಆಗ ಶಂಭು ಕೈಯಲ್ಲಿದ್ದ ಆ ಮೇಣೆಯ ದಿಂಡನ್ನು ಬೀಸಿ ಕಳ್ಳರನ್ನು ಚೆನ್ನಾಗಿ ಥಳಿಸಿದ. ಅವರ ಮೇಲೇರಿ ಹೋದ. ಒಂದೇ ಹೊಡೆತಕ್ಕೆ ಮೂವರು ಕಳ್ಳರು ನೆಲಕ್ಕೆ ಉರುಳಿದರು. ಮಣ್ಣು ಮುಕ್ಕಿದರು. ಕೂಡಲೆ ಶಂಭು ಕೈಯಲ್ಲಿದ್ದ ದಿಂಡನ್ನು ಬಲವಾಗಿ ಬೀಸುತ್ತ ಉಳಿದಿಬ್ಬರ ಮೇಲೇರಿ ಹೋದ. ಅವರಿಬ್ಬರೂ ದಿಕ್ಕಾಪಾಲಾಗಿ ಓಡಿ ಹೋದರು.

ಆಗ ವೈದ್ಯರು “ ಶಂಭು ” ಎಂದು ಕರೆದರು.

“ ಏನಪ್ಪಣೆ ? ” ಎಂದು ಶಂಭು ಕೈಜೋಡಿಸಿ ಎದುರು ನಿಂತ.

ವೈದ್ಯರೆಂದರು “ ಮತ್ತೆ ಔಷಧದ ಪೆಟ್ಟಿಗೆಯನ್ನು ಹೊರಗೆ ತಂದುಕೊಡು.”

ಶಂಭು ಹೇಳಿದ, “ಏಕೆ? ಪೆಟ್ಟಿಗೆಯಿಂದ ಈಗೇನಾಗಬೇಕಾಗಿದೆ?

ಈ ಮೂರೂ ಜನರಿಗೆ ಔಷಧೋಪಚಾರ ಮಾಡಬೇಕಾಗಿದೆ. ಅವರ ಗಾಯಗಳಿಗೆ ಬಟ್ಟೆ ಕಟ್ಟಬೇಕಾಗಿದೆ.

ರಾತ್ರಿ ಆಗ ತುಸುವೆ ಉಳಿದಿತ್ತು. ವಿಶ್ವಂಭರಬಾಬು ಹಾಗೂ ಶಂಭು ಇಬ್ಬರೂ ಸೇರಿ ಆ ಮೂರೂ ಜನರ ಆರೈಕೆ ಮಾಡಿದರು.

ಬೆಳಗಾಯಿತು ಚದುರಿದ ಮೋಡಗಳ ಒಡಲೊಳಗಿಂದ ಸೂರ್ಯನ ಕಿರಣಗಳು ಕಾರಂಜಿಯಂತೆ ಪುಟಿದು ಹೊರಬಂದವು. ಒಬ್ಬೊಬ್ಬರಂತೆ ಬೋಯಿಗಳೂ ತಿರುಗಿ ಬಂದರು. ಬಲ್ಗು ಬಂದ; ಪಲ್ಲು ಬಂದ; ಬಕ್ಸಿಯ ಕೈಹಿಡಿದು ವಿಷ್ಣು ಬಂದ. ಈಗಲೂ ಅವನ ಹೃತ್‌ಪಿಂಡ ನಡುಗುತ್ತಿತ್ತು.

(‘ ಸಹಜ ಪಾಠ ’, ಭಾಗ ೨ ; ಪಾಠ. ೧೨)

6. ಕಾಳರಾತ್ರಿಯು ಕಳದೆ ಹೋಯಿತು

ಕಾಳರಾತ್ರಿಯು ಕಳದೆ ಹೋಯಿತು
ಬೆಳಕು ಕತ್ತಲ ನುಂಗಿತು
ಪೂರ್ವ ದಿಶೆಯಲಿ ತೋರೆದು ನಿದ್ದೆಯ
ಉಷೆಯು ಸಕ್ಕಳು ಹರುಷದಿ

ಯಾರು ಬಲ್ಲರು? ಹೇಗೆ ಕೊಟ್ಟರು?
ಚಂದಿರಗೆ ಈ ಸೂಚನೆ
ಅಂಜುತಂಜುತ ಕಾಲುಕಿತ್ತಿದ
ಸಿಕ್ಕದಾರಿಯ ಹಿಡಿಯುತ.

ಎಚ್ಚರಿದ್ದವು ಚಿಕ್ಕೆ ನಿಶೆಯಲಿ
ಚಿಕ್ಕ ಬತ್ತಿಯ ಉರಿಸುತ
ಇಳಿದು ಬಂದವು ಹಾದಿ ತಪ್ಪುತ
ಹೂಗಳೊಂದಿಗೆ ಬೆಳಗುತ

ದಿಕ್ಕುದಿಕ್ಕಿಗೆ ಗಾಳಿಸಾಗಿತು
ಸಿಕ್ಕಿದೆಲ್ಲವ ತಾಗುತ
ಹಕ್ಕಿಗಳ ಎಚ್ಚರಿಸಿ ಎಬ್ಬಿಸಿ
ಮೇಘ ಮಂಡಲಕೇರುತ

ಮೋಡ ಮೋಡಕೆ ಬಣ್ಣ ಬಳಿದನು
ನೀರು ನೀರಿಗೆ ತೆರೆಗಳು
ಬನದಿ ಹೂಗಳ ಚಲ್ಲಿದ
ಪುಷ್ಪವೃಷ್ಟಿಯ ಸುರಿಸಿದ

7. ಮುತ್ತಿನ ಮಡುವು

ಮುತ್ತಿನ ಮಡುವೆಂಬರು ಅದಕೆ
ಅತ್ತ ದೂರ ನೀರಿನ ಹೊದಿಕೆ
ಅಲ್ಲಿ ಹಂಸಗಳು ಸೆರೆಯುವವು
ಎಲ್ಲ ಬಗೆಯ ಸ್ವರಗೈಯುವವು
ಸಂತೆಯಂತೆ ಬಕಪಕ್ಷಿಗಳು
ನಿಂತುಕೊಂಡು ಅದ ನೋಡುವವು
ಮೋಡದ ತೆರದಲಿ ಮೀನಗಳು
ಕೂಡಿಕೊಂಡು ಬಂದೆರಗುವವು
ಅಲ್ಲಿ ಅಲ್ಲಿ ನೆಲವೆದ್ದಿಹುದು
ಹುಲ್ಲಿನಿಂದ ಅದು ಮುಚ್ಚಿಹುದು
ಮಧ್ಯದಲ್ಲಿ ಜಲಧಾರೆಗಳು
ಅಂಕಡೊಂಕದಲಿ ಸಾಗಿಹವು
ಎಲ್ಲಿಂದಲೊ ಬತ್ತದ ಬೆಳೆಯು
ನಡುಮಟ ನೀರಲಿ ನಿಂತಿಹುದು
ಬಿದ್ದಿತು ಹೊಳೆ ಹೊಳೆಯುವ ಬಿಸಿಲು
ಏನು ಚಂದ! ಎಂತಹ ಸೊಗಸು!
ಸುಗ್ಗಿಯಲ್ಲಿ ಬಲು ಹಿಗ್ಗಿನಲಿ
ರೈತರು ಬೆಳೆಯನು ಒಯ್ಯುವರು
ಹೊತ್ತು ಮುಳುಗಿ ಕತ್ತಲು ಕವಿಯೆ
ದನಕರು ಬರುವವು ಹಿಂದಿರುಗಿ
ಮುಗಿಲಲಿ ಹೊರಟವು ಮೋಡಗಳು
ಆಕಾಶದ ಬಿಳಿ ಗೋವುಗಳು

8. ಗಿಳಿಯ ಕತೆ

೧

ಹೀಗೊಂದು ಪಕ್ಷಿ ಇತ್ತು. ಅದಕ್ಕೆ ಬುದ್ಧಿಯೇ ಇರಲಿಲ್ಲ. ಹಾಡಲು ಬರುತ್ತಿರಲಿಲ್ಲ; ಶಾಸ್ತ್ರ ಓದಿರಲಿಲ್ಲ. ಜಿಗಿಯುತ್ತಿತ್ತು; ನೆಗೆಯುತ್ತಿತ್ತು. ಕಾಯಿದೆ—ಕಾನೂನು ಅಂದರೆ ಏನೆಂಬುದೇ ಅದಕ್ಕೆ ಗೊತ್ತಿರಲಿಲ್ಲ.

ರಾಜ ಅಂದನು: "ಇಂತಹ ಪಕ್ಷಿ ಯಾವ ಕೆಲಸಕ್ಕೂ ಬಾರದು. ಅಲ್ಲದೆ ವನದೊಳಗಿನ ಹಣ್ಣುಗಳನ್ನು ತಿಂದು, ರಾಜಬೀದಿಯ ಹಣ್ಣಿನ ಪೇಟೆಯಲ್ಲಿ ಹಾನಿಯನ್ನುಂಟುಮಾಡುತ್ತದೆ."

ಮಂತ್ರಿಯನ್ನು ಕರೆದು ಹೇಳಿದ: "ಈ ಪಕ್ಷಿಗೆ ಬುದ್ಧಿಕಲಿಸು" ಎಂದು.

೨

ರಾಜನ ಸೋದರಳಿಯನ ಮೇಲೆ ಪಕ್ಷಿಗೆ ಪಾಠ ಕಲಿಸುವ ಭಾರಬಿತ್ತು.

ಪಂಡಿತರೆಲ್ಲ ಕುಳಿತು ತುಂಬ ವಿಚಾರಮಾಡಿದರು. "ಈ ಜೀವದ ಅವಿದ್ಯೆಗೆ ಕಾರಣವೇನು?" ಎಂಬುದೇ ಬಹು ದೊಡ್ಡ ಪ್ರಶ್ನೆಯಾಗಿತ್ತು.

ಕೊನೆಗೆ ಸಿದ್ಧಾಂತವಾಯಿತು. ಸಿಕ್ಕಸಿಕ್ಕ ಹುಲ್ಲಿನ ಗರಿಗಳಿಂದ ಪಕ್ಷಿ ಯಾವ ಗೂಡನ್ನು ತಾನು ಇರಲು ಕಟ್ಟಿಕೊಂಡಿದೆಯೊ ಅಲ್ಲಿ ಹೆಚ್ಚಿನ ಬುದ್ಧಿಗೆ ಅವಕಾಶವೇ ಇಲ್ಲ. ಎಲ್ಲದಕ್ಕಿಂತ ಮೊದಲು ಇದಕ್ಕೊಂದು ತಕ್ಕ ಮನೆಯ ಅವಶ್ಯಕತೆ ಹೆಚ್ಚಾಗಿದೆ. ಉತ್ತಮವಾದುದೊಂದು ಗಿಳಿಪಂಜರ ಮಾಡಿಸಿಕೊಡಬೇಕು.

ರಾಜಪಂಡಿತರು ತಮ್ಮ ತಮ್ಮ ದಕ್ಷಿಣೆಯನ್ನು ಪಡೆದು ಸಂತೋಷದಿಂದ ಮನೆಗೆ ಹೋದರು.

೩

ಅಕ್ಕಸಾಲಿಗ ಕುಳಿತ, ಬಂಗಾರದ ಪಂಜರ ತಯಾರಿಸಲು. ಖ್ಯಾತಿಯನ್ನು ಕೇಳಿ ಪರದೇಶದ ಜನರೂ ಕೂಡ ಧಾವಿಸಿಬರುವಷ್ಟು ಪಂಜರ ಸುಂದರವಾಯಿತು. ಕೆಲವರೆಂದರು: "ಶಿಕ್ಷಣವು ಬಹಳ ಆಕರ್ಷಕವಾಗಿದೆ" ಎಂದು. ಮತ್ತೆ ಕೆಲವರು, ಶಿಕ್ಷಣವಾಗದೆ ಹೋದರೂ ಪಂಜರವಾದರೂ ಆಯಿತಲ್ಲ! ಪಕ್ಷಿಯದು ಎಂತಹ ಸುದೈವ!"

ಅಕ್ಕಸಾಲಿಗ ಚೀಲದ ತುಂಬ ಹಣ ಇನಾಮು ಪಡೆದ. ಅತ್ಯಂತ ಹರ್ಷಚಿತ್ತನಾಗಿ ಸಂತೋಷದಿಂದ ತನ್ನ ಮನೆಗೆ ಕೂಡಲೇ ಹೊರಟು ಹೋದ.

ಪಂಡಿತರೆಲ್ಲ ಪಕ್ಷಿಗೆ ವಿದ್ಯೆ ಹೇಳಿಕೊಡಲು ಕುಳಿತರು. ನಸ್ಯ ಕೈಯಲ್ಲಿ ಹಿಡಿದು ಹೇಳಿದರು : "ಪುಸ್ತಕಗಳೇ ಇಲ್ಲ" ಎಂದು.

ಆಗ ಅಳಿಯನು ಪುಸ್ತಕ ಬರೆಯುವವರ ಶೋಧ ನಡೆಸಿದ. ಅವರು ಬಂದು ಇದ್ದ ಪುಸ್ತಕದ ಪ್ರತಿ ತೆಗೆದರು ; ಪ್ರತಿಮಾಡಿದ ಪುಸ್ತಕಗಳ ಪ್ರತಿಗಳನ್ನೂ ಬರೆದು ತೆಗೆದರು. ಒಂದು ಗುಡ್ಡದಷ್ಟು ಪುಸ್ತಕ ಬರೆದು ರಾಶಿಹಾಕಿದರು. ಇದನ್ನು ನೋಡಿದವರು "ವಾಹವಾ" ಎಂದು ಉದ್ಗಾರ ತೆಗೆದರು. "ಭಲೆ"ಎಂದು ಕತ್ತುಹಾಕಿದರು.

ಪುಸ್ತಕ ಬರೆದವರಿಗೆ ಬಹುಮಾನ ದೊರೆಯಿತು. ಅದನ್ನವರು ಎತ್ತಿನ ಮೇಲೆ ಹೊತ್ತುಕೊಂಡು ಆಕ್ಷಣವೇ ತಮ್ಮ ಮನೆಗೆ ಹೋದರು. ಅವರ ಮನೆಯಲ್ಲಿ ಮತ್ತೆ ಎಳೆದಾಟ, ಕಚ್ಚಾಟ ಉಳಿಯಲಿಲ್ಲ.

ಬಹು ಬೆಲೆಯುಳ್ಳ ಪಂಜರವನ್ನು ಸರಿಯಾಗಿ ಇಟ್ಟುಕೊಳ್ಳುವ ಕೆಲಸ ಅಳಿಯನಿಗೆ ಕ್ಷುಲ್ಲಕವಾದುದೇನೂ ಆಗಿರಲಿಲ್ಲ. ಅದಕ್ಕಾಗಿ ಆಳು ಹೋಳುಗಳನ್ನು ಕೆಲಸಕ್ಕೆ ತಕ್ಕೊಂಡುದಾಯಿತು. ಅವರು ಪಂಜರವನ್ನು ಉಜ್ಜಿ, ಒರೆಸಿ, ತಿಕ್ಕಿ, ತೊಳೆದು ಹೊಳೆಯುವಂತೆ ಸದಾ ಕೆಲಸಮಾಡುವುದನ್ನು ನೋಡಿದ ಜನರು ಅನ್ನುತ್ತಿದ್ದರು "ಶಿಕ್ಷಣದ ಉನ್ನತಿ ಸಾಕಷ್ಟು ನಡೆದಿದೆ." ಎಂದು.

ಇದಕ್ಕಾಗಿ ಕೆಲಸಕ್ಕೆ ತಕ್ಕೊಂಡ ಜನರೇ ಸಾಕಷ್ಟು ಅಧಿಕ ಸಂಖ್ಯೆಯಲ್ಲಿದ್ದರು. ಅವರು ಹೊತ್ತಿಗೆ ಸರಿಯಾಗಿ ಎಲ್ಲ ಕೆಲಸಗಳನ್ನೂ ಮಾಡಿಕೊಂಡು ಹೋಗುವರೋ ಇಲ್ಲವೋ ಎಂಬುದನ್ನು ನೋಡಲು ಮತ್ತಷ್ಟು ಜನ ಕೆಲಸಗಾರರು ಬಂದರು. ಅವರು ತಿಂಗಳು ತಿಂಗಳಿಗೆ ಕೈತುಂಬ ಸಂಬಳ ತೆಗೆದುಕೊಂಡು ತಮ್ಮ ಖಜಾನೆಯನ್ನು ತುಂಬಿಸಿಕೊಂಡರು. ಅವರು, ಅವರ ಬಂಧು—ಬಳಗ, ಚಿಕ್ಕಪ್ಪ—ದೊಡ್ಡಪ್ಪ ಎಲ್ಲರೂ ಉಪ್ಪರಿಗೆಯ ಮನೆ ಕಟ್ಟಿಕೊಂಡು ಅದರ ಮೇಲೆ ಕುಳಿತು ಸುಖವಾಗಿ ಜೀವನ ನಡೆಸಿದ್ದರು.

ಜೀವನದಲ್ಲಿ ಅನೇಕ ವಸ್ತುಗಳ ಕೊರತೆಯಿದ್ದರೂ ನಿಂದಕರು ಮಾತ್ರ ಯಥೇಷ್ಟವಾಗಿರುವರು. ಅವರೆಂದರು : "ಪಂಜರದ ಪ್ರಸಿದ್ಧಿ ಸಾಕಷ್ಟು ಆಗುತ್ತಾ ಇದೆ ; ಆದರೆ ಪಕ್ಷಿಯನ್ನು ಮಾತ್ರ ಕೇಳುವವರೇ ಇಲ್ಲ" ಎಂದು.

ಈ ಮಾತು ಅರಸನ ಕಿವಿಗೂ ಬಿತ್ತು. ಅರಸನು ಅಳಿಯನನ್ನು ಕರೆಸಿ ಕೇಳಿದನು : "ಅಳಿಯನೇ, ಇದೇನು ಸುದ್ದಿ ಕೇಳುತ್ತಿದ್ದೇನೆ ?" ಎಂದು.

ಅಳಿಯ ಹೇಳಿದನು : ನಿಜ ಸಂಗತಿಯನ್ನು ಕೇಳಬೇಕೆಂದು ನಿಮಗೆ ಮನಸ್ಸಿದ್ದರೆ ಕರೆಯಿರಿ ಅಕ್ಕಸಾಲಿಗರನ್ನು ; ಪಂಡಿತರನ್ನು ; ಲಿಪಿಕಾರರನ್ನು. ಕರೆಯಿರಿ ಪಂಜರವನ್ನು ಸರಿಯಾಗಿ ಇಟ್ಟವರನ್ನು. ದಿನಾಲು ತಿಕ್ಕಿತಿಕ್ಕಿ ಹೊಳೆಯುವಂತೆ ಮಾಡಿದ ಜನರನ್ನು ; ಕರೆಯಿರಿ ಈ ಕೆಲಸಗಾರರೆಲ್ಲ ಸರಿಯಾಗಿ ಕೆಲಸಮಾಡುವರೋ ಹೇಗೆಂಬುದನ್ನು ನೋಡುತ್ತಿರುವ ಮೇಲ್ವಿಚಾರಕರನ್ನು. ನಿಂದಕರಿಗೆ ತಿನ್ನಲು ಕೂಳು ಸಿಕ್ಕುವದಿಲ್ಲ. ಹೇಳುತ್ತಾರೆ ಈ ಕೊಳಕು ಮಾತು ; ಹೇಳಲಿ.

ಉತ್ತರವನ್ನು ಕೇಳಿ ಅರಸನು ನಿಜ ಸಂಗತಿಯನ್ನು ಸಂಪೂರ್ಣವಾಗಿ ಅರಿತುಕೊಂಡನು. ಆಗ ಅಳಿಯನ ಕೊರಳಲ್ಲಿ ಬಿತ್ತು ಮುತ್ತಿನ ಸರ.

ಶಿಕ್ಷಣದ ಪ್ರಗತಿಯು ಭಾರೀ ವೇಗದಿಂದ ಸಾಗಿತ್ತು. ಇದನ್ನು ಅರಸನಿಗೆ ಸ್ವತಃ ನೋಡಿ ತಿಳಿದುಕೊಳ್ಳಬೇಕೆಂದು ಮನಸ್ಸಾಯಿತು. ಒಂದು ದಿನ ಅರಸನು, ಮಂತ್ರಿ, ಸೇನಾಪತಿ, ಮಿತ್ರರು, ಬಂಧುಬಾಂಧವರು ಆಪ್ತೇಷ್ಟರೆಲ್ಲರನ್ನೂ ಕೂಡಿ ಕೊಂಡು ಪಾಠಶಾಲೆಗೆ ಸ್ವಯಂ ಬಂದು ನಿಂತನು.

ಪಾಠಶಾಲೆಯನ್ನು ತಲುಪುತ್ತಲೆ ಶಂಖಧ್ವನಿ ಕೇಳಿ ಬಂತು. ಗಂಟೆ-ಜಾಗಟೆಗಳು ಬಾರಿಸಿದವು. ಕೊಳಲುಗಳ ಸಂಗೀತ ಕೇಳಿಸಿತು. ಡಮರು, ಢೋಲು, ಮೃದಂಗ, ನಗಾರೀ, ನೌಬತ್ತುಗಳ ನಿನಾದವು ಸುತ್ತಲಿನ ವಾತಾವರಣವನ್ನೇ ತುಂಬಿ ಮೊಳ ಗರಿಯಿತು.

ಪಂಡಿತರು ಸ್ವರತೆಗೆದು, ಜಂಡಿಕೆ ಕಟ್ಟಿಕೊಂಡು, ಮಂತ್ರ ಹೇಳತೊಡಗಿದರು. ಅಕ್ಕಸಾಲಿಗ, ಶಿಲ್ಪಿ, ಚಿತ್ರಗಾರ, ಲಿಪಿಕಾರ, ನೌಕರರು, ಚಾಕರರು, ಅವರ ಬಂಧುಗಳು, ಬಂಧುಗಳಬಂಧುಗಳು, ಆಪ್ತೇಷ್ಟರು ಎಲ್ಲರೂ ಸೇರಿ ಉಚ್ಚಕಂಠದಿಂದ ಜಯ ಜಯಕಾರ ಮಾಡಿದರು.

ಅಳಿಯ ಅತ್ಯಂತ ವಿನಯದಿಂದ ಬಾಗಿನಿಂತು, "ಮಹಾರಾಜ, ಎಲ್ಲವನ್ನೂ ನೋಡಿದಿರಲ್ಲವೆ?" ಎಂದು ಕೇಳಿದನು.

ಮಹಾರಾಜರದಕ್ಕೆ, "ಇದೇನಾಶ್ಚರ್ಯ! ಗೌಜುಗದ್ದಲಗಳಿಗೇನೂ ಕಡಿಮೆ ಇಲ್ಲ." ಎಂದು ಉತ್ತರವಿತ್ತರು.

ಅಳಿಯನದಕ್ಕೆ "ಬರಿ ಶಬ್ದವಿಷ್ಟೇ ಅಲ್ಲ; ಅದರ ಹಿಂದೆ ಅರ್ಥವೂ ಕಡಿಮೆ ಇಲ್ಲ." ಎಂದು ಅಂದನು.

ರಾಜನಿಗೆ ತುಂಬ ಸಂತೋಷವಾಯಿತು. ಹೊರಗೆ ಬಂದು ಆನೆಯ ಮೇಲೆ ಏರಿ ಕುಳಿತುಕೊಳ್ಳಬೇಕೆಂದಾಗ ಪೊದೆಯ ಮರೆಗೆ ನಿಂದಕ ಅಡಗಿ ನಿಂತದ್ದು ಕಾಣಿಸಿತು. ಅವನು ಮುಂದೆ ಬಂದು ಕೇಳಿದನು: "ಮಹರಾಜ, ಪಕ್ಷಿಯನ್ನು ನೋಡಿದಿರೇನು?" ಎಂದು.

ರಾಜನಿಗೆ ಅದೇಕೋ ಆಘಾತವಾದಂತಾಯಿತು. "ಪಕ್ಷಿಯನ್ನು ನೋಡು ವುದು ಆಗಲೇ ಇಲ್ಲವಲ್ಲ." ಎಂದು ಅಂದುಕೊಂಡನು.

ರಾಜ ತಿರುಗಿ ಬಂದನು. ಪಂಡಿತರನ್ನು ಕರೆದನು. "ಪಕ್ಷಿಗೆ ನೀವು ಅದು ಹೇಗೆ ಕಲಿಸಿರುವಿರೆಂಬುದನ್ನು ನಾನು ನೋಡಬೇಕೆನ್ನುತ್ತೇನೆ" ಎಂದು ರಾಜ ಹೇಳಿದನು.

ಅದನ್ನೂ ನೋಡಿದ್ದಾಯಿತು. ಪಕ್ಷಿಗೆ ಕಲಿಸಿದ ಕ್ರಮವನ್ನು ನೋಡಿದ ರಾಜನಿಗೆ ಮತ್ತಿಷ್ಟು ಸಂತೋಷವಾಯಿತು. ಶಿಕ್ಷಣಕ್ರಮವು ಪಕ್ಷಿಗಿಂತ ಭಾರಿ ದೊಡ್ಡದಾಗಿತ್ತು. "ಈ ಶಿಕ್ಷಣಕ್ರಮವನ್ನು ನೋಡಿದಮೇಲೆ ಪಕ್ಷಿಯನ್ನು ನೋಡದೆಹೋದರೂ ಚಿಂತೆಯಿಲ್ಲ." ಎಂದು ರಾಜನಿಗೆ ಅನಿಸದೆ ಇರಲಿಲ್ಲ.

ವ್ಯವಸ್ಥೆಗೇನೂ ಕೊರತೆ ಇರಲಿಲ್ಲ. ತಿನ್ನಲು ಕಾಳು-ಕಡ್ಡಿ, ಕುಡಿಯಲು ನೀರು ಇಲ್ಲದಿದ್ದರೇನಾಯಿತು? ರಾಶಿ ಪುಸ್ತಕಗಳಿಂದ ರಾಶಿ ರಾಶಿ ಪುಟಗಳನ್ನು ತೆಗೆದು ಅದರಮೇಲೆ ಗಲಗಿನಿಂದ ಬರೆದು ಪಕ್ಷಿಯ ಮುಖದಲ್ಲಿ ತುರುಕುವುದು ನಡೆದಿತ್ತು.

ಪಕ್ಷಿಯ ಗಾನವೆಲ್ಲ ಅಡಗಿತ್ತು. ಕಿರಿಚಿಕೊಳ್ಳಬೇಕೆನ್ನುವಷ್ಟು ಪುಸ್ತಕದ ಭಾರ ಅದರ ಮೈಮೇಲೆ ಬಿದ್ದಿತ್ತು. ಇದನ್ನೆಲ್ಲ ನೋಡಿ ಮೈಸಮಿರೇಳುವಂತಿತ್ತು.

ಈಸಲ ಆನೆಯನ್ನು ಏರಿ ಅಂಬಾರಿಯಲ್ಲಿ ರಾಜ ಕುಳಿತುಕೊಳ್ಳುವಾಗ ಕಾನಮಲ ಸರದಾರನಿಗೆ ಹೇಳಿದ: "ನಿಂದಕರ ಕಿವಿಯನ್ನು ಚೆನ್ನಾಗಿ ತಿರುವಿ, ಎಳೆದು, ಹಿಂಡು" ಎಂದು.

೬

ಪಕ್ಷಿ ಸತ್ತುಹೋಯಿತು. ಎಂದು? ಯಾವಾಗ? ಎಂಬುದನ್ನು ಗೊತ್ತು ಹಚ್ಚುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ದುರ್ದೈವಿ ನಿಂದಕರು ಆ ಸುದ್ದಿಯನ್ನೂ ಊರತುಂಬ ಹಬ್ಬಿಸಿದರು. "ಪಕ್ಷಿ ಸತ್ತುಹೋಯಿತು; ಸತ್ತೇಹೋಯಿತು." ಎಂದು.

ಅಳಿಯನನ್ನು ಕರೆದು ರಾಜ ಕೇಳಿದ "ಇದೇನು ಸುದ್ದಿ ನಾನು ಕೇಳುತ್ತಿದ್ದೇನೆ?" ಎಂದು.

ಅಳಿಯನೆಂದನು "ಪಕ್ಷಿಯ ಶಿಕ್ಷಣವು, ಮಹರಾಜ, ಪೂರ್ಣವಾಗಿದೆ."

ಸುಧಾರಿಸಿಕೊಂಡು ರಾಜನು, "ಹಾಗಾದರೇನಿನ್ನು ಅದನ್ನು ಹಾರಿಬಿಡು." ಎಂದು ಹೇಳಿದನು.

ಅಳಿಯನದಕ್ಕೆ "ಹಾಯ್‌ರಾಮ" ಎಂದು ನಿಟ್ಟುಸಿರು ಬಿಟ್ಟು ಹಾಗೇ ನಿಂತನು.

ಇದನ್ನು ಕಂಡು ರಾಜನು "ಅದಕ್ಕೆ ಜಿಗಿಯಲು ಬರುತ್ತದೆಯೆ?" ಎಂದು ಕೇಳಿದನು.

ಅಳಿಯನು "ಇಲ್ಲ" ಎಂದು ಹೇಳಿದನು.

"ಹಾಡು ಹೇಳಲು ಬರುತ್ತದೆಯೆ?"

"ಇಲ್ಲ."

"ತಿನ್ನಲು ಕಾಳು ದೊರೆಯದಿದ್ದರೆ ಕಿರಿಚಿಕೊಳ್ಳುತ್ತದೆಯೆ?" ಎಂದು ರಾಜ ಮತ್ತೆ ಕೇಳಿದ್ದಕ್ಕೆ

ಅಳಿಯ "ಇಲ್ಲ" ಎಂದೇ ಉತ್ತರವಿತ್ತನು.

ಕೊನೆಗೆ ಮಹರಾಜನೆಂದನು, "ಒಂದು ಸಲ ಪಕ್ಷಿಯನ್ನಾದರೂ ತಂದು ತೋರಿಸು" ಎಂದು ಅಲುಪರಿದನು.

ಪಕ್ಷಿ ಬಂತು. ಜೊತೆಗೆ ಕೊತವಾಲನೂ ಬಂದ. ಕಾವಲುಗಾರ, ಕುದುರೆ ಸವಾರ, ಎಲ್ಲರೂ ಬಂದರು.

ರಾಜನು ಪಕ್ಷಿಯನ್ನು ಮುಟ್ಟಿನೋಡಿದನು. ಅದು ಹಾ ಅನ್ನಲಿಲ್ಲ; ಹೂ ಅನ್ನಲಿಲ್ಲ. ಕೇವಲ ಅದರ ಹೊಟ್ಟೆಯೊಳಗಿಂದ ಪುಸ್ತಕದ ಒಣಕಾಗದ ಕರಪರ, ಚರ ಚರ ಸ್ವರ ತೆಗೆಯುತ್ತಿತ್ತು.

ಹೊರಗೆ ಹೊಸ ವಸಂತದ ದಕ್ಷಿಣದ ಗಾಳಿಯಿಂದ ಅಲುಗುವ ಅರಳಿದ ಹೂಗಳಿಂದ ವನವೆಲ್ಲ ಶೋಭಿಸಿತ್ತು.

[ಮಾಘ : ವಿಕ್ರಮಶಕ, ೧೩೨೪]

9. ಗುರುಗಳು

ಅದೆಲ್ಲ ಇರಲಿ ಬಿಡು: ನಿಮ್ಮ ಆ ಗುರುಗಳು ಈಗ ಎಲ್ಲಿ ಇರುತ್ತಾರೆ?

ಈ ಪ್ರಶ್ನೆಗೆ ನಾನು ಸರಿಯಾಗಿ ಉತ್ತರಕೊಡಬಲ್ಲೆ. ಆ ಸಮಯ ಹತ್ತಿರ ಬಂದಂತೆ ತೋರುತ್ತದೆ. ಆದರೂ . . . ಇನ್ನೂ ತುಸು . . .

ಮತ್ತೆ ಅದೇ ಮಾತು. ಈಗ ಹೇಳಲೇಬೇಕು. ಇಲ್ಲದೆ ಹೋದರೆ ನಾನು ನಿನ್ನೊಂದಿಗೆ ಮಾತಾಡುವುದನ್ನೇ ನಿಲ್ಲಿಸಿ ಬಿಡುತ್ತೇನೆ.

ಸರ್ವನಾಶ! ಅದಕ್ಕಿಂತ ಒಂದು ಸುಳ್ಳುಕತೆಯನ್ನಾದರೂ ಹೇಳುವುದು ಒಳಿತೆಂದು ತೋರುತ್ತದೆ. ನಿನ್ನ ಈ ಅಣ್ಣ, ಶಾಲೆಗೆ ಚಕ್ಕರಕೊಡುತ್ತಿದ್ದ ಹುಡುಗನಾಗಿದ್ದಾಗ ಆ ನಮ್ಮ ಗುರುಗಳು ಇದ್ದರು. ಆಗ ಅವರಿಗೆ ವಯಸ್ಸು ಎಷ್ಟು ಆಗಿತ್ತೆಂಬುದನ್ನು ಮಾತ್ರ ನಾನು ಹೇಳಲಾರೆ. ನನಗಿಂತ ಅದೆಷ್ಟೋ ದೊಡ್ಡವರಾಗಿದ್ದರೆಂದು ಮಾತ್ರ ನೆನಪಿನಲ್ಲಿದೆ.

"ಅವರೇನಾದರೂ ಹುಚ್ಚರಾಗಿದ್ದರೇನು?"

"ಅಹುದು. ಅವರು ನನ್ನಂತೆ ಸಂಪೂರ್ಣ ಹುಚ್ಚರಾಗಿದ್ದರು."

"ನೀನು ಹುಚ್ಚ! ಮತ್ತೆ ಅದೇ ಮಾತು. ಸರಿ. ನೀನೇನು ಹೇಳುತ್ತಿರುವೆಯೋ ಅದೊಂದೂ ನನಗೆ ಅರ್ಥವೇ ಆಗದಾಗಿದೆ. ಅವರ ಹುಚ್ಚಿನ ಲಕ್ಷಣಗಳನ್ನು ಕೇಳಿ ತಿಳಿದ ಮೇಲೆ ತಾನೇ ಎಲ್ಲವೂ ತಿಳಿದುಬರುತ್ತದೆ. ಇರಲಿ, ಮುಂದೆ ಹೇಳು."

"ನನ್ನೊಂದಿಗೆ ಅವರ ಸ್ವಭಾವ ಯಾರಿಗೂ ಆಶ್ಚರ್ಯವೆನಿಸುವಷ್ಟು ಹೊಂದಿ ಹೋಗಿತ್ತು."

"ಅದು ಹೇಗೆ ಹೇಳು? ನೋಡೋಣ!"

"ಅದು ಹೀಗೆ. ಗುರುಗಳು ಅನ್ನುತ್ತಿದ್ದರು: ಈ ಜಗತ್ತಿನಲ್ಲಿಯೇ ತಾವು ಅದ್ವಿತೀಯರೆಂದು. ನಾನೂ ಅದನ್ನೇ ಹೇಳುತ್ತಿದ್ದೆ."

ನೀನು ಹೇಳುವುದು ಸತ್ಯ. ಆದರೆ ಅವರು ಮಾತ್ರ ಹೇಳುತ್ತಿದ್ದುದು ಸುಳ್ಳು.

ನೋಡಕ್ಕ! ಸತ್ಯ ಯಾವಾಗಲೂ ಸತ್ಯವಾಗಿಯೇ ಇರುವುದಿಲ್ಲ. ಅಂತೇ ಎಲ್ಲರಿಗೂ ಅದರೊಂದಿಗೆ ನಿಕಟಸಂಬಂಧ ಹೆಚ್ಚಾಗಿ ಬಂದಿರುವುದೇ ಇಲ್ಲ. ಬ್ರಹ್ಮನು ಅದೆಷ್ಟೋ ಲಕ್ಷ-ಕೋಟಿ ಮನುಷ್ಯರನ್ನು ನಿರ್ಮಿಸಿದ್ದಾನೆ. ಪ್ರತಿಯೊಬ್ಬರೂ ಅದ್ವಿತೀಯರೇ. ಒಬ್ಬರಂತೆ ಇನ್ನೊಬ್ಬರಿಲ್ಲ. ಬೇರೆ ಬೇರೆ ಪಡಿ ಅಚ್ಚಿನಲ್ಲಿ ಒತ್ತಿ ಕಳಿಸಿದ್ದಾನೆ. ಹೆಚ್ಚಾಗಿ ಜನರು ತಮ್ಮನ್ನು ನಾಲ್ಕು ಜನರಿಗೆ ಹೋಲಿಸಿಕೊಂಡು ಸುಖ ತಂದುಕೊಳ್ಳುತ್ತಾರೆ. ನಮ್ಮ ಗುರುಗಳು ಈ ಜಾತಿಗೆ ಸೇರಿದ ಜನರಾಗಿದ್ದರು.

" ಇದೇನು ? ನೀವು ಹೇಳಿದ್ದು ನನಗೆ ಅರ್ಥವೇ ಆಗದಾಗಿದೆ. ತುಸು ಸ್ಪಷ್ಟವಾಗಿ ಅವರ ಕತೆ ಹೇಳಿರಲ್ಲ! ನಿಮ್ಮ ಅರ್ಧಮರ್ಧ ಕತೆಯನ್ನು ನಾನು ತಿಳಿದುಕೊಳ್ಳಲಾರೆ.

" ತುಸು ತುಸು ಹೇಳುತ್ತೇನೆ ಕೇಳು. ಒಂದಿಷ್ಟು ಧೈರ್ಯ ತಾಳು.

" ನಮ್ಮ ಮನೆಯಲ್ಲಿ ಒಬ್ಬ ಗುರುಗಳಿದ್ದರು. ನಮ್ಮ ಹಿರಿಯ ಅಣ್ಣನಿಗೆ ಪಾರಸಿ ಭಾಷೆಯನ್ನವರು ಕಲಿಸಿಕೊಡುತ್ತಿದ್ದರು. ಅವರ ಬಡ ಬರಿ ಎಲುಬಿನ ಉದ್ದನ್ನ ದೇಹವನ್ನು ಮುಚ್ಚಲು ಅವರಲ್ಲಿದ್ದುದ್ದ ತುಸು ಮಾಂಸಕ್ಕೆ ತುಂಬ ಎಳೆದಾಟವಾಗುತ್ತಿತ್ತು. ಎಲುಬಿನ ಹಂದರಕ್ಕೆ ಚರ್ಮ ಹತ್ತಿಕೊಂಡಿತ್ತು—ಮೇಣದ ಬಟ್ಟೆ ಒತ್ತಿದಂತೆ. ನೋಡಿದವರಾರೂ ಆ ದೇಹದ ತಾಳ್ಮೆಯ ಆಳವನ್ನು ಊಹಿಸಿ ಗ್ರಹಿಸಲು ಶಕ್ತರಾಗುತ್ತಿದ್ದಿಲ್ಲ. ಬೇರೆಜನ ಊಹಿಸುವ ಮಾತು ಏನಿದ್ದರೂ ತಾಳ್ಮೆ ಎಂದರೇನೆಂಬುದು ಅವರಿಗೆ ಮಾತ್ರ ಗೊತ್ತಿತ್ತು.

" ಜಗತ್ತಿನಲ್ಲಿ ಅನೇಕ ಪೈಲವಾನರಿದ್ದಾರೆ. ಅವರೆಲ್ಲರೂ ಒಂದು ಸಲ ಗೆಲ್ಲುತ್ತಾರೆ; ಒಂದು ಸಲ ಸೋಲುತ್ತಾರೆ. ಆದರೆ ನಮ್ಮ ಗುರುಗಳು ಮಾತ್ರ ಯಾರೊಂದಿಗೂ ಸೋತವರೇ ಅಲ್ಲ. ಹಿಂದೆ ಸರಿದವರೇ ಅಲ್ಲ. ಅವರಿಗೆ ದೊರೆತ ಶಿಕ್ಷಣದ ಪ್ರಭಾವ ಹಾಗಿತ್ತು. ತಮಗಿರುವ ವಿದ್ಯೆಗಿಂತ ತಮ್ಮನ್ನು ಇತರರು ನೋಡುವ ದೃಷ್ಟಿ ಕಡಿಮೆ ಇರಬಹುದೆಂಬ ವಿಚಾರ ಅವರ ತಲೆಯಲ್ಲಿ ಬರುತ್ತಿರಲೇ ಇರಲಿಲ್ಲ. ಕಠಿಣವಾದ ಪಾರಸಿ ಭಾಷೆಯನ್ನು ಸುಲಭವಾಗಿ ಓದುತ್ತಾರೆಂದು ತಿಳಿದ ಜನ ಸುಮ್ಮನಿರುತ್ತಿದ್ದರು. ಆದರೇನು ? ಪಾರಸಿ ಭಾಷೆಯನ್ನು ಬರಿ ಓದಲು ಬಂದರೇನಾಯಿತು ! ಅಷ್ಟಕ್ಕೆ ಎಲ್ಲ ವಿದ್ಯೆ ಬಂದಂತೇನೂ ಆಗಲಿಲ್ಲ! ಇದೆಲ್ಲ ಏನಿದ್ದರೂ ನಮ್ಮ ಗುರುಗಳು ಮಾತ್ರ ತಮ್ಮಲ್ಲಿ, ತಮ್ಮ ವಿದ್ಯೆಯಲ್ಲಿ ತುಂಬ ವಿಶ್ವಾಸ ತಳೆದಿದ್ದರು.

ತಮಗೆ ಹಾಡಲು ಕೂಡ ಚೆನ್ನಾಗಿ ಬರುತ್ತದೆಂದು ಅವರು ನಂಬಿದ್ದರು. ಅಷ್ಟು ಆತ್ಮವಿಶ್ವಾಸ ಅವರದು. ನಮ್ಮ ಅಭಿಪ್ರಾಯವೇ ಬೇರೆ. ಅವರ ಕಂಠದಿಂದ ಹೊರಡುವ ಸ್ವರ ಕೂಗುವ ಇಲ್ಲವೆ ಅಳುವ ಜಾತಿಗೆ ಸೇರಿದ ಸ್ವರವಾಗಿತ್ತು. ಇದನ್ನು ಕೇಳಿ, ದೂರವಿದ್ದ ಜನ ಏನೋ ವಿಪತ್ತು ಬಂದಿದೆ ಎಂದು ಭಾವಿಸಿ, ಧಾವಿಸಿ ಹತ್ತಿರ ಬರುತ್ತಿದ್ದರು. ಅಂತಹ ಸ್ವರ ಅದು.

ಹೀಗಿದ್ದರೂ ನಮ್ಮ ಮನೆಯಲ್ಲಿದ್ದ ಸಂಗೀತಗಾರ ವಿಷ್ಣು ನಮ್ಮ ಗುರುಗಳನ್ನು ಕಂಡು ಹೆದರುತ್ತಿದ್ದ. ಅವನು ತನ್ನ ಹಣೆಬಡಿದುಕೊಳ್ಳುತ್ತ ಹೇಳುತ್ತಿದ್ದ, " ಈ ಗುರುಗಳೆಲ್ಲಿ ನನ್ನ ಹೊಟ್ಟೆಯ ಮೇಲೆ ಹೊಡೆಯುವರೊ " ಎಂದು. ವಿಷ್ಣುವಿನ ಈ ಭಗ್ನ ಮನೋಭಾವವನ್ನು ನೋಡಿ, ನಮ್ಮ ಗುರುಗಳು ಅಷ್ಟೇನೂ ದುಃಖಿತರಾಗುತ್ತಿದ್ದಿಲ್ಲ. ಮುಖ ಬೇರೆಕಡೆಗೆ ಮಾಡಿ ನಗುತ್ತಿದ್ದರು ಮಾತ್ರ. " ನಿಮಗೆ ದೇವರು ಎಂತಹ ಕಂಠ ಕೊಟ್ಟಿದ್ದಾನೆ ! " ಎಂದು ಯಾರಾದರೂ ಗುರುಗಳಿಗೆ ಚೇಷ್ಟೆ ಮಾಡಿದರೆ ಅವರಿಗದು ಅರ್ಥವೇ ಆಗುತ್ತಿರಲಿಲ್ಲ. ಎಳೆದೆಳೆದು ರಾಗ ತೆಗೆದು ತಮಗೆ ಬಂದ ಕೀರ್ತಿ ಉಳಿಯಲಿ ಎಂದು ಅವರು ಸದಾ ಗುಂಯಿಗುಡುತ್ತಿದ್ದರು. ಇದಾಯಿತು ಅವರ ಹಾಡಿನ ಕತೆ.

ಇನ್ನೂ ಒಂದು ವಿದ್ಯೆಯಲ್ಲಿ ನಮ್ಮ ಗುರುಗಳು ಪಾರಂಗತರಾಗಿದ್ದರು. ಆದರದನ್ನು ಬಿಡಿಸಿಹೇಳಲು ಬಾರದಾಗಿದೆ. ಇಂಗ್ಲೀಷ ಭಾಷೆಯ ಗರಡಿಯಲ್ಲಿ ಬೇಕಾದಷ್ಟು ಸಾಧನೆ ಮಾಡಿದ ಇಂಗ್ಲೀಷ ಮನುಷ್ಯನೇ ಇದ್ದರೂ ಅವನಿಗೆ ನಮ್ಮ ಗುರುಗಳ ಮುಂದೆ ಒಂದು ಕ್ಷಣ ನಿಲ್ಲಲು ಸಹ ಸಾಧ್ಯವಿರಲಿಲ್ಲ. ಹೀಗಿತ್ತು ನಮ್ಮ ಗುರುಗಳ ಆತ್ಮವಿಶ್ವಾಸ. ಒಂದು ಸಲ ವಕ್ತೃತ್ವದ ಸ್ಪರ್ಧೆಯಲ್ಲಿ, ಏನುಹೇಳಲಿ, ಸುರೇಂದ್ರನಾಥರನ್ನು ದೇಶತ್ಯಾಗ ಮಾಡಿಸಬಹುದಾಗಿತ್ತು—ನಮ್ಮ ಗುರುಗಳು ಮನಸ್ಸುಮಾಡಿದ್ದರೆ. ಆದರೆ ನಮ್ಮ ಗುರುಗಳು ಅಂತಹ ಮನುಷ್ಯರೇ ಅಲ್ಲ. ಅಂತೇ ವಿಷ್ಣೂನ ನೌಕರಿ ಉಳಿದಂತೆ ಸುರೇಂದ್ರನಾಥರ ಹೆಸರೂ ಉಳಿಯಿತು. "ವಾಡಿಕೆಯಂತೆ ಆ ಪ್ರಸಂಗದಲ್ಲೂ ನಮ್ಮ ಗುರುಗಳು ಮುಖ ತುಸು ಓರೆಮಾಡಿ ನಕ್ಕರು" ಎಂಬ ಮಾತು ಮಾತ್ರ ಕೇಳಿಬಂತು.

ನಮ್ಮ ಗುರುಗಳ ಇಂಗ್ಲೀಷ ಭಾಷೆಯ ಮೇಲಿದ್ದ ಪ್ರಭುತ್ವದ ದುರುಪಯೋಗ ತೆಗೆದುಕೊಳ್ಳುವಂತಹ ಪಾಪದ ಪ್ರಸಂಗಗಳು ಮಾತ್ರ ಆಗಾಗ ಬರುತ್ತಿದ್ದವು. ಇದನ್ನೇ ತುಸು ಬಿಚ್ಚಿ ಹೇಳುತ್ತೇನೆ. ಆಗ ನಾವು "ಬೆಂಗಾಲ ಎಕಾಡೆಮಿ"ಯಲ್ಲಿ ಕಲಿಯುತ್ತಿದ್ದೆವು. ಡಿಕ್ರೂಜ ಸಾಹೇಬರ ಶಾಲೆ ಅದು. ನಮ್ಮ ಓದು-ಬರೆಹ ಸಾಗುವುದೇ ಇಲ್ಲವೆಂದು ಅವರಿಗೆ ಸಂಪೂರ್ಣ ಮನವರಿಕೆಯಾಗಿತ್ತು. ಆದರೆ ಅದರಿಂದ ಅವರಿಗೇನಾಗಬೇಕಾಗಿದೆ! ನಮಗೊ, ವಿದ್ಯೆಯೂ ಬೇಕಿರಲಿಲ್ಲ; ಬುದ್ಧಿಯೂ ಬೇಕಿರಲಿಲ್ಲ. ವಂಶಪರಂಪರಾಗತವಾಗಿ ಬಂದ ಆಸ್ತಿ ವಿಪುಲವಾಗಿರುವಾಗ ಇವುಗಳ ಬೆಲೆ ಎಲ್ಲಿ?

ಆದರೂ ಡಿಕ್ರೂಜ್ ಸಾಹೇಬರಿಂದ ಶಾಲೆಗೆ ಬಿಡುವು ತಕ್ಕೊಳ್ಳುವುದಕ್ಕೆ ಮಾತ್ರ ಶಾಲೆಯ ಪ್ರಚಲಿತ ನಿಯಮವನ್ನು ಅಕ್ಷರಶಃ ನಾವು ಪಾಲಿಸಬೇಕಾಗುತ್ತಿತ್ತು. ರಜೆ ಬೇಕಾಗಿದ್ದರೆ ಅದಕ್ಕೊಂದು ಸರಿಯಾದ ಕಾರಣವನ್ನು ಅವಶ್ಯ ಕೊಡಬೇಕಾಗಿತ್ತು. ಚೀಟಿ ತರಬೇಕು. ಅದು ಚಿಕ್ಕದಿದ್ದರೂ ಸರಿ; ದೊಡ್ಡದಿದ್ದರೂ ಸರಿ. ಚೀಟಿ ಇದ್ದರಾಯಿತು. ಕಣ್ಣುಮುಚ್ಚಿ ಡಿಕ್ರೂಜ ಸಾಹೇಬರು ರಜೆ ಕೊಡುತ್ತಿದ್ದರು. ನಮ್ಮ ಗುರುಗಳಿಗೆ ಈ ವಿಷಯ ಗೊತ್ತಿತ್ತು. ಆದರೂ ರಜೆ ಸಿಕ್ಕಿದ್ದಕ್ಕೆ, ತಾವು ಬರೆದ ಚೀಟಿಯಲ್ಲಿಯ ಇಂಗ್ಲೀಷ ಭಾಷೆಯ ಪ್ರೌಢಶೈಲಿಯಿಂದ ಅವರ ಮನಸ್ಸಿನ ಮೇಲೆ ಆದ ಪರಿಣಾಮವೇ ಕಾರಣ ಎಂದು ನಮ್ಮ ಗುರುಗಳು ಹೆಮ್ಮೆ ತಾಳುತ್ತಿದ್ದರು. ಮುಖ ತುಸು ಓರೆಮಾಡಿ ನಗುತ್ತಿದ್ದರು.

ಅದೇನೇ ಇರಲಿ. ಅವರ ಇಂಗ್ಲೀಷ ಭಾಷೆಯ ಪ್ರಭಾವ ಮಾತ್ರ ವ್ಯಾಕರಣ ಸೂತ್ರ ಹಿಡಿದು ಬರೆದ ಮಹಾ ಮಹಾ ಜಡ್ಜರ ಪ್ರಭಾವವನ್ನೂ ಮೀರಿತ್ತು. ಏಕೆಂದರೆ ಒಂದು ಸಲವೂ ಕೂಡ ನಮ್ಮ ಗುರುಗಳಿಗೆ ತಮ್ಮ ಇಂಗ್ಲೀಷ ಭಾಷೆಯ ಪಾಂಡಿತ್ಯವನ್ನು ಕೋರ್ಟಿನಲ್ಲಿ ಯಾವ ಜಡ್ಜರ ಮುಂದೆಯೂ ತೋರಿಸುವ ಪ್ರಸಂಗ ಬರಲೇ ಇಲ್ಲ.

ಇನ್ನೊಂದು ವಿದ್ಯೆ ಅವರ ಉಳಿದೆಲ್ಲ ವಿದ್ಯೆಗಳಿಗಿಂತ ಹೆಚ್ಚು ಪ್ರಸಿದ್ಧಿಯನ್ನು ಪಡೆದಿತ್ತು. ಅದೆಂದರೆ ನಮ್ಮ ಗುರುಗಳು ತಮ್ಮ ನೆರಳಿನೊಂದಿಗೆ ಕುಸ್ತಿ ಆಡುವುದು.

ನಮ್ಮ ಮನೆಯ ಮುಂದಿನ ಅಂಗಳದ ಉಸುಕಿನ ಮೇಲೆ ಬಿಸಿಲು ಚೆನ್ನಾಗಿ ಬಿದ್ದಿತೆಂದರೆ ಸಾಕು, ಆಟ ಪ್ರಾರಂಭವಾಗುತ್ತಿತ್ತು. ಶಡ್ಡುಹೊಡೆದು, ಆರ್ಭಟಮಾಡಿ ಹೂಂಕರಿಸಿ ನಮ್ಮ ಗುರುಗಳು ತಮ್ಮ ಪ್ರತಿ ಸ್ಪರ್ಧಿಯನ್ನು ಕುಸ್ತಿಗೆ ಕರೆಯುವುದನ್ನು ನೋಡಬೇಕು. ಕಾಲಿನಿಂದ ನೆಲ ಒದ್ದರೆ ಸಾಕು ಪ್ರತಿ ಸ್ಪರ್ಧಿಯ ಕಾಲಿಗೆ ಒದ್ದಂತೆ ಕಂಡುಬರುತ್ತಿತ್ತು. ಅದೇ ಪ್ರಕಾರ ತನ್ನ ತೋಳನ್ನೇ ಗಟ್ಟಿಯಾಗಿ ಹಿಡಿದುಕೊಂಡರೂ, ಮೈಯನ್ನೇ ಕಸುವಿನಿಂದ ಮುಟ್ಟಿಕೊಂಡರೂ ಮತ್ತೆ ಏನನ್ನೇ ಮಾಡಿದರೂ ಪ್ರತಿ ಸ್ಪರ್ಧಿಯ ಮೇಲೆ ಏರಿ ಹೋದಂತೆ ಕಾಣುತ್ತಿತ್ತು. ಕತ್ತೆತ್ತಿ ಆಟದ ಮಧ್ಯದಲ್ಲಿ ಪ್ರೇಕ್ಷಕರನ್ನು ಒಳ್ಳೇ ಬಿಂಕದಿಂದ ನಮ್ಮ ಗುರುಗಳು ನೋಡುತ್ತಿದ್ದರು. ಆಗ ಪ್ರೇಕ್ಷಕರೆಲ್ಲ "ಭಲೆ, ಭಾಪು" ಎಂದು ನಮ್ಮ ಗುರುಗಳಿಗೆ ಪ್ರೋತ್ಸಾಹನವನ್ನು ಕೊಡುತ್ತಿದ್ದರು. ತಮ್ಮ ನೆರಳಿನೊಂದಿಗೆ ಅದೆಷ್ಟೇ ಸಲ ಕುಸ್ತಿ ಹಿಡಿದರೂ ಗೆಲವು ನಮ್ಮ ಗುರುಗಳಿಗೆ ಖಂಡಿತ. ಇದೇ ನೆರಳಿನೊಡನೆ ಆಟ ಆಡುವುದರ ರಹಸ್ಯ. ಪ್ರತಿಸಲವೂ ತಾನೇ ಬಿದ್ದು, ತನ್ನ ನೆರಳನ್ನು ಬೀಳಿಸಿ ಅದರಮೇಲೆ ತಾನು ತನ್ನ ಜಯವನ್ನು ಸಂಪಾದಿಸಿದ ನೋಟವನ್ನು ಪ್ರೇಕ್ಷಕರೆಲ್ಲ ಹೊಗಳಿ ಜಯಜಯಕಾರ ಮಾಡುತ್ತಿದ್ದರು. ಇದನ್ನು ಕಂಡು ನಮ್ಮ ಗುರುಗಳು ಮುಖ ತುಸು ಓರೆಮಾಡಿ ನಗುತ್ತಿದ್ದರು.

ಅಕ್ಕಾ ನೋಡು, "ಈಗ ನಿನಗೆ ಗೊತ್ತಾಗಿರಲು ಸಾಕು ನನ್ನ ಹಾಗೂ ನಮ್ಮ ಗುರುಗಳ ಹುಚ್ಚು ಎಲ್ಲಿ ಕೂಡಿಕೊಂಡಿವೆ" ಎಂದು. ನಾನೂ ನನ್ನ ನೆರಳಿನೊಂದಿಗೆ ಯುದ್ಧ ಮಾಡುತ್ತಿದ್ದೇನೆ. ಆ ಯುದ್ಧದಲ್ಲಿ ನಾನೇ ಗೆಲ್ಲುವೆನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇತಿಹಾಸದಲ್ಲಿ ನೆರಳಿನ ಈ ಯುದ್ಧವನ್ನೇ ನಿಜವಾದ ಯುದ್ಧ ಎಂದು ವರ್ಣಿಸುತ್ತಾರೆ.

10. ವನವಾಸ

ರಾಮನಂತೆ ಕಾಡಿಗೆನ್ನ
ಅಪ್ಪ ಕಳಿಸಿಕೊಟ್ಟರೆ,
ಹೋಗಲಾರೆನೆಂದು ನೀನು
ಮನದಿ ತಿಳಿದುಕೊಳುವೆಯಾ ?

ಹತ್ತು ನಾಲ್ಕುವರ್ಷ ಮಾತ್ರ
ಮುಗಿವವೆಂದು ಹೇಳಲಾರೆ.
ದಂಡಕಾರಣ್ಯವೆಲ್ಲಿ ?
ಅಮ್ಮ ನನಗೆ ಗೊತ್ತೆ ಇಲ್ಲ.

ಆದರೆನಗೆ ಭಯವೆ ಬರದು
ಹೋಗಬಲ್ಲೆನಲ್ಲಿಗೆ ;
ಲಕ್ಷ್ಮಣಜೊತೆಗಿದ್ದರಾಯ್ತು
ಕೂಡಿಕೊಂಡು ಸಾಗುವೆ.

ಅಡವಿಯಲ್ಲಿ ಗಿಡದಕೆಳಗೆ
ಮನೆಯನೊಂದು ಕಟ್ಟುವೆ
ಎದುರಿಗೊಂದು ಹರಿವಹೊಳೆಯು
ರಾಶಿ ಮಳಲ ಹಾಕುವ.

ಕರೆದುಕೊಂಡು ಹೋಗುತಿದ್ದೆ
ತಂಗಿಯೊಬ್ಬಳಿದ್ದರೆ,
ಆಟಕೆಂದು ಚಿಗರಿಯನ್ನು
ಈಯುತಿದ್ದೆನವಳಿಗೆ.

ಸೊಪ್ಪುತಂದು ತಿನಿಸುತಿದ್ದೆ.
ಅಪ್ಪಿಕೊಂಡು ರಮಿಸುತಿದ್ದೆ.
ಲಕ್ಷ್ಮಣಜೊತೆಗಿದ್ದರಾಯ್ತು
ಕೂಡಿಕೊಂಡು ಸಾಗುವೆ.

ಮರಗಳೆಷ್ಟು? ಹೂಗಳೆಷ್ಟು?
ಮಾಲೆಕಟ್ಟಿ ತಂಗಿಗೆ
ತಲೆಯ ತುಂಬ ಮುಡಿಸುತಿದ್ದೆ
ಚಿಕ್ಕೆಯಂತೆ ಕುರುಳಿಗೆ

ನೆಲದಿ ಹಾಸಿ ಬಿದ್ದ ಹಣ್ಣು
ಹೇಳ ತಿರದಷ್ಟು ಬಣ್ಣ!
ಬುಟ್ಟಿ ತುಂಬಿ ಮನೆಗೆ ತಂದು
ಇಟ್ಟುಕೊಳ್ಳುತಿದ್ದೆ ಬಂದು

ಹೊಟ್ಟೆ ಹಸಿಯೆ ಹಣ್ಣುಗಳನು
ತಮ್ಮನೊಡನೆ ತಿನ್ನುವೆ
ಲಕ್ಷ್ಮಣ ಜೊತೆಗಿದ್ದರಾಯ್ತು
ಕೂಡಿಕೊಂಡು ಸಾಗುವೆ.

ನಡುಹಗಲಿನ ಬಿಸಿಲಿನಲ್ಲಿ
ಕೆರೆಯ ದಡಕೆ ಸಾಗುವೆ
ದನಕಾಯುವ ಹುಡುಗನಂತೆ
ಕೊಳಲೂದುತ ಒರಗುವೆ

ಮೇಲೆ ಮರದ ಕೊಂಬೆಯಲ್ಲಿ
ನೀಲಿ ನವಿಲು ಕುಳಿತಿದೆ
ಮಾರುದ್ದದ ಹಸಿರು ಗರಿಯು
ನೆಲಕೆ ಮುತ್ತನಿಟ್ಟಿದೆ

ಕತ್ತಲಾಗೆ ಮತ್ತೆ ಮರಳಿ
ಮನೆಗೆ ಬಂದು ಸೇರುವೆ
ಲಕ್ಷ್ಮಣ ಜೊತೆಗಿದ್ದರಾಯ್ತು
ಕೂಡಿಕೊಂಡು ಸಾಗುವೆ.

ತರಗೆಲೆಗಳ ಗುಂಪು ಮಾಡಿ
ಉರಿಯ ಹಚ್ಚಿ ಕಾಸುವೆ
ಅಮ್ಮ, ಅದರ ಬೆಳಕಿನಲ್ಲಿ
ನಿಮ್ಮ ಕತೆಯ ಸ್ಮರಿಸುವೆ

ಎಲ್ಲ ಹಕ್ಕಿ ಗೂಡಿನಲ್ಲಿ
ಅಲ್ಲಿ ದೂರ ನರಿಯಕೂಗು
ರಾತ್ರಿ ಕಣ್ಣು ತೆರೆದು ನೋಡೆ
ಮರದ ಕೊಂಬೆ ಕಣ್ಣಿಗೆ

ಅಮ್ಮ ನಿಮ್ಮ ನೆನಪು ಬರೆ
ಸುಮ್ಮನೆ ನಾ ಒರಗುವೆ
ಲಕ್ಷ್ಮಣ ಜೊತೆಗಿದ್ದರಾಯ್ತು
ಕೂಡಿಕೊಂಡು ಸಾಗುವೆ.

ಪೂಜ್ಯರಾದ ತಂದೆಯಂತೆ
ವನದಿ ಮುನಿಗಳಿರುವರು
ಅವರ ಕಾಲಿಗೆರಗಿ ಕುಳಿತು
ಕತೆಯ ನಾನು ಕೇಳುವೆ

ರಾಕ್ಷಸಗಣವಿದ್ದರೇನು ?
ನನಗೆ ಭಯವು ಬಾರದು
ಗುಹಕನಂಥ ಮಿತ್ರನಿರೆ
ರಾವಣಭಯ ತೋರದು

ಹನುಮನೊಡನೆ ನಾನು ಸೀತೆ
ಸುಖವಾಗಿಯೆ ಇರುವೆವು
ಲಕ್ಷ್ಮಣ ಜೊತೆಗಿದ್ದರಾಯ್ತು
ಕೂಡಿಕೊಂಡು ನಡೆವೆವು.

ಅಮ್ಮ ನನಗೆ ತಮ್ಮನನ್ನು
ಏಕೆ ಕೊಡುವುದಿಲ್ಲ ಹೇಳು ?
ನಾನು ಅವನ ಕೂಡಿಕೊಂಡು
ವನಕೆ ಹೊರಟೆ, ಕೇಳು, ಕೇಳು.

ಹೇಳಿಕೊಡುವಳಮ್ಮ ಎಮಗೆ
ರಾಮುಗಮನಗಾನವನ್ನು
ಮುನಿಯ ತೆರದಿ ಹೊರಟೆವಮ್ಮ
ನಾವು ಹಿಡಿದು ಬಾಣವನ್ನು

ಚಿತ್ರಕೂಟ ಬೆಟ್ಟಕೆ
ಹೊರಟೆವಮ್ಮ ಮಳೆಯಲಿ
ಲಕ್ಷ್ಮಣ ಜೊತೆಗಿದ್ದರಾಯ್ತು
ಕೂಡಿಕೊಂಡು ಜೊತೆಯಲಿ.

11. ಶಿಷ್ಯನ ಪರೀಕ್ಷೆ

[ಶಿಷ್ಯ ಮಧುಸೂದನನು ಕುಳಿತಿದ್ದಾನೆ. ಶ್ರೀಯುತ ಕಾಲಾಚಾಂದ ಮಾಸ್ತರರು ಪಾಠ ಹೇಳಿಕೊಡುತ್ತಿದ್ದಾರೆ. ಮಧುಸೂದನನ ಪಾಲಕರ ಪ್ರವೇಶ.]

ಪಾಲಕ: ಮಧುಸೂದನನು ಅಭ್ಯಾಸ ಹೇಗೆ ಮಾಡುತ್ತಾನೆ? ಕಾಲಾಚಾಂದ ಬಾಬು?

ಕಾಲಾ : ಮಧುಸೂದನ ಅತ್ಯಂತ ದುಷ್ಟಹುಡುಗ. ಆದರೆ ಅಭ್ಯಾಸದಲ್ಲಿ ಮಾತ್ರ ತುಂಬಾ ಗಟ್ಟಿಗ. ಒಂದೂ ಪಾಠವನ್ನು ಎರಡನೇ ಸಲ ಹೇಳಿಸಿಕೊಂಡವನೇ ಅಲ್ಲ. ಯಾವುದನ್ನು ನಾನು ಒಂದು ಸಲ ಹೇಳಿಕೊಟ್ಟಿರುವೆನೊ ಅದನ್ನೆಂದಿಗೂ ಅವನು ಮರೆಯುವುದಿಲ್ಲ.

ಪಾಲಕ : ಸರಿ. ಇರಲಿ. ನಾನು ಇಂದು ಒಂದು ಸಲ ಅದನ್ನು ಪರೀಕ್ಷೆಮಾಡಿ ನೋಡುತ್ತೇನೆ.

ಕಾಲಾ : ಆಗಬಹುದು. ಅವಶ್ಯ ಪರೀಕ್ಷೆಮಾಡಿ ನೋಡಬಹುದು.

ಮಧು : (ಸ್ವಗತ) ನಿನ್ನೆ ಈ ನಮ್ಮ ಮಾಸ್ತರರು ನನ್ನ ಬೆನ್ನಮೂಳೆ ಮುರಿಯುವಂತೆ ಕಾರಣವಿಲ್ಲದೆ ಹೊಡೆದಿದ್ದಾರೆ. ಈಗಲೂ ಬೆನ್ನಿನ ನೋವು ಕಡಿಮೆಯಾಗಿಲ್ಲ. ಇಂದು ನಾನು ಇದರ ಸೇಡನ್ನು ತೀರಿಸಿಕೊಳ್ಳದೆ ಬಿಡುವುದಿಲ್ಲ. ಅವರಿಗೂ ನಾಲ್ಕು ಹೊಡೆತ ಬೀಳಬೇಕು.

ಪಾಲಕ : ಏನೋ ಮಧು, ಹಳೇ ಪಾಠಗಳೆಲ್ಲ ನೆನಪಿನಲ್ಲಿ ಇವೆಯೆ? ಏನೆಲ್ಲ ಮರೆತು ಹೋಗಿವೆಯೋ ?

ಮಧು : ಮಾಸ್ತರರು ಕಲಿಸಿಕೊಟ್ಟದ್ದೆಲ್ಲ ನೆನಪಿನಲ್ಲಿದೆ.

ಪಾಲಕ : ಸರಿ. ಉದ್ಭಿದ ಎಂದರೆ ಏನು ? ಹೇಳು ನೋಡೋಣ ?

ಮಧು : ಯಾವುದು ನೆಲವನ್ನು ಸೀಳಿ ಮೇಲಕ್ಕೆದ್ದು ಹಾರುವುದೋ ಅದು.

ಪಾಲಕ : ಒಂದು ಉದಾಹರಣೆ ಕೊಡು ; ನೋಡೋಣ ?

ಮಧು : ಚೀತ್ಕಾರ.

ಕಾಲಾ : (ಕಣ್ಣುಕೆಂಪಗೆ ಮಾಡಿ) ಏನೋ, ಏನು ಹೇಳಿದೆ ?

ಪಾಲಕ : ಇರಲಿ ಬಿಡಿ ಕಾಲಾಚಾಂದ ಮಾಸ್ತರ. ನಡುವೆ ನೀವು ಏನೂ ಮಾತಾಡಬೇಡಿ ; ಸುಮ್ಮನಿರಿ. (ಮಧುಸೂದನನನ್ನು ಕುರಿತು) ನೀನು ಕವಿತಾ ಪಾಠಗಳನ್ನೆಲ್ಲ ಓದಿರುವೆಯಲ್ಲವೆ ? ಅಡವಿಯಲ್ಲಿ ಏನು ಅರಳಿರುತ್ತವೆ ? ಹೇಳು ನೋಡೋಣ ?

ಮಧು : ಮುಳ್ಳುಗಳು. (ಕಾಲಾಚಾಂದರು ಬೆತ್ತದ ಬೆದರಿಕೆ ಹಾಕಿದ್ದನ್ನು ನೋಡಿ) ಏನಾಯಿತು ಸರ್ ? ಏಕೆ ನನ್ನನ್ನು ಹೊಡೆಯುವಿರಿ ? ನಾನೇನು ಸುಳ್ಳು ಹೇಳಿರುವೆನೆ ?

ಪಾಲಕ : ಇರಲಿ. ಸಿರಾಜ ಉದ್ದೀಲನನ್ನು ಯಾರು ಕಚ್ಚಿದರು ? ಇತಿಹಾಸದಲ್ಲಿ ಏನು ಹೇಳಿದೆ.

ಮಧು : ಗೆದ್ದಲು (ಬೆತ್ತದ ಹೊಡೆತ) ಹಾಯ್, ಸುಮ್ಮಸುಮ್ಮನೆ ಹೊಡೆತ ತಿಂದು ಸಾಯುತ್ತಿದ್ದೇನೆ. ಬರಿ ಸಿರಾಜ ಉದ್ದೀಲನನ್ನೇ ಏಕೆ? ಇತಿಹಾಸ ಪುಸ್ತಕವನ್ನೇ ಗೆದ್ದಲು ಕಚ್ಚಿದೆ. ಇದು ನೋಡಿ ಬೇಕಾದರೆ !

[ಹುಳತಿಂದ ಪುಸ್ತಕವನ್ನು ತೋರಿಸುವನು. ಕಾಲಾಚಾಂದ ಮಾಸ್ತರರ ತಲೆ ತಿರುಗಿದಂತಾಗುವುದು.]

ಪಾಲಕ : ವ್ಯಾಕರಣ ನೆನಪಿನಲ್ಲಿದೆ ಅಲ್ಲವೆ ?

ಮಧು : ಇದೆ.

ಪಾಲಕ : "ಕರ್ತೃ" ಎಂದರೆ ಏನು ? ಎಂಬುದನ್ನು ಒಂದು ಉದಾಹರಣೆ ಕೊಟ್ಟು ಹೇಳು ನೋಡೋಣ !

ಮಧು : ಕರ್ತೃ ಎಂದರೆ ಇದ್ದುಬಿದ್ದುದನ್ನೆಲ್ಲ ಮಾಡುವ ಕಾರಕೂನ.

ಪಾಲಕ : ಏಕೆ? ಹೇಳು ನೋಡೋಣ ?

ಮಧು : ಅವನು ಎಲ್ಲರ ಕರ್ಮಗಳನ್ನು ಹಿಡಿದೇ ನಿಂತಿರುತ್ತಾನೆ.

ಕಾಲಾ : (ಸಿಟ್ಟು ತಾಳಿಕೊಳ್ಳಲಾರದೆ) ನಿನ್ನ ತಲೆ (ಬೆನ್ನಮೇಲೆ ಬೆತ್ತ.)

ಮಧು : (ಬೆಚ್ಚಿಬಿದ್ದು) ತಲೆ ಅಲ್ಲ ಅದು, ಬೆನ್ನು.

ಪಾಲಕ : ಷಷ್ಠೀತತ್‌ಪುರುಷ ಎಂದರೆ ಏನು ?

ಮಧು : ಗೊತ್ತಿಲ್ಲ. (ಕಾಲಾಚಾಂದ ಮಾಸ್ತರರು ಮತ್ತೆ ಬೆತ್ತ ತೋರಿಸುವರು) ಅವನು ವಿಲಕ್ಷಣ ಗೊತ್ತಿದ್ದವ. ಅವನು ಯಷ್ಟಿ ತತ್ಪುರುಷ. (ಪಾಲಕರ ನಗೆ. ಆದರೆ ಕಾಲಾಚಾಂದರ ವಿರುದ್ಧ ವರ್ತನೆ).

ಪಾಲಕ : ಅಂಕಗಣಿತ ಕಲಿಸಿರುವರಲ್ಲವೆ? ಪಾಠ ಆಗಿದೆ ಅಲ್ಲವೆ ?

ಮಧು : ಆಗಿದೆ.

ಪಾಲಕ : ನಿನಗೆ ಆರುವರೆ ಉಂಡೆ ಕೊಟ್ಟರೆಂದು ತಿಳಿ. ಐದು ನಿಮಿಷ ಉಂಡೆ ತಿಂದಾದ ಮೇಲೆ ನಿನ್ನ ಬಳಿ ಎಷ್ಟು ಉಂಡೆ ಉಳಿದವು ನಿನ್ನ ತಮ್ಮನಿಗೆ ಕೊಡಲು. ಒಂದು ಉಂಡೆ ತಿನ್ನಲು ನಿನಗೆ ಎರಡು ನಿಮಿಷ ಬೇಕಾಗುತ್ತದೆ. ಎಷ್ಟು ಉಂಡೆ ನೀನು ನಿನ್ನ ತಮ್ಮನಿಗೆ ಕೊಡುವೆ ?

ಮಧು : ಒಂದೂ ಕೊಡುವುದಿಲ್ಲ.

ಪಾಲಕ : ಅದೇಕೆ ?

ಮಧು : ಎಲ್ಲ ತಿಂದುಬಿಡುವೆ. ಕೊಡಲು ಆಗುವುದಿಲ್ಲ.

ಪಾಲಕ : ಇರಲಿ. ಒಂದು ಆಲದ ಮರ ಇದೆ ಎಂದು ತಿಳಿ. ಅದು ಈ ವೈಶಾಖ

ಮಾಸದ ಮೊದಲನೇ ದಿನ ಹತ್ತು ಇಂಚು ಇದ್ದರೆ ಮುಂದಿನ ವೈಶಾಖ ಮಾಸದ ಮೊದಲನೇ ದಿನಕ್ಕೆ ಎಷ್ಟು ಎತ್ತರ ಬೆಳೆಯುತ್ತದೆ. ಅದು ದಿನಾಲು ಕಾಲು ಇಂಚು ಬೆಳೆಯುತ್ತದೆಂದು ತಿಳಿ.

ಮಧು : ಒಂದುವೇಳೆ ಆ ಗಿಡ ಅಡ್ಡ ಬೆಳೆದರೆ ಅದೆಷ್ಟು ಉದ್ದ ಬೆಳೆದೀತು ಎಂಬುದನ್ನು ಹೇಳಲಾರೆ. ಒಂದುವೇಳೆ ಅದು ಮೇಲಕ್ಕೆ ಸರಿಯಾಗಿ ಬೆಳೆದರೆ ಅಳತೆ ಮಾಡಿ ಎಷ್ಟು ಬೆಳೆದಿದೆ ಎಂದು ನೊಡಲಿಕ್ಕೆ ಬಂದೇ ಬರುತ್ತದೆ. ಒಂದು ವೇಳೆ ಅದು ಈ ಅಂತರದಲ್ಲಿ ಒಣಗಿಹೋದರೆ ಅದರ ಮಾತೇ ಬೇರೆ.

ಕಾಲಾ : ಹೊಡೆತ ತಿನ್ನದೆ ನಿನ್ನ ಬುದ್ಧಿ ಪ್ರಕಟವಾಗುವುದೇ ಇಲ್ಲ. ಸತದೃಷ್ಟ. ನಿನ್ನ ಬೆನ್ನು ಕೆಂಪಗೆ ಬಾಸಾಳ ಬರುವ ಹಾಗೆ ಮಾಡುತ್ತೇನೆ. ತಡೆ. ಅಂದರೆ ಮಾತ್ರ ನೀನು ದಾರಿಗೆ ಬರುವೆ. ಸರಳನಾಗುವೆ.

ಮಧು : ಹಾಯ್. ಹೊಡೆತದಿಂದ ಸರಳ ಇದ್ದ ಅನೇಕ ವಸ್ತುಗಳು ಡೊಂಕ ಆಗುತ್ತವೆ.

ಪಾಲಕ : ಕಾಲಾಚಾಂದ ಬಾಬು, ಇದು ನಿಮ್ಮ ಭ್ರಮೆ. ಹೊಡೆಯುವುದರಿಂದ ಬಹು ಕಡಿಮೆ ಕೆಲಸವಾಗುತ್ತದೆ. ಕೇಳಿಲ್ಲವೇ ನೀವು ? ಕತ್ತೆಯನ್ನು ಬೇಕಾದಷ್ಟು ಹೊಡೆದು ಕುದುರೆಯನ್ನಾಗಿ ಮಾಡಲು ಸಾಧ್ಯವಿಲ್ಲವೆಂಬುದನ್ನು. ಅದೇ ಕುದುರೆಯನ್ನು ಬಲವಾಗಿ ಬಿಟ್ಟೂ ಬಿಡದೆ ಹೊಡೆದರೆ ಅದು ಕತ್ತೆಯಾಗುತ್ತದೆ. ಬಹಳ ಹುಡುಗರು ಕಲಿಯಬಲ್ಲರು. ಆದರೆ ಬಹಳ ಶಿಕ್ಷಕರಿಗೆ ಕಲಿಸಲು ಬರುವುದಿಲ್ಲ. ಆದರೂ ಹೊಡೆತ ತಿಂದು ಹುಡುಗರು ಸತ್ತೇಹೋಗುತ್ತಾರೆ. ಇನ್ನು ನೀವು ನಿಮ್ಮ ಬೆತ್ತ ತೆಗೆದುಕೊಂಡು ಪ್ರಸ್ಥಾನ ತೆಗೆಯಿರಿ. ನಾಲ್ಕು ದಿನ ಕಳೆಯಲಿ. ಮಧುಸೂದನನ ಬೆನ್ನು ಗುಣವಾಗಲಿ. ಆಮೇಲೆ ನಾನೇ ಪಾಠ ಹೇಳಿಕೊಡುವೆ.

ಮಧು : (ಸ್ವಗತ) ಪಾರಾದೆ ಬದುಕಿಕೊಂಡೆ !

ಕಾಲಾ : ಬದುಕಿಕೊಂಡೆ ರಾಯರೇ ! ಈ ವಿದ್ಯಾರ್ಥಿಗೆ ಕಲಿಸುವುದೆಂದರೆ ಅದು ಹಮಾಲಿ ಕೆಲಸಮಾಡಿದಂತೆ. ಪೂರಾ ಮ್ಯಾನ್ಯುಅಲ್ ಲೇಬರ. ಮೂವತ್ತೂ ದಿನ, ನಡುವೆ ಬಿಡದೆ ಒಬ್ಬನಿಗೆ ಪಾಠಹೇಳಿದ ಪರಿಶ್ರಮಕ್ಕೆ ನಮಗೆ ದೊರೆಯುವುದು ಮಾತ್ರ ತಿಂಗಳಿಗೆ ಐದು ರೂಪಾಯಿ. ಅದೇ ಮೈಮುರಿದು ಮಣ್ಣು ಹೊತ್ತರೂ ಕೂಡ ಹತ್ತು ರೂಪಾಯಿಗಳಿಗೆ ಮೋಸವಿಲ್ಲ. ರಾಮ ರಾಮ. ನಮಸ್ತೇ. ಬರುತ್ತೇನೆ.

ಶ್ರಾವಣ : ವಿಕ್ರಮಶಕ, ೧೨೯೩

12. ಮರದ ಬುಡದಲಿ ಅಂದು ಕಪ್ಪು ಕವಿದಿತ್ತು

ಮರದ ಬುಡದಲಿ ಅಂದು ಕಪ್ಪು ಕವಿದಿತ್ತು
ಇಂದಲ್ಲಿ ಹೂವುಗಳು ತುಂಬಿ ಸೂಸಿತ್ತು
ತೋಟಗಾರನೆ ಹೇಳು ಇದರ ಗಮ್ಮತ್ತು

ಗಿಡದ ಒಡಲೊಳಗಿಂದ ಬಂದು ಹೋಗುವವು
ಗಿಡದಲ್ಲಿ ಮುಖಮುಚ್ಚಿ ಎಲ್ಲಿ ಕೂಡುವವು ?
ಎಲ್ಲಿಹವು ಅವಕೆ ಮನೆ ? ಎಲ್ಲಿ ಅವುಗಳ ವಸತಿ ?
ಅಡಗಿ ಕೂಡುವವೆಲ್ಲಿ ? ಅದು ಯಾವ ಕೋಣೆಯಲ್ಲಿ ?

ಗಾಳಿಕೂಗನು ಕೇಳಿ ಬೇಗ ಮೇಲಕೆ ಎದ್ದು
ಮುಖತೊಳೆದು ಸಿಂಗರಿಸಿ ಹೊರಗೆಂತು ಬಹವು ?
ಅರೆಗಳಿಗೆ ತಡವಿಲ್ಲ ; ತಡಮಾಡಿ ಗೊತ್ತಿಲ್ಲ.
ಬಣ್ಣಬಣ್ಣದ ಉಡುಪು ತೊಟ್ಟು ಮನೆಬಿಟ್ಟು

ಮಣ್ಣಿನಲಿ ಹೂತಿಹುದೆ ಹೂವುಗಳ ಮನೆಯು !
ಅಣ್ಣ ಹೇಳಿದನಂದು ಆಕಾಶದಲಿ ಎಂದು ;
ಅಲ್ಲಿಂದಲೇ ನಿತ್ಯ ಬಂದು ಹೋಗುವವು
ಗಾಳಿಬೆಳಕಿನ ತೆರದಿ ಆಟವಾಡುವವು.

13. ಪುಷ್ಯದ ಜಾತ್ರೆ

ನೀನು ತಿಳಿದಿರಬಹುದು ನಿಮ್ಮ ಶಾಲೆಯ ಉತ್ಸವವೇ ತುಂಬ ಸೊಗಸಿನದೆಂದು! ಅಂತೆಯೆ ನಿಮ್ಮ ಶಾಲೆಯ ಬಹುಮಾನ ವಿತರಣೆಯ ಸಮಾರಂಭದ ವಿವರಗಳನ್ನು ನನಗೆ ಬರೆದುಕಳಿಸಿರುವೆ. ಆದರೆ ಇಷ್ಟು ಸುಲಭದಲ್ಲಿ ನೀನು ನನ್ನನ್ನು ಸೋಲಿಸಲಾರೆ. ನಮ್ಮ ಶಾಲೆಯ ವಾರ್ಷಿಕ ದಿನಾಚರಣೆಯು ಇಂದೂ ಕೂಡ ಸಾಕಷ್ಟು ಸಂಭ್ರಮದಿಂದ ಆಚರಿಸಲ್ಪಡುತ್ತದೆ. ತಕ್ಕಮಟ್ಟಿಗೆ ಅಧಿಕ ಪ್ರಮಾಣದಲ್ಲಿ.

ಇರಲಿ. ನಿಮ್ಮ ಬಹುಮಾನ ವಿತರಣೆಯ ಸಮಾರಂಭದಲ್ಲಿ ಜನರೆಷ್ಟು ನೆರೆದಿದ್ದರು? ಹೆಚ್ಚೆಂದರೆ ಐವತ್ತು ಜನ ಬಂದಿರಬಹುದು. ಎಲ್ಲರನ್ನೂ ಸೇರಿಸಿದರೂ ಕೂಡ ಒಂದು ಐದುನೂರಕ್ಕಿಂತ ಹೆಚ್ಚು ಜನ ಬಂದಿರಲಾರರು. ಆದರೆ ಇಲ್ಲಿ ಜಾತ್ರೆಯೇ ನೆರೆದಿತ್ತು. ಏನಿಲ್ಲೆಂದರೂ ಹತ್ತುಸಾವಿರ ಜನರು ಕೂಡಿರಬಹುದು.

ನೀನು ಬರೆದಿರುವೆ, "ಚಿಕ್ಕ ತಂಗಿಯೊಬ್ಬಳು, ಪಾಪ, ಚಿಕ್ಕಮಗು ಅಕ್ಕನನ್ನಪ್ಪಿಕೊಂಡು ಚೀರಿ ಅತ್ತು, ಕರೆದು ಕೂಡಿದ ಸಭೆಯಲ್ಲಿ ತುಂಬ ಆಭಾಸಮಾಡಿದಳು" ಎಂದು.

ಸರಿ. ಒಂದು ಮಗುವಿನ ಚೀತ್ಕಾರಕ್ಕೆ ನೀನು ಈ ರೀತಿ ಬರೆದೆ. ಇಲ್ಲಿ ನೆರೆದ ಜಾತ್ರೆಯಲ್ಲಿ ಅದೆಷ್ಟು ರೀತಿಯ ವಿವಿಧ ಸ್ವರಗಳ ಮೇಳವಿರಬಹುದು? ಅದರ ಲೆಕ್ಕ ಯಾರಿಗೆ ತಾನೆ ಮಾಡಲು ಸಾಧ್ಯ? ಅದಕ್ಕೆ ಆದಿಯೂ ಇಲ್ಲ; ಅಂತ್ಯವೂ ಇಲ್ಲ. ಚಿಕ್ಕಮಕ್ಕಳ ಅಳುವಿನ ಚೀತ್ಕಾರ, ದೊಡ್ಡವರು ಕರೆಯುವ ಕೂಗು, ಹಲಗೆ ಬಾರಿಸುವ ಸಪ್ಪಳ, ಎತ್ತಿನ ಗಾಡಿಯ ಕಟಕಟೆ, ನೋಡಲು ಬಂದ ಹೊರಗಿನ ಜನರ ಕಲಕಲ, ಹಲಗೆಯ ಟಂ ಟಂ ಧ್ವನಿ, ಚಿತ್ರತೋರಿಸುವವರ "ಬೊಂಬೈಕಾ ಊರ ದೇಖೊ, ರಾಜಾ-ರಾಣಿ ದೇಖೊ" ಎಂಬ ವಿಚಿತ್ರ ಸಂಗೀತ, ಮಧ್ಯದಲ್ಲಿ ಪೋಲಿಸರ ಜಬರದಸ್ತಿನ ಮಾತುಗಳು, ಕೆಲವರ ನಗು, ಕೆಲವರ ಅಳು, ಮತ್ತೆ ಕೆಲವರ ಸಂಗೀತ, ಇವೆಲ್ಲ ಸಾಕಾಗದೆ ಜಗಳ ಇತ್ಯಾದಿ.

ಪುಷ್ಯದ ಸಪ್ತಮಿಯ ದಿನ ದೊಡ್ಡ ಜಾತ್ರೆ ನೆರೆದಿತ್ತು. ಆ ಜಾತ್ರೆಯಲ್ಲಿ ಅರಗಿನ ಆಟದ ಸಾಮಾನುಗಳು, ಹುರಿದ ನೆಲಗಡಲೆ, ನಾನಾಬಗೆಯ ಹಣ್ಣುಗಳ ಗುಳಂಬ, ನಾವದಕ್ಕೆ ಮುರಬ್ಬಾ ಎಂದು ಹೇಳುತ್ತೇವೆ. ಮಣ್ಣಿನ ಗೊಂಬೆ, ಎಣ್ಣೆಯಲ್ಲಿ ಕರಿದ ತಿಂಡಿಗಳು, ಇತ್ಯಾದಿ ಇತ್ಯಾದಿ. ಇನ್ನೂ ಅನೇಕ ಅತ್ಯಾಶ್ಚರ್ಯಕಾರಕ ವಸ್ತುಗಳ ಮಾರಟ,—ಎಲ್ಲವೂ ನಡೆದಿತ್ತು.

ಹುಡುಗರೊಂದಿಗೆ ಹೆಂಗಸರೂ ಕೂಡ ತೊಟ್ಟಿಲ ಜೀಕ*ದಲ್ಲಿ ಕುಳಿತುಕೊಂಡರು. ಬೆಳದಿಂಗಳ ಬೆಳಕಿನಲ್ಲಿ "ನೀಲಕಂಠ ಮುಖರ್ಜ್ಯರ" ಕಂಸವಧ ಆಖ್ಯಾನ ನಡೆದಿತ್ತು ಒಂದೆಡೆಗೆ. ಅದನ್ನು ಕೇಳಲು ಜನರು ಕೂಡಿದ್ದೇ ಕೂಡಿದ್ದು. ಭಾರಿ ಗದ್ದಲ.

ಮರುದಿನ ಅಷ್ಟಮಿ. ನಮ್ಮ ಶಾಲೆಯ ಹೆಂಗಸರೆಲ್ಲ ತಮ್ಮದೊಂದು ಪ್ರತ್ಯೇಕ ಜಾತ್ರೆಯನ್ನೇ ಕರೆದಿದ್ದರು. ಆ ಜಾತ್ರೆಯಲ್ಲಿ ಭಜಿಯ ಹಾಗೂ ಬಟಾಟಾ ಬೋಂಡದ ಅಂಗಡಿಯನ್ನೇ ನಮ್ಮ ವಿದ್ಯಾರ್ಥಿನಿಯರು ತೆರೆದಿದ್ದರು. ಅವುಗಳ ಕ್ರಯವೊ, ನೀನೇಕೆ? ಯಾರೂ ಊಹಿಸಲಾರರು. ಹೊರಗೆ ಉಳಿದ ಅಂಗಡಿಯಲ್ಲಿ ಸಿಕ್ಕುವ ಬೆಲೆಯ ಎರಡರಷ್ಟು ಮೂರರಷ್ಟು; ಕೆಲವು ಸಂದರ್ಭಗಳಲ್ಲಿ ನಾಲ್ಕರಷ್ಟೂ ಕೂಡ ಎಂದು ಹೇಳಬಹುದು. ಕಾಲಾಣೆಗೆ ಹೊರಗೆ ನಾಲ್ಕು ಬಟಾಟಿ ಬೋಂಡಗಳು ದೊರೆತರೆ ಇಲ್ಲಿ, ನಮ್ಮ ಮಹಿಳೆಯರ ಜಾತ್ರೆಯಲ್ಲಿ ಕೇವಲ ಒಂದೇ ಒಂದು. ಅದು ಕೂಡ ತುಸು ಚಿಕ್ಕದು. ನಮಗೆ ಗೊತ್ತಿದ್ದ ಮುದುಕಿಯೊಬ್ಬಳು ಶೇಂಗಾದ ವಡೆಗಳನ್ನು ಮಾಡಿ ಇರಿಸಿದ್ದಳು. ಹೇಳಿದಷ್ಟು ಹಣಕೊಟ್ಟು ಜನ ಕೊಂಡದ್ದೇ ಕೊಂಡದ್ದು; ವ್ಯಾಪಾರ ಆದದ್ದೇ ಆದದ್ದು!

ನಮ್ಮ ಕಮಲ, ಮಣ್ಣಿನಿಂದ ಒಂದು ಆಟದ ಮನೆಯನ್ನು ಮಾಡಿ, ಅದಕ್ಕೆ ಜತ್ತದ ಹುಲ್ಲು ಹೊದಿಸಿದ್ದಳು. ಸುತ್ತು ಮಣ್ಣಿನಿಂದಲೇ ಆವಾರದ ಗೋಡೆಕಟ್ಟಿ ಒಳಗೆ ಶಿವನ ಮೂರ್ತಿಯನ್ನು ಸ್ಥಾಪನೆ ಮಾಡಿದ್ದಳು. ಆದರೆ ಇದನ್ನಾರು ದುಡ್ಡು ಕೊಟ್ಟು ಕೊಳ್ಳಬೇಕು? ಸಂಜೆಯವರೆಗೂ ಕಮಲ, ಕಾಯ್ದರೂ ಯಾರೂ ಕೊಂಡು ಕೊಳ್ಳಲೇ ಇಲ್ಲ. ಕೊನೆಗೆ ಅದನ್ನೆತ್ತಿಕೊಂಡು ಬಂದು ನನಗೆ ಮೂರು ರೂಪಾಯಿ ಗಳಿಗೆ ಜೋರುಮಾಡಿ ಕಮಲ ಮಾರಿದಳು. ತುಸು ವಿಚಾರಮಾಡಿ ನೋಡು. ಎಷ್ಟೊಂದು ಹಣ! ಎಂತಹ ಭಯಾನಕ ಮೋಜು!

ಚಿಕ್ಕ ಹುಡಿಗೆಯರು ಒಂದು ತುಣುಕು ಬಟ್ಟೆಯನ್ನು ತೆಗೆದು ನಾಲ್ಕೂ ಕಡೆಗೆ ಅದನ್ನು ಹೊಲಿದು ನನ್ನ ಬಳಿ ಬಂದು "ಇದೊಂದು ಸುಂದರವಾದ ಕರವಸ್ತ್ರ; ಇದರ ಬೆಲೆ ಎಂಟಾಣೆ. ನೀವು ಇದನ್ನು ಕೊಂಡುಕೊಳ್ಳಲೇಬೇಕೆಂದು ಹೇಳುತ್ತ ಅದನ್ನು ನನ್ನ ಜೇಬಿನಲ್ಲಿ ಹಾಕಿಬಿಟ್ಟರು. ಎಂತಹ ದೊಡ್ಡ ತಮಾಷೆ ಇದು.

ಅವರ ಆ ಪೇಟೆಯಲ್ಲಿ ಇದೇ ಬಗೆಯ ಇನ್ನೂ ಅನೇಕ ಭಯ ಉಂಟಾಗುವ ಪ್ರಸಂಗಗಳು ಬಂದವು. ನಿಮಗೆ ದೊರೆತಿರುವ ಬಹುಮಾನದ ವಸ್ತುಗಳು ಇವುಗಳಿಗೆ ಅದೆಂತು ಸರಿಯಾದೀತು?

ಉತ್ಸವ ಮುಗಿಯಿತು. ಹಳ್ಳಿಯ ಜನ ನಮ್ಮ ಮನೆಯ ಮುಂದಿನಿಂದಲೇ ಹಗಲು, ರಾತ್ರಿ ಹಾಡುತ್ತ, ಹಲಗೆ ಬಾರಿಸುತ್ತ ತಿರುಗಿ ಹೋದದ್ದನ್ನು ನೆನಸಿಕೊಂಡರೆ ಎಂತಹ ಭಯ ಉಂಟಾಗುವ ತಮಾಷೆ ಅದು ಎಂದು ಅನಿಸದೆ ಇರದು.

ಈ ಉತ್ಸವ ನೋಡುವುದಕ್ಕೆಂದೇ ಕಲಕತ್ತೆಯಿಂದ ಅನೇಕ ದೊಡ್ಡ ದೊಡ್ಡ ಮನೆತನದ ಮಹಿಳೆಯರು ತಮ್ಮ ಮಕ್ಕಳೊಂದಿಗೆ ಬಂದಿದ್ದರು. ಉತ್ಸವ, ಜಾತ್ರೆ,

---

* ಉತ್ತರ ಕರ್ನಾಟಕದ ಜಾತ್ರೆಗಳಲ್ಲಿ ಇಂತಹ ಒಂದು ಆಟವಿದೆ.

ಸಭೆ ಎಲ್ಲ ಮುಗಿದವು. ಆ ಸಮಯಕ್ಕೆ ಸರಿಯಾಗಿ ನಾಲ್ಕು ಮಕ್ಕಳಿಗೆ, ನಮ್ಮ ಮನೆಯಲ್ಲಿ, ಶೀತ, ಕೆಮ್ಮು; ಮತ್ತೆ ನಾಲ್ಕು ಮಕ್ಕಳಿಗೆ ಜ್ವರ.

ಖಂಡಿತ ಹೇಳುತ್ತೇನೆ. ನಿಮ್ಮ ವಾರ್ಷಿಕೋತ್ಸವದಲ್ಲಿ, ಅದೇಕೆ ಉಳಿದಾವ ಶಾಲೆಯ ವಾರ್ಷಿಕೋತ್ಸವದಲ್ಲಿ ಇಷ್ಟೊಂದು ಭಾರಿ ಗೊಂದಲ, ಗಲಾಟೆ ಇರಲು ಸಾಧ್ಯವೇ ಇಲ್ಲ. ಎಂಟಾಣೆಗೊಂದು ಕರವಸ್ತ್ರ ಮಾರುವ ಜನ ನಿಮ್ಮಲ್ಲಿ ದೊರೆಯಲು ಸಾಧ್ಯವೂ ಇಲ್ಲ. ಉತ್ಸವ ಮುಗಿಯುವ ಸಮಯಕ್ಕೆ ಮನೆಯ ಮಕ್ಕಳಿಗೆ ಶೀತ, ಕೆಮ್ಮು ಜ್ವರ ಬಂದದ್ದನ್ನೂ ನೀನು ಕೇಳಲಾರೆ.—ನೋಡಲಾರೆ.

ಈಗ ಹೇಳು, ಸೋತವರು ಯಾರು? ನೀನೇ ಹೇಳು. ಅಂತೂ ನಾನೇ ಗೆದ್ದಂತಾಯಿತಲ್ಲವೇ?

(ಭಾನುಸಿಂಹನ ಪತ್ರಗಳು : ಇದರಿಂದ ತೆಗೆದ 30 ನೇ ಪತ್ರ)

14. ವಿಚಿತ್ರ ಬಯಕೆ

ನಾನು ಶಾಲೆಗೆ ಹೋಗುವಾಗ
ನಮ್ಮ ಈ ಮನೆ ಬೀದಿಯಿಂದ
ಹತ್ತುಘಂಟೆಗೆ ನಿತ್ಯನೋಡುವೆ
ನಮ್ಮ ಕಾವಲುಗಾರನ

ಆಗ ಬಳೆಯನು ಮಾರಿಕೊಂಡು
"ಬಳೆಯು ಬೇಕೆ? ಬಳೆಯು ಬೇಕೆ?
ಎಂದು ಎಲ್ಲರ ಕೇಳಿಕೊಂಡು
ಸಾಗಿಹನು ಬಳೆಗಾರನು

ಅವನು ಹಿಡಿದಿಹ ಚೀಲದಲ್ಲಿ
ಚಂದಚಂದದ ಚೀನಿಗೊಂಬೆಗ-
ಳಿಹವು ನೋಡಲು ನನ್ನ ಮನಸು
ನಿತ್ಯ ಹಾತೊರೆತಿರುವುದು.

ಕಂಡ ಬೀದಿಯ ಹಿಡಿದು ಹೋಗುವ
ಕಂಡ ಕಡೆಯಲಿ ನಿಂತುಕೊಳ್ಳುವ
ತಡವು ಅವಸರವೆಂಬುದವಗೆ
ಗೊತ್ತೆ ಇಲ್ಲದೆ ಸಾಗುವ

ಮನೆಯು ನೆನಪಿಗೆ ಬಂದಕೂಡಲೆ
ಮನೆಯ ದಾರಿಯ ಹಿಡಿದು ಹೋಗುವ
ಏಕೆ ಬೇಗನೆ? ಏಕೆ ತಡವೆಂ-
ದಾರು ಕೇಳರು ಅವನನು

ನಾವು ಸಂಜೆಗೆ ಮರಳಿ ಬರುವೆವು
ಕೈಗೆ ಮಶಿಯನು ಮೆತ್ತಿಕೊಂಡು
ಆಗ ಮಾಲಿಯು ತೋಟದಲ್ಲಿ
ನೆಲವ ಅಗೆಯುತಲಿರುವನು

ಅವನನಾರೂ ತಡೆವರಿಲ್ಲ
ಮಣ್ಣು ಮೆತ್ತಿದೆ, ಮುಖಕೆ ಮೈಯಿಗೆ
ಕೊಳಕು ಅಂಗಿಯು, ಅದನು ತೆಗೆಯಲು
ಅವನ ತಾಯಿಯು ಹೇಳಳು

ಬೇರೆ ಮಡಿಮಾಡಿರುವ ಬಟ್ಟೆಯ
ತಾಯಿ ತೊಡಿಸಲು ಮುಂದೆ ಬಾರಳು
ಅವನಿಗಾಸ್ವಾತಂತ್ರ್ಯವಿರುವುದ
ನೋಡಿ ನಲಿಯುತಲಿರುವೆನು

ನನಗು ಅವನಂತಿರುವ ಬಯಕೆಯು
ಅಲ್ಲಿ ತೋಟದಿ ಕೆಲಸ ಮಾಡಲು
ಎಲ್ಲ ಹೂಗಳ ಜೊತೆಗೆ ಆಡಲು
ಎನ್ನ ಮನ ಹಾತೊರೆವುದು

ರಾತ್ರಿ ತುಸು ಹೆಚ್ಚಾಯಿತೆಂದರೆ
ಅಮ್ಮ ಮಲಗಿಸಲೆನ್ನ ಬರುವಳು
ಕಣ್ಣು ಮುಚ್ಚಿದರೇನು? ಕಾಣುವೆ
ನಮ್ಮ ಕಾವಲುಗಾರನ

ಗ್ಯಾಸುಬತ್ತಿಯ ಕೆಳಗೆ ನಿಂತಿಹ
ಕೈಯೊಳವ ಕಂದೀಲು ಹಿಡಿದಿಹ
ಕಾಳರಾತ್ರಿಯ ಬೀದಿಯಲ್ಲಿ
ಜನರ ಸುಳಿವೇ ಕಾಣದು

ರಾತ್ರಿ ಹನ್ನೆರಡಾದರೇನು?
ಅವನ ಗೊಡವೆಗೆ ಯಾರು ಹೋಗರು
ಯಾರು ಕೇಳರು, ಏನು ಮಾಡರು
ವೀರ ಕಾವಲುಗಾರನ

ಇನ್ನು ತಡೆಯಲು ಸಾಧ್ಯವಿಲ್ಲ
ನಿದ್ದೆ ಕಣ್ಣಿಗೆ ಬರಲೆ ಇಲ್ಲ
ನನ್ನ ಮನಸಿನ ಬೀದಿಯಲ್ಲಿ
ನಾನೆ ಕಾವಲುಗಾರನು.

15. ಮ್ಯಾಜಿಸಿಯನ್*

ಕುಸುಮಿ ಅಂದಳು, "ಇರಲಿ, ಅಣ್ಣಾ ಅವರೆ, ಒಂದು ಕಾಲಕ್ಕೆ ನೀವು ದೊಡ್ಡ ದೊಡ್ಡ ಕತೆಗಳುಳ್ಳ ಭಾರಿ ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆದಿರೆಂದು ಕೇಳಿದ್ದೇನೆ." ಎಂದು.

ಅದಕ್ಕೆ ನಾನು, "ಜೀವನದಲ್ಲಿ ಅನೇಕ ಕೆಟ್ಟ ಕೆಲಸಗಳನ್ನು ಮಾಡಿದ್ದೇನೆ. ಅದನ್ನು ನಾನು ಒಪ್ಪಿಕೊಳ್ಳಲೇ ಬೇಕು." ಎಂದು ಉತ್ತರಿಸಿದೆ.

ಸಂಭಾಷಣೆ ಹಾಗೇ ಮುಂದುವರಿಯಿತು.

"ನನ್ನ ಮನಸ್ಸಿಗೆ ಇದೇನೂ ಸರಿಬರುವುದಿಲ್ಲ. ನಾನು ನಿಮ್ಮ ಸಮಯವನ್ನು ಖಂಡಿತ ಹಾಳುಮಾಡುವವಳೇ!" ಎಂದು ಕುಸುಮಿ ಹಟ ಹಿಡಿದಳು.

"ಯೋಗ್ಯ ಜನರೊಂದಿಗೆ ಸಮಾಗಮವಾಗಬೇಕಾದರೆ ಭಾಗ್ಯವಂತನಾಗಿರ ಬೇಕಾಗುತ್ತದೆ. ಅವರೆಂದಿಗೂ ಸಮಯ ಹಾಳುಮಾಡಲು ಬಿಡುವವರಲ್ಲ."

"ನನಗೇನು ಗೊತ್ತೆ, ನಿಮ್ಮ ಆ ಯೋಗ್ಯ ಜನ ಯಾರೆಂದು?"

"ನನ್ನ ಅದೃಷ್ಟದಲ್ಲಿ ಇದ್ದಂತೆ ಅವರು ನನಗೆ ದೊರೆಯುತ್ತಾರೆ. ಹುಡುಕಿದರ ಸಿಕ್ಕುವುದೇ ಇಲ್ಲ."

"ನಿಮ್ಮನ್ನೇನು ಚಿಕ್ಕ ಮಗು ಎಂದು ಭಾವಿಸುವುದೆ?"

"ನೋಡು, ಅನೇಕ ದಿನಗಳಿಂದ ನಾನು ಗಂಭೀರವಾದ ಪೋಷಾಕು ಹಾಕಿಕೊಂಡು ಇಷ್ಟೊಂದು ದಿನ ಕಷ್ಟದಲ್ಲಿ ಕಳೆದಿದ್ದೇನೆ. ಅನೇಕ ಸನ್ಮಾನಗಳನ್ನೂ ಸಂಪಾದಿಸಿದ್ದೇನೆ. ಈಗ ನಿನ್ನ ದರ್ಬಾರಿನಲ್ಲಿ ನಾನು ದೊಡ್ಡವರ ಪೋಷಾಕು ಧರಿಸಿ ಬಂದ ಚಿಕ್ಕ ಹುಡುಗ. ಸಮಯ ಹಾಳುಮಾಡುವೆ, ಮಾತನಾಡುವೆ. ಹಿಂದೆ ಒಂದು ಕಾಲಕ್ಕೆ ಸಮಯದ ಆಧಿಪತ್ಯ ನನ್ನ ಮೇಲೆ ಇತ್ತು. ಆಗ ನಾನು ಸಮಯದ ಗುಲಾಮನಾಗಿದ್ದೆ. ನಾನಿಂದು ಆ ಗುಲಾಮತನಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಕೊನೆಯ ಈ ದಿನಗಳನ್ನು ತುಂಬ ವಿರಾಮದಲ್ಲಿ ಕಳೆಯಬೇಕೆಂದಿದ್ದೇನೆ. ಸಣ್ಣ ಹುಡುಗರ ಜೊತೆ—ಸಿಕ್ಕರೆ ಬೆತ್ತದ ಉದ್ದ ಕುರ್ಚಿಯ ಮೇಲೆ ಹಾಯಾಗಿ ಒರಗಿ ಬಿಡುವೆ. ಮನಸಿಗೆ ಖುಸಿ ಅನಿಸಿದ್ದನ್ನು ಮಾತಾಡಿಬಿಡುವೆ. ವಿಚಾರ ಮಾಡಿ ಮಾಡಿ ತಲೆ ಕೆಡಿಸಿಕೊಂಡು ಯಾರಿಗೂ ಕೈಫಿಯತ್ ಕೊಡಬೇಕಾದ ಪ್ರಸಂಗವೇ ಇಲ್ಲ."

"ನಿಮ್ಮ ಈ ಹುಡುಗಾಟಿಕೆಯ ಅಮಲಿನಲ್ಲಿ ಮನಬಂದಂತೆ ನೀವು ಬಾಯಿಗೆ ಬಂದುದನ್ನು ಆಡುತ್ತಿರುವಿರಲ್ಲ!"

---

* ಯಕ್ಷಿಣಿ ಮಾಡುವವನು.

VIJAYA EVENING COLLEGE LIBRARY
BANGALORE-4.
1332

" ಬಾಯಿಗೆ ಬಂದಂತೆ ಏನು ಮಾತಾಡಿದೆ? ಹೇಳು ನೋಡೋಣ ? "

" ಇಷ್ಟು ಅಹಂ ಬಂದಿದೆಯೊ ನಿಮಗೆ! ಇಷ್ಟೊಂದು ಅಹಂಕಾರದ ಇನ್ನೊಬ್ಬರನ್ನು ನಾನು ಇದುವರೆಗೂ ಕಂಡಿಲ್ಲ."

" ಇರಲಿ ಬಿಡು. ಇಲ್ಲಿ ನೋಡಮ್ಮ, ಹೀಗೊಬ್ಬ ಹುಟ್ಟುತ್ತಾನೆ. ತನ್ನ ಪಾಡಿಗೆ ತಾನು ಸಾಗುತ್ತಾನೆ. ಒಮ್ಮೊಂದೊಮ್ಮೆ ಕಾಲು ಮುರಿಯುತ್ತದೆ. ಆಗ ಅವನು "ಮ್ಯುಜಿಯಂ" ನಲ್ಲಿ ಪ್ರದರ್ಶನಕ್ಕೆ ಇಡುವ ಒಂದು ವಸ್ತುವಾಗುತ್ತಾನೆ. ನನ್ನ ಅಹಂಕಾರವೆಲ್ಲ ಮ್ಯುಜಿಯಂ ಅಹಂಕಾರವೆಂದು ಭಾವಿಸು."

" ಇದರಿಂದ ನಿಮಗೆ ಭಾರೀ ಸಂತೋಷವಾಗುವುದೇನು ?

" ಒಂದು ಕಾಲಕ್ಕೆ ಸಂತೋಷವಾಗುತ್ತಿತ್ತು. ಏಕೆಂದರೆ ಆಗ ನಿನ್ನ ಚಿಕ್ಕಮ್ಮ ತನ್ನ ಮಾವನ ಮನೆಗೆ ಹೋಗಿದ್ದಳು. ನನ್ನನ್ನು ಮೌನದಿಂದ ತೆಪ್ಪಗೆ ಕೂಡಿಸುವ ಅವರು ಇಲ್ಲದಾಗಿದ್ದರು. ಅದೇ ಸಮಯಕ್ಕೆ ಸರಿಯಾಗಿ ಹರೀಶಚಂದ್ರ ಹಾಲದಾರ ಎಂಬ ಸದ್ಗೃಹಸ್ಥ ತನ್ನ ಬಕ್ಕತಲೆಯನ್ನು ತೆಗೆದುಕೊಂಡು ಬಂದ ನಮ್ಮ ಮನೆಗೆ. ಆ ದಿನ ನಿನ್ನ ಚಿಕ್ಕಮ್ಮ ಜಟಾಯಿ ಮುದುಕಿಯ ಕಥೆಯನ್ನು ಪ್ರಾರಂಭಮಾಡಿದ್ದಳು. ಈ ಜಟಾಯಿ ಮುದುಕಿಯೊಂದಿಗೆ ನಮ್ಮ ಸಂಭಾಷಣೆ ನಡೆದದ್ದು ಅಮಾವಾಸ್ಯೆಯ ದಿನ. ಆ ಮುದುಕಿಯ ಕೆಲಸ, ಕಥೆಯಲ್ಲಿ ಇದ್ದದ್ದು, ಬೆಳದಿಂಗಳಲ್ಲಿ ಕುಳಿತು ರಾಟೆಯಿಂದ ನೂಲು ತೆಗೆಯುವುದು. ಈ ರಾಟೆಯಿಂದ ನೂಲು ತೆಗೆಯುವ ಕೆಲಸವೇನೂ ಬಹಳ ದಿನ ನಡೆಯಲಿಲ್ಲ. ಈ ಸಮಯಕ್ಕೆ ಸರಿಯಾಗಿ ತನ್ನ ಸರದಿ ಎಂಬಂತೆ ಬಂದ ಪ್ರೊಫೆಸರ ಹರೀಶ ಹಾಲದಾರ. ಮ್ಯಾಜಿಕ್ ತೋರಿಸುವ ಕೈ ಅವನದಾಗಿತ್ತು.

ಒಂದು ದಿನ ಮಳೆಗಾಲದ ಸಾಯಂಕಾಲ ಚಹಾದ ಜೊತೆಗೆ ಹುರಿದ ಕಡಲೆ ತಿನ್ನುತ್ತ ಕುಳಿತಾಗ ಅವರು "ಎದುರಿಗೆ ಇರುವ ಆ ಗೋಡೆಗಳನ್ನೇ ಮ್ಯಾಜಿಕಿನಿಂದ ಇಲ್ಲದಂತೆ ಮಾಡಬಹುದು" ಎಂದು ಹೇಳಿದರು.

ಪಂಚಾನನ ದಾದಾ ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತ "ಇಂತಹ ವಿದ್ಯೆ ಇದ್ದದೇನೊ ನಿಜ; ಅದು ನಮ್ಮ ಹಿಂದಿನ ಋಷಿಗಳಿಗೆ ಮಾತ್ರ ಗೊತ್ತಿತ್ತು." ಎಂದು ಹೇಳಿದರು.

ಇದನ್ನು ಕೇಳಿ ಸಿಟ್ಟಿನಿಂದ ಮೇಜನ್ನು ಗುದ್ದಿ "ನಿಮ್ಮ ಆ ಮುನಿಗಳು, ಋಷಿಗಳು, ದೇವತೆಗಳು, ರಾಕ್ಷಸರು, ಭೂತ, ಪ್ರೇತ, ಪಿಶಾಚಿ ಇವುಗಳನ್ನೆಲ್ಲ ಗಂಟು ಕಟ್ಟಿ ಇಟ್ಟು ಬಿಡಿರಿ. . . ಇನ್ನು ಮುಂದೆ" ಎಂದು ಹಾಲದಾರರು ಗದರಿಸಿದರು. "ನಾನದನ್ನು ಮನ್ನಿಸುವುದೇ ಇಲ್ಲ" ಎಂದು ಅವರು ಹೇಳಿದರು.

ಅದಕ್ಕೆ ಪಂಚಾನನ ದಾದಾ, "ನೀವು ಹಾಗಾದರೆ ಏನನ್ನು ಮನ್ನಿಸುವಿರಿ?" ಎಂದು ನೇರವಾಗಿ ಕೇಳಿದರು.

ಹರೀಶ ಹಾಲದಾರರು ಒಂದೇ ಶಬ್ದದಲ್ಲಿ ಮೆಲ್ಲನೆ "ದ್ರವ್ಯಗುಣ"ವನ್ನು ಎಂದು ಹೇಳಿ ಗಂಭೀರವಾಗಿ ಕುಳಿತರು.

ನಾವೆಲ್ಲರೂ ತುಸು ದಿಗಿಲುಗೊಂಡೇ ಕೇಳಿದೆವು.

" ಯಾವ ವಸ್ತು ಅದು " ಎಂದು.

ಪ್ರೊಫೆಸರರು ಹೇಳಲು ಎದ್ದು ನಿಂತರು. "ಅದೇನೇ ಇರಲಿ. ನಾನೀಗ ಹೇಳುತ್ತಿರುವುದು ಹುಟ್ಟಿಸಿಕೊಂಡು ಹೇಳುವ ಸುಳ್ಳು ಕತೆಯಲ್ಲ. ಇದು ತಲೆ ಕೆಡಿಸಿಕೊಳ್ಳುವ ಮಾತೂ ಅಲ್ಲ. ಇದರಲ್ಲಿ ಮಂತ್ರವೂ ಇಲ್ಲ; ತಂತ್ರವೂ ಇಲ್ಲ" ಎಂದು ಆವೇಶದಿಂದ ಹೇಳಿದರು.

"ನಾವು ಇದರಿಂದ ಮತ್ತಿಷ್ಟು ಗೊಂದಲಗೆಟ್ಟೆವು. "ಹಾಗಾದರೆ ಆ ದ್ರವ್ಯ ಗುಣ ಅಂದರೆ ಏನು ? " ಎಂದು ನೇರವಾಗಿ ಕೇಳಿದೆವು.

ಅದಕ್ಕೆ ಪ್ರೊಫೆಸರರು ತಮ್ಮ ಟೈ ಸರಿಮಾಡಿಕೊಳ್ಳುತ್ತ "ತಿಳಿಸಿ ಹೇಳುವೆ. ತುಸು ತಾಳಿ. ಅದೊಂದು ಆಶ್ಚರ್ಯಕರವಾದ ವಸ್ತು. ಉಜ್ವಲವಾದ ಪದಾರ್ಥ. ಆದರೆ ನಿಮ್ಮ ಋಷಿ, ಮುನಿಗಳ ಕಥೆಯಲ್ಲಿ ಬರುವಂತೆ ಇದು ಜ್ವಲಿಸುವ ವಸ್ತುವಲ್ಲ. ಪ್ರತ್ಯಕ್ಷವಾಗಿ ಕಟ್ಟಿಗೆಯಂತೆ ಉರಿಯುತ್ತದೆ. ಸಾಮಾನ್ಯವಾದ ವಸ್ತು ಅದು. ನಮ್ಮ ಮ್ಯಾಜಿಕ್ ಕೂಡ ಅದರಂತೆ. ಇದನ್ನು ಸಿದ್ಧಿಮಾಡಿಕೊಳ್ಳಲು ಏಳು ವರ್ಷ ಉಪವಾಸ ಬಿದ್ದು ತಪಸ್ಸು ಮಾಡುವ ಕಾರಣವಿಲ್ಲ. ತಾಳ್ಮೆಯಿಂದ ತಿಳಿದುಕೊಳ್ಳುವ ವಿಷಯವಿದು. ನಿಮಗೂ ಒಂದು ಸಲ ಇದರ ಗುಟ್ಟು ತಿಳಿಯಿತೆಂದರೆ ನೀವೂ ಯಕ್ಷಿಣಿ ಮಾಡಬಲ್ಲಿರಿ. ನಾವು ಮಾಡುವಂತೆ, ಮಾಡಿತೋರಿಸುವಂತೆ ನೀವೂ ಮಾಡಿ ತೋರಿಸಬಲ್ಲಿರಿ." ಎಂದು ಹೇಳಿ ಮೇಜಿನ ಮೇಲೆ ಕೈಯಿಟ್ಟು ಕುಳಿತು ನಮ್ಮನ್ನೆಲ್ಲ ನೋಡತೊಡಗಿದರು.

ನಾವು ಅದಕ್ಕೆ ಒಂದೇ ಉಸುರಿನಲ್ಲಿ "ಏನು ? ಏನು ಹೇಳುವಿರಿ ? ಪ್ರೊಫೆಸರ ಸಾಹೇಬ ; ನಾವೂ ಕೂಡ ಮ್ಯಾಜಿಕ್ ಮಾಡಬಲ್ಲೆವೆ ? ಈ ಗೋಡೆಯನ್ನು ಇಲ್ಲದಂತೆ ನಾವೂ ಮಾಡಬಲ್ಲೆವೆ ?" ಎಂದು ಕೇಳಿದೆವು.

"ಅವಶ್ಯ ಮಾಡಬಲ್ಲಿರಿ ! ಅದಕ್ಕೆ ಅದು, ಇದು, ಎಂದು ಉಳಿದದ್ದೇನೂ ಬೇಡ. ಮುಖ್ಯ ವಸ್ತುವೊಂದಿದ್ದರೆ ಸಾಕು" ಎಂದು ಪ್ರೊಫೆಸರರು ಹೇಳಿ ಮತ್ತಿಷ್ಟು ಬಿಗುವಿನಿಂದ ನೇರವಾಗಿ ಕುಳಿತರು.

"ಹೇಳಿಬಿಡಿ ಆ ವಸ್ತು ಯಾವುದೆಂದು. ಅದಕ್ಕೇಕೆ ತಡ." ಎಂದು ಹೇಳಿ ನಾವು ಅವರ ಮುಖವನ್ನೇ ನೋಡುತ್ತ ಕುಳಿತೆವು.

"ಹೇಳುವೆ ಕೇಳಿ. ಹಂ. ಚಿಂ. ಹಂ. ಹೇಳುವೆ. ಮತ್ತೇನೂ ಇಲ್ಲ. ಹಂ. ಚಿಂ. ಹಂ. ನಗಬೇಡಿ. ವಿಲಾಯತಿ ಮಾವಿನ ಹಣ್ಣಿನ ಓಟೆ ಹಾಗೂ ಒಂದು ಸಾಣೇಕಲ್ಲು ಇಷ್ಟೆ."

"ಇದೇನು ತುಂಬ ಸುಲಭ. ಈಗ ತಂದುಕೊಡುತ್ತೇವೆ. ಈ ಗೋಡೆಯನ್ನು ಇಲ್ಲದಂತೆ ನೀವು ಮಾಡುವಿರಲ್ಲವೇ ಹಾಗಾದರೆ ?" ಎಂದು ನಾವು ಕೇಳಿದೆವು. ತಡವಾಗಬಾರದೆಂದು ಅವುಗಳನ್ನು ತರಲು ನಮ್ಮಲ್ಲಿ ಒಬ್ಬರು ಎದ್ದು ನಿಂತೇಬಿಟ್ಟರು.

ಅತೀವ ಗಂಭೀರ ಮುಖವನ್ನು ಮಾಡಿ ಮ್ಯಾಜಿಸಿಯನ್ ಪ್ರೊಫೆಸರರು "ಹಂ. ಚಿಂ. ಹಂ." ಎಂದು ಮತ್ತೆ ಮತ್ತೆ ಅಂದುಕೊಳ್ಳುತ್ತ ಅತ್ತ ಇತ್ತ ನೋಡಿ, ಒಂದು ಸಲ ಕಣ್ಣುಮುಚ್ಚಿ ಮತ್ತೆ ತೆರೆದು "ಮಾವಿನ ಗಿಡಕ್ಕೆ ಸರಿಯಾಗಿ ಎಂಟು ವರ್ಷ ಏಳು ತಿಂಗಳು ಆಗಿರಬೇಕು. ಕೃಷ್ಣಪಕ್ಷದ ದ್ವಾದಶಿಯ ಚಂದ್ರ ಮೇಲೆ

ಕಾಣುವುದಕ್ಕೆ ಒಂದು ಘಟಿಕಾ ಮೊದಲು ಅದು ಅಂಕುರಿಸಿದ್ದನ್ನು ಜನ ನೋಡಿರಬೇಕು. ಆ ತಿಥಿಯು ಶುಕ್ರವಾರ ರಾತ್ರಿ ಒಂದು ಪ್ರಹರ ಮಾತ್ರ ಉಳಿದಿರಬೇಕು. ನಂತರದ ಶುಕ್ರವಾರ ಕಾರ್ತೀಕಮಾಸದ ಹತ್ತೊಂಬತ್ತನೆಯ ದಿನವಾಗಿರಬೇಕು. ಇಲ್ಲದಿದ್ದರೆ ನಡೆಯುವಂತಿಲ್ಲ. ವಿಚಾರಮಾಡಿ ನೋಡಿ. ಇದರಲ್ಲಿ ಯಾವುದೂ ಹುಸಿಯಾಗುವಂತಿಲ್ಲ. ದಿನ, ತಿಥಿ, ಎಲ್ಲವನ್ನೂ ನಿರ್ಧರಿಸಿ ಗೊತ್ತುಮಾಡಿ ಕಟ್ಟಿ ಇಟ್ಟಂತೆ ಇದೆ." ಎಂದು ಪ್ರೊಫೆಸರರು ಹೇಳಿ ತಮ್ಮ ಚಿಕ್ಕ ಭಾಷಣವನ್ನು ಮುಗಿಸಿದರು.

ನಮ್ಮೊಳಗೆ ನಾವು "ಈ ಕಥೆ ಕೇಳಲು ತುಂಬ ತಮಾಷೆಯಾಗಿದೆ. ನಮ್ಮ ತೋಟದಲ್ಲಿ ಕೆಲಸಮಾಡುವ ಮುದುಕ ಮಾಲಿಯ ಬೆನ್ನು ಹತ್ತಿದರೆ ಮಾವಿನಗೊರಟ ದೊರೆಯುತ್ತದೆ. ಒಂದು ಸಲ ಪರೀಕ್ಷೆಮಾಡಿ ನೋಡಿಬಿಡಬೇಕು." ಎಂದು ನಿರ್ಧರಿಸಿದೆವು.

ಅಷ್ಟರಲ್ಲಿ ಪ್ರೊಫೆಸರರು "ಇಲ್ಲಿ ಇನ್ನೂ ತುಸು ಹೇಳುವುದು ಉಳಿದಿದೆ. ಸಾಣೇಕಲ್ಲು ಬೇಕೆಂದು ಹೇಳಿದೆನಲ್ಲ. ಅದನ್ನು ತಿಬೇಟದ ಲಾಮಾಗಳ ಕಾಲಿಂಪಂಗ್ ಸಂತೆಯಲ್ಲಿ ಧವಲೇಶ್ವರ ಗುಡ್ಡದಿಂದ ಬಂದದ್ದನ್ನು ಕೊಂಡು ತಂದಿರಬೇಕು," ಎಂದು ಹೇಳಿದರು.

ಇದಕ್ಕೆ ಪಂಚಾನನ ದಾದಾ ಕೈಬೀಸುತ್ತ "ಇದು ಎಲ್ಲಿಯಾದರೂ ಶಕ್ಯವೇ?" ಎಂದು ನಿಟ್ಟುಸಿರು ಬಿಟ್ಟು ಹೇಳಿದರು.

ಅದಕ್ಕೆ ಪ್ರೊಫೆಸರರು "ಅಶಕ್ಯವಾದುದೇನೂ ಇಲ್ಲ. ಕೇಳಿ, ಹುಡುಕಿ, ಪ್ರಯತ್ನ ಪಟ್ಟರೆ ಸಿಕ್ಕು ಬಿಡುತ್ತದೆ" ಎಂದು ಹೇಳಿದರು.

ನಾನು ಮಾತ್ರ ನನ್ನ ಮನದಲ್ಲಿಯೇ "ಕೇಳಿ ನೋಡಬೇಕು, ಪ್ರಯತ್ನ ಮಾಡಬೇಕು" ಎಂದೇ ನಿರ್ಧರಿಸಿದೆನು. ಸುಮ್ಮನೆ ಕುಳಿತುಕೊಳ್ಳಲಾರದೆ "ಇದಾದ ಮೇಲೆ ಏನು ಮಾಡಬೇಕು." ಎಂದು ಪ್ರೊಫೆಸರರನ್ನು ಕೇಳಿದೆನು.

"ತಡೆ, ತುಸು ತಡೆ. ನಾನು ಹೇಳುವುದೇ ಇನ್ನೂ ಮುಗಿದಿಲ್ಲ. ಒಂದು ಬಲಮುರಿ ಶಂಖಬೇಕು—ಶಂಖ" ಎಂದು ಪ್ರೊಫೆಸರರು ಸಾವಕಾಶವಾಗಿ ಹೇಳಿದರು.

"ಇಂತಹ ಶಂಖ ದೊರೆಯುವುದೇನೂ ಅಶಕ್ಯವಲ್ಲವಾದರೂ ಸುಲಭವೇನೂ ಅಲ್ಲ. ಯಾರಿಗೆ ಬಲಮುರಿ ಶಂಖ ದೊರೆಯುತ್ತದೆಯೊ ಅವರು ರಾಜರಾಗುತ್ತಾರೆ—ರಾಜರು." ಎಂದು ಪಂಚಾನನ ದಾದಾ ತಮಗೂ ವಿಶೇಷವೇನೋ ಗೊತ್ತಿದ್ದವರಂತೆ ತುಸು ದೊಡ್ಡ ದನಿಯಲ್ಲಿ ಹೇಳಿದರು.

"ಸರಿ. ಚೆನ್ನಾಗಿ ಹೇಳಿದಿರಿ. ರಾಜಾ ಆಗುತ್ತಾರಂತೆ ರಾಜಾ. ಶಂಖ ಅದೂ ಒಂದು ಪದಾರ್ಥ. ದೊರೆಯದೆ ಏನು?" ಎಂದು ಮ್ಯಾಜಿಸಿಯನ್ ಸಾಹೇಬರು ಸಾಮಾನ್ಯವಾದ ರೀತಿಯಲ್ಲಿ ಹೇಳಿದರು.

ತಮ್ಮ ಮಾತನ್ನು ಮತ್ತೆ ಮುಂದುವರಿಸಿ, "ಆ ಶಂಖವನ್ನು ಮಾವಿನಗೊರಟದೊಂದಿಗೆ ಸಾಣೇಕಲ್ಲಿನ ಮೇಲೆ ಇಟ್ಟು ತೆಯ್ಯಬೇಕು. ತೆಯ್ದು ತೆಯ್ದಂತೆ ಗೊರಟ ಇಲ್ಲದಂತಾಗುತ್ತದೆ. ಶಂಖವೂ ಸವೆದುಹೋಗುತ್ತದೆ. ಆಶ್ಚರ್ಯವೆಂದರೆ ಸಾಣೇಕಲ್ಲು ಕೂಡ ಸವೆದು ಸವೆದು ಸಣ್ಣಾಗಿ ಇವೆರಡರೊಂದಿಗೆ ಕೂಡಿ ಹೋಗುತ್ತದೆ. ಇದನ್ನು

ಗೋಡೆಗೆ ಹಚ್ಚಿ ಸುಣ್ಣ—ಬಣ್ಣ ಬಳಿದಂತೆ ಬಳಿದುಬಿಡಿ. ಆಗ ನೋಡಿ, ಏನು ಆಗುತ್ತದೆಂದು; ಇದಕ್ಕೆ ಅನ್ನುತ್ತಾರೆ "ದ್ರವ್ಯಗುಣ" ಎಂದು. ಆ ದ್ರವ್ಯಗುಣದಿಂದ ಅಲ್ಲವೇ ಈ ಗೋಡೆ ಆದದ್ದು. ಮಂತ್ರದಿಂದೇನೂ ಆಗಿಲ್ಲ. ಇನ್ನೊಂದು ಬಗೆಯ ದ್ರವ್ಯಗುಣದಿಂದ ಅದು ಇಲ್ಲದಂತಾಗುತ್ತದೆ. ಇದರಲ್ಲೇನು ವಿಶೇಷ!

ನಾವು ಅದಕ್ಕೆ "ಕತೆಯನ್ನೇನೋ ನಾವು ಕೇಳಿದ್ದು ಸತ್ಯ ಎಂದು ಒಪ್ಪಿಕೊಳ್ಳುತ್ತೇವೆ." ಎಂದು ಹೇಳಿದೆವು.

ಪಂಚಾನನ ದಾದಾ ತಮ್ಮ ತಲೆ ಹಿಡಿದುಕೊಂಡು ಕುಳಿತವರು ಹಾಗೇ ಕುಳಿತುಬಿಟ್ಟರು. ಎಡಗೈಯಲ್ಲಿದ್ದ ಗುಡುಗುಡಿಯು ಕೈಯಲ್ಲಿ ಹಾಗೇ ಉಳಿದಿತ್ತು. ನಮ್ಮಲ್ಲಿ ಸಿದ್ಧತೆ ಇಲ್ಲದ್ದರಿಂದ ಸಾಮಾನ್ಯ ವಿಷಯದ ಈ ಸತ್ಯವನ್ನು ಪರೀಕ್ಷೆ ಮಾಡಿ ನೋಡುವುದು ಸಾಧ್ಯವಾಗಲಿಲ್ಲ.

ಇಷ್ಟು ದಿನಗಳ ವರೆಗೂ ಇರುಮಾಸಿ ಹೇಳುತ್ತ ಬಂದಿದ್ದ ಮಂತ್ರ, ತಂತ್ರ, ರಾಜರ ಅರಮನೆ, ಮನದಲ್ಲಿ ತುಂಬಿ ನಿನದಿಸುತ್ತಿದ್ದವು. ಮ್ಯಾಜಿಸಿಯನ್ ಹೇಳಿದ ದ್ರವ್ಯಗುಣದಲ್ಲಿ ಯಾವುದೇ ಪ್ರಕಾರದ ಲೋಪದೋಷಗಳೂ ಕಂಡುಬರಲಿಲ್ಲ. ಗೋಡೆ ಭದ್ರವಾಗಿ ಮೊದಲಿದ್ದಂತೆ ಇದ್ದಲ್ಲಿಯೇ ನೇರವಾಗಿ ನಿಂತುಕೊಂಡೇ ಇತ್ತು.

ಮ್ಯಾಜಿಸಿಯನ್ ಅವರ ಮೇಲಿನ ನಮ್ಮ ಭಕ್ತಿಯೂ ಕೂಡ ಕಡಿಮೆಯಾಗಿರಲಿಲ್ಲ. ಭಯದೊಂದಿಗೆ ಅದು ಕೂಡಿಕೊಂಡು ಮೊದಲಿಗಿಂತ ಹೆಚ್ಚಾಗಿ ಇತ್ತು. ಅಖಂಡವಾಗಿ ಉಳಿದಿತ್ತು.

ಫಕ್ಕನೆ ಮ್ಯಾಜಿಸಿಯನ್, "ಹಣ್ಣಿನ ಗೊರಟವನ್ನು ಮಣ್ಣಿನಲ್ಲಿ ಹೂಳುವುದೇ ತಡ, ಒಂದು ಗಂಟೆಯೊಳಗೆ ಗಿಡವೂ ಮೇಲೆದ್ದು ಬರುತ್ತದೆ; ಎಲೆಗಳೂ ಕಂಡುಕೊಳ್ಳುತ್ತವೆ. ಹೂವು, ಕಾಯಿ, ಹಣ್ಣು ಕೂಡ ತಿನ್ನಲು, ಪ್ರತ್ಯಕ್ಷ ತಿನ್ನಲು, ದೊರೆಯುತ್ತದೆ. "ಎಂತಹ ಆಶ್ಚರ್ಯವಿದು" ಎಂದು ಹೇಳಿದ. ನಾವೆಲ್ಲರೂ ಹೇಳಿದೆವು "ನಿಜವಾಗಿ ಎಂತಹ ಆಶ್ಚರ್ಯದ ಸಂಗತಿ ಇದು!" ಎಂದು.

"ಹಂ. ಚಿಂ. ಹಂ. ಎಳ್ಳಷ್ಟೂ ಆಶ್ಚರ್ಯವಿಲ್ಲ. ಕೇವಲ ಎಲ್ಲವೂ ದ್ರವ್ಯಗುಣ. ಒಂದು ಗೊರಟಕ್ಕೆ ಇನ್ನೊಂದು ಗೊರಟದ ಗಂಧವನ್ನು ಲೇಪಿಸಿ ಒಣಗಿಸಬೇಕು. ಒಂದೇ ಗೊರಟಕ್ಕೆ ಅದೇ ಪ್ರಕಾರ ಇಪ್ಪತ್ತೊಂದು ಸಲ ಮಾಡಬೇಕು. ಆಗ ನೋಡಬೇಕು-ಅದರ-ಚಮತ್ಕಾರ. ಆ ಗೊರಟವನ್ನು ನೆಲದ ಮೇಲೆ ಒಗೆಯುವುದೇ ತಡ.

ಕೂಡಲೇ ನಾವು ಸಿದ್ಧತೆ ಮಾಡತೊಡಗಿದೆವು. ಒಂದು ಗೊರಟವನ್ನು ಸಿದ್ಧಗೊಳಿಸಲು ಎರಡು ತಿಂಗಳುಗಳು ಬೇಕಾದವು. ಎಂತಹ ಆಶ್ಚರ್ಯ! ಗಿಡವೂ ಬಂತು. ಹಣ್ಣುಗಳೂ ಬಂದವು. ಆದರೆ ಏಳು ವರ್ಷಗಳ ನಂತರ ಮಾತ್ರ.

ಈಗ ಸಂಪೂರ್ಣ ತಿಳಿದು ಬಂತು ದ್ರವ್ಯಗುಣವೆಂದರೇನೆಂದು. ನಾವೂ ಹಂ. ಚಿಂ. ಹಂ. ಎಂದು ಹೇಳಿದೆವು. ನಮಗೆ ಸರಿಯಾಗಿ ತಯಾರಿಸುವುದಕ್ಕೆ ಬರಲಿಲ್ಲವೆಂದು ಅಂದುಕೊಂಡೆವು.

ಇಂತಹ ಸರಿಯಾದ ಗೊರಟ ಜಗತ್ತಿನಲ್ಲಿ ಎಲ್ಲಿಯೂ ದೊರೆಯುವುದು ಶಕ್ಯವಿಲ್ಲ. ಆದರೆ ಇದನ್ನು ತಿಳಿಯಲು ತುಂಬ ಸಮಯ ಬೇಕಾಗುತ್ತದೆ.

16. ಅದರ ಭಯ, ಭಯಂಕರ

ಅದರ ಭಯ ಭಯಂಕರ
ಉಜ್ವಲ, ತೀವ್ರ, ಅತಿಕ್ರೂರ.

ಬೆಂಕಿಯಂತೆ ಸುಡುವ ಭಯ
ಚೂರಿಯಂತೆ ಇರಿವ ಭಯ

ಅದರ ಭಯ ಪಶ್ಚಿಮಕ್ಕೆ
ಪೂರ್ವಕ್ಕೂ ಅದರದೆ ಭಯ

ಸಿಕ್ಕ ದಿಕ್ಕಿನಲ್ಲಿ ಭಯ
ಬೆನ್ನು ಹತ್ತಿ ಬರುತಿದೆ

ನಮ್ಮ ಮನೆಯ ಗೋಡೆಯಲ್ಲಿ
ಅದರ ಭಯವು ಅಡಗಿದೆ

ನಿಮ್ಮ ಮನೆಯ ಸೂರಿನಲ್ಲಿ
ಅದರ ಭಯವು ತುಂಬಿದೆ

ಹೊರಗಿನಿಂದ ಅದರ ಭಯ
ಒಳಗಿನಿಂದ ಅದರದೆ ಭಯ

ಭೂತಪ್ರೇತ ಪಿಶಾಚಿ ಭಯ
ಮಂತ್ರ ತಂತ್ರಗಳಲಿ ಭಯ

ಸೂರ್ಯರಶ್ಮಿಯಲ್ಲಿ ಭಯ
ನಮ್ಮ ನೋಟದಲ್ಲಿ ಭಯ
ರಾತ್ರಿ ಕತ್ತಲಲ್ಲಿ ಭಯ
ಬೆನ್ನುಹತ್ತಿ ಬಂದ ಭಯ
ಅದರ ಭಯ ಭಯಂಕರ
ಉಜ್ವಲ, ತೀವ್ರ, ಅತಿ ಕ್ರೂರ.

17. ಮಾಸ್ತರ ಬಾಬು

ನಾನು ಇಂದು ಕನಾಯ* ಮಾಸ್ತರ,
ಓದು ಎನ್ನ ಚಿಕ್ಕ ಬೆಕ್ಕೆ.
ಅಮ್ಮ ನೋಡು, ಬೆತ್ತದಿಂದ
ಇದನು ನಾನು ಹೊಡೆವುದಿಲ್ಲ.
ಸುಮ್ಮನೆ ಕೈಯಲ್ಲಿ ಹಿಡಿದು
ಅದರ ಮುಂದೆ ಕುಳಿತುಕೊಳುವೆ.

ದಿನದಿನವೂ ತಡಮಾಡಿಯೆ
ಎನ್ನ ಬಳಿಗೆ ಬರುತಿದೆ.
ನಾನದೆಷ್ಟೊ ಬೆದರಿಸಿದರು
ಕೇಳದಂತೆ ಕುಳಿತಿದೆ.

ದಿನವಿಡಿ ಬರಿ ಆಟ ಆಟ
ಅದರಲ್ಲೇ ಮನಸು ಮಾಟ
ನಾ ಹೇಳುವೆ ಚಛಜಝ ಞ
ಅದು ಅಂದಿತು ಬರಿ ಮ್ಯಾಂ ಮ್ಯಾಂ.

ಅಂಕಲಿಪಿಯ ಪುಟವ ತೆರೆದು
ಎಷ್ಟೋ ಸಲ ಹೇಳಿಕೊಡುವೆ
ನೀನಾಗಿಯೇ ಕದ್ದು ಹಾಲು
ಕೃಷ್ಣನಂತೆ ಕುಡಿಯಬೇಡ
ಎಂದು ಹೇಳಿ ದಣಿದು ಹೋದೆ.
ಒಂದು ಸಲವು ಕೂಡ ಅಮ್ಮ,
ನನ್ನ ಮಾತು ಕೇಳಲಿಲ್ಲ.
ಮೀನು ಕಣ್ಗೆ ಬಿದ್ದರಾಯ್ತು
ಮನದಿ ಏನು ಉಳಿವುದಿಲ್ಲ

* ಅನ್ವರ್ಥಕ ನಾಮ. ಮನೆಗೆ ಪಾಠ ಹೇಳಿಕೊಡಲು ನಿತ್ಯಬರುವ ಶಿಕ್ಷಕರ ಹೆಸರು.

ದಿನವಿಡಿ ಬರಿ, ಆಟ ಆಟ
ಆದರಲ್ಲೇ ಮನಸು ಮಾಟ
ನಾ ಹೇಳುವೆ ಚಳಭಜಝು ಇ
ಅದು ಅಂದಿತು ಬರಿ ಮ್ಯಾಂ, ಮ್ಯಾಂ.
ಓದಿಕೊಳುವ ಸಮಯದಲ್ಲಿ
ಓದಬೇಕು ಎಂದು ನಾನು
ಮತ್ತೆ ಮತ್ತೆ ಹೇಳುತಿರುವೆ
ಓದು ಮುಗಿಸಿ ರಜವ ಕೊಟ್ಟು
ಆಟಕಿರುವ ಹೊತ್ತಿನಲ್ಲಿ
ಆಡಲು ನಾ ಬಿಟ್ಟು ಬಿಡುವೆ
ಸಭ್ಯ ಮನುಜನಾಗಿ ಬಾಳು
ಎಂದೆಷ್ಟೇ ಹೇಳಿದರೂ
ಅದರ ಮನಸು ಹಾಳು ಹಾಳು.
ದಿನವಿಡಿ ಬರಿ ಆಟ ಆಟ
ಅದರಲ್ಲೇ ಮನಸು ಮಾಟ
ನಾ ಹೇಳುವೆ ಚಳಭಜಝು ಇ
ಅದು ಅಂದಿತು ಬರಿ ಮ್ಯಾಂ ಮ್ಯಾಂ.

18. ಮಾಸ್ಕೋದ ಪತ್ರ

ಮಾಸ್ಕೊ

ಪುಪುಮಣಿ,

ನಾನೀಗ ಎಲ್ಲಿರುವೆನೆಂಬುದನ್ನು ನೀನು ಊಹಿಸಲಾರೆ. ಬಹು ದೊಡ್ಡದಾದ ಒಂದು ಮನೆ. ಚಮತ್ಕಾರವಾದ ಒಂದು ತೋಟ. ನೋಟ ಬೀರಿದಷ್ಟು ದೂರ ಕಂಡುಬರುವ ಗಿಡಗಳ ಅರಣ್ಯ. ಇವುಗಳ ಮಧ್ಯದಲ್ಲಿರುವೆ.

ಆಕಾಶದಲ್ಲಿ ಮೋಡಗಳು ಮುತ್ತಿಕೊಂಡಿವೆ. ಚಳಿ ವಿಪರೀತ. ಗಗನಚುಂಬಿ ವೃಕ್ಷಗಳು ಗಾಳಿಯಿಂದ ತಮ್ಮ ತಲೆಯನ್ನು ತೂಗುತ್ತಿವೆ.

ಅಮಿಯಬಾಬು ಮಾಸ್ಕೊ ನಗರದ ಮಧ್ಯದಲ್ಲಿ ಇದ್ದಾರೆ. ಆರ್ಯಂ ಹೋಗಿದ್ದಾರೆ ಬೇರೊಂದು ಸ್ಥಳಕ್ಕೆ. ನಮ್ಮೊಂದಿಗೆ ಡಾ. ಟಿಂಬರ್ಸ ಅವರಿದ್ದಾರೆ.

ನನ್ನ ಗಡಿಯಾರ ನನ್ನ ಹತ್ತಿರವೇ ಇದೆ. ಅದನ್ನು ನೋಡಿದರೆ ಈಗ ಬೆಳಗಿನ ಎಂಟು ಗಂಟೆಯಾಗಿರಬೇಕೆಂದು ಅನಿಸುತ್ತದೆ. ನಾನು ನಿದ್ದೆಯಿಂದೆದ್ದು ಕಿಡಕಿಯಿಂದ ನೋಡುತ್ತೇನೆ, ಇನ್ನೂ ಕತ್ತಲು ಕವಿದಿದೆ. ಮುಗಿಲಿನ ತುಂಬ ಚುಕ್ಕೆಗಳು. ಹಾಗೆ ಸುಮ್ಮನೆ ಹಾಸಿಗೆಯಲ್ಲಿ ಬಿದ್ದುಕೊಂಡೆ. ತುಸು ಸಮಯ ಕಳೆದ ನಂತರ, ತುಸು ಬೆಳಕು ಬಂದಮೇಲೆ ಹಾಸಿಗೆಯಿಂದೆದ್ದು ಮುಖ ತೊಳೆದುಕೊಂಡು ಪತ್ರ ಬರೆಯುತ್ತ ಕುಳಿತಿದ್ದೇನೆ.

ಮೊದಲು ಬಾಬಾಗೆ ಒಂದು ದೊಡ್ಡ ಪತ್ರ ಬರೆದೆ. ಅದಾದಮೇಲೆ ಈಗ ನಿನಗೆ ಬರೆಯುತ್ತಿದ್ದೇನೆ. ಆದರೆ ಹೊಟ್ಟೆ ಹಸಿದಿದೆ. ಇಷ್ಟರಲ್ಲಿಯೇ ಇಲ್ಲಿಯ ದಾಸಿ ತತ್ತಿ, ಬ್ರೆಡ್ಡು, ಚಹಾ ತರಲಿದ್ದಾಳೆ. ನೀನೀಗ ತಾನೆ ಎದ್ದಿರಬಹುದು. ಎದ್ದೊಡನೆ ನಿತ್ಯದಂತೆ ನಿನ್ನ ಕೋಕೊ ಕುಡಿದು ಆಗಿರಬೇಕು ಈ ಸಮಯಕ್ಕೆ. ಹೊರಗೆ ತಿರುಗಾಡಲು ಹೋಗಿದ್ದೆ ಏನು? ಆದರೆ ಅಲ್ಲಿ ಈಗ ಮೋಡ ಮುಚ್ಚಿಕೊಂಡು ಮಳೆ ಬೀಳಹತ್ತಿರಲೂ ಬಹುದು.

ಇಂದು ಸಾಯಂಕಾಲ ಕಾರಿನಲ್ಲಿ ಕುಳಿತು ಇಲ್ಲಿಂದ ಮತ್ತೆ ಮಾಸ್ಕೊ ನಗರ ಮಧ್ಯಕ್ಕೆ ಹೊರಟುಹೋಗುವೆ. ಅಲ್ಲಿ ನಾವೆಲ್ಲರೂ ಒಂದು ಹೋಟೆಲಿನಲ್ಲಿ ಇಳಿದಿದ್ದೇವೆ.

ಇಲ್ಲಿ ಅಷ್ಟೊಂದು ಸುಂದರವಾಗಿ ಸುಸಜ್ಜಿತಗೊಳಿಸಿದ ಮನೆಗಳಿಲ್ಲ; ಹಾಗೂ ಅಲ್ಲಿ ಆ ಮನೆಗಳಲ್ಲಿ ತಿನ್ನಲು ಕೊಡುವ ಪದಾರ್ಥಗಳೂ ಕೂಡ ಅಷ್ಟೊಂದು ಉತ್ತಮ ವಾದವುಗಳೇನೂ ಅಲ್ಲ. ಶಾಂತಿನಿಕೇತನಕ್ಕೆ ಕೂಡಲೇ ಹೊರಟು ಹೋಗಬೇಕೆಂದು

ಆಗಾಗ ಅನಿಸುತ್ತಿದೆ—ಇದನ್ನೆಲ್ಲ ಬಗೆದು. ಮಾಸ್ಕೋಕ್ಕೆ ಈ ಸಲ ತಿರುಗಿ ಹೋದ ನೆಂದರೆ ಮತ್ತೆ ಎಲ್ಲಿಯೂ ಹೊರಗೆ ಹೋಗುವುದೇ ಇಲ್ಲ. ಬರಿ ಚಿತ್ರ ಬಿಡಿಸುತ್ತ ಅಲ್ಲಿಯೇ ಇದ್ದು ಬಿಡುತ್ತೇನೆ. ಮತ್ತೆ ನಸುಕಿನಲ್ಲಿ ವನಮಾಲಿ ಬಿಸಿ ಬಿಸಿ ಕಾಫಿ ಹಾಗೂ ಟೋಸ್ಟ ತಂದುಕೊಡುತ್ತಾನೆ. ಇದಾದ ಮೇಲೆ ಉದ್ದವಾದ ಒಂದು ಬಡಿಗೆಯನ್ನು ಕೈಯ್ಯಲ್ಲಿ ಎತ್ತಿಕೊಂಡು ಮರಳು ಹಾಸಿದ ತೋಟದಲ್ಲಿ ತಿರುಗಾಡುವೆ. ನಂತರ ಇರಲಿ ಬಿಡು. ಹೇಳುವ ಅಗತ್ಯವೆಲ್ಲಿದೆ; ಊಟ ಸಿದ್ಧವಾಗಿ ಬರುತ್ತದೆ. ಕಾಫಿ, ಬ್ರೆಡ್ ಬೆಣ್ಣೆ, ಮೀನದ ತತ್ತಿ, ಎರಡು ಬಗೆಯ ಚೀಸ್, ಕೆನೆಮೊಸರು ಹಾಗೂ ಕುದಿಸಿ ತುಂಡು ಮಾಡಿಟ್ಟ ತತ್ತಿ, ಇದಲ್ಲದೆ ದ್ರಾಕ್ಷಿ, ಪಿಯರ್, ಸೇಬು ಇತ್ಯಾದಿ ಹಣ್ಣುಗಳು.

ಊಟವಾದ ಮೇಲೆ ತುಸು ತಡೆದು ಬಿಸಿಯಾದ ನೀರಿನಿಂದ ಸ್ನಾನಮಾಡು ತ್ತೇನೆ. ಇಲ್ಲಿ ಇದೇ ಸರಿಹೋಗುತ್ತದೆ. ಸ್ನಾನದ ನಂತರ ಮತ್ತೆ ವಿರಾಮವಾಗಿ ಬರೆ ಯುತ್ತ ಕೂಡುತ್ತೇನೆ.

ಈಗ ಮೋಡಗಳು ಚದುರಿಹೋಗಿವೆ. ಬಿಸಿಲು ಬಿದ್ದಿದೆ. ಕಣ್ಣಿಗೆ ಕಾಣಿಸುತ್ತಿದೆ. ಗಿಡದ ಟೊಂಗೆಗಳು ಗಾಳಿಗೆ ಬೀಸಹತ್ತಿ ಎಲೆಗಳು ಝಿಲ್‌ಮಿಲ್ ಎಂದು ದನಿಗೈಯ್ಯ ಹತ್ತಿವೆ. ಇದರೊಂದಿಗೆ ಅದೆಷ್ಟು ಪಕ್ಷಿಗಳು ತಮ್ಮ ಸ್ವರ ಬೆರಸಿವೆಯೊ ಹೇಳಲಾರೆ. ನಾನಾ ಬಗೆಯ ಪಕ್ಷಿಗಳ ಸ್ವರಮೇಳ. ಆ ಪಕ್ಷಿಗಳ ಗುರುತು ಇಲ್ಲ ನನಗೆ. ಅದೇ ರೀತಿ ಅವುಗಳು ತೆಗೆಯುವ ಸ್ವರವನ್ನೂ ಈ ಮೊದಲು ಎಲ್ಲಿಯೂ ಕೇಳಿಲ್ಲ.

ಇಲ್ಲಿಗೆ ಈ ಪತ್ರ ಮುಗಿಸುವೆ. ಸಾಕು. ಇಂದು ಇನ್ನು ಹೆಚ್ಚು ವೇಳೆ ಇಲ್ಲ.

ಇತಿ,
ದಾದಾಮಹಾಶಯ
೨೦, ಸೆಪ್ಟಂಬರ್ ೧೯೩೦

[" ಚಿಠಿಪತ್ರ ": ಭಾಗ ೪ ರ ೩ ನೇ ಪತ್ರ]

19. ಸಮದುಃಖಿ

ಇರಲಿ ಬಿಡು, ಮಗುವಾಗಲು
ನನಗೆ ಬಾರದಿದ್ದರೇನು ?
ನಾನಾಗುವೆ ಚಿಕ್ಕದೊಂದು
ಅಕ್ಕರತೆಯ ನಾಯಿಮರಿ

ಆಗ ನಿನ್ನ ಬಳಿಗೆ ನಾನು
ಸಾಗಿ ಬರುವೆ ಮಮತೆಯಿಂದ
ಅಮ್ಮ ನಿಮ್ಮ ತೊಡೆಯನೇರಿ
ಚಿನ್ನಾಟವನಾಡುವೆ.

ನೀನೆನ್ನನು ಆ ಸಮಯದಿ
ಪ್ರೀತಿಸುವೆಯಾ ? ನಿಜವ ಹೇಳು.
ಸುಳ್ಳು, ಸಾಕು, ಎತ್ತಿಕೊಂಡು
ಮುತ್ತನಿತ್ತು ಪ್ರೀತಿಸುವೆಯಾ ?

ಇಲ್ಲವೆ ಬರಿ ಸಿಟ್ಟಿನಿಂದ
ಎಲ್ಲಿಂದಿದು ಬಂದಿತೆಂದು
ದೂರ ದೂರ ದೂರ ಹೋಗು
ಎಂದು ಅಟ್ಟಿಬಿಡುವೆಯಾ ?

ಹಾಗಿದ್ದರೆ ಈಗಲೆ ನೀ
ಇಳಿಸೆನ್ನನು ಕೆಳಗೆ
ನೀನಿತ್ತಿಹ ತಿಂಡಿಯ ನಾ
ತಿನ್ನದೆ ಹೋಗುವೆ ಹೊರಗೆ.

ಇರಲಿಬಿಡು, ಮಗುವಾಗಲು
ನನಗೆ ಬಾರದಿದ್ದರೇನು ?
ನಾನಾಗುವೆ ಆಗ ಒಂದು
ಹೊಳೆವ ಹಸಿರು ಗಿಳಿಯ ಮರಿ

ನಿನ್ನ ಬಳಿಗೆ ಬರುವುದಿಲ್ಲ
ಪಂಜರದೊಳು ಕುಳಿತೆ ಇರುವೆ
ಆಗೆನ್ನನು ಪ್ರೀತಿಸುವೆಯಾ ?
ನಿಜವ ಹೇಳು : ಸುಳ್ಳು ಸಾಕು.

ಇಲ್ಲದಿರೆ ಈಗಲೇ ನೀ
ಇಳಿಸೆನ್ನನು ಕೆಳಗೆ
ನೀನಿತ್ತಿಹ ತಿಂಡಿಯನಾ
ತಿನ್ನದೆ ಹೋಗುವೆ ಹೊರಗೆ.

20. ಖ್ಯಾತಿಯ ವಿಡಂಬ

[ದುಕಡಿ ದತ್ತ ವಕೀಲರು ಕುರ್ಚಿಯ ಮೇಲೆ ಕುಳಿತಿದ್ದಾರೆ. ಪಾವತಿ ಪುಸ್ತಕಗಳನ್ನು ಕೈಯಲ್ಲಿ ತಕ್ಕೊಂಡು ಭಯದಿಂದ ಕಾಂಗಾಲಿ ಚರಣರು ಪ್ರವೇಶಿಸುತ್ತಾರೆ.]

ದುಕಡಿ : ಏನು ಬೇಕು ?

ಕಾಂಗಾಲಿ : ಏನಿಲ್ಲ ರಾಯರೆ, ನಾನು "ದೇಶಹಿತೈಷಿ . . . . . .

ದುಕಡಿ : ಅದೊ ! ಅದನ್ನೆಲ್ಲರೂ ಬಲ್ಲರು. ಇರಲಿ, ಈಗ ಬಂದ ಕೆಲಸ ಏನು ?

ಕಾಂಗಾಲಿ : ತಾವು ಸಾಧಾರಣ ಜನರ ಅಂದರ ಸಾಮಾನ್ಯ ಜನರ ಅಥವಾ ಜನಸಾಮಾನ್ಯರ ಹಿತಕ್ಕಾಗಿ ಪ್ರಾಣಾರ್ಪಣ . . . . . .

ದುಕಡಿ : ಅದೆಲ್ಲ ಏನೂ ಇಲ್ಲ, ನಾನು ವಕೀಲಿ ಕೆಲಸ—ನನ್ನ ಕೆಲಸ ನಾ ಮಾಡುತ್ತ ನಡೆದೀನಿ. ಬೇರೆ ಯಾರದೂ ಅಲ್ಲ. ಇದೆಲ್ಲರಿಗೂ ಗೊತ್ತಿದ್ದ ಮಾತೇ ಇದೆ ಆದರೆ ನಿಮ್ಮ ಅಭಿಪ್ರಾಯ ಏನು ?

ಕಾಂಗಾಲಿ : ರಾಯರೇ, ಹೇಳುವುದೇನೂ ಬಹಳ ಇಲ್ಲ.

ದುಕಡಿ : ಹಾಗಿದ್ದರೆ, ಇದ್ದದ್ದನ್ನಿಷ್ಟು ಬೇಗ ಬೇಗ ಹೇಳಬಹುದಲ್ಲ.

ಕಾಂಗಾಲಿ : ತುಸು ವಿಚಾರ ಮಾಡಿ ನೋಡಿದರ . . . .
ರಾಯರ, ನೀವು ಒಪ್ಪಿಕೊಳ್ಳಲಿಕ್ಕೇ ಬೇಕು. ಏನಂದರೆ "ಗಾನಾತ್ ಪರತರಂ ನಾಹಿ" ಎಂಬ ಉಕ್ತಿಯನ್ನು.

ದುಕಡಿ : ಹೌದು. ಆದರೆ ವಿವೇಚನೆ ಹಾಗೂ ಸ್ವೀಕಾರ ಎರಡೂ ಮಾಡುವ ಮೊದಲು ವಿಷಯ ಏನು ಅಂತ ಗೊತ್ತಾಗಬೇಕು. ಅದರ ಅರ್ಥ ತಿಳಿಯಬೇಕು. ಕನ್ನಡದಲ್ಲಿ ಸ್ಪಷ್ಟವಾಗಿ ಹೇಳಿ ಬಿಡಿರಿ.

ಕಾಂಗಾಲಿ : ಆಗಲಿ ರಾಯರೇ, ಸರಿಯಾಗಿ ಕನ್ನಡ ಗೊತ್ತಿಲ್ಲ. ಆದರೂ ತಾತ್ಪರ್ಯ ವಿಷ್ಟೆ ! ಗಾಯನವೆಂಬುದನ್ನು ಕೇಳಿದರೆ ಮನಸ್ಸಿಗೆ ಸಂತೋಷವೆನಿಸುತ್ತದೆ.

ದುಕಡಿ : ಎಲ್ಲರಿಗೂ ಸಂತೋಷವೆನಿಸುವುದಿಲ್ಲ.

ಕಾಂಗಾಲಿ : ಗಾಯನ ಯಾರಿಗೆ ಸಂತೋಷವೆನಿಸುವುದಿಲ್ಲವೊ ಅವರು . . .

ದುಕಡಿ : ಅವರೇ ಸಾಕ್ಷಾತ್ ಶ್ರೀಯುಕ್ತ ದುಕಡಿ ದತ್ತ ವಕೀಲರು.

ಕಾಂಗಾಲಿ : ಏನು ರಾಯರೇ, ಈ ಮಾತು ತಾವು ಹೇಳಬಾರದು. ತಾವು ಕುಳಿತು ಗೊಂಡು ಇಂತಹ ಮಾತು ಆಡಬಾರದು.

ದುಕಡಿ : ಹಾಗಾದರೆ ಇನ್ನು ನಾನು ಸುಳ್ಳು ಹೇಳಬೇಕೆ?

ಕಾಂಗಾಲಿ : ಆರ್ಯಾವರ್ತದಲ್ಲಿ ಭರತ ಮುನಿಯೇ ಗಾಯನದ ಪ್ರಥಮ . . .

ದುಕಡಿ : ಭರತ ಮುನಿಯ ಹೆಸರಿನಲ್ಲಿ ಯಾವುದಾದರೊಂದು ಮೊಕದ್ದಮೆ ಇದ್ದರೆ ಅದನ್ನು ನನಗೆ ಹೇಳಿ, ಇಲ್ಲದೆ ಹೋದರೆ, ನಿಮ್ಮ ಭಾಷಣ ನಿಲ್ಲಿಸಿ ಬಿಡಿ.

ಕಾಂಗಾಲಿ : ಹೇಳೋ ಮಾತು ಇನ್ನೂ ಬಹಳ ಇದ್ದವು . . .

ದುಕಡಿ : ಆದರೆ ಬಹಳ ಮಾತು ಕೇಳಲಿಕ್ಕೆ ಸಮಯ ಇಲ್ಲ.

ಕಾಂಗಾಲಿ : ಹಾಗಾದರೆ ಸಂಕ್ಷಿಪ್ತದಲ್ಲಿ ಹೇಳುತ್ತೇನೆ. ಈ ಮಹಾನಗರದಲ್ಲಿ "ಗಾನೋನ್ನತಿ ವಿಧಾಯಿನೀ" ಎಂಬ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪನೆಮಾಡಿ ಆಗಿದೆ. ಅದರಲ್ಲಿ ತಾವು . . .

ದುಕಡಿ : ಏನು? ಭಾಷಣ ಮಾಡಬೇಕೇ?

ಕಾಂಗಾಲಿ : ಛೇ, ಛೇ, ಅದೇನೂ ಇಲ್ಲ. ರಾಯರೇ, . . .

ದುಕಡಿ : ಅಧ್ಯಕ್ಷ ಆಗಬೇಕೆ?

ಕಾಂಗಾಲಿ : ಅದರ ಅವಶ್ಯಕತೆ ಕೂಡ ಇಲ್ಲ ರಾಯರೇ, . . .

ದುಕಡಿ : ಹಾಗಾದರೆ ಏನು ಮಾಡಬೇಕು? ಗಾಯನ ಮಾಡುವುದು ಹಾಗೂ ಗಾಯನ ಕೇಳುವುದು ಈ ಎರಡೂ ಕೆಲಸ ಮಾತ್ರ ನನ್ನಿಂದ ಆಗುವುದು ಈ ವರೆಗೂ ಸಾಧ್ಯವಾಗಿಲ್ಲ. ಇನ್ನು ಮುಂದೆಯೂ ಸಾಧ್ಯವಾಗುವಂತಿಲ್ಲ. ಇದನ್ನು ನಾನು ಮೊದಲೇ ಹೇಳಿಬಿಡುತ್ತೇನೆ.

ಕಾಂಗಾಲಿ : ಇರಲಿ ರಾಯರೇ, ತಮ್ಮಂತಹ ಜನರಿಗೆ ಹೆಚ್ಚೇನೂ ಹೇಳುವ ಅವಶ್ಯಕತೆಯೇ ಇಲ್ಲ. (ಪಾವತಿ ಪುಸ್ತಕ ಮುಂದೆ ಚಾಚುತ್ತ) ಕೇವಲ ಒಂದಿಷ್ಟು ಚಂದಾ ಹಣಕೊಟ್ಟರೆ ಸಾಕು.

ದುಕಡಿ : (ಗಡಬಡಿಸಿಕೊಂಡು ಎದ್ದು ನಿಂತು) ಚಂದಾ! ಏನು? ಚಂದಾ? ಸರ್ವನಾಶ. ನೀವೇನೂ ಸಾಮಾನ್ಯ ಜನ ಅಲ್ಲ. ಏನೂ ತಿಳಿಯದವರಂತೆ, ಇಲ್ಲದ ದೇಶಾವರಿ ನಗುತ್ತ ಒಳಗೆ ಬಂದು . . . ಚಂದಾ! ಇರಲಿ. ನಾನೀಗ ಭಾರಿ ದೊಡ್ಡ ಮೊಕದ್ದಮೆಯ ಗಡಿಬಿಡಿಯೊಳಗೆ ಇದೇನೆ. ನೀವು, ನಿಮ್ಮ ಚಂದಾ ಪುಸ್ತಕ ತಕ್ಕೊಂಡ ಹೊರಗ ಹೋಗರಿ. ಈಗ ನಡೆಯಿರಿ. ಈಗ ಹೊರಟುಹೋಗರಿ ಅಂದೆ. ಇಲ್ಲದೆ ಹೋದರೆ, ಟ್ರೆಸ್‌ಪಾಸ್ ಮಾಡಿದಿರಿ ಅಂತ ನಿಮ್ಮ ಮೇಲೆ ಒಂದು ಪೋಲೀಸ್ ಕಂಪ್ಲೇಂಟ ಕೊಡುತ್ತೇನೆ.

ಕಾಂಗಾಲಿ : ಚಂದಾ ಸಿಗಬಹುದು ಅಂತ ಬಂದೆ. ಚಂದಾದ ಬದಲು ಅರ್ಧಚಂದ್ರ ಸಿಕ್ಕಿತು. (ಸ್ವಗತ) ಆದರೆ ನಿಮಗೆ ಒಂದು ಕೈ ತೋರಿಸುತ್ತೇನೆ.

[ಕಾಂಗಾಲಿ ಚರಣರು ಹೋಗುತ್ತಾರೆ]

ಎರಡನೇ ದೃಶ್ಯ

[ದುಕಡಿಬಾಬು ಕೈಯಲ್ಲಿ ಅನೇಕ ಬಂಗಾಲಿ ಹಾಗೂ ಇಂಗ್ಲೀಷ ಪತ್ರಿಕೆಗಳನ್ನು ಹಿಡಿದುಕೊಂಡು ಪ್ರವೇಶಿಸುತ್ತ]

ದುಕಡಿ : ಇದೇನೋ ಒಂದು ಭಾರಿ ತಮಾಷೆಯೇ ಆಗಿದೆ. ಕಾಂಗಾಲಿಚರಣ ಎಂಬ ಗೃಹಸ್ಥನೊಬ್ಬ ಯಾರೊ, ಏನೊ, ತಮ್ಮ "ಗಾನೋನ್ನತಿವಿಧಾಯಿನೀ" ಸಭೆಗೆ ಐದು ಸಾವಿರ ರೂಪಾಯಿ ನಾನು ದಾನ ಮಾಡಿದ್ದೇನೆ ಎಂದು ಬಂಗಾಳಿ, ಇಂಗ್ಲೀಷ ಪತ್ರಿಕೆಗಳಲ್ಲಿ ಕೊಟ್ಟುಬಿಟ್ಟಿದ್ದಾನೆ. ಪ್ರಕಟವಾಗಿ ಹೋಗಿದೆ. ನನ್ನ ಹೆಸರು ಎಷ್ಟು ಪ್ರಸಿದ್ಧ ಆಗಬೇಕೊ ಅಷ್ಟು ಆಗಿ ಹೋಗಿದೆ. ಇದರಿಂದ ನನ್ನ ಉದ್ಯೋಗಕ್ಕೂ ಲಾಭ; ಆ ಸಭೆಗೂ ಲಾಭ. ಐದು ಸಾವಿರ ರೂಪಾಯಿ ಕಾಣಿಕೆ ದೊರೆಯಬೇಕಾದರೆ ಅದೊಂದು ಭಾರೀ ಸಭೆ; ಬರಿ ಸಭೆ ಅಲ್ಲ ಒಂದು ದೊಡ್ಡ ಸಂಸ್ಥಾ ಇರಬೇಕು . . . ಅಂತ ಜನ ತಿಳಿದು ಕೊಳ್ಳುವರು. ಅನೇಕ ಕಡೆಗಳಿಂದ ಸಾಕಷ್ಟು ಚಂದಾಹಣ ಸಂಗ್ರಹ ವಾಗುವದು. ಖಂಡಿತ ಸಂಗ್ರಹವಾಗುವುದು. ಏನೇ ಇರಲಿ. ಇದರಿಂದ ನಾಲ್ಕು ಜನರಿಗೆ ನನ್ನ ಹೆಸರೂ ಗೊತ್ತಾದಂತೆ ಆಯಿತು. ನನ್ನ ಉದ್ಯೋಗಕ್ಕೂ ಇದರಿಂದ ಲಾಭ ಖಂಡಿತ ಆಗಲೇ ಬೇಕು, ನನ್ನ ದೈವ ಸುದೈವ.

ಕಾರಕೂನ : (ಪ್ರವೇಶಿಸಿ) ನಮುಸ್ಕಾರ. ರಾಯರ ನಮುಸ್ಕಾರ. ಏನು ? ಗಾನೋನ್ನತಿ ಸಭೆಗೆ ಐದು ಸಾವಿರ ರೂಪಾಯಿ ದಾನ. . . .

ದುಕಡಿ : (ತಲೆದೂಗುತ್ತ) ಹೌದು. ಅದೊಂದು ಭಾರಿ ದೊಡ್ಡ ಕತೆ. ಕೇಳುವಿರೇನು ? ಹೇಳುತ್ತೇನೆ ಕೇಳಿ. ಯಾರು ಹೇಳಿದರು ನಾನು ದಾನಮಾಡಿದೆ ಎಂದು. ದಾನಮಾಡಿದ್ದೇನೋ ನಿಜ ಅಂತ ತಿಳಿಯಿರಿ. ಅದರಿಂದ ಆದದ್ದಾದರೂ ಏನು ? ಇಷ್ಟೊಂದು ಗಲಾಟೆಯ ಆವಶ್ಯಕತೆಯಾದರೂ ಎಲ್ಲಿತ್ತು?

ಕಾರಕೂನ : ಭಲೆ. ಎಂತಹ ಸೌಜನ್ಯ! ಎಂತಹ ವಿನಯ ರಾಯರದು. ಐದು ಸಾವಿರ ರೂಪಾಯಿ ನಗದುಕೊಟ್ಟು ಅದನ್ನು ಗುಪ್ತ ಇಡುವ ಪ್ರಯತ್ನ. ಇದೇನು ಸಾಮಾನ್ಯ ಜನರ ಮಾತಲ್ಲ ಬಿಡಿ.

(ಸೇವಕನ ಪ್ರವೇಶ)

ಸೇವಕ : ಕೆಳಗೆ ಮನೆಯ ಮುಂದೆ ಬಹಳ ಜನ ಬಂದು ನಿಂತಿದ್ದಾರೆ.

ದುಕಡಿ : (ಸ್ವಗತ) ನೋಡಿದೆಯಾ ? ಒಂದೇ ದಿನದಲ್ಲಿ ನನ್ನ ಹೆಸರು ದಿಕ್ಕೆಟ್ಟು ಹಬ್ಬಿ ಹೋಗಿದೆ. (ಸಂತೋಷದಿಂದ) ಒಬ್ಬೊಬ್ಬರಂತೆ ಅವರನ್ನೆಲ್ಲ ಮೇಲೆ ಕರೆದು ಕೊಂಡು ಬಾ. ಎಲೆ, ಅಡಿಕೆ ಒಂದಿಷ್ಟು ತಂದು ಇಡು.

(ಪ್ರಥಮ ವ್ಯಕ್ತಿಯ ಪ್ರವೇಶ)

ದುಕಡಿ : (ದೊಡ್ಡಿಸ್ತನ ತೋರಿಸುತ್ತ) ಬನ್ನಿ, ಕುಳಿತುಕೊಳ್ಳಿ. ಅಡಿಕೆ, ಎಲೆ ತಕ್ಕೊಳ್ಳಿ. ಏನೂ ಸಂಕೋಚ ಮಾಡಿಕೊಳ್ಳಬೇಡಿ.

ಪ್ರಥಮ : (ಸ್ವಗತ) ಭಲೆ. ಎಂತಹ ಆಕರ್ಷಕ ಸ್ವಭಾವ! ಬಂದ ಕೆಲಸ ಯಾವುದಿದ್ದರೂ ಇಂತಹ ಸ್ಥಳದಲ್ಲಿ ಅದು ಸಫಲವಾಗದೆ ಇನ್ನು ಬೇರೆ ಯಾವ ಕಡೆ ಆದೀತು!

ದುಕಡಿ : ತಾವು ಅದಾವ ಉದ್ದೇಶದಿಂದ ಈಗ ಇಲ್ಲಿಗೆ ದಯಮಾಡಿಸಿದ್ದು?

ಪ್ರಥಮ : ನಿಮ್ಮ ದೇಶವಿಖ್ಯಾತ ಹೆಸರು ಕೇಳಿ ಬಂದೆ.

ದುಕಡಿ : ಅದೆಲ್ಲ ಭಾರಿ ಗೊಂದಲದ ಕಥೆ ಏನ್‌ಕೇಳ್ತಿರಿ.

ಪ್ರಥಮ : ಏನು ವಿನಯ! ಮಹಾನುಭಾವರ ಹೆಸರು ಮಾತ್ರ ಕೇಳಿದ್ದೆ. ಇಂದು ಕಣ್ಣು, ಕಿವಿ ಎಲ್ಲ ಸಾರ್ಥಕವಾದವು.

ದುಕಡಿ : (ಸ್ವಗತ) ಇವರನ್ನು ಆದಷ್ಟು ಬೇಗ ಕಳಿಸಿಕೊಡಬೇಕು. ಮುಖ್ಯ ಬಂದ ಕೆಲಸ ಯಾವುದು ಅದನ್ನಿಷ್ಟು ಕೇಳಿಕೊಂಡರಾಯಿತು. ಕೆಳಗೆ ಇನ್ನೂ ಬಹಳಷ್ಟು ಜನರು ಕಾದಿದ್ದಾರೆ. (ಪ್ರಕಟ) ತಾವು ದಯಮಾಡಿಸಿದ್ದೇಕೆ? ನನ್ನಿಂದ ಏನಾಗಬೇಕಾಗಿದೆ?

ಪ್ರಥಮ : ದೇಶದ ಉನ್ನತಿಯ ಉದ್ದೇಶಕ್ಕಾಗಿ ಹೃದಯದ . . .

ದುಕಡಿ : ಅದಿರಲಿ, ಅದೆಲ್ಲ ಬಹು ಉದ್ದವಾದ ವಾದ, ಚರ್ಚೆ.

ಪ್ರಥಮ : ಸರಿ ಹೇಳಿದಿರಿ. ತಮ್ಮಂತಹ ಮಹಾನುಭಾವರು ಭರತಭೂಮಿಯಲ್ಲಿ. . .

ದುಕಡಿ : ಬೇಕಾದಷ್ಟು ಜನರಿದ್ದಾರೆ. ಇರಲಿ ಮುಂದೆ—

ಪ್ರಥಮ : ವಿನಯಶೀಲರ ಸ್ವಭಾವವೇ ಹೀಗೆ. ತಮ್ಮ ಗುಣಗಾನ. . .

ದುಕಡಿ : ಕ್ಷಮಿಸಿ ಮಹನೀಯರೇ, ತಾವೇಕೆ ಬಂದದ್ದು! ಅದನ್ನು ಮೊದಲು ಹೇಳಿಬಿಡಿ ದಯಮಾಡಿ. ಮುಖ್ಯ ಕೆಲಸ! ಅದನ್ನು ಮೊದಲು ಹೇಳಿ.

ಪ್ರಥಮ : ಮುಖ್ಯಮಾತೆಂದರೆ . . . ನಿಮಗೂ ಗೊತ್ತಿರಬಹುದು . . . ದಿನದಿನಕ್ಕೆ ನಮ್ಮ ದೇಶ ಈ ಭರತಭೂಮಿ . . . ಅಧೋಗತಿಗೆ ಹೋಗುತ್ತ ನಡೆದಿ. . .

ದುಕಡಿ : ಅದೆಲ್ಲ ಗೊತ್ತು ಮುಂದೆ?

ಪ್ರಥಮ : (ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತ) ನಮ್ಮ "ಸ್ವರ್ಣ ಸಸ್ಯಶಾಲಿನಿ ಈ ಪುಣ್ಯಭೂಮಿ ಭರತವರ್ಷ ದಾರಿದ್ರ್ಯದ ಅಂಧಕೂಪ . . .

ದುಕಡಿ : ಹೂ ಮುಂದೆ ಹೇಳಿಬಿಡಿ.

ಪ್ರಥಮ : ದಾರಿದ್ರ್ಯದ ಅಂಧಕೂಪದಲ್ಲಿ ದಿನ ದಿನಕ್ಕೆ ಇಳಿಯುತ್ತಿರು . . .

ದುಕಡಿ : (ತಡೆಯಲಾರದೆ ದೊಡ್ಡ ಸ್ವರದಲ್ಲಿ) ಮಹನೀಯರೇ, ನೀವು ಹೇಳುವುದೆಲ್ಲ ನನಗೆ ಒಂದೂ ತಿಳಿಯುವುದಿಲ್ಲ.

ಪ್ರಥಮ : ಹಾಗಾದರೆ ಈಗ ನಡೆದಿರುವುದನ್ನಿಷ್ಟೆ ನಿಮಗೆ ಹೇಳುತ್ತೇನೆ. ಅದೆಂದರೆ . . .

ದುಕಡಿ : ಇದು ಒಳಿತಾದ ಮಾತು. ಹೇಳುವುದನ್ನು ತುಸು ಸಂಕ್ಷೇಪವಾಗಿ ಹೇಳಬೇಕು. ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಒಂದು ಖಟ್ಲೆ ನಾವು ಹಾಕೋಣ.

ಪ್ರಥಮ : ಮ್ಯಾಜಿಸ್ಟ್ರೇಟನು ಕೂಡ ಲೂಟಿಮಾಡುತ್ತಿದ್ದಾನೆ. ಏನ ಹೇಳಲಿ!

ದುಕಡಿ : ಹೀಗೇನು? ಹಾಗಾದರೆ ಡಿಸ್ಟ್ರಿಕ್ಟ ಜಜ್ಜರ ಕಡೆಗೆ ಕೇಸ ದಾಖಲ ಮಾಡೋಣ.

ಪ್ರಥಮ : ಡಿಸ್ಟ್ರಿಕ್ಟ ಜಜ್ಜನೂ ಭಾರಿ ಕಳ್ಳ. ಅವನೂ ನಡೆಸಿರುವುದಾದರೂ ಏನು! ಭಾರಿ ಲೂಟಿ!

ದುಕಡಿ : (ಆಶ್ಚರ್ಯದಿಂದ) ನೀವೇನು ಹೇಳುತ್ತಿರುವಿರೋ ಅದೇನೂ ಒಂದ ಅಕ್ಷರ ಕೂಡ ನನಗೆ ತಿಳಿಯದಾಗಿದೆ.

ಪ್ರಥಮ : ನಾನು ಹೇಳುವುದಿಷ್ಟೇ . . .! ನಮ್ಮ ಸ್ವದೇಶದ ದುಡ್ಡು ವಿದೇಶಕ್ಕೆ ಹೋಗುತ್ತಿದೆ—ಎಂದು . . .

ದುಕಡಿ : ದುಃಖದ ಮಾತು.

ಪ್ರಥಮ : ಅದಕ್ಕಾಗಿಯೇ ನಾವು ಒಂದು ಸಭಾ . . .

ದುಕಡಿ : (ಆಶ್ಚರ್ಯದಿಂದ) ಸಭಾ!

ಪ್ರಥಮ : ಇದು ನೋಡಿ. ಈ ಪಾವತಿ ಪುಸ್ತಕ . . .

ದುಕಡಿ : (ಕೂತಲ್ಲಿಂದ ಒಮ್ಮೆಲೆ ಎದ್ದು ನಿಂತು) ಚಂದಾ! ಹೊರಗೆ ನಡೆಯಿರಿ, ನಡೆಯಿರಿ ಹೊರಗೆ ಅಂದೆ. (ಗಡಿಬಿಡಿಯಲ್ಲಿ ಕುಳಿತ ಕುರ್ಚಿ ಬಿದ್ದು, ಮಸಿ ದೌತಿ ಉರುಳಿ, ಅವನ್ನೆತ್ತಿ ಇಡುವುದಕ್ಕೆ ಗಡಿಬಿಡಿ ಮಾಡುತ್ತಿರುವಾಗ ದ್ವಿತೀಯ ವ್ಯಕ್ತಿಯ ಪ್ರವೇಶ.)

ದುಕಡಿ : ಏನು ಬೇಕು?

ದ್ವಿತೀಯ : ಮಹನೀಯರ ದೇಶ ವಿಖ್ಯಾತ ಹೆಸರನ್ನು. . . .

ದುಕಡಿ : ಅದೆಲ್ಲ ಮುಗಿದ ಹೋಗೇದ. ಹೊಸದೇನಾದರೂ ಇದ್ದರ ಅದನ್ನು ಹೇಳಿರಿ.

ದ್ವಿತೀಯ : ನಿಮ್ಮ ದೇಶಪ್ರೇಮ. . . . ವಾತ್ಸಲ್ಯಭರಿತ. . . .

ದುಕಡಿ : ಅದೆಲ್ಲ ಇರಲಿ! ಬಂದವರೆಲ್ಲ ಹೇಳಿದ್ದನ್ನೇ ಹೇಳುತ್ತಾರೆ.

ದ್ವಿತೀಯ : ಸ್ವದೇಶದ ಅನುಷ್ಠಾನದಲ್ಲಿ ತಮ್ಮ ಸದಾನುರಾಗ. . . .

ದುಕಡಿ : ಈ ವಿಷಯವನ್ನೆಲ್ಲ ಬಿಟ್ಟುಬಿಡಿ. . . ನೋಡೋಣ. ಬಂದ ಕೆಲಸ, ಮುಖ್ಯ ಮಾತು ಅದನ್ನಿಷ್ಟು ಸ್ಪಷ್ಟವಾಗಿ ಹೇಳಿಬಿಡಿರಿ. . . .

ದ್ವಿತೀಯ : ನಾವು ಒಂದು ಸಭೆ. . .

ದುಕಡಿ : ಮತ್ತೆ ಸಭೆ?

ದ್ವಿತೀಯ : ಇದು ನೋಡಿ ಪಾವತಿ ಪುಸ್ತಕ.

ದುಕಡಿ : ಪಾವತಿ ಪುಸ್ತಕ! ಯಾವುದರ ಪಾವತಿ ಪುಸ್ತಕ?

ದ್ವಿತೀಯ : ಚಂದಾ ಕೂಡಿಸುವ ಪಾವತಿ ಪುಸ್ತಕ.

ದುಕಡಿ : ಚಂದಾ! ಮತ್ತೆ ಚಂದಾ. (ಕೈಬೀಸಿ ತೂಗುತ್ತ) ಏಳು, ಏಳು. ನಡಿ ಹೊರಗೆ, ನಡಿ ಹೊರಗೆ. ದೇಹದೊಳಗೆ ಪ್ರಾಣ ಉಳಿದರೆ. . .

(ಮರುಮಾತಾಡದೆ ಚಂದಾ ಕೇಳಲು ಬಂದವರು ಹೊರಗೆ ಹೋಗುವಾಗ ಮೂರನೆಯ ವ್ಯಕ್ತಿಯ ಪ್ರವೇಶ.)

ದುಕಡಿ : ನೋಡಿ ಮಹನೀಯರೇ ! ನಮ್ಮ ದೇಶಹಿತೈಷಿ ಸ್ವಭಾವ, ವಿನಯ, ಎಲ್ಲ ಮುಗಿದು ಹೋಗಿವೆ. ಇದರ ಮುಂದೆ ನಿಮಗೇನಾದರೂ ಹೇಳುವುದಿದ್ದರೆ ಹೇಳಬಹುದು. ಹೂ. ಪ್ರಾರಂಭ ಮಾಡಿರಿ.

ತೃತೀಯ : ತಮ್ಮ ಸಾರ್ವಭೌಮೀಕತೆಯು, ಸಾರ್ವಜನರೀಕತೆಯು, ಉದಾರತೆಯು. . . .

ದುಕಡಿ : (ಸ್ವಗತ) ಇದು ಅಡ್ಡಿ ಇಲ್ಲ. ಹೊಸತು ಎಂದು ಏನೋ ಅನಿಸುವಂತಿದೆ. ಇರಲಿ. (ಪ್ರಕಟ) ಮಹನೀಯರೇ, ಗುಣವರ್ಣನೆ ನಿಲ್ಲಿಸಿಬಿಡಿ. ಬಂದ ಕೆಲಸ ಏನು ಅದನ್ನು ಸಂಕ್ಷೇಪವಾಗಿ ಹೇಳಿರಿ. ಆ ಮಾತು ಮೊದಲು ಪ್ರಾರಂಭವಾಗಲಿ.

ತೃತೀಯ : ನಾವು ಒಂದು ವಾಚನಾಲಯ, ಅಂದರೆ ಲಾಯಬ್ರರಿ . . .

ದುಕಡಿ : ಲಾಯಬ್ರರಿ ? ಸಭಾ ಅಲ್ಲ ಹೌದಲ್ಲೊ ಮತ್ತ.

ತೃತೀಯ : ಅಲ್ಲ. ಸಭಾ ಅಲ್ಲ ಬಿಡಿ.

ದುಕಡಿ : ಬದುಕಿದೆ. ಲಾಯಬ್ರರಿ. ವಾಚನಾಲಯ ಅತಿ ಉತ್ತಮ. ಮುಂದೇನು ಹೇಳಿ.

ತೃತೀಯ : ಇಲ್ಲಿ ನೋಡಿ, ಈ ಪ್ರಾಸ್ಪೆಕ್ಟಸ್.

ದುಕಡಿ : ಪಾವತಿ ಪುಸ್ತಕ ಅಲ್ಲ ಹೌದಲ್ಲೊ ಮತ್ತ. ಮುಂದೇನು ಹೇಳಿ.

ತೃತೀಯ : ಛೇ ಛೇ. ಕೈಯಿಂದ ಬರೆಯುವ ಪಾವತಿ ಪುಸ್ತಕ, ಮುದ್ರಿಸಿದ ಕಾಗದ. ಪುಸ್ತಕ.

ದುಕಡಿ : ಆಮೇಲೆ. ಮುಂದೇನು ?

ತೃತೀಯ : ಏನಾರ ತುಸು ಚಂದಾ ?

ದುಕಡಿ : (ಜೋಲಿ ಹೊಡೆಯುತ್ತ) ಚಂದಾ ! ಮತ್ತ ಚಂದಾ ? ನಮ್ಮ ಮನೆಗೆ ಇಂದು ಕಳ್ಳರು ಪ್ರವೇಶಿಸಿದ್ದಾರೆ, ಕಳ್ಳರು. ಪೋಲಿಸ್. ಪೋಲಿಸ್.

(ತೃತೀಯ ವ್ಯಕ್ತಿಯು ಒಂದೇ ಉಸುರಿನಲ್ಲಿ ಓಡಿಹೋಗಲು ಉದ್ಯುಕ್ತನಾದಾಗ ಹರಶಂಕರಬಾಬು ಅವರ ಪ್ರವೇಶ.)

ದುಕಡಿ : ಏ ಬಾರೋ ಬಾ. ಹರಶಂಕರ, ಬಾ ಇಲ್ಲಿ. ಒಂದೇ ಕಾಲೇಜಿನಲ್ಲಿ ಆಗ ಕೂಡಿ ಕಲಿತದ್ದು. ಮುಂದೆ ಒಬ್ಬರ ಭೆಟ್ಟಿ ಇನ್ನೊಬ್ಬರಿಗೆ ಇಲ್ಲ. ನಿನ್ನನ್ನು ನೋಡಿ ತುಂಬ ಸಂತೋಷ ಆಯಿತು. ಇನ್ನೇನು ಹೇಳು.

ಹರಶಂಕರ : ನಿನ್ನೊಂದಿಗೆ ಸುಖದುಃಖದ ಮಾತುಗಳನ್ನು ಬಹಳ ಹೇಳುವುದು ಇದೆ. ಅದೆಲ್ಲ ಆಮೇಲೆ. ಮೊದಲು ನಿನ್ನಿಂದ ಒಂದ ಕೆಲಸ ಆಗಬೇಕಾಗಿದೆ. ಅದರ ಮಾತು ಇಷ್ಟು ಹೇಳತೀನಿ.

ದುಕಡಿ : (ಪುಲಕಿತನಾಗಿ) ಕೆಲಸದ ಮಾತ ಕೇಳದ ಬಹಳ ಹೊತ್ತಾತು. ಹೇಳು ಕಿವಿಗೊಟ್ಟು ಕೇಳುತ್ತೇನೆ. . .

(ಅಷ್ಟರಲ್ಲಿ ಹೊದ್ದುಕೊಂಡಿದ್ದ ಶಾಲಿನೊಳಗಿಂದ ಪಾವತಿ ಪುಸ್ತಕವನ್ನು ಹೊರಗೆ ತೆಗೆದದ್ದನ್ನು ನೋಡಿ.) ಅದೇನದು ? ಪಾವತಿ ಪುಸ್ತಕ ; ನೀನೂ ಒಂದು ಪಾವತಿ ಪುಸ್ತಕ. . .

ಹರಶಂಕರ: ನಮ್ಮ ಸುತ್ತುಮುತ್ತಲಿನ ಓಣಿ ಹುಡುಗರೆಲ್ಲ ಕೂಡಿ ಒಂದು ಸಭಾ. . .

ದುಕಡಿ: (ಆಶ್ಚರ್ಯ ಚಕಿತನಾಗಿ) ನೀನೂ ಒಂದು ಸಭಾ ?

ಹರಶಂಕರ: ಸಭಾನ ಮತ್ತ ಅದಕ್ಕ ಒಂದಿಷ್ಟು ಏನಾರ ಚಂದಾ. . .

ದುಕಡಿ: ಚಂದಾ ? ನೋಡು. ನಿನ್ನೊಂದಿಗೆ ನನ್ನದು ಬಹಳ ದಿನಗಳ ಸ್ನೇಹ. ಆದರೂ ಮೊದಲು ಹೇಳಿಬಿಡುತ್ತೇನೆ. ಇನ್ನೊಮ್ಮೆ ಆ ಶಬ್ದ ನಿನ್ನ ಬಾಯಿಂದ ಬಂತಂದರ ನನ್ನ—ನಿನ್ನ ಆಜನ್ಮ ಬಿಡುಗಡೆ ಆಗಿ ಹೋಗಲಿ. ಮೊದಲೇ ಹೇಳುತ್ತೇನೆ.

ಹರಶಂಕರ: ವಾರೆ ವಾ. ಅದಾವುದೊ ಅನಾಮಧೇಯ ಸಂಬಂಧ ಇಲ್ಲದೆ ಇರುವ "ಗಾನೋನ್ನತಿ" ಸಭೆಗೆ ಐದು ಸಾವಿರ ರೂಪಾಯಿ ದಾನಕೊಡಲಿಕ್ಕೆ ನಿನಗ ಬರುತ್ತದೆ. ಆದರ ನಿನ್ನ ಹಳೇ ಮಿತ್ರ, ಕೂಡಿ ಕಲಿತ ಮಿತ್ರ, ಕೂಡಿ ಆಡಿದ ಬಂಧು, ಬಂದರ, ಐದು ರೂಪಾಯಿ ಕೊಡಲಿಕ್ಕೆ ಕೈ ಮುಂದಬರಲಿಲ್ಲ ನಿನಗೆ. ಇಂತಹ ಪಾಷಂಡ ನರಾಧಮನ ಮನೆಗೆ ಇನ್ನೊಮ್ಮೆ ಕಾಲು ಯಾರ ಹಾಕ ತಾರೆ ಕಾಲು. (ವೇಗದಿಂದ ಹೊರಗೆ ಹೋಗಬೇಕೆನ್ನುವಷ್ಟರಲ್ಲಿ ಪಾವತಿ ಪುಸ್ತಕ ಹಿಡಿದ ಇನ್ನೊಬ್ಬವ್ಯಕ್ತಿಯ ಪ್ರವೇಶ).

ದುಕಡಿ: ಪಾವತಿ ಪುಸ್ತಕ! ಮತ್ತೆ ಪಾವತಿ ಪುಸ್ತಕ! ನಡಿ ಹೊರಗೆ. ಹೊರಗೆ ನಡಿ ಅಂದೆ.

ಪಾವತಿವ್ಯಕ್ತಿ: (ಭಯಗೊಂಡು) ನಾನು ನಂದಲಾಲ ಬಾಬು ಅವರ . . . . .

ದುಕಡಿ: ನಂದಲಾಲ ಗಿಂದಲಾಲ ನನಗೇನೂ ಗೊತ್ತಿಲ್ಲ. ಹೊರಗೆ ನಡಿ ಅಂದೆ.

ಪಾ. ವ್ಯಕ್ತಿ: ಅಲ್ಲ ರಾಯರೇ, ನಮ್ಮ ಆ ರೂಪಾಯಿ.

ದುಕಡಿ: ನನಗ ರೂಪಾಯಿ ಕೊಡಲಿಕ್ಕೆ ಸಾಧ್ಯವಿಲ್ಲ.
ಹೊರಗೆ ನಡಿ. ನಡಿ ಹೊರಗೆ.

ಕಾರಕೂನ: ರಾಯರು ಏನ ಮಾಡಿದಿರಿ? ನಂದಲಾಲ ಬಾಬು ಅವರಿಂದ ಕೈಗಡ ರೂಪಾಯಿ ತಂದದ. ಇಂದ ಆ ರೂಪಾಯಿ ತಿರುಗಿ ಕೊಡದೆ ಇದ್ದರ ನಡಿಯೋದಿಲ್ಲ.

ದುಕಡಿ: ಎಂತಹ ಘಾತವಾಯಿತಲ್ಲಾ. ಈಗೇನು ಮಾಡುವುದು? ಕರೆ ಅವನನ್ನು. ಬೇಗ ಕರೆ ಅವನನ್ನು.

(ಕಾರಕೂನ ಹೊರಗೆ ಹೋಗಿ ತುಸು ತಡೆದು ಪ್ರವೇಶಿಸಿ)

ಕಾರಕೂನ: ಅವನು ಹೋಗಿ ಬಿಟ್ಟಿದ್ದಾನೆ. ಕರೆದುಕೊಂಡು ಬರಲು ಸಾಧ್ಯವಿಲ್ಲ; ಸಾಧ್ಯವಾಗಲಿಲ್ಲ.

ದುಕಡಿ: (ಸ್ವಗತ) ಮತ್ತೆ ಏನೋ ವಿಪತ್ತು ಬಂತು ಅಂತ ತೋರುತ್ತದೆ.

(ಕೈಯಲ್ಲಿ ತಂಬೂರಿ ತೆಗೆದುಕೊಂಡು ಒಬ್ಬ ವ್ಯಕ್ತಿಯ ಪ್ರವೇಶ)

(ಪ್ರಕಟ) [ಹೊಸ ವ್ಯಕ್ತಿಯನ್ನುದ್ದೇಶಿಸಿ]

ಏನು ಬೇಕು ನಿಮಗೆ?

ತಂಬೂರೀವ್ಯಕ್ತಿ : ನಿಮ್ಮಂತಹ ರಸಿಕರು ಇನ್ನಾರು ಇದ್ದಾರೆ?
ಗಾಯನದ ಉನ್ನತಿಗಾಗಿ ನೀವು ಏನು ಮಾಡಲಿಕ್ಕಿಲ್ಲ? ನಿಮಗೆ ನಾನು ಈಗ ಹಾಡು ಕೇಳಿಸಲಿಕ್ಕೆ ಬಂದಿದ್ದೇನೆ. ಹಾಡು ಹಾಡಿ ತೋರಿಸುತ್ತೇನೆ.

(ಕೂಡಲೇ ತಂಬೂರಿಯನ್ನು ಮೀಟಿ ಹಾಡಲು ಪ್ರಾರಂಭಿಸುವನು)

(ಯಮುನ ಕಲ್ಯಾಣ ರಾಗದಲ್ಲಿ)

ಜಯ ಜಯ ದುಕಡೀ ದತ್ತ
ಜಗದಲಿ ನೀನತಿ ಮಹತ್ತ್ವ (ಇತ್ಯಾದಿ)

ದುಕಡಿ : ಏ ಏ ಏ ಏ ಮಹಾರಾಯಾ. ಎಂಥಾ ವಿಪತ್ತು ತಂದೆ ನೀನು. ಸಾಕು. ಸಾಕುಮಾಡು ನಿನ್ನ ಹಾಡು. ನಿಲ್ಲಿಸು ಅದನ್ನು ಮೊದಲು.

(ತಂಬೂರಿಯೊಂದಿಗೆ ಎರಡನೇ ವ್ಯಕ್ತಿಪ್ರವೇಶ)

೨ನೇವ್ಯಕ್ತಿ : ಅವನಿಗೆಲ್ಲಿ ಸಂಗೀತ ಬರುತ್ತದೆ? ಅವನೇನು ಹಾಡುತ್ತಾನೆ? ನಾನು ಹಾಡುತ್ತೇನೆ. ಇದನ್ನು ಕೇಳಿರಿ.
ದುಕಡಿ ದತ್ತ ನೀ ಬಲು ಧನ್ಯ
ನಿಮ್ಮ ಮಹಿಮೆ ಕಾಣರು ಅನ್ಯ

೧ನೇ ವ್ಯಕ್ತಿ : ಜಯ ಅ. ಅ. ಜ-ಜ-ಅ-ಅ-ಅ-ಅ-ಯ

೨ನೇ ವ್ಯಕ್ತಿ : ದು-ಉ-ಉ-ಉ-ಉ-ಉ-ಕಡಿ—ಇ ಇ-

೧ನೇ ವ್ಯಕ್ತಿ : ದುಕ-ಅ-ಅ-ಅ-ಅ. . . .

ದುಕಡಿ : (ಕಿವಿಯಲ್ಲಿ ಬೆರಳಿರಿಸಿಕೊಂಡು) ಓ ಸತ್ತೆ! ನಾ ಸತ್ತೆ!

(ಡಗ್ಗಾ ತಬಲಾ ತೆಗೆದುಕೊಂಡು ವಾದ್ಯಬಾರಿಸುವವರ ಪ್ರವೇಶ)

ವಾದಕ : ಪಕ್ಕವಾದ್ಯ ಇಲ್ಲದೆ ಸಂಗೀತವೇ ಇಲ್ಲ. ಅದು ಹೇಗೆ ಸರಿ ಹೋದೀತು. ಪಕ್ಕವಾದ್ಯ ಬೇಕೇ ಬೇಕು.

(ತಬಲಾಬಾರಿಸ ಹತ್ತುವನು. ಮತ್ತೊಬ್ಬ ವಾದ್ಯದವನ ಪ್ರವೇಶ)

೨ನೇ ವಾದಕ : ಅವನೀಗೇನು ಬಾರಿಸಲಿಕ್ಕೆ ಬರುತ್ತದೆ? ಒಳ್ಳೇ ಬರುವವರ ಹಾಗೆ ಬಾರಿಸುತ್ತಿದ್ದಾನೆ. ಅವನಿಗೆ ತಬಲಾ ಹಿಡಿಯಲಿಕ್ಕೆ ಕೂಡ ಬರುವುದಿಲ್ಲ.

೧ನೇ ವ್ಯಕ್ತಿ : ಏ ಹುಚ್ಚಾ. ನಿಲ್ಲಿಸು ನೀನು ಹಾಡುವುದನ್ನು.

೨ನೇ ವ್ಯಕ್ತಿ : ನೀನು ನಿಲ್ಲಿಸು. ಏಕೆ? ಹೇಗೆ ಕಾಣುತ್ತದೆ?

೧ನೇ ವ್ಯಕ್ತಿ : ನಿನಗೇನು ಭಾರಿ ಸಂಗೀತ ಬರುತ್ತದೆ ಅಂತ ಜಂಭಾ. . . .

೨ನೇ ವ್ಯಕ್ತಿ : ನಿನಗೆ ಬಹಳ ತಿಳಿಯುತ್ತದಲ್ಲ?

(ಇಬ್ಬರ ನಡುವೆ ಜಗಳ, ತರ್ಕ, ಬೈಗಳ, ಕೊನೆಗೆ ತಂಬೂರಿ ತಂಬೂರಿ ಹೊಡೆದಾಟ. ಇಬ್ಬರ ಬಾಯಿಂದ ತಬಲಾದ ಬೋಲ್ : ಧೈಕೆಟೆ ದೆಧೆ ಘೆನೆ ಗೇನೆ ಘೇನೆ. ಕೊನೆಗೆ ತಬಲಾ ಬಾರಿಸುವವರಲ್ಲಿ ಜಗಳ. ಗುಂಪು ಗುಂಪಾಗಿ ಗಾಯಕರೆಲ್ಲರೂ ಉಳಿದವರೆಲ್ಲರ, ಒಂದಾಗಿ)

ಪ್ರಥಮ : ರಾಯರೇ, ಸಂಗೀತ . . .

ದ್ವಿತೀಯ : ರಾಯರೇ, ಚಂದಾ . . .

ತೃತೀಯ : ರಾಯರೇ, ಸಭಾ . . .

ಚತುರ್ಥ : ರಾಯರೇ, ನಿಮ್ಮ ಪ್ರಸಿದ್ಧಿ . . .

ಪಂಚಮ : ರಾಯರೇ, ಯಮುನ ಕಲ್ಯಾಣ ರಾಗ . . .

ಷಷ್ಠಮ : ರಾಯರೇ, ದೇಶದ ಕಲ್ಯಾಣ ?

ಸಪ್ತಮ : ರಾಯರೇ, ಸರಿಗಮ ಧಪಾ . . .

ಅಷ್ಟಮ : ಏ, ನೀನು ತುಸು ನಿಲ್ಲಿಸು, ಕೈಮುಗಿಯುತ್ತೇನೆ. ಬಾಯಿ ಮುಚ್ಚು.

ನವಮ : ನನ್ನ ಮಾತುಗಳನ್ನು ನಾನು ಏನೂ ಹೇಳೇ ಇಲ್ಲ. ಎಲ್ಲರೂ ತುಸು ಬಾಯಿ ಮುಚ್ಚಿ ಸುಮ್ಮನಿರಿ.

(ಎಲ್ಲರೂ ಸೇರಿ ದುಕಡಿ ಅವರ ಧೋತರ ಅಂಗಿ ಹಿಡಿದು ಎಳೆದಾಟ. ನನ್ನ ಮಾತ ಕೇಳಿ, ನನ್ನ ಮಾತ ಕೇಳಿ ಅಂತ ಕಿರಿಚಾಟ).

ದುಕಡಿ : (ಕಾತುರದಿಂದ ಕಾರಕೂನನನ್ನು ಕುರಿತು) ನಾನು ಇನ್ನು ಮೇಲೆ ನಮ್ಮ ಊರಿಗೆ ಹೋಗುತ್ತೇನೆ. ಕೆಲವು ದಿನ ಅಲ್ಲಿಯೇ ಇರುತ್ತೇನೆ. ಯಾರಿಗೂ ನಾನು ಎಲ್ಲಿ ಹೋದೆ, ಎಲ್ಲಿ ಇದ್ದೀನಿ, ಇದನ್ನು ಗೊತ್ತು ಹಚ್ಚಿಕೊಡಬೇಡ.

(ಹೋಗುವನು)

(ಮನೆಯಲ್ಲಿ ಇಡೀ ದಿನ ಗಾಯಕರ, ವಾದಕರ ಕುರುಕ್ಷೇತ್ರ—ಯುದ್ಧ. ವಾದ. ತರ್ಕ. ಇವರೆಲ್ಲರಿಗೂ ಸಮಾಧಾನ ಹೇಳಲು ಪ್ರಯತ್ನಿಸಿದ ಕಾರಕೂನ ಸ್ಮೃತಿ ತಪ್ಪಿ ಬೀಳುವನು).

21. ತಾಲವೃಕ್ಷ

ತಾಲವೃಕ್ಷ ಒಂದೆ ಕಾಲ ಮೇಲೆ ನಿಂತು
ಜೊತೆಯ ಗಿಡವನೆಲ್ಲ ಬಿಟ್ಟು
ಆಕಾಶಕೆ ಹಾರಿದೆ!

ಮನದಿ ನೆನಸಿ ಕಪ್ಪು ಮೋಡ ಸೀಳಿಕೊಂಡು
ನೇರವಾಗಿ ಹಾರಲದಕೆ
ರೆಕ್ಕೆ ಎಲ್ಲಿ ಸಿಕ್ಕಿವೆ!

ಇರಲುಬಹುದು ತಲೆಯಂತೆಯೆ ಕಂಡುಬರುವ
ಎಲೆಗಳಲ್ಲಿ ಅದರ ಬಯಕೆ
ಕಲೆತುಕೊಂಡು ಅಡಗಿವೆ.

ಮನಸಿನಲ್ಲೆ ಮುಗುದೆಯಂತೆ ತನ್ನ ಮನೆಯ
ಬಿಟ್ಟುಬರುವ ಎಣಿಕೆಯನ್ನು
ಹಾಕಿಕೊಂಡೆ ನಿಂತಿದೆ.

ಹಗಲು ರಾತ್ರಿ ಗರಿಗಳೆಲ್ಲ ಗಾಳಿಯಲ್ಲಿ
ಅಲಗುತಿಹವು ಬಿಟ್ಟುಬಿಡದೆ
ಸಿಕ್ಕಕಡೆಗೆ ಓಡುವಂತೆ.

ಮನಸುಮಾಡಿ ಆಕಾಶವ ಸುತ್ತಿಕೊಂಡು
ದಿಕ್ಕೆಲ್ಲವ ತಬ್ಬಿ ಮತ್ತೆ
ಎಲ್ಲೊ ಏನೊ ಹೊರಟಿವೆ.

ಕೊನೆಗೆ ದಣಿದು ಮತ್ತೆ ಮರಳಿ ಇದ್ದಲ್ಲಿಗೆ
ಬಂದು ಅಲುಗದಂತೆ ಬಿದ್ದು
ನೆಲವನಿಣಿಕಿ ನೋಡುತಿವೆ.

ಶಾಂತವಾಗಿ ಭೂಮಿ ತನ್ನ ತಾಯಿಯೆಂದು
ಅದನೆ ಬಿಗಿದು ಅಪ್ಪಿಕೊಂಡು
ಮಲಗಿ ನಿದ್ದೆ ಗೈಯ್ಯುತಿವೆ.

22. ಶಿಕ್ಷಣದ ಪ್ರಾರಂಭ

ನಾವು ಮೂವರು ಕೂಡಿ ದೊಡ್ಡವರಾಗುತ್ತಿದ್ದೆವು. ನನ್ನ ಜೊತೆಗಾರರಿಬ್ಬರೂ ನನಗಿಂತ ಒಂದೆರಡು ವರ್ಷ ಹಿರಿಯರಾಗಿದ್ದರು. ಗುರುಗಳ ಬಳಿ ಅವರಿಬ್ಬರ ಶಿಕ್ಷಣವು ಪ್ರಾರಂಭವಾದ ದಿನದಿಂದಲೇ ನನ್ನ ಶಿಕ್ಷಣವೂ ಕೂಡ ಪ್ರಾರಂಭವಾಗಿತ್ತು. ಆದರೆ ಅದಾವುದೂ ನನಗೆ ಈಗ ನೆನಪಿರಲಿಲ್ಲ.

ಈಗ ನೆನಪಿಗೆ ಬಂದಿರುವ ಒಂದೇ ಒಂದು ಮಾತೆಂದರೆ "ಜಿಟಿಜಿಟಿ ಮಳೆಯು; ಪಟಪಟ ಎಲೆಯು" ಎಂಬ ಕವಿತೆಯ ಎರಡು ಸಾಲುಗಳು ಮಾತ್ರ. ಅಂದು ಗುರುಗಳು ಈ ಕವಿತೆಯನ್ನು ಹೇಳಿಕೊಡುತ್ತಿದ್ದರು. ನನ್ನ ಜೀವನದ ಮೇಲೆ ಪ್ರಥಮ ಪ್ರಭಾವ ಬೀರಿದ ಕವಿತೆಯೆಂದರೆ ಆದಿಕವಿಯ ಈ ಕವಿತೆ. ಅಂದಿನ ನನ್ನ ಆನಂದ ಇಂದಿಗೂ ನೆನಪಿಗೆ ಬಂದು ಕವಿತೆಯಲ್ಲಿ ಪ್ರಾಸದ ಪ್ರಯೋಜನ ಇಷ್ಟು ಏಕೆ ಎಂದು ಅನಿಸುತ್ತಿದೆ. ಪ್ರಾಸ ಇದ್ದರಾಯಿತು; ಕವಿತೆ ಮುಗಿದರೂ ಮುಗಿದಿಲ್ಲವೆಂಬಂತೆ ಅನಿಸುತ್ತದೆ. ಕವಿತೆಯಲ್ಲಿ ಏನು ಹೇಳಿದೆಯೊ ಅದು ಮುಗಿದರೂ ಆ ಕವಿತೆಯ ನಾದ ತಲೆತುಂಬ ತುಂಬಿರುತ್ತದೆ. ಅದು ಮುಗಿದಿರುವುದಿಲ್ಲ. ಪ್ರಾಸ ಕಿವಿಗಳ ಜೊತೆಗೆ, ಮನಸ್ಸಿನ ಜೊತೆಗೆ, ತನ್ನ ಆಟವನ್ನು ಸದಾ ನಡಿಸಿಯೇ ಇರುತ್ತದೆ. ಅಂದು ಇಡೀ ದಿನ ಈ ಕವಿತೆಯ ನಾದವೇ ಇತ್ತು. "ಜಿಟಿಜಿಟಿ ಮಳೆಯು, ಪಟಪಟ ಎಲೆಯು :" ಅದೆಷ್ಟು ಸಲ ಈ ಎರಡು ಸಾಲುಗಳನ್ನು ಅಂದುಕೊಂಡೆನೋ ನೆನಪಿಲ್ಲ. ನನ್ನ ಜೀವನದ ಝರಿಯೇ ಮೇರೆವರಿದು ಹರಿದು ನನ್ನೆಲ್ಲ ದೇಹವನ್ನು ತುಂಬಿ ಚೈತನ್ಯ ಮಯವಾಗಿ ಮಾಡಿದಂತೆ ನನಗಂದು ಪರಿಣಮಿಸಿತು. ನನ್ನೊಳಗೂ ಮಳೆ ಬೀಳುವಂತೆ, ಎಲೆಗಳು ಕುಣಿದಂತೆ ಅನಿಸುತ್ತಿತ್ತು.

ಇದೇ ರೀತಿ ಇನ್ನೂ ಒಂದು ನನ್ನ ಬಾಲ್ಯದ ಪ್ರಸಂಗ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ನಮ್ಮಲ್ಲಿ ಒಬ್ಬ ಕೋಶಾಧಿಕಾರಿ ಬಹಳ ದಿನಗಳಿಂದ ಇರುತ್ತಿದ್ದ. ಅವರ ಹೆಸರು ಕೈಲಾಸ ಮುಖರ್ಜ್ಯೆ ಎಂದಿತ್ತು. ಅವರು ನಮ್ಮ ಮನೆಯವರಾಗಿ, ಆತ್ಮೀಯರಾಗಿ ಇದ್ದರು. ತುಂಬಾ ರಸಿಕ ಮನುಷ್ಯ. ಎಲ್ಲರೊಂದಿಗೆ ನಗುತ್ತ, ಕೆಲೆಯುತ್ತ ಇರುತ್ತಿದ್ದರು. ಹೊಸದಾಗಿ ನಮ್ಮ ಮನೆಗೆ ಬರುತ್ತಿದ್ದ ಅಳಿಯಂದಿರನ್ನು ಕುರಿತು ಇಲ್ಲದ ಕುಚೇಷ್ಟೆ ಮಾಡುತ್ತಿದ್ದರು. ಸಾವಿನೊಂದಿಗೆ ಕೂಡ ಸರಸವಾಡುತ್ತಿದ್ದರೆಂದು ಖ್ಯಾತಿ ಇತ್ತು.

ನಮ್ಮ ಹಿರಿಯರೆಲ್ಲ ಸೇರಿ ಪರಲೋಕದಲ್ಲಿರುವ ನಮ್ಮ ವಂಶಜರೊಂದಿಗೆ ಪ್ಲ್ಯಾಂಚೇಟ್ ಮುಖಾಂತರ ಸಂಪರ್ಕ ಹಚ್ಚಿಕೊಳ್ಳುವ ಪ್ರಯತ್ನದಲ್ಲಿದ್ದರು. ಇದು

ಆಗಾಗ ನಮ್ಮ ಮನೆಯಲ್ಲಿ ನಡೆಯುವ ಕಾರ್ಯಕ್ರಮವಾಗಿತ್ತು. ಒಂದು ದಿನ ಅವರು ಪ್ಲ್ಯಾಂಚೆಟ್ ಹಿಡಿದು ಕುಳಿತಾಗ ಆ ಪ್ಲ್ಯಾಂಚೆಟ್ಟಿನ ಪೆನ್ಸಿಲಿನಿಂದ ಕೈಲಾಸ ಮುಖ ಜ್ಯೆರ ಹೆಸರು ಬರೆದದ್ದು ಕಂಡುಬಂತು. "ನೀನು ಎಲ್ಲಿರುವೆ? ಅಲ್ಲಿಯ ವ್ಯವಸ್ಥೆ ಹೇಗೆ ಇದೆ?" ಎಂದು ಇನ್ನೊಂದು ಪ್ರಶ್ನೆ ಕೇಳಲಾಗಿ "ನಾನು ಸತ್ತಮೇಲೆ ಯಾವುದನ್ನು ತಿಳಿದುಕೊಂಡೆನೋ ಅದನ್ನು ನೀನೀಗ, ಇನ್ನೂ ಸಾಯದೆ ಜೀವಿಸಿರುವಾಗ ತಿಳಿದು ಕೊಳ್ಳಬೇಕೆನ್ನುವಿಯಾ? ಅದು ಸಾಧ್ಯವಿಲ್ಲ" ಎಂದು ಉತ್ತರ ಬಂತು.

ಈ ಕೈಲಾಸ ಮುಖಜ್ಯೆ ಅವರೇ ನನ್ನ ಬಾಲ್ಯದಲ್ಲಿ ನಾನಾ ರೀತಿಯಾಗಿ ಚೇಷ್ಟೆ ಮಾಡುತ್ತ ನನ್ನ ಮನರಂಜಿಸುತ್ತ ಇದ್ದ ನೆನಪು ನನಗೆ ಈಗಲೂ ಇದೆ. ಚೇಷ್ಟೆಗೆ ಮೊನೆ ಇತ್ತಲ್ಲದೆ ಮಾತಿಗೊಂದು ಆವೇಗವೂ ಇತ್ತು. ಇವರ ವಿನೋದವೆಲ್ಲ ನನ್ನನ್ನು ಉದ್ದೇಶಿಸಿ ಮಾಡಿದ ವಿನೋದವಾಗಿತ್ತು. ನಾನೇ ಅವರ ಮುಖ್ಯ ನಾಯಕ. ನನ್ನನ್ನು ಪ್ರೀತಿಸಿ, ಒಲಿಸಿ ಮುಂದೆ ಎಂದೋ ಒಂದು ದಿನ ನಮ್ಮ ಮನೆಗೆ ಬರುವ ವಧು ಇವರ ಕಲ್ಪನೆಗೆ ಸ್ಫೂರ್ತಿದಾಯಕಳಾಗಿದ್ದಳು. ಅವಳು ಭುವನಮನಮೋಹಿನಿ, ಅತಿ ಸುಂದರಿ ಯಾಗಿದ್ದಳು. ಅವಳು ನಮ್ಮ ಮನೆಯಲ್ಲಿ ನಡೆಯುವ ಆ ನಡಿಗೆಯನ್ನು ಊಹಿಸಿ ಅದಕ್ಕೆ ತಮ್ಮಿಂದಾದ ಬಣ್ಣ ಕೊಟ್ಟು "ಕೂತರೊಂದು ಚೆಂದ, ನಿಂತರೊಂದು ಚೆಂದ" ಎಂದು ನಿತ್ಯ ವರ್ಣಿಸುತ್ತಿದ್ದರು. ಈ ವರ್ಣನೆಯಲ್ಲಿಯೇ ನನ್ನನ್ನು ಕುರಿತು ಹಾಸ್ಯ ಮಾಡುವ ಅವರ ಚಪಲವೂ ಅವರಲ್ಲಿ ಸದಾ ಕಂಡುಬರುತ್ತಿತ್ತು.

ಇವರ ಮಾತಿನಲ್ಲಿ ಲಯವಿತ್ತು. ಪ್ರಾಸಬದ್ಧ ಶಬ್ದ ಪ್ರಯೋಗವೂ ಸಾಕಷ್ಟು ಹೆಚ್ಚಾಗಿ ಕಂಡುಬರುತ್ತಿತ್ತು. ನನ್ನ ವಧುವಿನ ವರ್ಣನೆ ಇವರ ಬಾಯಿಂದಲೇ ಕೇಳ ಬೇಕು. ಆಪಾದಮಸ್ತಕ ಅವಳು ಇಟ್ಟುಕೊಂಡ ಆಭರಣ, ತೊಟ್ಟುಕೊಂಡ ಬಟ್ಟೆ, ಭಾರಿ ಜರತಾರಿ ಪೀತಾಂಬರ, ಕಾಮನಬಿಲ್ಲಿನ ಬಣ್ಣ, ಕಣ್ಣುಗಳಲ್ಲಿ ಆಗಾಗ ಕಂಡು ಬರುವ ಮಿಂಚು, ಮಾತುಗಳಲ್ಲಿಯ ಗುಡುಗು. ತನ್ನ ನಿಯನನ್ನು ಕಾಣುವುದು ಕ್ಷಣ ಕೂಡ ತಡವಾದರೆ ಕೂಡಲೇ ಕಣ್ಣಲ್ಲಿ ಕಾಂಬ ಕಂಬನಿ ಇತ್ಯಾದಿ ಅತಿ ರಂಜಿತ ಅವರ ವರ್ಣನೆಗಳು ಪ್ರೌಢ ಯುವಕರ ಮೇಲೆ ಒಂದು ರೀತಿ ಪರಿಣಾಮ ಮಾಡು ತ್ತಿದ್ದರೆ ನನ್ನ ಬಾಲ ಮನಸ್ಸಿನ ಮೇಲೆ ಮಾಡುತ್ತಿದ್ದ ಪರಿಣಾಮದ ರೀತಿ ಬೇರೆಯೇ ಆಗಿತ್ತು.

ನನಗೆ ಆ ಮಾತುಗಳೆಲ್ಲ ಸಾಹಿತ್ಯವಾಗಿ ಪರಿಣಮಿಸಿ, ಉಚಿತ ಶಬ್ದಪ್ರಯೋಗ ದಿಂದ ಮನಸ್ಸಿನ ಮೇಲೆ ಅದೆಷ್ಟು ಗಾಢವಾದ ಪ್ರಭಾವವನ್ನು ಅವು ಬೀರುತ್ತಿದ್ದ ವೆಂದು ನಾನು ಈಗಲೂ ನೆನಪಿಸಿಕೊಳ್ಳಬಲ್ಲೆ. ಅದೆಲ್ಲ ನನ್ನ ಬಾಲ್ಯದ ಮೇಘದೂತ ಕಾವ್ಯ. ಚಿಕ್ಕವನಿರುವಾಗಲೇ ಸಾಹಿತ್ಯದ ಸವಿಯನ್ನು ಕಂಡುಕೊಳ್ಳಲು ನನಗೆ ಸಾಧ್ಯವಾಯಿತು. "ಬೃಷ್ಟಿಪಡೆ ಟಾಪೂರ ಟುಪುರ. ನದೇಯು ಎಲೊ ಬಾನ್"* ಇತ್ಯಾದಿ ನನ್ನ ವರ್ಣನಪರ ಕವಿತೆಗಳಿಗೆ ಇದೆ ಉಗಮಸ್ಥಳವಾಯಿತು.

ನೆನಪಿಗೆ ಬರುವ ನಂತರದ ಪ್ರಸಂಗವೆಂದರೆ ನಾನು ಶಾಲೆಗೆ ಹೋದ ಮೊದಲ ದಿನ. ಅಂದು ನನ್ನಅಣ್ಣ ಹಾಗೂ ಅಕ್ಕನಮಗ ನನಗಿಂತ ಹಿರಿಯ ಸತ್ಯ ಶಾಲೆಗೆ

* ಮಳೆ ಬೀಳಲು ತಟತಟ ನೀರೇರಿತು ಚಟಚಟ.

ಹೋದುದನ್ನು ನಾನು ನೋಡಿದೆ. ಆದರೆ ನಾನಂದು ಶಾಲೆಗೆ ಹೋಗಲು ಯೋಗ್ಯನೆಂದು ಗಣಿಸಲ್ಪಡಲಿಲ್ಲ. ಇನ್ನೂ ಚಿಕ್ಕವನಾಗಿದ್ದೆ. ದೊಡ್ಡದನಿ ತೆಗೆದು ಅತ್ತು ನನ್ನ ಯೋಗ್ಯತೆಯನ್ನು ಪ್ರಕಟಿಸುವುದನ್ನು ಬಿಟ್ಟರೆ ಬೇರೆ ಉಪಾಯವೇ ನನಗೆ ಇರಲಿಲ್ಲ.

ಇದಕ್ಕೂ ಮೊದಲು ನಾನೆಲ್ಲಿಗೂ ಮನೆಬಿಟ್ಟು ಹೊರಗೆ ಹೋಗಿರಲೇ ಇಲ್ಲ. ಗಾಡಿಯಲ್ಲಿ ಕುಳಿತಿರಲೂ ಇಲ್ಲ. ನನ್ನ ಅಕ್ಕನಮಗ ಸತ್ಯ ತಾನು ಶಾಲೆಗೆ ಹೋಗುವ ದಾರಿಯ ವೃತ್ತಾಂತವನ್ನು ಅತಿಶಯೋಕ್ತಿ ಅಲಂಕಾರಗಳಿಂದ ವರ್ಣನೆಮಾಡಿ ಮೈನವಿರೇಳುವಂತೆ ಹೇಳಿದ್ದನ್ನು ಕೇಳಿದಮೇಲೆ ನನಗೆ ಮನೆಯಲ್ಲಿರುವುದೇ ಸಾಧ್ಯವಾಗಲಿಲ್ಲ. ಮನೆಯೊಳಗಿನ ಯಾವ ವಸ್ತುವಿನಲ್ಲೂ ನನ್ನ ಮನಸ್ಸಾಗಲಿಲ್ಲ. ಮನೆಯ ಆಕರ್ಷಣವೇ ನನಗೆ ಆಗ ಉಳಿಯಲಿಲ್ಲ. ಶಾಲೆಗೆ ಹೋಗುವುದರ ವಿಷಯವಾಗಿ ನನ್ನಲ್ಲಿದ್ದ ಉತ್ಸುಕತೆಯನ್ನು ಕಡಿಮೆ ಮಾಡುವುದಕ್ಕೆಂದು ಮನೆಯಲ್ಲಿಯೇ ನನಗೆ ಪಾಠ ಹೇಳುತ್ತಿದ್ದ ಶಿಕ್ಷಕರು ಶಾಲೆಯಲ್ಲಿ ಬೆತ್ತದ ಹೊಡೆತ ಬೀಳುತ್ತವೆಂದು ಭಯಾನಕ ಕತೆಯನ್ನೇ ಕಟ್ಟಿ ನನಗೆ ಹೇಳಿದ್ದರು. "ಈಗ ಶಾಲೆಗೆ ಹೋಗುವದಕ್ಕಿಂತ ಮನೆಯಲ್ಲೇ ಕಲಿಯುವುದು ಒಳಿತೆಂದೂ, ಶಾಲೆಗೆ ಹೋಗಲು ಈಗ ಅಳುವುದಕ್ಕಿಂತ ಹೆಚ್ಚು ನಾಳೆ ಹೋಗದೆ ಇರುವುದಕ್ಕೆ ಅಳಬೇಕಾಗುತ್ತದೆ" ಎಂದೂ ನನ್ನ ಬಾಲ ಮನಸ್ಸಿನ ಮೇಲೆ ಬಿಂಬಿಸುವುದೇ ನನ್ನ ಶಿಕ್ಷಕರ ಉದ್ದೇಶವಾಗಿತ್ತು.

ಈ ಶಿಕ್ಷಕರು ಹೇಗಿದ್ದರು? ಇವರ ಹೆಸರೇನಿತ್ತು? ಇವರ ಆಕೃತಿ, ಇವರ ಪ್ರಕೃತಿ ಇದಾವುದೂ ನನ್ನ ಮನದಲ್ಲಿ ಉಳಿದಿಲ್ಲ. ಆದರೆ ಮೇಲಿನ ಗುರುವಾಕ್ಯವೊಂದು ಮಾತ್ರ ಅಚ್ಚೊತ್ತಿದಂತೆ ಉಳಿದಿದೆ. ಇದಕ್ಕೂ ಹೆಚ್ಚು ಆಳವಾಗಿ ಬೆತ್ತದ ಹೊಡೆತ ಎಂಬ ಮಾತುಗಳು ನನ್ನ ಮನದಲ್ಲಿ ನೆಟ್ಟು ಹೋಗಿವೆ. ಈ ಬಗೆಯ ವ್ಯರ್ಥವಲ್ಲದ ಭವಿಷ್ಯತ್ ವಾಣಿಯು ನನ್ನ ಜೀವನದಲ್ಲಿ ಬೇರಾವ ಪ್ರಸಂಗದಲ್ಲಿಯೂ ನನ್ನ ಕಿವಿಯ ಮೇಲೆ ಬಿದ್ದಿಲ್ಲ.

ಕೊನೆಗೆ ನಾನು ರೋದನದ ಬಲದಿಂದಲೇ ಜಯಸಂಪಾದಿಸಿದೆ. "ಓರಿಯಂಟಲ್ ಸೆಮಿನಾರ" ಎಂಬ ಶಾಲೆಯಲ್ಲಿ ಅಕಾಲದಲ್ಲಿಯೇ ನಾನು ಸೇರಿಕೊಂಡೆ. ಅಲ್ಲಿ ಅದಾವ ಶಿಕ್ಷಣಲಾಭ ಪಡೆದೆನೊ ನೆನಪಿಲ್ಲ. ಆದರೆ ಶಾಸನಪ್ರಣಾಲಿಯ ಒಂದು ಪ್ರಸಂಗ ಮಾತ್ರ ಸಂಪೂರ್ಣ ನೆನಪಿನಲ್ಲಿ ಉಳಿದಿದೆ.

ಪಾಠ ಸರಿಯಾಗಿ ಒಪ್ಪಿಸದ ವಿದ್ಯಾರ್ಥಿಗಳನ್ನು ಬೆಂಚಿನ ಮೇಲೆ ನಿಲ್ಲಿಸಿ, ಎರಡೂ ಕೈಗಳನ್ನು ಮುಂದೆ ಚಾಚಲು ಹೇಳಿ, ಆ ಕೈಗಳ ಮೇಲೆ ಉಳಿದ ವಿದ್ಯಾರ್ಥಿಗಳ ಸ್ಲೇಟುಗಳನ್ನೆಲ್ಲ ಸಂಗ್ರಹಿಸಿ ಹೇರಿ ಕೈ ಬಿಡುತ್ತಿದ್ದರು. ಇದರಿಂದ ಚಿಕ್ಕ ಮಕ್ಕಳ ಮನಸಿನ ಮೇಲೆ ಅದಾವ ಪರಿಣಾಮ ಆಗುತ್ತದೆಂಬುದನ್ನು ಕಂಡು ಹಿಡಿಯುವುದು ಮಾನಸ ಶಾಸ್ತ್ರಜ್ಞರ ಪಾಲಿಗೆ ಸೇರಿದ್ದು.

ಈ ರೀತಿ ತೀರ ಚಿಕ್ಕ ವಯಸ್ಸಿನಲ್ಲಿಯೇ ನನ್ನ ಶಿಕ್ಷಣ ಪ್ರಾರಂಭವಾಯಿತು. ನಮ್ಮ ಮನೆಯಲ್ಲಿ ಕೆಲಸಮಾಡಲು ಅನೇಕ ಜನರಿದ್ದರು. ಅವರಿಗಾಗಿ ಪ್ರತ್ಯೇಕ ಮನೆಯೇ ಇತ್ತು. ಕೆಲಸಗಾರರ ಈ ಮಹಲಿನಲ್ಲಿ ಕಾಲ ಕಾಲಕ್ಕೆ ದೊರೆಯುತ್ತಿದ್ದ ಪುಸ್ತಕಗಳೇ ನಮ್ಮ ಸಾಹಿತ್ಯ ಚರ್ಚೆಗೆ ಆಧಾರವಾಗಿದ್ದವು. ಇವುಗಳ

ಜೊತೆಗೆ ಚಾಣಕ್ಯ ಶ್ಲೋಕಗಳ ಬಂಗಾಲಿ ಅನುವಾದಗಳೂ ಹಾಗೂ ಕೃತ್ತಿವಾಸ ರಾಮಾಯಣವೂ ಪ್ರಮುಖವಾಗಿದ್ದವು. ಒಂದು ದಿನ ಓದುತ್ತ ಕುಳಿತ ಚಿತ್ರ ಕಣ್ಣಿಗೆ ಕಟ್ಟಿದಂತಿದೆ.

ಆ ದಿನ ಮೋಡ ಮುಸುಕಿತ್ತು. ಹೊರಗಿನ ಮನೆಗೆ ಹೋಗುವ ದಾರಿಯ ವರಾಂಡದ ಪಕ್ಕದಲ್ಲಿ ನಾವೆಲ್ಲರೂ ಆಟವಾಡುತ್ತಿದ್ದೆವು. ನೆನಪಿಲ್ಲ, ಸತ್ಯ ಅದಾವ ಕಾರಣಕ್ಕಾಗಿ ನಮ್ಮನ್ನು ಅಂದರೆ ಉಳಿದ ಚಿಕ್ಕ ಮಕ್ಕಳನ್ನು ಹೆದರಿಸಬೇಕೆಂದು ಒಮ್ಮೆಲೇ "ಪೋಲಿಸ್‌ಮನ್, ಪೋಲಿಸ್‌ಮನ್" ಎಂದು ಚೀರಲು ಪ್ರಾರಂಭಿಸಿದ ಳೆಂಬುದು. ಪೋಲಿಸರ ಕರ್ತವ್ಯದ ವಿಷಯವಾಗಿ ನಮ್ಮಲ್ಲಿ ಬಹು ಭೀಕರ ಕಲ್ಪನೆ ಇತ್ತು. ಒಬ್ಬ ಮನುಷ್ಯನನ್ನು ಅಪರಾಧಿ ಎಂದು ಹೇಳಿ, ಹಗಲಿನಲ್ಲಿಯೇ ಮೊಸಳೆ, ಹಲ್ಲುಗಳಿಂದ ತನ್ನ ಬೇಟೆಯನ್ನು ಕಚ್ಚಿಕೊಂಡು ನೀರಿನ ಆಳಕ್ಕೆ ಎಳೆದುಕೊಂಡು ಹೋಗುವಂತೆ, ಅವನ ಕೈಗೆ ಬೇಡಿಯನ್ನು ತೊಡಿಸಿ, ಅತಳಲೋಕದಲ್ಲಿರುವ ಪೋಲಿಸ ಠಾಣೆಯೊಂದರಲ್ಲಿ ಅವನನ್ನು ಬಚ್ಚಿಡುವುದೇ ಪೋಲಿಸರ ಕೆಲಸವೆಂದು ನಾವು ತಿಳಿದಿದ್ದೆವು.

ದೊಡ್ಡವರ ಪಾಡೇ ಹೀಗಿರುವಾಗ, ಪಾಪ, ಚಿಕ್ಕ ಮಕ್ಕಳನ್ನು ಕೇಳುವವರಾರು? ಅವರ ಪರಿಸ್ಥಿತಿ ಇದಕ್ಕೂ ಹೆಚ್ಚು ಶೋಚನೀಯವಾಗಬಹುದೆಂದು ನಾವು ಹೆದರಿ ಒಳಗೆ ಅಂತಃಪುರಕ್ಕೆ ಓಡಿಹೋದೆವು.

ನಂತರ ದೊಡ್ಡವರಾದ ಮೇಲೆ ಈ ರೀತಿಯ ಅಂಥ ಭಯವೇ ನಮ್ಮ ದೇಶದ ಪ್ರಗತಿಯನ್ನು ನಿಲ್ಲಿಸಿರುವುದೆಂದು ತಿಳಿದು ಬಂತು.

ತಾಯಿಯ ಬಳಿಗೆ ಹೋಗಿ ನಮಗೆ ಬಂದ ವಿಪತ್ತನ್ನು ಹೇಳಿದೆವು. ಅವಳಿಂದ ನಮಗೆ ಅಷ್ಟೇನೂ ಸಹಾನುಭೂತಿ ದೊರೆಯಲಿಲ್ಲ. ಆದರೆ ಅಮ್ಮ ನಮಗೆ ಹೊರಗೆ ಹೋಗಲು ಮಾತ್ರ ಹೇಳಲಿಲ್ಲ. ತಾನು ಓದುವುದಕ್ಕೆಂದು ಮಾರ್ಬಲ್ ಕಾಗದದಲ್ಲಿ ಜಾಗ್ರತೆಯಿಂದ ಇಟ್ಟಿದ್ದ ಕೃತ್ತಿವಾಸ ರಾಮಾಯಣವನ್ನು ಹೊರಗೆ ತೆಗೆದು ನನಗೆ ಓದಲು ಕೊಟ್ಟಳು. ನಾನು ಮುದುಕಿಯರಂತೆ ಕೋಣೆಯ ಮುಂದೆ ಕುಳಿತು ಓದತೊಡಗಿದೆ.

ಎದುರಿಗೆ ಅಂತಃಪುರದ ಒಳ ಅಂಗಳ. ಸುತ್ತೆಲ್ಲ ಹೆಂಗಸರು. ಮೋಡಮುಸುಕಿದ ಮಂದಹಗಲಿನ ಪ್ರಕಾಶ. ರಾಮಾಯಣದ ಯಾವುದೊ ಒಂದು ದುಃಖದ ಸನ್ನಿವೇಶ ವನ್ನು ಓದುತ್ತಿದ್ದ ನನ್ನ ಎರಡೂ ಕಣ್ಣುಗಳಿಂದ ನೀರು ಬರಹತ್ತಿವೆ. ಇದನ್ನು ಕಂಡ ನನ್ನ ಅಜ್ಜಿ ನನ್ನ ಕೈಯಲ್ಲಿದ್ದ ಪುಸ್ತಕವನ್ನು ಕಿತ್ತು ಬದಿಗೆ ಇರಿಸಿ ನನ್ನನ್ನೆತ್ತಿಕೊಂಡು ಒಳಗೆ ಹೋದಳು.

23. ಮೂರ್ಖ

ನಿನ್ನಿಷ್ಟದಷ್ಟು ದೊಡ್ಡವನು ನಾನು
ವಾಲ್ಮೀಕಿ ವ್ಯಾಸರಂತೆ
ಇನ್ನಾಗದಿರೆ ಅಮ್ಮ, ನನಗದುವೆ ಬೇಕಿಲ್ಲ
ನಾನೊಳ್ಳೆ ಹುಡುಗನಾಗುವುದೆ ಇಲ್ಲಮ್ಮ.
ಹುಣಸೆ, ಮಾವಿನಮರದ ಕೊಂಬೆ ರೆಂಬೆಗಳಲ್ಲಿ
ಮನ ಬಂದತೆರದಿ ಇಂಬಾಗಿ ಆಡುವೆನು ;
ಅದರಲ್ಲೆ ನನಗಮಿತ ಪ್ರೀತಿ ಇಹುದಮ್ಮ!
ಮೂರ್ಖ ಮಗು ನಾನಾಗಿ ಇರುವೆ ನೋಡಮ್ಮ!
ಈ ನಿಸರ್ಗವು ಎಲ್ಲ ಅವರಿಗುಂಟಮ್ಮ!

ಗೋವುಗಳ ಬೆನ್ನಟ್ಟಿ, ಗೋಪಾಲರೊಡಗೂಡಿ
ನದಿಯ ದಂಡೆಯುಗುಂಟ ಹುಲ್ಲುಬಯಲಲ್ಲಿ
ದಿನವೆಲ್ಲ ಕಳೆಯುವೆನು ; ಅಲ್ಲಿಯೇ ಆಡುವೆನು.
ಬೆಟ್ಟವನು ಏರುವೆನು. ನದಿಯಲ್ಲಿ ಹಾರುವೆನು
ತೆರೆಗಳಿಗೆ ಎದುರಾಗಿ ನಾವೆ ನಡೆಸುವೆನು.
ಗದ್ದೆಗಳ ನೀರಲ್ಲಿ ಮೀನ ಹಿಡಿಯುವೆನು.

ಸಂಜೆಯಾಗಲು ಮರಳಿ ದನಕಾವ ಹುಡಿಗೆಯರು
ಹೊತ್ತು ಬುಟ್ಟಿಯನೊಂದು ಮನೆಗೆ ತೆರಳುವರು.
ದನಗಳನು ಹೊಡಕೊಂಡು ಬೆನ್ನಟ್ಟಿಬಹರು.
ಮಧ್ಯಾಹ್ನ ಬಿಸಿಲಲ್ಲಿ ಪಾಠಶಾಲೆಯೊಳಿಲ್ಲಿ
ಪುಸ್ತಕದ ಒಂದೆರಡು ಪುಟಗಳನು ತಿರುವಿ
ನಿದ್ದೆಯಲಿ ಸತ್ತಂತೆ ಇದ್ದವರ ಸ್ಥಿತಿ ನೋಡಿ
ಮೂರ್ಖನಾಗುವೆನೆಂದು ಆಣೆಮಾಡುವೆನು.
ಅಲ್ಲಿಂದ ಆ ಕ್ಷಣದಿ ಓಡಿಹೋಗುವೆನು.

ಗಾಳಿಯಲಿ, ಅಗೊ ಕೇಳು ತೇಲಿಬರುತಿಹುದು!
ಗುಂಗು ಹಿಡಿಸುವ ಪುಂಗಿ ಪಂಚಮದ ಸ್ವರವು.

ಅಲ್ಲಿ, ಆ ಬಿದಿರುಬೆಳೆದಿಹ ನಮ್ಮ ನವತೋಟದಲ್ಲಿ
ಹಾವಾಡಿಗನು ತನ್ನ ಹಾವು ಬಿಟ್ಟಿಹನು.
ಮರ ಶಿರೀಷವು ಮಧುರ ಪರಿಮಳವ ಬೀರುತಿದೆ
ನೆರೆದ ಜನಜಂಗುಳಿಯು ಮೆಚ್ಚಿ ಮೈಮರೆಯುತಿದೆ
ಕಲಿತ ಪಂಡಿತರಾರು ಇವರ ಮಧ್ಯದಿ ಇಲ್ಲ
ಅಂಥವರಿಗಾಸ್ಥಳವು ತಕ್ಕದ್ದೆ ಅಲ್ಲ.

ಯಾರು ಮನಬಂದಂತೆ ನೂರಾರು ಗ್ರಂಥಗಳ
ಓದಿಕೊಂಡವರಿಹರೊ ಅವರಿಗಿಹುದತಿ ಮಾನ
ಮನೆಮನೆಗಳಲ್ಲಿ. ಜನ ಅವರ ಬಳಿಸಾರಿ
ಮುತ್ತಿಕ್ಕಿ ನೆರೆಯುವರು ; ಆದರವನೀಡುವರು.
ನನಗವರ ಆದರವು ಬೇಡ ನೋಡಮ್ಮ !
ನಿನ್ನ ಪ್ರೀತಿಯೆ ಸಾಕು ; ಮೂರ್ಖಮಗು ನೀನೆಂದು
ಎನ್ನನ್ನು ಬಿಗಿದಪ್ಪಿ ಎತ್ತಿಕೊಳ್ಳದೆ ಹೋದೆ,
ನಾನಾಗ ನಿನ್ನಿಂದ ಓಡಿ ಹೋಗುವೆನು.
ಮೋಡದೂರಿಗೆ ಹೋಗಿ ಅಡಗಿ ಕೂಡುವೆನು.

ಅಲ್ಲಿ ಮಳೆಯಲಿ ನಾನು ತೊಯ್ಸಿಕೊಳ್ಳುವೆನು.
ನದಿಯ ದಡದಲಿ ಕುಳಿತು ಹಿರಿತನವ ನಡೆಸುವೆನು.
ಎಲ್ಲ ರಾತ್ರಿಯನಲ್ಲೆ ಕಳೆದು ಅತಿ ನಸುಕಿನಲಿ
ಮೆಲ್ಲ ಮೆಲ್ಲನೆ ಎದ್ದು ಬಿರುಗಾಳಿಯನು ಹೊದ್ದು
ಮನೆಗೆ ಮರುಳುವೆನು. ಒದ್ದು ಕದ ತೆರೆಯುವೆನು.
ನಾನು ಬಂದುದ ನೋಡಿ ನೀನು ಸಂಭ್ರಮದಿಂದ
"ಭಾರಿದೊಡ್ಡವ" ನೆಂದು ಉಸಿರಿದೊಡೆ ನಾನದಕೆ
"ಭಾರಿದೊಡ್ಡವ" ನಿನ್ನ ಮೂರ್ಖಮಗು ಎಂದೆನುವೆ.

24. ಕವಿತೆಯನ್ನು ಬರೆಯಲು ಪ್ರಾರಂಭಿಸಿದ್ದು

ನನಗಾಗ ಏಳು, ಎಂಟು ವರ್ಷಗಳಿಗಿಂತ ಹೆಚ್ಚಾಗಿರಲಿಲ್ಲ. ನನ್ನ ಅಕ್ಕನ ಮಗ ಶ್ರೀಯುತ ಜ್ಯೋತಿ ಪ್ರಕಾಶ ವಯಸ್ಸಿನಿಂದ ನನಗಿಂತ ಸಾಕಷ್ಟು ಹಿರಿಯ. ಆವನಾಗಲೇ ಇಂಗ್ಲೀಷ ಸಾಹಿತ್ಯದಲ್ಲಿ ಪ್ರವೇಶಮಾಡಿದ್ದ. ಒಳ್ಳೆ ಉತ್ಸಾಹದಿಂದ ಹ್ಯಾಮಲೆಟ್ ನಾಟಕವನ್ನು ತನ್ನಷ್ಟಕ್ಕೆ ತಾನು ಓದಿಕೊಳ್ಳುತ್ತಿದ್ದ. ನನ್ನಂತೆ ಅವನಿಗೂ ಕೂಡ ಚಿಕ್ಕ ಮಕ್ಕಳ ಕವಿತೆಗಳನ್ನು ಬರೆಯಬೇಕೆಂದು ಒಮ್ಮೆಲೆ ಏಕೆ ಅನಿಸಿತೋ ನನಗೆ ತಿಳಿಯದು. ನಾನದನ್ನು ಹೇಳಲಾರೆ.

ಒಂದು ದಿನ ಮಧ್ಯಾಹ್ನ ತನ್ನ ಕೋಣೆಯೊಳಗೆ ನನ್ನನ್ನು ಕರೆದುಕೊಂಡು ಹೋದ. "ನೀನು ಕವಿತೆಗಳನ್ನು ಬರೆಯಬೇಕು" ಎಂದು ನನಗೆ ಹೇಳಿ "ಪಯಾರ ಛಂದ" ದಲ್ಲಿ ಹದಿನಾಲ್ಕು ಅಕ್ಷರ ಕೂಡಿಸಿ ಕವಿತೆ ಬರೆಯುವುದನ್ನು ಕಲಿಸಿಕೊಟ್ಟ.

ಕವಿತೆ ಎಂಬ ವಸ್ತುವನ್ನು ನಾನು ಈ ವರೆಗೂ ಮುದ್ರಿತ ಪುಸ್ತಕದಲ್ಲಿ ಮಾತ್ರ ಕಂಡಿದ್ದೆ. ಕಷ್ಟವನ್ನಾಗಲಿ, ಚಿಂತೆಯನ್ನಾಗಲಿ, ಅಥವಾ ಮನುಷ್ಯರಿಗೆ ಸಹಜವಾಗಿ ಆಗಾಗ ದುರ್ಬಲ ಮನೋಭಾವವನ್ನಾಗಲಿ, ನಾನು ಪ್ರತ್ಯಕ್ಷ ಕಂಡಿರಲಿಲ್ಲ. ಅದರ ಸುಳಿವೇ ನನಗೆ ತಾಕಿರಲಿಲ್ಲ. ಕವಿತೆಗಳನ್ನು ನಾವು ಪ್ರಯತ್ನಮಾಡಿ ಬರೆಯಬಹುದೆಂಬ ಕಲ್ಪನೆ ಕೂಡ ನನಗಾಗ ಇರಲಿಲ್ಲ.

ಒಂದು ದಿನ ನಮ್ಮ ಮನೆಯಲ್ಲಿ ಒಬ್ಬ ಕಳ್ಳ ಸಿಕ್ಕುಬಿದ್ದಿದ್ದ. ಅತ್ಯಂತ ಭಯದಿಂದ, ಆದರೂ ಅಷ್ಟೇ ಕುತೂಹಲದಿಂದ ನಾನು ಆ ಕಳ್ಳನನ್ನು ನೋಡಲು ಹೋದೆ. ಅವನೂ ಎಲ್ಲರಂತೆ ಮನುಷ್ಯನಾಗಿದ್ದುದನ್ನೇ ನೋಡಿದೆ. ಹೀಗಿರುವಾಗ ನಮ್ಮ ಸೇವಕ ಬಂದು ಅವನನ್ನು ಹೊಡೆಯಲು ಪ್ರಾರಂಭಿಸಿದ. ಅದನ್ನು ಕಂಡು ನನಗೆ ಅತೀವ ವ್ಯಥೆಯಾಯಿತು. ತಾಳಿಕೊಳ್ಳಲು ಬಾರದಷ್ಟು ಮನದಲ್ಲಿ ದುಃಖವಾಯಿತು.

ಪದ್ಯವನ್ನು ಕುರಿತೂ ಕೂಡ ನನಗೆ ಇದೇ ಭಾವನೆ ಬರುತ್ತದೆ. ಕೆಲವು ಸ್ಥೂಲ ಶಬ್ದಗಳನ್ನು ಕೈಯಿಂದ ಅತ್ತಿತ್ತ ಸರಿಸಿದರಾಯಿತು ಒಂದು ಕವಿತೆ. ಆಗ ಪದ್ಯ ಬರೆಯುವುದರ ಬಗ್ಗೆ ಯಾವ ಮೋಹವೂ ಉಳಿಯುವುದಿಲ್ಲ. ಇಂತಹ ಸಮಯದಲ್ಲಿ ಪದ್ಯವೂ ಕೂಡ ಪರರ ಹಿಂಸೆಯನ್ನು ತಾಳಿಕೊಳ್ಳಲಾರದೆಂದು ಅನಿಸುತ್ತದೆ.

ಕವಿತೆ ಬರೆಯುವುದರ ಬಗ್ಗೆ, ಬರೆಯುವ ಪೂರ್ವದಲ್ಲಿದ್ದ ಭಯವು ಒಂದುಸಲ ಕಳೆದುಹೋದ ಮೇಲೆ ನನಗಾವ ಆತಂಕವೂ ಉಳಿಯಲಿಲ್ಲ. ಯಾವನೋ ಒಬ್ಬ ಕೆಲಸಗಾರನ ಕೃಪೆಯಿಂದ ನೀಲಿ ಬಣ್ಣದ ನೋಟ್ ಬುಕ್ ಒಂದನ್ನು ಸಂಪಾದಿಸಿದೆ. ಅದರಲ್ಲಿ ನನ್ನ ಸ್ವಂತ ಕೈಯಿಂದಲೇ ದೊಡ್ಡ ದೊಡ್ಡ ಅಕ್ಷರಗಳಿಂದ ಅನೇಕ ಕವಿತೆಗಳನ್ನು

ಪೆನ್ಸಿಲ್ಲಿನಿಂದ ಬರೆಯತೊಡಗಿದೆ. ನಾನಾಗ ಬರೆದ ಸಾಲುಗಳೂ ಕೂಡ ಸರಿಯಾಗಿ ಇರದೆ ಅಂಕಡೊಂಕವಾಗಿ ಇರುತ್ತಿದ್ದವು.

ಹೊಸದಾಗಿ ಕೋಡು ಮೂಡುವ ಸಮಯದಲ್ಲಿ ಜಿಂಕೆಯ ಮರಿಯು ಕಂಡ ಕಂಡದ್ದಕ್ಕೆಲ್ಲ ಡಿಕ್ಕಿಹೊಡೆಯಲು ಹಾತೊರೆಯುವಂತಾಯಿತು ನನ್ನದೂ ಸ್ಥಿತಿ. ಕವಿತೆ ಬರೆಯುವ ಉತ್ಸಾಹದಲ್ಲಿ ನಾನೂ ಕೂಡ ಅದೇ ರೀತಿಯ ಉತ್ಪಾತವನ್ನೇ ಪ್ರಾರಂಭಿಸಿದೆ. ವಿಶೇಷವಾಗಿ ನನ್ನ ಅಣ್ಣ, ನಾನು ಕವಿತೆ ಬರೆಯುವುದನ್ನು ನೋಡಿ, ತಾನು ಹೆಮ್ಮೆಪಟ್ಟುಕೊಂಡು ಮನೆಯಲ್ಲಿ ಎಲ್ಲರಿಗೂ ನನ್ನ ಕವಿತೆಗಳನ್ನು ಕೇಳುವುದಕ್ಕೆ ಹಿಂಸೆಪಡಿಸತೊಡಗಿದ.

ಒಂದು ಪ್ರಸಂಗ ಚೆನ್ನಾಗಿ ನೆನಪಿನಲ್ಲಿದೆ. ನಾವು ಕೆಲವರು ಮೇಲುಪ್ಪರಿಗೆಯಲ್ಲಿ ಕುಳಿತಿದ್ದೆವು. ನಮ್ಮ ಜಮೀನದಾರಿ ಕಚೇರಿಯ ಅಮಲ್ದಾರರು ಬಂದಿದ್ದರು. ಅವರಿಗೆ ನಾನು ಬರೆದ ಕವಿತೆಗಳನ್ನು ಓದಿತೋರಿಸಬೇಕೆಂದು ನನ್ನ ಅಣ್ಣಂದಿರಿಬ್ಬರೂ ಕಾಯುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ನ್ಯಾಶನಲ್ ಪೇಪರಿನ ಎಡಿಟರ್ ಶ್ರೀಯುತ ನವಗೋಪಾಲ ಮಿತ್ರರು ನಮ್ಮ ಮನೆಯಲ್ಲಿ ಕಾಲಿರಿಸಿದ್ದೆ ತಡ ನನ್ನ ಅಣ್ಣ ಅವರನ್ನು ತಡೆದು "ನವಗೋಪಾಲ ಬಾಬು, ರವಿ ಒಂದು ಕವಿತೆಯನ್ನು ಬರೆದಿದ್ದಾನೆ. ಅದನ್ನು ನೀವು ಅವಶ್ಯ ಕೇಳಬೇಕು" ಎಂದು ಹೇಳಿದ.

ಕವಿಯ ಕೀರ್ತಿಯು ಆಗ ಕವಿಯ ಜೊತೆಗೆ ಅವನ ಪ್ರತಿಯೊಂದು ಅಂಗಿಯ ಪ್ರತಿಯೊಂದು ಜೇಬಿನಲ್ಲಿ ಕುಳಿತು ಸುತ್ತಾಡುತ್ತಿತ್ತು. ನಿಜವಾಗಿಯೂ ಆಗ ಲೇಖಕ, ಮುದ್ರಕ ಹಾಗೂ ಪ್ರಕಾಶಕ ಎಲ್ಲವೂ ನಾನೇ ಆಗಿದ್ದೆ. ಇದನ್ನು ಹೇಳುವ ಕೆಲಸ ಮಾತ್ರ ಅಣ್ಣಮಾಡುತ್ತಿದ್ದ ಅಷ್ಟೆ!

ಕಮಲದ ಮೇಲೊಂದು ನಾನು ಕವಿತೆ ಬರೆದಿದ್ದೆ. ಅಲ್ಲಿಯೇ ಹೊರ ಜಗುಲಿಯ ಮೇಲೆ ನಿಂತು ಒಳ್ಳೇ ಉತ್ಸಾಹದಿಂದ ದೊಡ್ಡ ದನಿಯಲ್ಲಿ, ನವಗೋಪಾಲಬಾಬು ಅವರಿಗೆ ನನ್ನ ಆ ಕವಿತೆಯನ್ನು ಓದಿ ತೋರಿಸಿದೆ. ಅದನ್ನು ಕೇಳಿ ಅವರು ತುಸು ನಕ್ಕು "ಚೆನ್ನಾಗಿ ಆಗಿದೆ; ಆದರೆ ದ್ವಿರೇಫ ಶಬ್ದದ ಅರ್ಥವೇನು?" ಎಂದು ಕೇಳಿದರು.

ದ್ವಿರೇಫ ಹಾಗೂ ಭ್ರಮರ ಎರಡೂ ಶಬ್ದಗಳು ಮೂರು ಅಕ್ಷರಗಳು ಇರುವ ಶಬ್ದಗಳು. ಭ್ರಮರಶಬ್ದವನ್ನೂ ಕೂಡ ಉಪಯೋಗಿಸಿದ್ದರಾಗುತ್ತಿತ್ತು. ನಿಜ, ಆದರೆ ಅದರಿಂದ ಕವಿತೆಯಲ್ಲಿ ಹೆಚ್ಚಿನದೇನನ್ನೂ ಹೇಳಿದಂತಾಗುತ್ತಿರಲಿಲ್ಲ. ಅದರೊಂದಿಗೆ ಆ ಕವಿತೆ ದ್ವಿರೇಫ ಶಬ್ದವನ್ನು ಕೇಂದ್ರೀಕರಿಸಿ ಬರೆಯಲಾಗಿತ್ತು. ಅದಕ್ಕೊಂದು ವಿಶೇಷ ಅರ್ಥ ಬರುತ್ತದೆಂದು ಅದೇಕೋ ನನಗೆ ಅನಿಸಿತ್ತು. ಅಂತೆಯೇ ಆ ಶಬ್ದದ ಮೇಲೆ ನನ್ನ ನಂಬಿಗೆ ವಿಶೇಷವಾಗಿತ್ತು. ಅದರಿಂದ ನನಗೆ ಸಂತೋಷ ಸಮಾಧಾನಗಳೆರಡೂ ಆಗಿದ್ದವು. ಆದರೆ ನವಗೋಪಾಲಬಾಬು ಅವರಿಗೆ ಯಾವ ಸಮಾಧಾನವನ್ನೂ ಹೇಳಲಾಗಲಿಲ್ಲ. ಸರಿಯಾದ ಉತ್ತರವನ್ನು ಕೊಟ್ಟು ಅವರನ್ನು ಸೋಲಿಸುವುದೂ ಸಾಧ್ಯವಾಗಲಿಲ್ಲ. ಇಷ್ಟೇ ಅಲ್ಲ, ಅವರು ನನ್ನನ್ನು ನೋಡಿ ನಕ್ಕುಬಿಟ್ಟರು.

ನವಗೋಪಾಲಬಾಬು ಅವರಿಗೆ ಕವಿತೆ ಏನೂ ತಿಳಿಯುವದಿಲ್ಲವೆಂದು ನನಗೆ ಮನದಟ್ಟಾಗಿ ಹೋಯಿತು. ಅವರಿಗೆ ಆಮೇಲೆ ಎಂದೂ ನಾನು ನನ್ನ ಕವಿತೆಗಳನ್ನು

ಓದಿ ತೋರಿಸಲಿಲ್ಲ. ಅದಾದ ಮೇಲೆ ಅನೇಕ ದಿನಗಳು ಕಳೆದಿವೆ. ಆದರೆ ಯಾರಿಗೆ ಕವಿತೆ ತಿಳಿಯುತ್ತಿದೆ; ಯಾರಿಗೆ ತಿಳಿಯುವುದಿಲ್ಲ ಎನ್ನುವ ವಿಷಯದಲ್ಲಿ ಮಾತ್ರ ನನ್ನಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಏನೇ ಇರಲಿ, ನವಗೋಪಾಲಬಾಬು ಅವರೇನೋ ನಕ್ಕುಬಿಟ್ಟರು ನಿಜ. ಆದರೆ ದ್ವಿರೇಫ ಶಬ್ದ ಮಾತ್ರ ಮಧುಪಾನವನ್ನು ಮಾಡಿದ ಮಧುಮತ್ತ ಭ್ರಮರದಂತೆ ತನ್ನ ಸ್ಥಳದಲ್ಲಿ ಅಚಲವಾಗಿ ಉಳಿದಿದೆ.

25. ದಾರಿ ಕಳೆದುಕೊಂಡೆನು

ಇಂದು ನಾನು ಎಷ್ಟೊ ದೂರ ನಡೆದು ದೂರ ಹೋದೆನು
ನೀನು ಊಹೆ ಮಾಡಬಲ್ಲ ಗಡಿಯ ದಾಟಿ ನಡೆದೆನು
ಹೇಳಿ ಮುಗಿಸಲಾರೆನದನು. ಮತ್ತೆ ನಿನಗೆ ಹೇಳೆನು
ಇಂದು ನಾನು ಎಷ್ಟೊ ದೂರ ನಡೆದು ದೂರ ಹೋದೆನು.

ದೂರದಿಂದ ಇನ್ನು ಮುಂದೆ ದೂರ ದೂರ ಸಾಗಿದೆ
ದಾರಿಯಲ್ಲಿ ಎಷ್ಟೊ ಬೆತ್ತ ಬಿದಿರು ಮೆಳೆಯ ದಾಟಿದೆ
ಏಸೊ ಗದ್ದೆ, ಏಸೊ ಹೊಲವ, ಬಿಟ್ಟು ನಡೆದೆ ಮುಂದಕೆ
ಗುರುಗಳಿದ್ದ ಮನೆಯನುಳಿದು ಊರಬಿಟ್ಟು ಸಾಗಿದೆ.

ನಡೆದೆ, ನಡೆದೆ. ಏಳು ಮೈಲಿ ಎಲ್ಲ ಗ್ರಾಮ ಸುತ್ತಿದೆ
ದಾರಿಯಲ್ಲಿ ಧಾನ್ಯ ಕಣಜ ಎಣಿಸಲಾರೆನವುಗಳ
ಅಲ್ಲಿ ಇದ್ದ ರೈತರೆಷ್ಟೊ ಬಲ್ಲೆನೆಂತು ಹೆಸರನು!
ಗೌಡರಾರೊ ಗೊತ್ತೆ ಇಲ್ಲ ಕಾಣಲಿಲ್ಲ ಅವರನು.

ಒಂದೊಂದೇ ಹೊಲವ ದಾಟಿ ಮುಂದೆ ನಾನು ಹೋಗಲು
ಬಂದಿತೊಂದು ದಟ್ಟಡವಿಯು ಕಣ್ಣುಬಿಟ್ಟು ನೋಡಲು
ಒಳಗೆ ನುಗ್ಗಲೆಂದು ಮಾಡೆ ಅಮ್ಮ! ಮೈಯು ನಡುಗಿತು
ನಿಂತಲ್ಲಿಯೆ ನಿಂತು ಬಿಟ್ಟೆ; ಎನ್ನ ಧೈರ್ಯ ಉಡುಗಿತು.

ಬೋರೆಹಣ್ಣ ಕೆರೆಯ ಮೇಲೆ ಮುದುಕಿಯೊಬ್ಬಳಿದ್ದಳು
ದೂರನಿಲ್ಲು ಎಂದು ನನಗೆ ಆಜ್ಞೆಯನ್ನು ಕೊಟ್ಟಳು
ಹಾರಿಬಂದ ಹಂಸಗಳನು ಅವಳು ಎಣಿಸುತಿದ್ದಳು
ಪಾರು ಆಗಿ ಹೋದುದನ್ನು ನೋಡಿ ಸುಮ್ಮನಿದ್ದಳು.

ಆಕಾಶದ ಪಾತಾಳದ ಸುತ್ತು ಸುತ್ತಿ ತಿರುಗಿದೆ
ಎಲ್ಲಿ ಏನು ಉಳಿಯಲಿಲ್ಲ. ಎಷ್ಟೊ ದೂರ ಸಾಗಿದೆ
ಕಾಡಿನೋಣಿಗಳಲಿ ಹೋದೆ; ಕತ್ತಲಾಯಿತಲ್ಲಿಯೆ
ಗುಡ್ಡಬೆಟ್ಟ ಕತ್ತಲಲ್ಲಿ ಕಾಣದಾದವಲ್ಲಿಯೆ.

ಖಜ್ಜೂರದ ಮರದಿ ಯಾರೊ ಕುಳಿತು ತೂಗುತಿದ್ದರು
ಮಧ್ಯದಲ್ಲಿ ನಕ್ಕು ಮತ್ತೆ ಸುಮ್ಮನಾಗುತಿದ್ದರು
ನನಗದೆಂತು ತಿಳಿಯಬೇಕು; ಯಾರೊ ಯಾರೊ ಮನುಜರು
ಏನೇನೊ ಮಾಡಿಕೊಂಡು ಸುಮ್ಮನಿದ್ದು ಬಿಟ್ಟರು.

ಇದ್ದಕ್ಕಿದ್ದ ತೆರದಿ ಎನ್ನ ಕಣ್ಣು ಮುಚ್ಚಿಕೊಂಡವು
ವೃದ್ಧಗಿಡಗಳೊಡಲಿನಲ್ಲಿ ತೂಕಡಿಸುತಲಿದ್ದವು
ಉದ್ದುದ್ದದ ಕಾಲು ಕೆಳಗೆ ಮೇಲೆ ಕೊಂಬೆ ಇದ್ದುವು
ಹಿಂದಿನಿಂದ ಬಂದು ಎನ್ನ ಕಟ್ಟಾಡಿಸುತಿದ್ದವು.

ಪಿಸು ಪಿಸು ಕಿವಿಮಾತುಗಳನು ಕೇಳಿದಂತೆ ಆಯಿತು
ಕತ್ತಲಲ್ಲೆ ಕಾಣಲಿಲ್ಲ; ಏನೇನೂ ಹೊಳೆಯಲಿಲ್ಲ
ಹತ್ತಿರದಲಿ ಯಾರೊ ಬಂದು ನಿಂತಂತೆಯೆ ಅನಿಸಿತು
ಎಲ್ಲಿಗೇಕೊ ಬಿಟ್ಟೆನ್ನನು ಹೋದರೆಂದು ತಿಳಿಯಿತು.

ದಾರಿತಪ್ಪಿ ಬಂದು ಬಿಟ್ಟೆ! ತಿರುಗಿಹೋಗಲೆಂತು ನಾನು?
ಎದುರಿಗಾರೊ ನಿಂತ ನೆರಳು; ಕೂಗಿ ಕರೆಯೆ ನರಿಯ ಭಯವು
ತಾಯಿ ಇದ್ದ ಮನೆಯ ದಾರಿ ಯಾರು ನನಗೆ ಹೇಳಲಿಲ್ಲ
ಗೋವು ನಡೆದ ಗುರುತು ಎನಗೆ ಆಗ ಕಂಡು ಬರಲೆ ಇಲ್ಲ.

ಗಿಡಗಳಾವು ಮನೆಯದಾರಿ ಹೇಳದಂತೆ ನಿಂತವು
ಗಾಳಿಯಲ್ಲಿ ತಲೆಯು ಮಾತ್ರ ಭರದಿ ತೂಗುತಿದ್ದವು
ಪಕ್ಕನೆ ಅಗೊ! ಅಮ್ಮ ನನ್ನ ಯಾರೊ ಕೂಗಿ ಕರೆದರು
ಅಲ್ಲಿಗೆಂತು ಬಂದರವರು? ಯಾರು ಅದನು ಬಲ್ಲರು.

ಅಮ್ಮ ನಿಮ್ಮ ಬಳಿಗೆ ನಾನು ಹೇಗೆ ಮರಳಿ ಬಂದೆನು?
ಯಾರಿಗದುವೆ ಗೊತ್ತೆ ಇಲ್ಲ. ನಿಮಗೆ ನಾನು ಹೇಳೆ ಇಲ್ಲ
"ಸಿಂಗಿ ಮಾಮ" ಕೂಗಿ ಕರೆಯೆ ಎದ್ದುಬಿಟ್ಟೆನೊಮ್ಮೆಗೆ
ಎನ್ನ ಕನಸು ಒಡೆದು ಹೋಯ್ತು ಅವರದೊಂದೆ ಕೂಗಿಗೆ.

26. ಅಬ್ದುಲ್ ಅಂಬಿಗನ ಕತೆ

೧

ತುಂಬ ವೇಳೆಯಾಗಿತ್ತು. ಬಿಸಿಲು ಸಾಕಷ್ಟು ಪ್ರಖರವಾಗಿತ್ತು. ಜಗುಲಿಯ ಮೇಲಿದ್ದ ಗಂಟೆಯನ್ನೂ ಬಾರಿಸಿಯಾಗಿತ್ತು. ಆದರೆ ಪಾಲ್ಕಿಯೊಳಗಿನ ಜನರು ಮಾತ್ರ ನಿತ್ಯದ ಗಂಟೆಯ ಲೆಕ್ಕವನ್ನು ಮನ್ನಿಸುತ್ತಿರಲಿಲ್ಲ. ಅಲ್ಲಿಯವರದೆಲ್ಲ ಗತಕಾಲದಿಂದ ನಡೆದು ಬಂದಂತೆ ಇತ್ತು. ರಾಜನ ಅರಮನೆಯ ಸಿಂಹದ್ವಾರದಲ್ಲಿರುವ ಸಭಾ ವಿಸರ್ಜನೆಯ ಗಂಟೆ ಬಾರಿಸಿದ ಕೂಡಲೆ, ರಾಜನು ಚಂದನದ ನೀರಿನಲ್ಲಿ ಸ್ನಾನಕ್ಕೆಂದು ಹೊರಟು ಬರುವನು. ರಜೆಯ ದಿನಗಳಲ್ಲಿ ಮಧ್ಯಾಹ್ನ ಯಾರ ಕೆಲಸದ ಮೇಲೆ ಇದ್ದನೊ ಅವರೆಲ್ಲ ಊಟ ಮುಗಿಸಿಕೊಂಡು ಮಲಗಿಕೊಂಡರು. ಒಬ್ಬನೇ ಕುಳಿತು ಕೊಂಡಿದ್ದೇನೆ. ಮನದಲ್ಲಿ ನಡೆದಿದೆ ನನ್ನ ಕಲ್ಪನೆಯ ಪಾಲಕಿ. ಪಾಲಕಿ ಹೊರುವವರೆಲ್ಲ ನನ್ನ ಮನಸ್ಸಿನ ಉಪ್ಪುಂಡವರೆ! ಮುಂದೆ ಮುಂದೆ ಸಾಗಿದೆ. ಈ ದಾರಿಯಲ್ಲಿಯೇ ನನ್ನ ಪಾಲಕಿ ಹೊರಟಿದೆ. ದೂರ, ಬಹು ದೂರ. ದೇಶ ವಿದೇಶಗಳಿಗೆ. ಆ ಊರುಗಳ, ದೇಶಗಳ ಹೆಸರುಗಳೆಲ್ಲ ನನ್ನ ಕಲ್ಪನೆಯ ಪುಸ್ತಕದಲ್ಲಿ ನಾನೇ ಕಲ್ಪಿಸಿ ಬರೆದ ಹೆಸರುಗಳು. ಅವುಗಳ ದಾರಿಯೋ, ಸದಾ ಘನ ಘೋರವಾದ ಅರಣ್ಯದಲ್ಲಿಯೇ ಹಾದು ಹೋಗು ವಂತಹವು. ಒಂದು ಕಡೆ ಹುಲಿಯ ಕಣ್ಣುಗಳು ಕೆಂಡದಂತೆ ಜ್ವಲಿಸುತ್ತಿವೆ ; ಇನ್ನೊಂದೆಡೆ ಆಕಳುಗಳು ಅಂಬಾ ಅಂಬಾ ಎಂದು ಸ್ವರ ತೆಗೆಯುತ್ತಿವೆ. ಜೊತೆಗಿದ್ದಾನೆ ವಿಶ್ವನಾಥ ಬೇಟೆಗಾರ. ಒಮ್ಮಿಂದೊಮ್ಮೆ ಧಡಲ್ ಎಂದು ಬಂದೂಕು ಹಾರಿಸಿ ಬಿಟ್ಟ. ಕೂಡಲೇ ಎಲ್ಲವೂ ಶಾಂತವಾಗಿ ಹೋಯಿತು.

ಇದಾದ ಮೇಲೆ ಪಾಲಕಿಯ ರೂಪವೇ ಬೇರೊಂದು ರೂಪವನ್ನು ತಾಳಿತು. ಆದಾಯಿತು ಗರಿಗೆದರಿ ನಿಂತ ಮಯೂರ ವಾಹನ. ನದಿಯ ನೀರಲ್ಲಿ, ಸಮುದ್ರದ ಜಲದಲ್ಲಿ ತೇಲಿ ಹೋಗುವಂತಾಯಿತು. ಅದರ ಚುಕ್ಕಾಣಿ ಹಿಡಿಯುವ ದಂಡವೇ ಕಾಣುತ್ತಿರಲಿಲ್ಲ. ಆದರೆ ನೀರಿನ ಒಡಲನ್ನು ಝುಪ್ ಝುಪ್ ಎಂದು ಬಗೆಯುತ್ತ ಮುಂದೆ ಮುಂದೆ ಅದು ಸಾಗಿತ್ತು. ದೊಡ್ಡ ದೊಡ್ಡ ತೆರೆಗಳನ್ನು ಅದು ಎಬ್ಬಿಸುತ್ತಿದೆ. ಅತ್ತ ಇತ್ತ ಹೊಯ್ದಾಡುತ್ತಿದೆ. ಅಂಬಿಗರೆಲ್ಲ ಜೋಕೆ, ಬಿರುಗಾಳಿ ಬಿಟ್ಟಿದೆ ಎಂದು ಕೂಗಿ ಕೂಗಿ ಹೇಳುತ್ತಿದ್ದಾರೆ. ಅಬ್ದುಲ್ ಅಂಬಿಗನು ಚುಕ್ಕಾಣಿಯನ್ನು ಕೈಯಲ್ಲಿ ತೆಗೆದುಕೊಂಡು ಕುಳಿತಿದ್ದಾನೆ. ಅವನ ನಿಡಿದಾದ ಗಡ್ಡ ಮೊನೆಯಾಗಿ ಎದೆಯವರೆಗೂ ಇಳಿದಿದೆ. ಮೀಸೆ ಹುರಿಕಟ್ಟಾಗಿ ನಿಂತಿದೆ. ವಯಸ್ಸಿನ ಭಾರದಿಂದ ತಲೆ ನಡುಗುತ್ತಿದೆ. ಪದ್ಮಾ ನದಿಯಿಂದ ಅಣ್ಣನಿಗೆ ವಿಶಿಷ್ಟ ಬಗೆಯ ಅಪರೂಪವಾದ ಮೀನಗಳನ್ನೂ ಆವಿಯ ತತ್ತಿಗಳನ್ನೂ ತಂದುಕೊಡುತ್ತಿದ್ದವನು—ಇವನೇ ಎಂದು ನಾನವನನ್ನು ಗುರುತಿಸಿ ಹೇಳಬಲ್ಲೆ. ಅದು ನನಗೆ ಗೊತ್ತು.

ಅವನು ನನಗೆ ಕತೆ ಹೇಳುತ್ತಿದ್ದನು. ಒಂದು ದಿನ ಚೈತ್ರಮಾಸದ ಕೊನೆಗೆ ಡಿಂಡಿ ನದಿಯಲ್ಲಿ ಮೀನ ಹಿಡಿಯಲು ಹೋಗಿದ್ದನಂತೆ. ಒಮ್ಮೆಂದೊಮ್ಮೆ ಬಿರುಗಾಳಿ ಬೀಸಿ ನಾವೆಯು ಹೊಯ್ದಾಡ ಹತ್ತಿತು. ಅಬ್ದುಲ್ ನಾವೆಯ ಹಗ್ಗವನ್ನು ಹಲ್ಲಿನಿಂದ ಕಚ್ಚಿ ಹಿಡಿದು ನೀರಿನಲ್ಲಿ ಹಾರಿಬಿಟ್ಟನಂತೆ. ಈಸಿ ಎಳೆದು ತಂದು ನಾವೆಯನ್ನು ದಂಡೆಗೆ ಹಾಕಿದನಂತೆ.

ಕತೆ ಇಷ್ಟು ಬೇಗ ಮುಗಿದು ಹೋಯಿತು. ನನಗಿದು ರುಚಿಸಲೇ ಇಲ್ಲ. ನಾವೆ ಮುಳುಗಲಿಲ್ಲ. ಒಳಗಿದ್ದವರೂ ಪಾರಾದರು. ಇದು ಕತೆಯೇ ಅಲ್ಲ. ಮತ್ತೆ ಮತ್ತೆ ನಾನು ಕೇಳಿದೆ, "ಆಮೇಲೆ ಏನಾಯಿತು? ಆಮೇಲೆ ಏನಾಯಿತು?" ಎಂದು.

ಅವನದಕ್ಕೆ ಹೇಳಿದ "ಆಮೇಲೆ ಆದದ್ದು ದೊಡ್ಡ ಪುರಾಣವೇ ಇದೆ. ಆಚೆ ದಡಕ್ಕೆ ಹೋಗಿ ನೋಡುತ್ತೇನೆ ದೊಡ್ಡದೊಂದು ಹುಲಿ. ತನ್ನ ಮರಿಗಳನ್ನು ಬಚ್ಚಿಟ್ಟು ನನ್ನನ್ನೇ ನೋಡುತ್ತ ನಿಂತಿದೆ. ಅದೇನೋ ಅನೇಕರನ್ನು ನೋಡಿರಬಹುದು. ಆದರೆ ನನ್ನಂತಹ ಅಬ್ದುಲ್‌ನ ಪರಿಚಯವಿರಲಿಲ್ಲ ಅದಕ್ಕೆ. ಹಸಿದ ಆ ಹುಲಿಯು ನನ್ನನ್ನು ನೋಡಿ ತನ್ನ ಕೆಂಪು ನಾಲಗೆಯನ್ನು ಹೊರಗೆ ಹಾಕಿತು. ಅದರ ಬಾಯಿಯಿಂದ ಲಾಲಾರಸವು ಇಳಿಯ ಹತ್ತಿತು. ಒಂದೇ ಒಂದು ಕ್ಷಣ ತಡವಾಗಿದ್ದರೆ ಅದು ನನ್ನ ಮೇಲೆ ಹಾರಿ ನನ್ನನ್ನು ಮುಗಿಸಿಯೇ ಬಿಡುತ್ತಿತ್ತು. ಇದನ್ನು ಬಲ್ಲ ನಾನು ಅದಕ್ಕಿಂತ ಮೊದಲು ಅದರ ಮೇಲೆ ಹಾರಿ ಕುಳಿತೆ. ಕೈಯ್ಯಲ್ಲಿದ್ದ ಹಗ್ಗವನ್ನು ಅದರ ಕೊರಳಿಗೆ ಸುತ್ತಿ ಗಟ್ಟಿಯಾಗಿ ಒಂದು ಗಂಟನ್ನು ಹಾಕಿ ಕೈಬಿಟ್ಟೆ. ಅದು ಒದ್ದಾಡುತ್ತ ಹೋದಂತೆ ಹಗ್ಗ ಕುತ್ತಿಗೆಗೆ ಉರುಲಾಗಿ ಅದರ ಕತ್ತನ್ನು ಹಿಚುಕುತ್ತಿತ್ತು. ಕೊನೆಗೆ ಅದು ನೀರಿನಲ್ಲಿ ಬಿದ್ದುಬಿಟ್ಟಿತು."

ಈ ವರೆಗೂ ಸುಮ್ಮನೆ ಕತೆ ಕೇಳುತ್ತಿದ್ದ ನಾನು ಬೇಸರಗೊಂಡು ಕೇಳಿದೆ, "ಆ ಹುಲಿ ಕೊನೆಗೆ ಸತ್ತೇಹೋಯಿತೇನು?" ಎಂದು.

ಅದಕ್ಕೆ ಅಬ್ದುಲ್ "ಅದು ಹೇಗೆ ಸಾಯುತ್ತದೆ? ಅದನ್ನು ಹಾಗೇ ನಾನು ನದಿಯ ದಡದಲ್ಲಿ ಬಿಟ್ಟು ಅದರ ಮರಿಗಳನ್ನು ತೆಗೆದುಕೊಂಡು ಬಂದೆ. ಇಪ್ಪತ್ತು ಹರದಾರಿ, ಹತ್ತು ಹದಿನೈದು ಗಂಟೆ ನಡೆಯಲು ಹಿಡಿಯುವುದನ್ನು ನಾನು ಒಂದೂವರೆ ಗಂಟೆಯಲ್ಲಿ ನಡೆದುಬಂದೆ. ಊರನ್ನು ಮುಟ್ಟಿದೆ. ಅದರ ಮುಂದಿನ ಕತೆ ಕೇಳಬೇಡ. ಅದು ದೊರೆಯುವುದೇ ಇಲ್ಲ" ಎಂದನು.

ನಾನು ಅದಕ್ಕೆ "ಸರಿಬಿಡು. ಹುಲಿ ಕತೆ ಸಾಕು. ಇನ್ನು ಮೊಸಳೆಯ ಕತೆ ಹೇಳು" ಎಂದೆ.

ಅಬ್ದುಲ್ ಅದಕ್ಕೆ ಉತ್ತರ ಕೊಟ್ಟ. "ನೀರಿನ ಮೇಲೆ ನಂತರ ನಾನು ಅನೇಕ ಸಲ ಆ ಹುಲಿಯ ಮೂಗನ್ನು ನೋಡಿದ್ದೇನೆ. ಬಂದೂಕಿನಿಂದ ಹೊಡೆದು ಕೊಂದೇ ಹಾಕಬೇಕೆಂದರೆ ಬಂದೂಕಿನ ಲಾಯಸೆನ್ಸಿನ ಅವಧಿ ಮುಗಿದುಹೋಗಿತ್ತು. ಇನ್ನೇನು ಮಾಡುವುದು!"

ನಾನು ಮತ್ತೆ ಬೇಸರದಿಂದ ಕೇಳಿದೆ. "ಮುಂದೆ ಏನಾಯಿತು?" ಎಂದು.

ಅಬ್ದುಲ್ ಆದಕ್ಕೆ "ಮುಂದೇನಾಯಿತೆಂದು ನೋಡಿಕೊಂಡು ಬರಲು ಆಳನ್ನು ಕಳಿಸಿದ್ದೇನೆ. ನದಿಯ ನೀರಿನ ತಳಕ್ಕೆ ಹೋಗಿರುವ ಸುದ್ದಿಯನ್ನು ಮೇಲಕ್ಕೆ ಎತ್ತಿಕೊಂಡು ಬರಲು ಆಳಿಗೆ ಹೇಳಿ ಕಳಿಸಿದ್ದೇನೆ. ಅವನು ಬಂದಮೇಲೆ ಗೊತ್ತಾಗ ಬೇಕು—ಮುಂದೆ ಏನಾಯಿತೆಂದು.'' ಎಂದು ಹೇಳಿದ.

ಆದರೆ ಅಬ್ದುಲ್ ಕಳಿಸಿದ ಆ ಆಳುಮನುಷ್ಯ ಇನ್ನೂ ಬಂದೇ ಇಲ್ಲ. ಬರುತ್ತಲೇ ಇದ್ದಾನೆ.

27. ರಾಜಾ ಮತ್ತು ರಾಣಿ

ರಾಜನೊಬ್ಬನಿದ್ದನು
ನನಗೆ ಶಿಕ್ಷೆ ಕೊಟ್ಟನು
ನಸುಕಿನಲ್ಲಿ ಎದ್ದೆನು
ಕತ್ತಲಲ್ಲೆ ಹೊರಟೆನು
ಬನದ ರಾಜ ಕುಣಿಯುತಿದ್ದ
ಮತ್ತನಾಗಿ ಮುದವ ಬೀರಿ
ದಾಡಿಮಫಲ ವೃಕ್ಷದಲ್ಲಿ
ಕುಳಿತು ಅದರ ಕೊಂಬೆಯಲ್ಲಿ
ನೋಡುತಿದ್ದೆನದನು ನಾನು
ಮಧ್ಯದಲ್ಲಿ ಮುರಿದು ಬಿತ್ತು
ಅಂದು ನೋಟ ನಿಂತೆ ಹೋಯ್ತು
ಅಷ್ಟರಲ್ಲಿ ರಥವು ಬಂತು
ಇಷ್ಟಸಿದ್ಧಿ ಪ್ರಾಪ್ತವಾಯ್ತು
ಇಂಥ ಶಿಕ್ಷೆ ನನಗೆ ಕೊಟ್ಟ ರಾಜನಾರು ?
ಅದನು ನೀನು ಬಲ್ಲೆಯಾ ?

ರಾಣಿಯೊಬ್ಬಳಿದ್ದಳು.
ಅವಳ ಕತೆಯನೆಲ್ಲ ನಂಬಿ
ಶ್ರದ್ಧೆಯಿಂದಲಿದ್ದೆನು.
ನನಗೆ ಶಿಕ್ಷೆಯಾದುದನ್ನು
ರಾಣಿ ಕೇಳಿ ನನ್ನನೊಮ್ಮೆ
ನೋಡಿ ಸುಮ್ಮನಿದ್ದಳು.
ಮುಖವ ಕೆಳಗೆ ಮಾಡಿಕೊಂಡು
ತನ್ನ ಮನೆಗೆ ನಡೆದಳು.
ಅಂದು ಅವಳು ಉಣ್ಣಲಿಲ್ಲ.
ಶಿಕ್ಷೆ ಅವಧಿ ಮುಗಿವವರೆಗು
ರಕ್ಷೆ ಇತ್ತು ಕಾಯ್ದಳು.

ಕಣ್ಣೀರನು ತುಂಬಿಕೊಡು
ನನ್ನ ನೆತ್ತಿ ತಬ್ಬಿಕೊಂಡ
ರಾಣಿಯಾರು ? ಬಲ್ಲೆ ನಾನು
ಬಲ್ಲೆ ಬಲ್ಲೆ ಅದನು ನಾನು

28. ಹುಲ್ಲಿನಲ್ಲಿ ವಿಟ್ಯಾಮಿನ್

ಹುಲ್ಲಿನಲ್ಲಿ ವಿಟ್ಯಾಮಿನ್
ಕುದುರೆ, ಕರು, ಆಡು, ದನ
ತಿಂದು ಅದನು ಬದುಕಿವೆ.
ನಿತ್ಯ ಇದನು ನೋಡುವೆ.

ನಮಗು ಅದನು ತಿನ್ನಲು
ಹೇಗೆ ಸಾಧ್ಯವೆನ್ನಲು
ಅನುಕೂಲನು ಮುಂದೆ ಬಂದು
ವ್ಯರ್ಥ ಖರ್ಚು ಏಕೆ ಎಂದು
ನಿತ್ಯ ತಿಂದು ಸಾಧಿಸು
ಹೊಟ್ಟೆಯನ್ನು ರೂಢಿಸು
ಎಂದು ನಮಗೆ ಹೇಳಿದ
ತಾನು ಮಾತ್ರ ಜಾರಿದ

ಗೃಹಿಣಿ ಮನೆಯನೆಲ್ಲ ಬಿಟ್ಟು
ಮಾನವಹಿತ ಪಣವ ತೊಟ್ಟು
ಹುಲ್ಲುತಿಂದು ಬದುಕಿರೆಂದು
ಕಾಡಸೇರಿ ಕುಳಿತಳು

ದಿನಗಳೆರಡು ಕಳೆಯಲಿಲ್ಲ
ಜನಗಳಾರು ಉಳಿಯಲಿಲ್ಲ
ಇದನು ಕಂಡ ಜ್ಞಾನಿಯು
ಹೆದರಿ ಕಣ್ಣು ಮುಚ್ಚಿದ.

29 ಗೇಘೊ ಬಾಬಾ

ಉಧೊ : ಏನೋ ? ಸಿಕ್ಕರೇನು ಅವರು ?

ಗೋಬರಾ : ಸಾಕು ಬಿಡು ಮಹಾರಾಯಾ? ನಿನ್ನ ಮಾತನ್ನು ಕೇಳಿ ಒಂದು ತಿಂಗಳಿನಿಂದ ಮನೆ, ಮಠ, ಗುಡಿ, ಗುಂಡಾರ, ಹಳ್ಳ, ಕೊಳ್ಳ ಹುಡುಕಿ ಹುಡುಕಿ ಮೈಯೊಳಗಿನ ಎಲುಬೆಲ್ಲ ಪುಡಿಪುಡಿಯಾಗಿ ಹುಡಿಗೂಡಿ ಹೋಗಿವೆ. ಸುದ್ದಿ ಇಲ್ಲ; ಸುಳಿವಿಲ್ಲ. ಒಂದ ಎಳಿಕೂಡ ಕೈಗೆ ಹತ್ತಿಲ್ಲ.

ಪಂಚು : ಯಾರ ಶೋಧ ನಡಿಸಿರುವೆ ?

ಗೋಬರಾ : ಗೇಘೊ ಬಾಬಾರ ಶೋಧವನ್ನು.

ಪಂಚು : ಗೇಘೊ ಬಾಬಾ ? ಅವರು ಯಾರು ?

ಉಧೊ : ಗೊತ್ತು ಇಲ್ಲವೆ ನಿನಗೆ? ಊರಲ್ಲಿ, ಕೇರಿಯಲ್ಲಿ, ಇಡೀ ಜಗತ್ತಿನಲ್ಲಿ ಎಲ್ಲರಿಗೂ ಗೊತ್ತೇ ಇದೆ.

ಪಂಚು : ಇರಲಿ ಬಿಡು. ಅವರೇನು ಮಾಡುತ್ತಾರೆ? ಅದನ್ನು ತುಸು ಹೇಳು.

ಉಧೊ : ಬಾಬಾ ಅವರು ಯಾವ ಗಿಡ ಹತ್ತಿ ಕೂಡುತ್ತಾರೆಯೋ ಆ ಗಿಡ ಕಲ್ಪತರು ಆಗುತ್ತದೆ. ಕೆಳಗೆ ನಿಂತು ಕೈ ಒಡ್ಡಿ ಏನು ಕೇಳುವೆಯೋ ಅದೆಲ್ಲ ಸಿಗುತ್ತದೆ!

ಪಂಚು : ಯಾರು ನಿನಗೆ ಇದನ್ನು ಹೇಳಿದವರು ?

ಉಧೊ : ಧೋಕಡಪುರದ ಭೇಕೂ ಸರದಾರ ನನಗೆ ಇದನ್ನು ಹೇಳಿದನು. ಬಾಬಾ ಒಂದು ದಿನ ಅಂಜೂರಿ ಹಣ್ಣಿನ ಗಿಡವನ್ನು ಏರಿ ಕುಳಿತುಕೊಂಡರು. ಕಾಲು ಕೆಳಗೆ ಇಳಿ ಬಿಟ್ಟಿದ್ದರು. ಅವು ಗಾಳಿಯಲ್ಲಿ ತೂಗಾಡುತ್ತಿದ್ದವು. ಭೇಕೂನಿಗೆ ಗೊತ್ತೇ ಇರಲಿಲ್ಲ. ಕೆಳಗಿನಿಂದ ಹೋಗುತಿದ್ದ ಅವನ ತಲೆಯ ಮೇಲೊಂದು ಮಣ್ಣಿನ ಮಡಕೆ; ಅದರಲ್ಲಿ ಗುಡುಗುಡಿ ತಂಬಾಕು ತಯಾರಿಸಲು ಬೇಕಾದ ಎಲ್ಲಾ ಸಾಮಾನುಗಳು ಇದ್ದವು. ಬಾಬಾ ಅವರ ಕಾಲು ಗಡಿಗೆಗೆ ತಾಗಿತು. ಗಡಿಗೆ ಉರುಳಿ ಒಳಗಿನದೆಲ್ಲ ಭೇಕೂನ ಮುಖಕ್ಕೆ ಹತ್ತಿಬಿಟ್ಟಿತು. ಬಾಬಾ ದಯಾವಂತರು. ಕೇಳಿದರು, "ಭೇಕು ನಿನ್ನ ಮನದ ಇಚ್ಛೆ ಏನಿದೆ ಅದನ್ನು ಬಿಚ್ಚಿ ಹೇಳು" ಎಂದು. ಭೇಕು ಪೆದ್ದ. "ಬಾಬಾ, ಒಂದು ತುಣುಕು ಅರಿವೆ ಕೊಡಿರಿ, ಮುಖ ಒರಸಿಕೊಳ್ಳುತ್ತೇನೆ" ಎಂದು ಕೇಳಿದ. ಹೇಗೆ ಕೇಳಿದನೊ ಹಾಗೆ ಗಿಡದಿಂದ ಕೆಳಗೆ ಬಿತ್ತು, ಒಂದು ಟಾವೆಲ್ಲು. ಮುಖ, ಕಣ್ಣು, ಕಿವಿ ಒರಸಿಕೊಂಡು ಮೇಲೆ ನೋಡುತ್ತಾನೆ, ಅಲ್ಲಿ ಯಾರೂ

ಇಲ್ಲ. ಕೇಳಿಕೊಳ್ಳುವುದು ಮಾತ್ರ ಒಂದೇ ಸಲ. ಆಮೇಲೆ ಅತ್ತು ಅತ್ತು ಕಿರಿಚಿಕೊಂಡರೂ ಬಾಬಾ ಮತ್ತೆ ಸಿಗಲಿಕ್ಕಿಲ್ಲ.

ಪಂಚು : ಹಾಯ್ ಹಾಯ್ ! ಒಂದು ಶಾಲು, ಒಂದು ಧೋತರ ಕೂಡ ಅಲ್ಲ. ಕೇವಲ ಒಂದು ಟಾವೆಲ್ಲು. ಭೇಕೂನಿಗೆ ಆಗ ಏನು ಅನಿಸಿರಬೇಡ.

ಉಧೊ : ಅದು ಹೋಗಲಿ ಬಿಡು. ಆ ಟಾವೆಲ್ಲಿನಿಂದಲೇ ಅವನ ಶನಿಬಿಟ್ಟು ಹೋಯಿತು. ನೋಡಿದೆಯೋ ಇಲ್ಲವೊ? ರಥದ ಕೆರಿಯು ಮೇಲೆ ಎಷ್ಟು ದೊಡ್ಡ ಚಪ್ಪರದ ಮನೆ ನಿಂತಿದೆ. ಅದೆಲ್ಲ ಆ ಟಾವೆಲ್ಲಿನ ಪುಣ್ಯದಿಂದ. ಅದರಿಂದಲೇ ಆದ ಮನೆ ಅದು !

ಪಂಚು : ಅದು ಹೇಗೆ ಆಯಿತು ! ತುಂಬ ಚಮತ್ಕಾರ ಬಿಡು ! ಟಾವೆಲ್ಲಿನಿಂದ ಛಪ್ಪರದ ಮನೆ ಆಗುವುದೆಂದರೇನು ?

ಉಧೊ : ಕಳೆದ ಪ್ರತಿಪದೆಯ ಜಾತ್ರೆಯಲ್ಲಿ ಭೇಕು ಒಂದು ದಿನ ಬಾಬಾ ಅವರ ಟಾವೆಲ್ಲು ಹಾಸಿ ಎದುರಿಗೆ ಕುಳಿತನು. ಸಾವಿರಾರು ಮಂದಿ ಬಂದರು. ಬಾಬಾ ಅವರ ಹೆಸರಿನ ಮಹತ್ವ ಅದು. ಒಂದು ರೂಪಾಯಿ, ಎಂಟು ಆಣೆ, ನಾಲ್ಕು ಆಣೆ, ಕೊನೆಗೆ ಒಂದು ಆಣೆ ಹಿಡಿದು ಯಾರು ಬಟಾಟಿಗೆ ಬಟಾಟಿಯನ್ನೂ ಕೂಡ ಆ ಟಾವೆಲ್ಲಿನ ಮೇಲೆ ರಾಸಿ ರಾಸಿಯಾಗಿ ತಂದು ತಂದು ಹಾಕಿದರು. ಬಟಾಟಿ ಒಂದೇ ಅಲ್ಲ ! ಮೂಲಂಗಿ, ಮೆಣಶಿನಕಾಯಿ, ಅದು, ಇದು, ತಮ್ಮ ಹತ್ತಿರ ಏನು ಇದ್ದಿತೊ ಅದನ್ನು. ಸುತ್ತೂ ಕಡೆಯಿಂದ ಬಂದು ಬಿದ್ದದ್ದೇ ಬಿದ್ದದ್ದು. ಹೆಂಗಸರು ಬಂದು “ಏ ಭೇಕು ದಾದಾ, ಬಾಬಾರ ಟಾವೆಲ್ಲನ್ನು ನಮ್ಮ ಕೂಸಿನ ಮೈಗೆ ಹೊದಿಸು. ಮೂರುತಿಂಗಳಿಂದ ಜ್ವರ ಬರುತ್ತಿದೆ. ಜ್ವರ ಕಡಿಮೆ ಆಯಿತು. ಅಂದರೆ ಐದ ಚಟಾಕ ಅಕ್ಕಿ, ತುಪ್ಪ, ಎಲೆ, ಅಡಿಕೆ ಎಲ್ಲವನ್ನೂ ತಂದುಕೊಡುತ್ತೇನೆ” ಎಂದು ಬೇಡಿಕೊಂಡರು.

ಪಂಚು : ಅವರೇನೋ ಬೇಡಿಕೊಂಡರು. ಆದರೆ ಅದರಿಂದ ಫಲ ಸಿಕ್ಕಿತೊ ಇಲ್ಲವೊ ?

ಉಧೊ : ಸಿಗದೆ ಏನು ! ಗಾಜನಪಾಲಹಳ್ಳಿಯಿಂದ ಒಂದು ೧೫ ದಿನ ಕಾಳು ಬಂದೇ ಬಂದವು. ಆಮೇಲೆ ಈ ಟಾವೆಲ್ಲಿಗೆ ಸುತ್ತು ಅಂಚು ಹಚ್ಚಲಿಕ್ಕೆ ಎಂದು ಪೋಸ್ಟಿನಿಂದ ಒಬ್ಬರು ಹಣ ಕಳಿಸಿಕೊಟ್ಟರು. ಅಂಚೆಯಿಂದ ಈ ಹಣ ಬಂದ ದಿನದಿಂದ ಜನರೂ ಬರತೊಡಗಿದರು. ಇಡೀ ಹನ್ನೊಂದು ತಿಂಗಳ ತನಕ ಜನ ಬಂದದ್ದೇ ಬಂದದ್ದು. ಗಾಜನಪಾಲಹಳ್ಳಿಯ ಪುಣ್ಯವೇ ತೆರೆಯಿತು. ಜನ ಟಾವೆಲ್ಲಿಗೆ ನಡೆದುಕೊಂಡದ್ದೇ ನಡೆದುಕೊಂಡದ್ದು. ನಮ್ಮ ರಾಜರ ಮನೆಯ ಕೊತವಾಲನಿಗೆ ಆದ ಸಿದ್ಧಿ ಸುಳ್ಳೇನು ಮತ್ತೆ ! ಅವನ ಗಡ್ಡ ಎಷ್ಟು ಉದ್ದ ಬಂದಿತಲ್ಲ.

ಪಂಚು : ನಿಜವೇ ? ನೀನು ಹೇಳುವುದೆಲ್ಲ ನಿಜವೇ ?

ಉಧೊ : ನಿಜವಲ್ಲದೆ ಏನು ? ಗಾಜನಪಾಲಾದಲ್ಲಿ ನಮ್ಮ ಮಾವಾ ಅವರ ಅಣ್ಣನ ಮಗ ಇರುತ್ತಾನೆ.

ಪಂಚು : ಇರಲಿ ಬಿಡು ಉಧೊ. ಆ ಅಂಗವಸ್ತ್ರ, ಟಾವೆಲ್ಲು ನೀನು ನೋಡಿರುವೆಯಲ್ಲವೆ ?

ಉಧೊ : ನೋಡದೆ ಏನು ? ನೋಡೇ ನೋಡಿದ್ದೇನೆ.

ಪಂಚು : ಏನು ನೀನು ಹೇಳುವುದು? ಆ ಗಿಡದಲ್ಲಿ ಆ ಟಾವೆಲ್ಲು ಹೇಗೆ ಬಂತು? ಅದು ಹೇಗೆ ಕೆಳಗೆ ಬಿತ್ತು ? ಎಲ್ಲಿಂದ ಬಂತು ?

ಉಧೊ : ಇದರಲ್ಲಿಯೇ ಎಲ್ಲ ರಹಸ್ಯ ಅಡಗಿದೆ. ಬಾಬಾರ ದಯಾ ಅದು.

ಪಂಚು : ನಡಿ ಮತ್ತೆ ; ನಡಿ. ನಾವೂ ಬಾಬಾ ಅವರನ್ನು ಹುಡುಕುತ್ತ ಹೋಗೋಣ. ಆದರೆ ಅವರ ಗುರುತನ್ನು ಹಿಡಿಯುವ ಬಗೆ ಹೇಗೆ ?

ಉಧೊ : ಅದು ನೋಡು ತುಂಬ ಕಷ್ಟದ್ದು. ಯಾರೂ ಅವರನ್ನು ನೋಡಿಲ್ಲ.

ಪಂಚು : ಮುಂದೆ ಉಪಾಯ ?

ಉಧೊ : ನಾನು ಸಂತೆ, ಜಾತ್ರೆ ನೆರೆದ ಸ್ಥಳಗಳಲ್ಲೆಲ್ಲ ಹೋಗಿ, ಕೈಮುಗಿದು ಕಂಡವರನ್ನೆಲ್ಲ ಗಂಭೀರವಾಗಿ ಕೇಳುತ್ತೇನೆ. "ಅಯ್ಯಾ, ನೀವು ಗೇಭೋ ಬಾಬಾ ಏನು ?" ಎಂದು. "ದಯವಿಟ್ಟು ಹೇಳಿರಿ" ಎಂದು ಅಂಗಲಾಚಿ ನಾನು ಕೇಳುತ್ತೇನೆ. ಹಿಂದೆ ಒಂದು ಸಲ ನಾನು ಇದೇ ರೀತಿ ಮಾಡಿದೆ. ಜನರು ಸಿಟ್ಟಿಗೆದ್ದರು. ಒಬ್ಬರಂತೂ ತಮ್ಮ ಹುಕ್ಕಾದ ನೀರು ನನ್ನ ಮುಖದ ಮೇಲೆ ಚಲ್ಲಿದರು.

ಗೋಬರಾ : ಹೋಗಲಿ ಬಿಡು. ಆದರೂ ನಾವು ನಿರಾಶರಾಗುವುದು ಬೇಡ. ಹುಡುಕಿ, ಹುಡುಕಿ, ಅದನ್ನು ಗೊತ್ತುಹಚ್ಚಿಯೇ ಬಿಡುವಾ ! ನಮ್ಮ ದೈವದಲ್ಲಿ ಇದ್ದದ್ದು ಆಗುತ್ತದೆ.

ಪಂಚು : ನೀನು ಪೂರ್ಣ ಹುಚ್ಚ. ಗಿಡ ಹತ್ತಿದ ಸಮಯದಲ್ಲಿ ಮಾತ್ರ ಬಾಬಾರ ಗುರುತು ಹಿಡಿಯಲಿಕ್ಕೆ ಸಾಧ್ಯ. ಕೆಳಗೆ ಇಳಿದರೆ ಹೋಯಿತು. ಮತ್ತೆ ಗುರುತು ಸಿಕ್ಕುವುದೇ ಇಲ್ಲ.

ಉಧೊ : ಗಿಡಾ ಹತ್ತಿ ಹತ್ತಿ ಬಾಬಾ ಅವರ ಗುರುತು ಹಿಡಿದು ಅವರನ್ನು ಹುಡುಕುವುದು ಹೇಗೆ ಸಾಧ್ಯ. ಇದಕ್ಕೆ ನಾನೊಂದು ಉಪಾಯ ತೆಗೆದಿದ್ದೇನೆ. ನಮ್ಮದೊಂದು ಮಾವಿನ ಮರವಿದೆ. ಮರದ ತುಂಬ ಕಾಯಿಗಳು ತುಂಬಿವೆ. ಅವುಗಳನ್ನೇ ಕೇಳಿ ನೋಡುವೆ. ಬಾಬಾ ಅವರ ಪರಿಚಯ ಮನುಷ್ಯರಿಗಿಂತ ಗಿಡಗಳಿಗೆ ಹೆಚ್ಚು ಇದ್ದರೂ ಇರಬಹುದು.

ಪಂಚು : ನಡಿ ಹಾಗಾದರೆ ಬೇಗ ಹೋಗೋಣ. ವ್ಯರ್ಥ ಸಮಯ ಕಳೆಯುವುದು ಬೇಡ. ದೈವಬಲವಿದ್ದರೆ ಅವಶ್ಯ ದರ್ಶನವಾಗುತ್ತದೆ. ಒಂದು ಸಲ ದೊಡ್ಡ ದನಿ ತೆಗೆದು ಕರೆದು ಬಿಡೋಣ! ಏನಾಗುತ್ತದೆಯೊ ನೋಡೋಣ! "ಗೇಭೋ ಬಾಬಾ ! ಗೇಭೊ ಬಾಬಾ, ದಯಾಮಯನಾದ ನೀನು ಈ ತೋಟದಲ್ಲಿ ಎಲ್ಲಿಯಾದರೂ ಅಡಗಿ ಕುಳಿತಿದ್ದರೆ, ಒಂದು ಸಲ ಈ ನಿರ್ಭಾಗ್ಯರಿಗೆ ದರ್ಶನ ಕೊಡು." ಎಂದು ಕೂಗಿ ಕರೆದು ನೋಡೋಣ.

ಗೋಬರಾ : ನಿಜ. ನಿಜ. ಅನುಗ್ರಹವಾಯಿತೆಂದು ತೋರುತ್ತದೆ.

ಪಂಚು : ಹೇಗೆ ? ಅದು ಹೇಗೆ ? ಎಲ್ಲಿ ?

ಗೋಬರಾ : ನೋಡು. ನೋಡು. ಓ ಅಲ್ಲಿ. ಗಿಡ ನಡೆದುಹೋಗುತ್ತಿದೆ. ಕಾಣಿಸುವುದಿಲ್ಲವೆ?

ಪಂಚು : ಏನೋ, ಏನು ಹೇಳುತ್ತೀ? ನನಗೇನೂ ಕಾಣಿಸದಾಗಿದೆ.

ಗೋಬರಾ : ನೋಡು. ನೋಡು. ಅದು ಹೇಗೆ ಜೋತಾಡುತ್ತಿದೆ, ನೋಡು.

ಪಂಚು : ಅದು ಬಾಲ. ಅಲ್ಲಿ ಜೋತಾಡುತ್ತಿರುವುದು. . .

ಉಧೊ : ಗೋಬರಾನ ಬುದ್ಧಿ ಎಂತಹದಾದರೂ ಇದ್ದೀತು? ಅದು ಬಾಬಾರ ಬಾಲ ಅಲ್ಲ. ಹನುಮಂತನ ಬಾಲ. ಸೊಟ್ಟ ಮುಖಮಾಡಿ ಮೇಲೆ ಕುಳಿತದ್ದು ಕಾಣಿಸುವುದಿಲ್ಲವೇನು?

ಗೋಬರಾ : ಬಾಬಾ ನಮಗಾಗಿ ಮಾರುತಿ ರೂಪ ಧರಿಸಿ ಬಂದಿದಾನೆ. ಏನು ಕಪ್ಪು ಮುಖ ಅದು! ನಮ್ಮನ್ನ ಪರೀಕ್ಷಾಮಾಡಬೇಕು ಎಂದು ಈ ರೀತಿ ಮಾಡುತ್ತಾನೆ.

ಪಂಚು : ನಾನೇನೂ ಮರೆತಿಲ್ಲ. ಆ ಕಪ್ಪು ಮುಖವನ್ನು ನೋಡಿ ನಾನೇನೂ ಮೋಸಹೋಗುವುದಿಲ್ಲ. ಬಾಬಾ! ಓ ಬಾಬಾ, ನಿಮ್ಮ ಈ ಶ್ರೀ ಬಾಲಕ್ಕೆ ನನ್ನ ಅನಂತ ವಂದನೆಗಳು.

ಗೋಬರಾ : ನೋಡು. ಅಲ್ಲಿ ನೋಡು. ಅದು ಜಿಗಿದು ಟಣ್ಣನೆ ಹಾರಿ ಓಡಿಹೋಗಹತ್ತಿದೆ.

ಪಂಚು : ಎಲ್ಲಿ ಓಡಿಹೋಗಲು ಸಾಧ್ಯ? ನಮ್ಮ ಭಕ್ತಿಗಿಂತ ಮುಂದೆ ಓಡಿಹೋಗಲು ಸಾಧ್ಯವೇ ಇಲ್ಲ.

ಉಧೊ : ಪಂಚು, ಏಳು ಗಿಡ ಹತ್ತು.

ಪಂಚು : ನೀನೂ ಏಳು ಮತ್ತೆ.

ಉಧೊ : ನೀನು ಮೊದಲು ಏಳು.

ಪಂಚು : ಅಷ್ಟು ಮೇಲಕ್ಕೆ ಗಿಡಹತ್ತಿ ನಾನು ಹೋಗಲಾರೆ. ಬಾಬಾ, ಏ ಬಾಬಾ, ಕೃಪೆಮಾಡಿ ಇಳಿದು ಬಾ. ನನಗೆ ಇಲ್ಲಿಯೇ ದರ್ಶನವನ್ನು ಕೊಡು.

ಉಧೊ : ಬಾಬಾ, ನಿಮ್ಮ ಪರಮ ಪೂಜ್ಯ ಈ ಶ್ರೀ ಬಾಲದಿಂದ ಉರುಲು ಹಾಕಿಕೊಂಡು ಪ್ರಾಣಬಿಡಲು ಕೂಡ ನಾವು ಸಿದ್ಧರಿದ್ದೇವೆ. ದಯಮಾಡಿ, ಬಾಬಾ, ಕಣ್ಣು ತೆರೆದು ನಮಗೆ ಆಶೀರ್ವಾದ ಮಾಡು. ಬಾಬಾ, ಓ ಬಾಬಾ!

(ಎಂದು ಚೀರುತ್ತ ಎಲ್ಲರೂ ಹೋಗುವರು)

(ಸೂತ್ರಧಾರನು ಪ್ರವೇಶಿಸುವನು)

ಸೂತ್ರಧಾರ : ಮಂದಬುದ್ಧಿಯ ಜನರೆ, ಇದನ್ನು ಕಂಡು ನಗುವಿರಲ್ಲವೇ?

ಇಲ್ಲ. ಯಾವ ಮನುಷ್ಯ ಎಲ್ಲದರಲ್ಲಿ ವಿಶ್ವಾಸ ತಾಳುವನೋ ಅವನನ್ನು ನಗೆಗೇಡು ಮಾಡುವುದು ಸಾಧ್ಯವಿಲ್ಲ. ಸುಲಭವೂ ಇಲ್ಲ. (ಹೋಗುವನು).

ಹಿಂದೆ ಪರದೆಯ ಹಿಂದೆ ಒಂದು ಧ್ವನಿ: ಪುಪೆ ಅಕ್ಕನ ಬಳಿಗೆ ಹೋಗಿ ಗೇಭೊ ಬಾಬಾನ ಸುದ್ದಿ ಹೇಳಲಿಕ್ಕೆ ನನಗೆ ಭಯವಾಗುತ್ತಿದೆ. ನನ್ನ ಮುಖ ನೋಡಿದರೆ ಸಾಕು. ಅವಳಿಗೆಲ್ಲ ತಿಳಿದುಹೋಗುವುದು. ಇರಲಿ. ನಾಳೆ ಪರೀಕ್ಷೆ ಮಾಡಿ ನೋಡಿಬಿಡುವೆ. ವಿಶ್ವಾಸ ಹುಟ್ಟದೇ ಹೋದರೂ ತಮಾಷೆಯಾದರೂ ಆಗುವುದು. ಇದೇನು ಅವಳೇ ಇತ್ತ ನನ್ನ ಕಡೆಗೆ ಬರುತ್ತಿರುವಳಲ್ಲ. "ಗೇಭೋ ಬಾಬಾ ಅವರ ಹತ್ತಿರ ಹೋಗಿ ಏನು ವರ ಕೇಳಿಕೊಳ್ಳುವೆ" ಎಂದು ಪಕ್ಕನೆ ಅವಳು ನನ್ನನ್ನು ಕೇಳಿದರೆ ನಾನು ಅದಕ್ಕೆ "ನಮ್ಮ ಪುಪು ಅಕ್ಕನಿಗೆ ಒಂದು ಪೆನ್ನು ಕೊಡು. ಆ ಪೆನ್ನು ತೆಗೆದುಕೊಂಡು ಪರೀಕ್ಷೆಯಲ್ಲಿ ಕುಳಿತು ಲೆಕ್ಕ ಬಿಡಿಸಲಿಕ್ಕೆ ಪ್ರಾರಂಭಿಸಿದರೆ ಎಲ್ಲ ಲೆಕ್ಕಗಳೂ ತಾವಾಗಿಯೇ ಸರ ಸರ ಬಂದುಬಿಡಬೇಕು. ಉತ್ತರ, ಸರಿಯಾದ ಉತ್ತರ ಸಿಕ್ಕುಬಿಡಬೇಕು. ಅಂತಹ ಪೆನ್ನು ಕೊಡು ಎಂದು ಕೇಳುತ್ತೇನೆ. ಆಗ ಪುಪು ದಿದಿ ನಗುತ್ತ ತುಂಬ ಸಂತೋಷದಿಂದ ತನ್ನ ಕೈಯಿಂದ ಚಪ್ಪಾಳೆ ಹೊಡೆದು ಅನ್ನುತ್ತಾಳೆ. "ಎಷ್ಟು ಮಜಾ ಆಗುತ್ತದೆ ಹಾಗಾದರೆ?" ಎಂದು.

30. ಅಕ್ಕ

ಒಂದು ನದಿಯು ತೀರದಲ್ಲಿ
ಕೂಲಿಯೊಬ್ಬನಿದ್ದನು.
ಅದನು ಇದನು ಮಾಡಿಕೊಂಡು
ಬಾಳ ನಡೆಸುತಿದ್ದನು.

ಅವನದೊಂದು ಚಿಕ್ಕ ಹುಡುಗಿ
ನೀರಿಗೆಂದು ನದಿಯ ದಡಕೆ
ಮತ್ತೆ ಪಾತ್ರೆ ಬೆಳಗಲಿಕ್ಕೆ
ನಿತ್ಯ ಬರುತಲಿದ್ದಳು
ತಾಟು, ಥಾಲಿ ತೆಗೆದುಕೊಂಡು
ಘಾಟಿಗವಳು ನೂರು ಸಲ
ಬಂದು ಹೋಗುತಿದ್ದಳು.
ಕೈಗೆ ತೊಟ್ಟ ಕಂಚು ಬಳೆಯುಃ
ತಾಟು, ಥಾಲಿಗಳಿಗೆ ತಾಕೆ
ಠಣ್ ಠಣ್ ಎಂದು ಸ್ವರವು
ಕೇಳಿ ಬರುತಲಿದ್ದಿತು.

ದಿನವಿಡಿ ಬಲು ದುಃಖದಲ್ಲಿ
ಜೊತೆಗೆ ಅವಳ ತಮ್ಮನೊಬ್ಬ
ಬೋಳು ತಲೆ, ಮಣ್ಣು ಮುದ್ದೆ
ಮೈಗೆ ಬಟ್ಟೆ ಹಾಕೆ ಇಲ್ಲ.
ಸಾಕಿದ ಒಡಪ್ರಾಣಿಯಂತೆ
ಬೆನ್ನು ಹತ್ತಿ ಬರುತಿಹ
ಅಕ್ಕನಾಜ್ಞೆ ಪಾಲಿಸುತ್ತ
ದಡದ ಮೇಲೆ ಧೈರ್ಯದಿಂದ
ಸ್ವಸ್ಥವಾಗಿ ಕುಳಿತಿಹ
ಕೊಡವ ತುಂಬಿ ತಲೆಯ ಮೇಲೆ

ಹೊತ್ತುಕೊಂಡು ಬಗಲಲೊಂದು
ಪಾತ್ರೆಯನ್ನು ನೀರು ತುಂಬಿ
ಇರಿಸಿಕೊಂಡು ತನ್ನ ಬಲದ
ಕೈಯ ಮುಂದೆ ಮಾಡಿ ತಮ್ಮ-
ನನ್ನು ಹಿಡಿದು ಕೊಂಡು ಅವಳು
ತಾಯಿಯ ಪ್ರತಿರೂಪವಾಗಿ
ಕಾರ್ಯಭಾರದಿಂದ ಮಣಿದು
ದಣಿದು ಹೊರಟಳದೋ ನೋಡು
ತೀರ ತೀರ ಚಿಕ್ಕ ಅಕ್ಕ.

31. ಈ ದೇಶದಲ್ಲಿ ಹುಟ್ಟಿದೆನ್ನ ಜನ್ಮ ಸಾರ್ಥಕ

ಈ ದೇಶದಲ್ಲಿ ಹುಟ್ಟಿ—
ದೆನ್ನ ಜನ್ಮ ಸಾರ್ಥಕ!
ಅಮ್ಮ, ನಿನ್ನ ಪ್ರೀತಿಗೈವೆ
ನನ್ನ ಜನ್ಮ ಸಾರ್ಥಕ!

ರಾಣಿಯಂತೆ ನಿನ್ನ ಬಳಿ
ಮುತ್ತು ರತ್ನ ಇವೆಯೊ ಇಲ್ಲೊ
ಅದುವೆ ನನಗೆ ಗೊತ್ತೆ ಇಲ್ಲ.
ಆದರೇನು? ಬಲ್ಲೆ ನಾನು
ನಿನ್ನ ನೆಳಲಿನಲ್ಲಿ ನನ್ನ
ಅಂಗ ಕೂಡಿ ನಡೆವುದು

ಯಾವ ವನದಿ ಕಾಣೆ ನಾನು
ಇಂಥ ಹೂವನೆಲ್ಲಿಯೂ
ಮನವನೆಳೆದು ಹಿಡಿಯುತಿಹುದು
ಎಷ್ಟು ಇದರ ಪರಿಮಳ!

ಮೇಲೆ ಚಂದ್ರ ನಗುತಲಿಹನು
ಬೇರೆಲ್ಲಿಯೂ ಕಾಣಸಿಗನು
ಯಾವ ನಭದಿ ಉದಯಿಸುವನು
ನಗುಮೊಗದೀ ಚಂದ್ರನು

ಮೊಟ್ಟಮೊದಲು ನಿನ್ನ ಬೆಳಕ
ನೆಟ್ಟದೃಷ್ಟಿಯಿಂದ ನೋಡೆ
ಕಣ್ಣು ಕುಕ್ಕಿ ತುಂಬಿ ಹೋಯ್ತು
ಅಂದಿನಾ ಬೆಳಕಿನಲ್ಲಿ
ಇಂದು ಕಣ್ಣನಿರಿಸಿ ನಾನು
ಮುಂದೆ ಮುಂದೆ ನಡೆದಿಹೆ.

32. ಕೃತ್ರಿಮ ಕೋಟೆ

"ಜಲಸ್ಪರ್ಶ ಮಾಡೆನು ನಾ"
ಚಿತ್ತೂರರಸನು ತೊಟ್ಟ ಪಣ.
ಬುಂದಿರ ಕೋಟೆಯು ಭೂಮಿಯ ಮೇಲೆ
ಮೊದಲಿದ್ದಂತೆಯೆ ನಿಂತಕ್ಷಣ
ಕಾಣುವವರೆಗೂ ನೀರನು ಮುಟ್ಟೆನು
ಎಂಬುದು ಎನ್ನಯ ವೀರ ಪಣ.

"ಎಂಥ ಘೋರ ಪಣವು ಇದುವೆ
ಯಾರಿಂದಲು ಸಾಧ್ಯವಿಲ್ಲ."
ಎಂದ ಮಂತ್ರಿಗಣಕೆ ರಾಜ,
"ಹಾಗಿದ್ದರೆ ನಾನು ನನ್ನ
ವೀರ ಪಣವ ಸಾಧಿಸುವೆನು"
ಎಂದು ಹೇಳಿ ಕಳುಹಿದ.

ಚಿತ್ತೂರಿನ ಬಳಿ ಹತ್ತಿರದಲ್ಲೆ
ಬುಂದಿರ ಕೋಟೆಯು ನಿಂತಿತ್ತು
ಹಾರಾವಂಶದ ಭಾರೀ ಶೂರರ
ಪಂಗಡವಲ್ಲಿಯೆ ನೆಲೆಸಿತ್ತು
ಸುತ್ತು ಮುತ್ತಲು ಅದರ ಖ್ಯಾತಿಯು
ಹರಡಿತ್ತು. ವೈರಿಗಳಿಗೆ ಆಮಂತ್ರಣ
ಅದುವೆ ವೀರಾವೇಶದಿ ಕೊಟ್ಟಿತ್ತು.

ಹಾಮೂರಾಜನ ಸೈನಿಕರೆಲ್ಲರು
ದಾಳಿಯನಿತ್ತರು ಠಾಣ್ಯವ ಹೊಡೆದರು
ಬುಂದಿರಕೋಟೆಯ ಹೊರಸುತ್ತು
ಕೋಟೆಯನೆಲ್ಲವ ನೆಲಸಮ ಮಾಡಿ
ನಿಲ್ಲದೆ ಸೈನ್ಯವು ಘೂರಟಿತ್ತು.

ಯುಕ್ತಿಯನೊಂದು ಮಾಡಲು ಮಂತ್ರಿಯು
ಎಲ್ಲರ ಕರೆದನು ಕೇಳಿದನು.
ರಾತ್ರಿಯ ಸಮಯದಿ ಎಲ್ಲರು ಸೇರಿ
ಮಣ್ಣಿನದೊಂದು ಬುಂದಿರ ಕೋಟೆಯ
ಕಟ್ಟಲು ಆಜ್ಞೆಯ ನೀಡಿದನು.
ರಾಜನ ಪ್ರಾಣವ ಉಳಿಸುವ ಹಂಚಿಕೆ
ಯೊಂದನು ಮಂತ್ರಿಯು ಹಾಕಿದನು.

ನೆರೆದಿಹ ಜನರಲಿ ಕುಂಭನು ಇದ್ದನು
ರಾಣಾ ಅರಸರ ನಂಬಿಗೆ ಭೃತ್ಯ.
ಹಾರಾವಂಶದ ಹೆಸರಿಗೆ ಸ್ತುತ್ಯ.
ಚಿಗುರೆಯ ತೆರದಲಿ ಬಂದನು ಮುಂದೆ
ಹೆಗಲಲಿ ಬಿಲ್ಲೂ ಬಾಣಗಳಿಂದೆ.

" ರಜಪೂತರರಿಗೆ ಕೃತ್ರಿಮಕೋಟೆ
ಶೋಭಿಸಲಾರದು ಕೇಳಿರಿ ಎಂದೆ
ನಾನೇ ನತಶಿರ ಬುಂದಿರಕೋಟೆ
ನಿಲಿಸುವೆನಿಲ್ಲಿಯೆ ಕೃತ್ರಿಮ ಕೋಟೆ
ಮುರಿದು ಬೀಳುವುದು ಮಣ್ಣಿನ ಕೋಟೆಯು
ಸರಿಯಿರಿ ಹಿಂದಕೆ ಎಂದನು ಕುಂಭ
ಈ ಅವಮಾನವ ಸಹಿಸೆನು ಎನ್ನುತ
ತಾನೇ ನಿಂತನು ಶೌರ್ಯದ ಸ್ತಂಭ

ಸೈನಿಕರೆಲ್ಲರು ಅವನನೆ ಮುತ್ತಿ
ಕತ್ತಿಯನೆತ್ತಿ ಕತ್ತನು ಹಾರಿಸಿ
ಅಗಸೆಯ ದ್ವಾರಕೆ ಕಟ್ಟಿದರು
ಕುಂಭನ ರಕ್ತದಿ ಬುಂದಿರಕೋಟೆಯು
ಕುಂಭಸ್ನಾನವ ಗೈದಿತ್ತು
ಶಾಶ್ವತ ಧನ್ಯತೆ ಪಡೆದಿತ್ತು

33. ನಮ್ಮದೊಂದು ಚಿಕ್ಕ ನದಿ

ನಮ್ಮದೊಂದು ಚಿಕ್ಕ ನದಿ ಅಂಕಡೊಂಕ ಸಾಗಿದೆ
ವೈಶಾಖದ ತಿಂಗಳಲ್ಲಿ ಕಾಲು ಹೊಳೆಯು ಆಗಿದೆ
ದನಗಳೀಗ ಆಚೆ ದಡಕೆ ದಾಟಿ ಹೋಗಬಲ್ಲವು
ಗಾಡಿಹೋಗಿ ಬರಲು ಎರಡು ನೇರದಾರಿ ಇರುವವು.

ಲಕ ಲಕ ಲಕ ಎಂದು ಮರಳು ದಡದಿ ಹೊಳೆಯುತಿರುವುದು
ಹುಡುಕಿದರೂ ಕಾಣಸಿಗದು ಕೆಸರು, ಹುದುಲು ಕೊಳಚೆಯು
ದಡದಿ ದೂರ ಬತ್ತದ ಬೆಳೆ ಆಳೆತ್ತರ ನಿಂತಿದೆ
ಅಲ್ಲಿಂದಲೆ ನರಿಯ ಕೂಗು ರಾತ್ರಿ ಕೇಳಬರುತಿದೆ.

ಆಮ್ರಕುಂಜ, ತಾಲವೃಕ್ಷ ಸುತ್ತಿಕೊಂಡು ಸಾಗಿವೆ
ಅಲ್ಲಿ ಇಲ್ಲಿ ಮಕ್ಕಳುಮರಿ ಸ್ನಾನಮಾಡಿ ಬರುತಿವೆ
ಆಗ ಈಗ ಯಾವಾಗಲು ಜನರು ಮೀನು ಹಿಡಿವರು
ಬಿಸಿಲಿನಲ್ಲಿ ಬಾಯಾರಲು ಬಂದು ನೀರ ಕುಡಿವರು

ನವವಧುಗಳು ನದಿಗೆ ಬಂದು ಥಾಲಿ, ತಾಟು ತೊಳೆವರು
ವಸ್ತ್ರಗಳನು ಹಿಂಡಿಕೊಂಡು ಮನೆಯದಾರಿ ಹಿಡಿವರು
ತರುಣರೆಲ್ಲ ಸ್ನಾನಕೆಂದು ನದಿಗೆ ಓಡಿ ಬರುವರು
ಕೇಕೆಹಾಕಿ ಆಟವಾಡಿ ಸಂಜೆವರೆಗು ಇರುವರು

ಆಷಾಢದ ಗಾಳಿಬೀಸೆ ಮೇಲೆ ಮೋಡಕವಿವವು
ಧೋ ಧೋ ಮಳೆ ಜಡಿದು ಹೊಡೆಯೆ ನದಿಗೆ ನೀರು ಬರುವವು
ರಭಸದಿಂದ ಮೇರೆದಪ್ಪಿ ಹುಚ್ಚು ಹೊಳೆಯು ಸಾಗಿರೆ
ಮಲಗಿಕೊಂಡ ಪ್ರಕೃತಿದೇವಿ ಎಚ್ಚತ್ತಳು ನೋಡಿರೆ

34. ಲಕ್ಷ್ಮಿಯ ಪರೀಕ್ಷೆ

ಪ್ರಥಮ ದೃಶ್ಯ

ಕ್ಷೀರೊ

ಧರ್ಮಕರ್ಮವನು ಅರಸನು
ಸುಖದಲಿ ಗೆಯ್ಯುವನು.
ಬಡವನು ನಿತ್ಯದಿ ಬೆವರನು
ಸುರಿಸುತ ಸಾಯುವನು.
ರಾಣಿಯು ನೀನು ನಿನ್ನಬಳಿ
ರೂಪಾಯಿಗಳಿವೆ ನೂರಾರು !
ದಾನ, ಧ್ಯಾನ, ವ್ರತ ಆಟದ ತೆರದಲಿ
ತನ್ನಷ್ಟಕೆ ತಾ ನಡೆದಿಹವು.
ನೀನೀಡುವೆ ಬರಿ ಆಣತಿ ಮಾತ್ರ !
ದುಡಿವೆವು ನಾವು ಹಗಲೂ ರಾತ್ರಿ.
ಆದರು ನಿನ್ನಯ ಜೀವನ ಪುಣ್ಯ
ನಮ್ಮ ಹಣೆಯಲಿ ಬರೆದಿದೆ ಶೂನ್ಯ !

(ಹಿಂದೆ ನೇಪಥ್ಯದಲ್ಲಿ)

ಕ್ಷೀರೀ, ಕ್ಷೀರೀ, ಕ್ಷೀರೋ

ಕ್ಷೀರೊ

ಏತಕೊ ಈ ಕಿರಿಚಾಟವು !
ಸ್ನಾನ, ಊಟ ಎಲ್ಲವ ಬಿಟ್ಟು
ಇರಬೇಕೇ ನಾವು !

[ಕಲ್ಯಾಣಿ ರಾಣಿಯ ಪ್ರವೇಶ]

ಕಲ್ಯಾಣಿ

ಏನಾಯಿತು ? ಏಕೆ ನೀನು
ಬರುತಲಿರುವೆ ರೊಚ್ಚಿಗೆದ್ದು ?

ಕ್ಷೀರೊ

ಕೆಲಸ ಜೆನ್ನಿ ಗಂಟೆ ಇಹುದು.
ಎಷ್ಟು ಸಹಿಸಿಕೊಳ್ಳಬಹುದು
ಎನ್ನ ಮೂಳೆ ಮಾಂಸವಿದನು!
ಒಬ್ಬನಿಂದ ಎಷ್ಟು ಕಷ್ಟ!
ದಿನದಿನಕೂ ದೇಹ ನಷ್ಟ!

ಕಲ್ಯಾಣಿ

ಏಕೆ? ನಿನಗೆ ಯಾವ ಕಷ್ಟ?

ಕ್ಷೀರೊ

ಬರುವ ಜನರೊ ರಾಶಿ, ರಾಶಿ.
ನಾನಾಗಿಹೆ ಇವರೆಲ್ಲರ ದಾಸಿ.
ಬ್ರಾಹ್ಮಣರಿದ್ದರು, ಶೂದ್ರರು ಬಂದರು
ಸೇವೆಗೈದೆ ಸಾಯುವೆ ನಾ ತಿಳಿದಿರು.
ಊಟಕೆ ಕುಳಿತರೆ ಹೋಗದು ಅನ್ನ
ಎಷ್ಟು ದುಡಿದರೂ ತೀರದು ಬನ್ನ.
ಜೋಡಿಸಿ ಇಡುವೆನು ಪಾತ್ರೆಗಳನ್ನು
ಶೋಧಿಸಿ ಕೊಡುವೆನು ಎಲೆ ಅಡಿಕೆಯನು.
ಒಬ್ಬಳೆ, ಒಬ್ಬಳೆ ಮಾಡುವುದೆಷ್ಟು?
ಮಾಯೆ, ಮಮತೆ ಇರಬಾರದೆ ಇಷ್ಟು!

ಕಲ್ಯಾಣಿ

ನಿನ್ನದೆ ಆ ದೋಷ!
ತುಂಬಿದೆ ನಿನ್ನಯ
ಮುಖದಲಿ ರೋಷ.
ದಾಸ ದಾಸಿಯರು
ಯಾರೂ ತಡೆಯರು
ಕ್ಷಣ ಸಹ ನಿಲ್ಲರು
ನಿನ್ನೆದುರು.

ಕ್ಷೀರೊ

ಮಾತಿದು ಸತ್ಯ.
ಅನ್ಯಾಯವ ನಾ ಸಹಿಸುವುದೆಂತು?
ಬಂದವರೆಲ್ಲ ಕಳ್ಳರೆ ಇಹರು.
ಎರಡೂ ಕೈಯಲಿ ಕದಿವರು ಅವರು.

ಅವರನು ನಾ ಹೊರಗಟ್ಟದಿರೆ
ಉಳಿವೆನೆ ನಾನು ನಿಮ್ಮೆದುರೆ ?

ಕಲ್ಯಾಣಿ

ಕಳ್ಳನು ಮಾಧವ ; ಕಳ್ಳನು ಮಾಧು
ನೀನೊಬ್ಬಳೆ ಅತಿ ಅತಿ ಸಾಧು !

ಕ್ಷೀರೊ

ನಾನೊಬ್ಬಳೆ ಸಾಧು ? ಅಪ್ಪಯ್ಯಾ !
ಎಂಥ ಸುಳ್ಳು !
ಬಾಯಿಂದೆಂದೂ ಆಡಿಲ್ಲ
ತಲೆಯಲ್ಲಿಂದೂ ತಂದಿಲ್ಲ
ಎರಡೂ ಕೈಹಿಡಿಗಳ ತುಂಬ
ತೆಗೆಯುವೆ, ತಿನ್ನುವೆ
ಎರಡೂ ಹೊತ್ತು.
ಆಶೀರ್ವಾದವ ಪಡೆಯುವೆ
ನಿಮ್ಮಯ ಬಳಿ ಸಾರಿ. ಆದರೆ,
ಹಿಡಿಯಲಿ, ಹಿಡಿಗಿಂತೆಷ್ಟೂ
ಹಿಡಿಸಲು ಸಾಧ್ಯವು ಇಲ್ಲವೆ ಇಲ್ಲ.
ಮನೆಗೈತರುವರ ಸಂಖ್ಯೆಯು ನಿತ್ಯ
ಬೆಳೆಬೆಳೆದಂತೆಯೆ ಬೇಡುವ ಕೈಗಳ
ಸಂಖ್ಯೆಯು ಕೂಡ ಬೆಳೆಯುವುದು.
ಕೊಳ್ಳುವುದಕೆ ಬರಿಕೈಗಳನು
ಬ್ರಹ್ಮನು ಸೃಜಿಸಿಹ ನೋಡಕ್ಕ !

ಕಲ್ಯಾಣಿ

ಹೋಗಲಿ ಬಿಡು ! ನಿನಗೇತಕೆ ಅದುವೆ !
ನಿನ್ನೆ ಸಂಜೆ ಏನಾಯಿತು ನಡುವೆ ?
*ಚಂದ್ರಪುಲಿಗಳು ಸಾಲದೆ ಹೋದವು
*ರಸ್ಕಾರಗಳು ಇರಲೇ ಇಲ್ಲ.
ಅತಿಥಿ ಸೇವೆಯಲಿ ಬಂದಿತು ಕೊರತೆ
ನಿನ್ನನು ಕೇಳಲು ನಾನೇ ಮರೆತೆ.

ಕ್ಷೀರೊ

ಹೀಗೇತಕೆ ಬರಿ ಹೇಳುವಿರಮ್ಮ !
ನಾನೇ ನನ್ನಯ ಕೈಯಿಂದೆಣಿಸಿ

---

* ಬಂಗಾಲದ ಸಿಹಿ ತಿಂಡಿಯ ಹೆಸರುಗಳು.

ಪ್ರತಿಯೊಬ್ಬರಿಗೂ ಎರಡೆರಡಿರಿಸಿ
ಬಡಿಸಲು ಕೊಟ್ಟೆನು ಎಲ್ಲರ ಎಲೆಗೆ.

ಕಲ್ಯಾಣಿ

ನಾನೇ ಎಲ್ಲರ ಎಲೆಯನು ನೋಡಿದೆ.
ಬರಿ ಎಲೆ; ಅದರೊಳು ಏನಿರಲಿಲ್ಲ!

ಕ್ಷೀರೊ

ಅವ್ವಯ್ಯಾ? ಇದಕೇನೆನ್ನಲಿ
ತಿಳಿಯದು ತಾಯೆ!
ಅಷ್ಟೊಂದಡಿಗೆಯ ವಸ್ತುಗಳೆಲ್ಲ
ಹೋದವು ಎಲ್ಲಿ? ಬಲ್ಲವರಿಲ್ಲ.

ಕಲ್ಯಾಣಿ

ಪ್ರತಿಯೊಬ್ಬರಿಗೂ ಬಟ್ಟಲು ತುಂಬ
ಹಾಲನು ಕೊಡಲು ನಿರ್ಧರಿಸಿದ್ದೆ.
ಆದರೆ ಕೊನೆಗೆ, ಅರ್ಧ ಬಟ್ಟಲು
ಕೊಡಲೂ ಕೂಡ ಆಯಿತಸಾಧ್ಯ!

[ನೆರೆಹೊರೆ ಜನರ ತಂಡದ ಪ್ರವೇಶ]

ಜನತಂಡ

ಜಯ ಜಯವಾಗಲಿ ಮಹಾರಾಣಿ
ಚಿರಜಯವಾಗಲಿ ಕಲ್ಯಾಣಿ!

ಕ್ಷೀರೊ

ಕೇಳಿರಿ ಅಕ್ಕ! ಕೇಳಿರಿ ರಾಣಿ.
ಬಾರದು ಬರಿ ಒಡಲಿಂದೀ ವಾಣಿ.

[ಕಲ್ಯಾಣಿಯೊಂದಿಗೆ ಜನರ ತಂಡದ ಪ್ರಸ್ಥಾನ]

ಬಿನಿ, ಕಿನಿ, ಕಾಶೀ ಏ ಕಾಶೀ (ಕೂಗಿ ಕರೆಯುವಳು)

ಕಾಶೀ

ಏಕಕ್ಕ? ಕರೆದೆಯಾ?

ಕಿನಿ

ಏನಮ್ಮ ಕರೆದೆಯಾ?

ಬಿನಿ

ದೊಡ್ಡಮ್ಮ ಕರೆದೆಯಾ?

ಕ್ಷೀರೊ

ಬನ್ನಿರೆಲ್ಲರು ಊಟಕ್ಕೆ.

ಬಿನಿ

ಹಸಿವೆ ಎಷ್ಟೂ ಇಲ್ಲಮ್ಮ !

ಕ್ಷೀರೊ

ಸಿಕ್ಕದ್ದು ಬೆಳಗಿನಲಿ ತಿಂದಿರೇನಮ್ಮ ?

ಬಿನಿ

ರಸ್ಕಾರಗಳನು ಬಲು ತಿಂದು
ಎನ್ನಯ ಹೊಟ್ಟೆಯು ಬಿರಿಯುತಿದೆ.

ಕ್ಷೀರೊ

ಹೆಚ್ಚೇನಿಲ್ಲವೊ ಊಟಕ್ಕೆ ಬರಿ ನಾಲಕ್ಕು
ಚಂದ್ರಪುಲಿಗಳನು ತಿನ್ನಿರಿ ಮತ್ತೆ
ಎರಡೇ ಬಟ್ಟಲು ಹಾಲನು ಕುಡಿದು
ಮಲಗಿರಿ ಎನ್ನ ಮಾಣಿಕ ರತ್ನ.

ಕಾಶಿ

ಎಷ್ಟು ತಿನ್ನುವುದು ? ದಿನವಿಡಿ ಅಮ್ಮ ?

ಕ್ಷೀರೊ

ನಾವು ತಿನ್ನುವುದು ನಮ್ಮ ಹಸಿವೆಯು
ಆಧೀನದೊಳೆಂದಿಗು ಅದು ಇಲ್ಲ.
ಒಡಲಿನ ಕಿಚ್ಚಿಗೆ ಆಹುತಿಯಾಗಿಹ
ಬಡವರು ಜಗದಲಿ ಎಷ್ಟಿಲ್ಲ !
ಅವರ ಬಾಯಿಗೆ ಅನ್ನವೆಂದಿಗೂ
ತನ್ನಷ್ಟಕೆ ತಾ ಬಿದ್ದಿಲ್ಲ.
ಬಡಬಗ್ಗರಿಗೆ, ಹಳ್ಳಿಯ ಜನರಿಗೆ
ನಿರ್ಧನಿಕರಿಗೆ, ಪತಿತರಿಗೆ
ಚಂದ್ರಪುಲಿಗಳನು ತಿನ್ನುವ ಪುಣ್ಯವ
ಬ್ರಹ್ಮನು ಹಣೆಯಲಿ ಬರೆದಿಲ್ಲ.
ಅವುಗಳ ತಿನ್ನುವ ಬಯಕೆಯು ಅವರಿಗು
ಆಗದೆ ಎಂದಿಗು ಹೋಗಿಲ್ಲ.
ತಿನಿಸಿನ ಬೆಲೆಯೇ ಹಸಿವೆಯ ಬೆಲೆಯು !
ಏ ಬಿನಿ, ನಿನ್ನಯ ಬೆಳ್ಳಿಯ ಬಾಚಣಿಗೆ,
ಕನ್ನಡಿ ಕಪಾಟಿನ ಮೇಲದು ಕಾಣೆ !

ಬಿನಿ

ಅದನ್ನೋ ? ಆ ಗುಡ್ಡದ ರೈತನ ಮಗಳು
ಕಾಡಿಬೇಡಿ ತಕ್ಕೊಂಡೆ ಹೋಗಿಹಳು.

ಕ್ಷೀರೊ

ಹಾಯ್ ! ಹಾಯ್ !
ತಿನ್ನುವ ಬಯಕೆಯೆ ಎಲ್ಲಲ್ಲು !
ಕೊಡುವ ಗಾಳಿ ಬೀಸಿದೆ ಬಿಡು ನಿನ್ನಲ್ಲು.

ಬಿನಿ

ಇಲ್ಲವೆ ಇಲ್ಲ. ಸುತರಾಂ ಇಲ್ಲ.
ಚಿಕ್ಕಮ್ಮಾ !

ಕ್ಷೀರೊ

ನಿಮ್ಮದು ಅಹುದೇ ಈ ಹಣ ರಾಶಿ ?
ಬಡವರ ಮೇಲೆ ದಯೆತೋರುವುದೆ ?
ನಿಮಗಂಟಿದ ಅತಿ ಕಡುರೋಗ
ಅದುವೇ ಒದಗಿಹ ದುರ್ಯೋಗ
ನಡೆಯಿರಿ, ತಾಯಿಯು ಆ ಮನೆಗೆ
ಹಿಡಿಸದು ಇಲ್ಲಿಯು ಹವೆ ನಿಮಗೆ !
ರಾಣಿಯು ದಾನವನೆಷ್ಟೇ ಗೈದರು
ತೀರದು ಯಾವುದು ಎಷ್ಟೇ ಹೋದರು.
ನೀವೇನಾದರು ಇತ್ತರೆ ಕೋಪ.
ನಾವೇ ತೆಗೆದೆವು ಎಂದಾರೋಪ.

ಮನದಲಿ ಬರುವುದು ಇಲ್ಲಿಯೆ ತಂದಿಡಬೇಕೆಂದು
ಭಿಕ್ಷೆಬೇಡಿ ಸಂಗ್ರಹಿಸಲೆಂತು ನಾ ? ಜೀವವೆ ಸಾಕೆಂದು.
ಊಟವ ಮಾಡದೆ ಹಾಲನು ಕುಡಿಯದೆ ನೀವಿದ್ದು
ಪಾಠವೆನಗೆ ಕಲಿಸುವಿರಿ ಪಾಪ ! ಅರಿಯದಂತೆ ಬಿದ್ದು.
ಇರುವವರೆಗು ನಾ ನೋಡಿಕೊಳುವೆ ಆದಷ್ಟು ; ಅಷ್ಟು ಇಷ್ಟು.
ಸತ್ರಮೇಲೆ ಉಪವಾಸ ನಡೆಯಲಿ ಮನದೊಳು ಇದ್ದಷ್ಟು !
ಆತ್ಮಹತ್ಯೆಗೂ ಆಸ್ಪದ ದೊರೆಯದು ಜೀವಿಸಿರುವವರೆಗು.
ದೇವನು ಕೂಡ ಏನೂ ಮಾಡನು ಪ್ರಾಣವಿರುವವರೆಗು.
ಊಟ ಗೀಟ ಮುಗಿದಿಹವು ಮತ್ತೆ ಏನಿಲ್ಲ ಮಲಗಿರಿನ್ನು
ಮಧ್ಯರಾತ್ರಿ ಸರಿದಿಹುದು ಮಲಗಿ, ಮಾಡಿ ನಿದ್ದೆಯನ್ನು.

[ಕಿನಿ, ಬಿನಿ, ಕಾಶಿ ಎಲ್ಲರ ಪ್ರಸ್ಥಾನ]

ಕಲ್ಯಾಣಿಯ ಪ್ರವೇಶ

ಕೇಳಿದೆಯಾ ಅಕ್ಕ? ಹೊಸ ಸುದ್ದಿಯನೊಂದ.

ಕಲ್ಯಾಣಿ

ನನಗದರೊಳು ನಂಬಿಗೆ ಬರಲಿಲ್ಲ.
ಆದರು ಏನದು? ಹೇಳಲ್ಲ!

ಕ್ಷೀರೊ

ಹೇಳುವೆ ಕೇಳು. ಆಟದ ಮಾತಿದು ಅಲ್ಲಮ್ಮ!
ಮಾವನ ಕಾಗದ ಬಂದಿದೆಯೊಂದು ಊರಿಂದ.
ಉಳಿವುದೊ ಇಲ್ಲವೊ ನಮ್ಮಯ ನಾಯಿಯು
ಬಲವಾಗಿದ್ದರು ಆಗಿದೆ ಅದಕೆ ಕಾಯಿಲೆಯು.
ಔಷಧ ತಂದು ಕೊಡಬೇಕೆಂದರೆ, ಕೈಯಲಿ ಹಣವಿಲ್ಲ.
ನೀನಿದ ಕೇಳಿ, ಸುಮ್ಮನೆ ಇರುವುದು ತರವಲ್ಲ.

ಕಲ್ಯಾಣಿ

ನಾಯಿಯ ಶ್ರಾದ್ಧಕೆ ಹಣವನು ಒಯ್ದು
ಈವರೆಗಿನ್ನೂ ವರ್ಷವು ಕೂಡ ಕಳೆದಿಲ್ಲ.

ಕ್ಷೀರೊ

ನಿಜ. ನಿಜ. ಮಗಳು ಸತ್ತು ಹೋಗಿದೆ.
ಆದರೇನು? ಅದರ ತಾಯಿ ಬದುಕಿದೆ.
ಚಿಂತೆ ಇಲ್ಲ. ಅಕ್ಕ ರಾಣಿ ನಿನಗೆ ನೆನಪು
ಉಳಿದಿದೆ. ಧನ್ಯ ಸ್ಮರಣಶಕ್ತಿಗೆ!
ಎಂಥ ಬುದ್ಧಿ, ಮತ್ತಿನ್ನೇನು?
ನಿನ್ನಿಂದಾವುದು ಪಾರಾಗದು ಇನ್ನೇನು!
ಇಷ್ಟು ಮೀರಿ ಈ ಸಲ ಆ ನಾಯಿ
ಉಳಿವುದು ಸಾಧ್ಯವೇ? ಹೇ ತಾಯಿ,
ಆದರು ತಿಳಿದಿರು ಇದಕೂ ಮೊದಲು
ನಮ್ಮೀ ನಾಯಿಯು ಒಂದೂ ಸಲವೂ
ಸತ್ತಿಲ್ಲ. ಗೊತ್ತಿದೆಯೆ ರಾಣಿ?

ಕಲ್ಯಾಣಿ

ನಿಜ. ನಿಜ. ಈ ಜನ್ಮದಿ ಆ ನಾಯಿ
ಒಂದೂ ಸಲ ಸತ್ತಿಲ್ಲ; ಸುಳ್ಳಲ್ಲ.

[ಕಲ್ಯಾಣಿಯು ನಗುತ್ತ ಹೋಗುವಳು]

ಕ್ಷೀರೊ

ದೇವರನ್ನು ನೆನೆ ಮನವೇ
ದೇವರನ್ನು ನೆನೆ!
ಪರರಿಂದ ಬೇಡಿ ಪಡೆವುದರಲ್ಲಿ
ಸುಖವೂ ಇದೆ; ದುಃಖವೂ ಬಹಳ!
ಹೇ ತಾಯೆ, ಮಹಾಲಕ್ಷ್ಮಿ!
ನಿನ್ನ ವಾಹನ ಗರುಡಪಕ್ಷಿ
ಅದಕೆಷ್ಟು ಸಂಪ್ರೀತಿ ಈ ಮನೆಯ ರೀತಿ!
ಈ ಮನೆಗೆ ಬರುವುದಕ್ಕೆ, ಬಂದು
ಹೋಗುವುದಕ್ಕೆ ಅದಕೆ ಬಲು ಪ್ರೀತಿ.
ನಿನ್ನ ನಿಲ್ಲಿಗೆ ನಿತ್ಯ ಕರೆತರುವುದಿದ್ದಲ್ಲಿ,
ನಮ್ಮನೆಂದಿಗು ಅದುವೆ ಮರೆಯುತಿರಲಿಲ್ಲ.
ಅದಕೆ ಕುಂಕುಮವಿತ್ತು
ನಿನಗೆ ಸ್ವಾಗತವಿತ್ತು
ಇತ್ತ ನೈವೇದ್ಯವನು ಅದು
ತಿಂದು ತೇಗಿ, ನಮ್ಮ ಬಾಗಿಲ
ಮುಂದೆ ಪಾಪ! ಮಲಗುತ್ತಿತ್ತು.
ಹೊನ್ನ ಸರಪಳಿಯಿಂದ ಆಗ ರೆಕ್ಕೆಯ ಕಟ್ಟಿ
ಇಲ್ಲಿ ನಿಲ್ಲಿಸಿಕೊಳ್ಳುವ ಮಾತೆ ಇರಲಿಲ್ಲ.

]ಲಕ್ಷ್ಮಿಯ ಪ್ರವೇಶ]

ಯಾರು ಬಂದರು ಮತ್ತೆ?
ರಾತ್ರಿಯಲಿ ಉರಿಯುತ್ತೆ.
ದೂರ ದೇಶವ ಬಿಟ್ಟು
ಓಡುವುದೆ ಮತ್ತೆ!
ಅದು ಮಾತ್ರವೆಂದಿಗೂ ಸಾಧ್ಯವಿಲ್ಲ.

ಲಕ್ಷ್ಮೀ

ಓಡಿಹೋಗುವುದೇಕೆ? ಏಕೆ
ಮತ್ತಿನ್ನೆಲ್ಲಿ ದೂರ ಹೋಗುವುದು?

ಕ್ಷೀರೊ

ನಿಲ್ಲು. ನಿಲ್ಲು. ನೋಡುವೆ ನಾನು.
ನಿನ್ನ ತಲೆಯ ಮೇಲಿರುವುದು ಏನು?
ರತ್ನ ಖಚಿತ ಕಿರೀಟವಿದೇನು?
ಕೈಯಲಿ ಹಿಡಿದಿಹೆ ಹೊನ್ನಿನ ಪೆಟ್ಟಿಗೆ

ಅದರೊಳು ಏನಿದೆ? ಇರಲಿ ಬಿಡು.
ಇಷ್ಟು ರತ್ನ ಬಂಗಾರ ಬೇರೆ
ಯಾರಲ್ಲಿ ಇಲ್ಲವಲ್ಲ!
ಎಷ್ಟು ಹೇಳಲಿ! ಮತ್ತೆ
ಗಿಲೀಟಿನ ಆಭರಣಗಳಲ್ಲ!
ನಿಜವಾದ ರತ್ನ ಇವು
ಬರಿ ಕಲ್ಲು ಅಲ್ಲವಲ್ಲ!
ಮೈಗೆ ಯಾವ ಪರಿಮಳದ ಎಣ್ಣೆ
ಪೂಸಿರುವೆ ಹೇಳು ಹೇಳು;
ಕಮಲದ ಪರಿಮಳ ತೂರಿ
ಬರುತಲಿದೆ ನಮ್ಮ ಸುತ್ತು ಮುತ್ತು.
ಬಾ ಕಂದ, ಕುಳಿತುಕೋ.
ಮತ್ತೇಕೆ ಬಂದೆ? ಈ ಮಧ್ಯ
ರಾತ್ರಿಯಲ್ಲಿ. ಮೋಸಮಾಡುವ
ಜನರು ನಮ್ಮಲ್ಲಿ ಯಾರಿಲ್ಲ.
ಇದ್ದರೂ ಈ ಕ್ಷೀರಿ
ಇರುವನಕ ಭಯವಿಲ್ಲ.
ಹೇಳು, ನಿನ್ನಯ ಹೆಸರು
ಏನೆಂದು ಹೇಳು? ನಿಜವಾದ
ಹೆಸರನ್ನೆ ನನ್ನ ಬಳಿ ಹೇಳು.

ಲಕ್ಷ್ಮೀ

ಒಂದೆ ಹೆಸರೆನಗಿಲ್ಲ;
ಬಹಳ ಹೆಸರುಗಳಿಹವು.

ಕ್ಷೀರೊ

ಅದು ಕೂಡ ಸಾಧ್ಯವಿದೆ.
ಇಲ್ಲವೆಂದರು ಯಾರು?
ಹುಟ್ಟು ಹೆಸರಿನ ಕೂಡ
ಇಟ್ಟ ಹೆಸರುಗಳು.
ಕಪಟವನೆ ವೃತ್ತಿಯಾಗಿರಿಸಿಕೊಂಡವರು
ಸಿಕ್ಕಿಬೀಳರು ಏನೊ ಎಂದು ಯಾವೆಡೆಗು?

ಲಕ್ಷ್ಮೀ

ಹತ್ತೆಂಟು ದಿನ ಮಾತ್ರ
ಸಿಕ್ಕಿ ಬೀಳುವರವರು.

ಬಂಧನವನನುಭವಿಸಿ
ಮುಕ್ತರಾಗುವರು.

ಕ್ಷೀರೊ

ಹುಡುಗಾಟವನು ಬಿಟ್ಟು
ನಿಜವ ನೀ ಹೇಳು.
ಈ ರೀತಿ ಮಾಡುವುದು
ಸರಿಯಲ್ಲ ಕೇಳು.
ಮೋಸಮಾಡದೆ ನಿನ್ನ
ನಿಜ ಹೆಸರ ಹೇಳು.

ಲಕ್ಷ್ಮೀ

ಲಕ್ಷ್ಮೀ.

ಕ್ಷೀರೊ

ನಿನ್ನ ಮುಖಕಾಂತಿಯೇ
ಅದನು ಹೇಳುವುದು.
ಲಕ್ಷ್ಮಿ ಹೆಸರಿರುವವರು
ಬಹಳ ಜನರಿಹರು.
ಯಾರ ಲಕ್ಷ್ಮಿಯು ನೀನು ?
ಬಿಡಿಸಿ ಹೇಳಲ್ಲ !

ಲಕ್ಷ್ಮೀ

ಒಬ್ಬಳಲ್ಲದೆ ಹೆಚ್ಚು
ನಿಜವಾದ ಲಕ್ಷ್ಮಿಯು
ತ್ರಿಭುವನದೊಳಿಲ್ಲ !

ಕ್ಷೀರೊ

ನಿಜ. ನಿಜ. ನಿಜ.
ಹಾಗಾದರಮ್ಮಯ್ಯ !
ಆ ಲಕ್ಷ್ಮಿಯೇ ನೀನು ?
ಗೊತ್ತಿಲ್ಲದಿರುವಾಗ,
ಗುರುತು ಹಿಡಿಯುವುದೆಂತು ?
ಈ ಎರಡು ಪಾದಗಳ
ಗುರುತು ನನಗಿದ್ದರೆ,
ನಾನಿಷ್ಟು ದುರ್ದೈವಿ
ಆಗುತಿರಲಿಲ್ಲ !

ಬಾರಮ್ಮ ಕುಳಿತುಕೋ!
ಈ ಮನೆಯ ಬೆಳಗು.
ಹೀಗೊಮ್ಮೆ ಬಂದಿರುವೆ;
ಹೋಗಲವಸರವೇಕೆ?
ಅದು ಮಾತ್ರವೆಂದಿಗೂ
ಸಾಧ್ಯವಿಲ್ಲಮ್ಮಾ!
ಸಿದ್ಧತೆಯ ಮಾಡುವೆನು
ಪಾದಪೂಜೆಗೆ ನಾನು.
ಬುದ್ಧಿ ಇದ್ದವರಾರು
ದಯವ ತೋರರು ಏಕೆ?
ಗೊತ್ತಿಲ್ಲವೆ ನಿನಗೆ!
ದಯವ ತೋರುವುದೊಂದು
ದುರ್ಗುಣವು, ಈ ಜಗದಿ
ಎಂದವರು ಭಾವಿಸುವರು.
ತಿಂದುಂಡು ಭೋಗಿಸದೆ
ಸತ್ತು ಹೋಗುವುದೊಂದು
ಬುದ್ಧಿ ಇಲ್ಲದ ಜನರ
ಲಕ್ಷಣವು, ವಿಷ್ಣು ಪತ್ನೀ.

ಲಕ್ಷ್ಮೀ

ಮೋಸವನೆ ಮಾಡುತ್ತ
ಹೊಟ್ಟೆ ಹೊರೆ ಹೊರೆಯುವುದು!
ಧರ್ಮಕ್ಕೆ ಅವರೆಂದು
ಹೆದರದೇ ಇಹುದು.
ಕಲ್ಯಾಣಿ, ನಿನ್ನಯ ರಾಣಿ,
ಅವರೆ ಕಳ್ಳರು! ಮೋಸ
ಮಾಡುವರು ಅವರು.

ಕ್ಷೀರೊ

ಕೊನೆಗೆನ್ನ ದೈವದಲಿ
ಇದುವೆ ಬರೆದಿತ್ತು!
ಕಳವಾದ ವಸ್ತುವನು
ಕೈಯಲ್ಲಿ ಹಿಡಿದವನೆ
ಕಳ್ಳನಾಗುವನು.
ಜನರು ಅವನನೆ ಕಳ್ಳ—

ಸೆಂದು ಕರೆಯುವರು.
ಮೋಸಹೋಗುವುದೆನ್ನ
ದೈವದಲ್ಲಿತ್ತು.
ಇನ್ನು ಎಂದಿಗು ನಾನು
ಮೋಸ ಹೋಗುವುದಿಲ್ಲ.
ಸ್ವಸ್ಥವಾಗಿರು ನೀನು.
ನೀನಾದರೂ ಕೂಡ
ವಂಚಿಸದೆ ಇರು ಮತ್ತೆ.
ಎಲ್ಲಿಯೂ ಬೇರೆಡೆಗೆ
ಹೋಗಲೇ ಬೇಡ.

ಲಕ್ಷ್ಮೀ

ಸ್ವಭಾವ ನಿನ್ನದು ಬಹಳ
ರುಕ್ಷವಾಗಿಹುದು.

ಕ್ಷೀರೊ

ಇದಕೆನ್ನ ದುಃಖವೇ
ಮೂಲ ಕಾರಣವು.
ಅದಕೆ ಈ ಜನ್ಮದಲಿ
ಇಲ್ಲ ತಾರಣವು.
ದಾಸಿಯಾಗಿಹ ನಾನು
ಬಲ್ಲೆ ದಾಸಿಯ ರೀತಿ.
ಮಾಡೆನ್ನ ರಾಣಿಯನು
ಪಡೆವೆ ರಾಣಿಯ ಪ್ರಕೃತಿ.
ಆಗೆನ್ನ ಗೌರವವು
ಘನತೆಗೇರುವುದು.
ಈಗಿನಂತತಿ ಕಡಿಮೆ
ಎಂದು ಅದು ಇರದು.
ಈಗ ಪಡೆಯುವ ಪ್ರೀತಿ
ವಿರಳವಾಗಿಹುದು
ಬೇಗ ನನಗಾಗಿಯೇ
ಮುಗಿದು ಹೋಗುವುದು.
ನನ್ನ ಮಾತಿನ ಗರ್ಭ-
ದಲ್ಲಿರುವ ಸಿಹಿಯು
ತನ್ನೊಳಗೆ ಇಂಗುತಲೆ

ತೋರುವುದು ಕಹಿಯು.
ಬೇಡಿಕೊಳ್ಳುವೆ ನಿನ್ನ
ಕಾಲೆರಡು ಹಿಡಿದು.
ಮಾಡು ರಾಣಿಯ ನೀನು
ಎನ್ನನು ಪಿಡಿದು.
ಪ್ರತಿನಿತ್ಯ ಪೂಜಿಸುವೆ;
ಹೊಸ ಜನ್ಮ ಪಡೆವೆ.
ಅತಿ ಬೇಗ ಜಗವನ್ನು
ಪೂರ್ತಿ ಬದಲಿಸುವೆ.

ಲಕ್ಷ್ಮೀ

ತಥಾಸ್ತು!
ರಾಣಿಯನ್ನಾಗಿ ನಾ
ಮಾಡಿದೆನು ನಿನ್ನ
ದಾಸಿಯಾಗಿಹ ನಿನ್ನ
ಜಗ ಮರೆವುದಿನ್ನ.
ಆದರೆನ್ನವಮಾನ
ಗೊಳಿಸದಿರು ಮತ್ತೆ
ಹೋದ ಕಡೆಯಲ್ಲೆಲ್ಲ
ಜಾಗ್ರತೆಯ ವಹಿಸುತ್ತೆ.

ದ್ವಿತೀಯ ದೃಶ್ಯ

[ರಾಣಿಯ ವೇಷದಲ್ಲಿ ಕ್ಷೀರೊ ಮತ್ತು ಅವಳ ದಾಸಿಯರು]

ಕ್ಷೀರೊ

ಬಿನಿ!

ಬಿನಿ

ಏಕೆ? ದೊಡ್ಡಮ್ಮ!

ಕ್ಷೀರೊ

ದೊಡ್ಡಮ್ಮನೆಂದೇಕೆ
ಕರೆಯುತಿಹೆ ಎನ್ನ!
ದೊಡ್ಡಮ್ಮ ಯಾರಿಲ್ಲಿ
ಹೇಳು ನೀ ಮುನ್ನ?
ರಾಣಿಯಾಗಿಹಳೀಗ
ನಿನ್ನ ದೊಡ್ಡಮ್ಮ.
ಕಾಣೆಯಾ? ಕರೆವುದೆ,

ಬರಿಯ ದೊಡ್ಡಮ್ಮ!
ಮಾಲತೀ, ಏ ಮಾಲತೀ . . .

ಮಾಲತಿ

ಏನಪ್ಪಣೆ?

ಕ್ಷೀರೊ

ರಾಣಿ ಸೋದರಿ ರಾಣಿಗೇನೆನ್ನಬೇಕು ?
ಮಾಣದೆಯೆ ಹೇಳಿಕೊಡು. ನಮ್ಮ ಮೂಢಳಿಗೆ.

ಮಾಲತಿ

ಛೀ. ಛೀ. ಬರಿಯ ದೊಡ್ಡಮ್ಮ—
ನೆನ್ನುವರೆ ಈ ರಾಣಿಯರಿಗೆ.
ರಾಣಿದೊಡ್ಡಮ್ಮ ಎಂದೆನಬೇಕು.
ನೆನಪಿರಲಿ ನಿನಗೆ.

ಕ್ಷೀರೊ

ನೆನಪಿರುವುದಲ್ಲವೆ?
ಎಲ್ಲಿ ಹೋದಳು ಕಾಶಿ?

ಕಾಶಿ

ಏಕೆನ್ನ ಕರೆದೆ ನೀ
ರಾಣಿ ಅಕ್ಕಮ್ಮ?

ಕ್ಷೀರೊ

ಜೊತೆಯಲ್ಲಿ ನಾಲ್ಕಾರು
ದಾಸಿಯರು ಇಲ್ಲವೇ ?

ಕಾಶಿ

ವ್ಯರ್ಥ ! ಬಲು ವ್ಯರ್ಥ !
ಇಷ್ಟೊಂದು ಜನರೇಕೆ?
ದಿನ ರಾತ್ರಿ ಬೆನ್ನಿಗೆ
ಅಂಟಿಕೊಂಡಿರಬೇಕು.

ಕ್ಷೀರೊ

ಮಾಲತೀ!

ಮಾಲತಿ

ಏನಪ್ಪಣೆ?

ಕ್ಷೀರೊ

ಅಷ್ಟೊಂದು ದಾಸಿಯರು
ಏಕೆ ಬೇಕೆಂಬುದನು
ಹೇಳು ಈ ಹೆಂಗಸಿಗೆ.

ಮಾಲತಿ

ನೀನೇನು ಸೆರೆಮನೆಯು
ಕೈದಿ ಹೆಣ್ಣಲ್ಲ!
ನೀನಿರುವೆ ರಾಣಿಯರ
ನಾದಿನಿಯು ಕೇಳಲ್ಲ!
ನಾವು ನೌಕರಿ ಬಿಟ್ಟು
ಹೊರ ಬಿದ್ದು ಬಂದ
ನವಾಬ ವಾಡಿಯಲಿದ್ದ
ಬೇಗಮರು ಒಂದು
ಮುಂಗುಸಿಯ ಸಾಕಿದ್ದು
ಅದಕೆ ನಾಲ್ಕೆಂಟು
ದಾಸಿಯರು; ಮತ್ತೆ
ಶೀಪಾಯಿಗಳು.

ಕ್ಷೀರೊ

ಕೇಳಿದೆಯಾ ಕಾಶಿ?

ಕಾಶಿ

ಕೇಳಿದೆನು.

ಕ್ಷೀರೊ

ಹಾಗಾದರೀಗಲೇ ಕರೆ
ನಿನ್ನ ದಾಸಿಯನ್ನು
ಸುಡುಗಾಡು ಮುಖದ
ಆ ಹಾಳು ಕಿನಿಯನ್ನು.

ಕಿನಿ

ಏಕೆನ್ನ ಕರೆದೆ ನೀ
ರಾಣಿ ಚಿಕ್ಕಮ್ಮ?

ಕ್ಷೀರೊ

ಹಾಯ್! ತೂಕ ತಪ್ಪಿದೆ; ಮತ್ತು
ಕಾಯಿದೆಯ ಮುರಿದೆ. ಮಾಲತಿ!

ಮಾಲತಿ

ಏನಪ್ಪಣೆ ?

ಕ್ಷೀರೊ

ಇವಳಿಗೀಗಲೇ ಕಲಿಸು
ಎಲ್ಲ ಕಾಯಿದೆಗಳನು.

ಮಾಲತಿ

ಬರಿ ಹೀಗೆ ಹೇಳಿದರೆ
ಯಾವ ಲಾಭವು ಇಲ್ಲ.
ಬೇಗಮರ ಬಳಿ ಇಂಥ
ಯಾವುದೂ ಸಲ್ಲ.
ಕಾನೂನು ಮುರಿದವರು
ಬದುಕುತಿರಲಿಲ್ಲ.
ಕೂಡಲೇ ಅವರನ್ನು
ಶೂಲಕೇರಿಸಿ ಮತ್ತೆ
ಅವರ ಮೂಗನೆ
ಕೊಯ್ದು ತೆಗೆಯುತಿತ್ತು.

ಕ್ಷೀರೊ

ಬಿನಿ !

ಬಿನಿ

ರಾಣಿ ಚಿಕ್ಕಮ್ಮ !

ಕ್ಷೀರೊ

ಕದ್ದು ಹೋದವೊ ಹೇಗೆ ?
ನಿನ್ನ ಕೈಯೊಳಗಿದ್ದ
ಮುದ್ದಾದ ಒಂದು ಹಿಡಿ
ಹೊಸ ಬಳೆಗಳು.

ಬಿನಿ

ಕಳವೇನು ಆಗಿರುವುದಿಲ್ಲವಲ್ಲ !

ಕ್ಷೀರೊ

ಕಳೆದುಕೊಂಡೆಯಾ ಮತ್ತೆ ?

ಬಿನಿ

ಕಳೆದು ಕೊಂಡಿಲ್ಲವಲ್ಲ !

ಕ್ಷೀರೊ

ಯಾರಾದರೂ ಬಂದು
ನಿನ್ನೊಡನೆ ಕಾದಾಡಿ
ಕೊಂಡೊಯ್ದರೇ ಮತ್ತೆ?

ಬಿನಿ

ಇಲ್ಲವೆಂದಿಗು ಇಲ್ಲ!
ರಾಣಿ ಚಿಕ್ಕಮ್ಮ!

ಕ್ಷೀರೊ

ಹಾಗೆ ಆಗಿರಬೇಕು;
ನಿನಗದುವೆ ತಿಳಿದಿಲ್ಲ.
ಇದ್ದೊಂದು ವಸ್ತುವು
ಇಲ್ಲದಾಗಿರೆ ಮತ್ತೆ
ಕದ್ದು ಹೋಗಿರಬೇಕು
ಕಳೆದುಹೋಗಿರಬೇಕು
ಠಕ್ಕರಾರಾದರೂ ಎತ್ತಿ
ಹಾಕಿರಬೇಕು; ಇಲ್ಲ-
ವಾದರೆ ಅದುವೆ ಮಾಯು-
ವಾಗಲು ಬೇರೆ ಮಾರ್ಗ ಉಂಟೇ?

ಬಿನಿ

ದಾನವಾಗಿತ್ತಿಹೆನು
ನಾನದನು ಕೈಯೆತ್ತಿ

ಕ್ಷೀರೊ

ದಾನಕೊಟ್ಟೆಯಾ ನೀನು?
ಯಾರೊ ನಿನ್ನನು ಮೋಸ-
ಗೊಳಿಸಿ ಹೋಗಿಹರು.
ಯಾರಿಗಿತ್ತಿಹೆ ನೀನು?
ಯಾರವಳು ಹೇಳು?

ಬಿನಿ

ಮಲ್ಲಿಕಾದಾಸಿಗಿತ್ತಿಹೆ ನಾನು.
ಅಷ್ಟು ಕಡುಬಡವಳನು
ಕಂಡಿಲ್ಲ ನೀನು! ರಾಣಿ ಚಿಕ್ಕಮ್ಮ!

ಕ್ಷೀರೊ

ಮಾಲತಿ ?

ಮಾಲತಿ

ಏನಪ್ಪಣೆ?

ಕ್ಷೀರೊ

ಬುದ್ಧಿ ಇಲ್ಲದ ಹೆಣ್ಣು !
ನಾಲ್ಕುಮಾತನು ಹೇಳಿ
ಈಗಲೇ ಬುದ್ಧಿಯನು
ಕಲಿಸಿಕೊಡು ಬೇಗ.

ಮಾಲತಿ

ರಾಣಿಯ ನಾದಿನಿ ರಾಣಿಯ ಅಂಶ.
ಕಾಣದು ಭೇದವು ಎನ್ನುವ ವಂಶ.
ದಾನಮಾಡಿದರೆ ಅದು ಅನ್ಯಾಯವೆ ?
ದೀನರೊಂದಿಗೀಪರಿ ಎಳೆದಾಟವೆ ?
ಹಿಂದಿನ ಶಾಸ್ತ್ರದಿ ಶ್ಲೋಕವ ಬರೆದಿದೆ
ಎಂದಿಗು ಬಡವರೆ ಸಣ್ಣವರೆಂದಿದೆ.

ಕ್ಷೀರೊ

ಮಾಲತಿ !

ಮಾಲತಿ

ಏನಪ್ಪಣೆ ?

ಕ್ಷೀರೊ

ಮಲ್ಲಿಕಾ ದಾಸಿಯನು
ಇಂದಿನಿಂದಲೆ ಮುಂದೆ
ಕೆಲಸದಲ್ಲಿರಿಸಿಕೊಳಬೇಡ
ನೋಡು ? ಏ ಮಾಲತಿ !

ಮಾಲತಿ

ಹಾಗಾದರೀಗಲೇ
ತೆಗೆದು ಬಿಡಲೇ ?
ಹೆಣ್ಣುಮಕ್ಕಳ ಮೇಲೆ
ದಯೆ ತೋರಬೇಕೆಂದು
ಚರ್ಚೆಗಳು ಇತ್ತೀಚೆ

ಹೆಚ್ಚಾಗುತಿಹುದೆಲ್ಲ
ಹುಚ್ಚಾಟವೆಂಬೆ!

ಕ್ಷೀರೊ

ಎಚ್ಚರಿಕೆ ಕೊಡುವುದಕೆ
ತಡಮಾಡಬೇಡ!
ಉಪೇಕ್ಷೆ ತೋರುವ ಚಟವು
ತರವಲ್ಲ ನೋಡ!
ಕೇಳು! ಮಾಲತಿ ಕೇಳು!
ಹೊರಗಾರೊ ದಾರಿಯಲಿ
ಕೊಳಲ ಊದುತಲಿಹರು.
ನೋಡವರು ಯಾರೆಂದು?
ಎನ್ನ ಪ್ರಿಯ ದಾಸಿ.

(ಕೊಳಲೂದುತ್ತ ತಾರಿಣಿಯು ಬಂದು ಹೋಗಿ ಮತ್ತೆ ಪ್ರವೇಶಿಸುವಳು)

ತಾರಿಣಿ

ಮಧುದತ್ತರ ಮೊಮ್ಮಕ್ಕಳ
ಮದುವೆಯು ಸಂಭ್ರಮದಿ
ಜರುಗಿತು; ಜನ ನೆರೆ-
ದಿದ್ದರು ಅತಿ, ಅವರಂಗಳದಿ.

ಕ್ಷೀರೊ

ಅರಮನೆಯ ಮುಂದಿ-
ರುವ ರಾಜಪಥದಲ್ಲಿ
ಈ ರೀತಿ ನಡೆಯುವರೆ
ಬಿದಿರನೂದುತಲಿ!
ಬಿದಿರಸ್ವರವನು ರಾಣಿ
ಸಹಿಸುವುದು ಎಂತು?
ಆದರಿಂದ ಅವಳಿಗತಿ
ತಲೆಶೂಲಿ ಬಂತು.
ಮಾಲತೀ . . .

ಮಾಲತಿ

ಏನಪ್ಪಣೆ?

ಕ್ಷೀರೊ

ನವಾಬರು ಇರುತಿಹ ಮನೆಯಲ್ಲಿ
ಈ ತೆರ ಘಟನೆಯು ಘಟಿಸಿದರೆ
ಮಾಡುತಿದ್ದರೇನನು ನೀ ಹೇಳಲ್ಲ.

ಮಾಲತಿ

ಯಾರ ಮದುವೆಯೊ ಅವರನು ಕರೆಸಿ
ಇಬ್ಬರ ಕಿವಿಯೊಳು ಬಿದಿರನು ಇರಿಸಿ
ಇಬ್ಬರ ಮಟ್ಟಿಗೆ ಕೊಳಲನು ಊದಿಸಿ
ಮೂರನೆ ದಿನ ಕೊಡುತಿದ್ದರು ಫಾಸಿ.

ಕ್ಷೀರೊ

ಕೊತವಾಲನನನು ಕರೆ ಬೇಗ
ಆತನೆ ಕೊಡಲಿವರಿಗೆ ಈಗ
ಬಾರಕೋಲಿನಿಂದಾರು ಹೊಡೆತಗಳ
ತೋರುವಂತೆ ಬಾಸುಂಡೆಗಳ.

[ದಾಸಿಯ ಪ್ರವೇಶ]

ದಾಸಿ

ಬಾಗಿಲ ಬಳಿಯಲಿ, ರಾಣಿಯರೆ,
ಯಾರೋ ದೂರದಿ ಬಂದಿಹರು.
ದೊಡ್ಡವರಂದದಿ ಕಾಣುವರು
ನಿಮ್ಮನು ನೋಡಲು ಕಾದಿಹರು.

ಕ್ಷೀರೊ

ಆನೆಯನೇರಿ ಬಂದಿಹರೆ ?
ಇಲ್ಲವೆ ರಥವನು ತಂದಿಹರೆ ?

ದಾಸಿ

ಏಕೋ ಏನೋ ಗೊತ್ತಿಲ್ಲ
ಯಾವುದನೇನೂ ತಂದಿಲ್ಲ
ನಡದೇ ನಡದೇ ಬಂದಿಹರು
ಬಾಗಿಲ ಬಳಿಯಲಿ ನಿಂದಿಹರು.

ಕ್ಷೀರೊ

ಹಾಗಾದರವರೆಂತು
ದೊಡ್ಡವರು ಹೇಳು ?

ದಾಸಿ

ರಾಣಿಯಂದದಿ ಅವರ
ಮುಖವುಂಟು ಕೇಳು.

ಕ್ಷೀರೊ

ಮುಖದಲ್ಲಿ ದೊಡ್ಡತನ
ಬರೆದಿರುವುದಿಲ್ಲ.
ಅಶ್ವರಥಗಳ ನೋಡಿ
ಹೇಳುವುದೆ ಎಲ್ಲ.

[ಮಾಲತಿಯ ಪ್ರವೇಶ]

ಮಾಲತಿ

ಕಲ್ಯಾಣಿ ರಾಣಿಯರು
ಬಂದು ನಿಂತಿಹರು ;
ರಾಣಿಯನು ನೋಡ
ಬೇಕೆಂದು ಬಂದಿಹರು.

ಕ್ಷೀರೊ

ನಡೆದು ಬಂದಿಹರೆ ?

ಮಾಲತಿ

ಅಂತೆ ಕೇಳಿದೆನು.

ಕ್ಷೀರೊ

ಹೀಗಿರಲು ಬೇರೊಂದು
ಮಾರ್ಗವೇ ಇಲ್ಲ !
ಸಮಾನ ಆಸನ ಕೊಡಲು
ಸಾಧ್ಯವೇ ಇಲ್ಲ !
ಕೆಳಗೆ ಕುಳ್ಳಿರಿಸಿದರೆ
ಆಗುವುದು ಅನ್ಯಾಯ !
ಎದಿರು ನಿಂತಿತು ಬಂದು
ಬಲು ದೊಡ್ಡ ಸಮಸ್ಯೆ
ವಿಶ್ವದಲಿ ಯಾರಿದನು
ಬಿಡಿಸರುಪಹಾಸ್ಯ !

ಪ್ರಥಮಾ

ಮಧ್ಯದಲಿ ರಾಣಿಯರ
ಆಸನವನಿರಿಸಿ,
ದೂರ ಅವರಾಸನವ
ಇರಿಸಿದರದೆಂತು ?

ದ್ವಿತೀಯಾ

ತಿರುಗಿಸಿಟ್ಟರೆ ಹೇಗೆ?
ಆಸನವನೊಂದು !
ಹೊರಳಿ ಕೂಡಲಿ ರಾಣಿ
ಒಳಗೆ ತಾ ಬಂದು !

ತೃತೀಯಾ

ತಿರುಗಿಂದು ಹೋಗೆಂದು
ಹೇಳಿದರೆ ಹೇಗೆ?
ರಾಣಿಯರ ವಾಗ್ಲಹರಿ
ಸರಿಯಿಲ್ಲದಾಗೆ !

ಕ್ಷೀರೊ

ಮಾಲತಿ !

ಮಾಲತಿ

ಏನಪ್ಪಣೆ?
ಇದಕುಪಾಯವನೇನು
ಹೇಳುವೆಯಾ ನೀನು ?

ಮಾಲತಿ

ನಿಂತು ನಿಂತು ತಾನಾಗಿಯೆ
ದಣಿಯಲು,
ಅಂತಿಮಗೊಳುವುದು
ಸಂದರ್ಶನವು.

ಕ್ಷೀರೊ

ಇಷ್ಟು ಬುದ್ಧಿ ಅಡಗಿದೆಯಲ್ಲವೆ
ನಿನ್ನಯ ಈ ಒಡಲಲ್ಲಿ !
ಭಾಪು ! ಭಾಪು !
ನಿಲ್ಲಿಸು ಮುಂದಕೆ

ಎಲ್ಲ ಕೈದಿಗಳ—
ಒಂದು ನೂರು ಮೇಲಿ-
ಪ್ಪತ್ತು ಐದು ಕೈದಿಗಳ,
ಏಕೊ ಕಾಣೆ; ಸರಿ-
ಯಾಗಲಿಲ್ಲ ಇದು!
ಐದೈದರಂತೆ ಗುಂಪಾಗಿ ನಿಲಿಸು.
ಅಲ್ಲಿ ಬೇಡ, ಇಗೊ ಇಲ್ಲಿ ನಿಲಿಸು.
ಈ ದಿಕ್ಕಿನಲ್ಲಿ ನಿಲಿಸು.
ಬೇಡ ಬೇಡ! ಕರೆ ಎಲ್ಲರನ್ನು
ನಿಲ್ಲಲವರು ಇಲ್ಲಿ ನಮ್ಮ ಮುಂದೆ!
ಬೇಡ ಬೇಡ, ಈ ರೀತಿ
ಮಾಡಿದರೆ ಕಾಣಿಸದು
ಎನ್ನ ಮುಖ. ಶಶಿ ನೀನು
ಛತ್ರಧಾರಿಣಿಯಾಗು
ಬಂದಿಲ್ಲಿ ನಿಂತುಕೊಂಡು.
ಚಾಮರವ ಬೀಸು ಭರದಿಂದ
ತಾರಿಣಿ ಮೈಯನ್ನು
ಮಣಿಸಿಕೊಂಡು!
ಮಾಲತೀ!

ಮಾಲತಿ

ಏನಪ್ಪಣೆ?

ಕ್ಷೀರೊ

ಇನ್ನು ಮೇಲವಳನ್ನು
ಎನ್ನ ದರಬಾರಕ್ಕೆ
ಕರಕೊಂಡು ಬಾರೆ ನೀನು.

[ಮಾಲತಿಯು ಹೋಗುವಳು]

ಕಿಸಿ, ಬಿಸಿ, ಕಾಶಿ ನಿಲ್ಲಿರಿ
ಹೊಯ್ದಾಡದೆ ಸ್ಥಿರವಾಗಿ
ಬಂದೆನ್ನಯ ಬಳಿ
ಎನ್ನೆರಡೂ ಬದಿಗೆ!

[ಕಲ್ಯಾಣಿ ಹಾಗೂ ಮಾಲತಿಯ ಪ್ರವೇಶ]

ಕಲ್ಯಾಣಿ

ಎಲ್ಲವು ಒಳಿತಷ್ಟೆ!

ಕ್ಷೀರೊ

“ನಮ್ಮದೆಲ್ಲ ಒಳಿತಾಗಿಯೆ
ಇರುವುದು ; ಇನ್ನಾರದು
ಇರಲಾರದು.” ಎಂದು
ನಡೆದರೆ ತಪ್ಪದು
ನಮ್ಮೊಂದಿಗೆ ಯುದ್ಧ !

ಕಲ್ಯಾಣಿ

ಒಳಿತಾಗಿರುವೆಯಾ
ಬಿನಿ ನೀನು ?

ಬಿನಿ

ಒಳಿತಾಗಿರುವೆನು ನಾನಮ್ಮ !
ಮುಖವೇತಕೆ ಬಾಡಿದೆಯಮ್ಮ
ಲಕ ಲಕ ಬಂಗಾರದ ಪ್ರತಿಮಾ ?

ಕ್ಷೀರೊ

ಇಲ್ಲದ ಹುಡುಗಾಟವ
ನಿಲ್ಲಿಸು ನೀ ಬಿನಿ
ಏತಕೆ ಚಾಚುವೆ
ಮಾತಿನ ರೋಗ ?

ಕಲ್ಯಾಣಿ

ರಾಣಿಯೆ, ಕೇಳಿನ್ನಯ ಮಾತನ್ನು.
ಮನದಲಿ ಏನನು ಹಿಡಿಯದಿರು.
ಹೇಳುವ ಮಾತಿದೆ
ಹೇಳುವೆ ನಾನು.
ಗುಟ್ಟಾಗಿಯೆ ನೀ ಕೇಳಿನ್ನು !

ಕ್ಷೀರೊ

ಇನ್ನೆಲ್ಲಿಗೆ ನಾ ಹೋಗಲಿ ಹೇಳು ?
ಎನ್ನಯದಿದುವೇ ಗುಟ್ಟಿನ ಬೀಡು.
ನನ್ನನು, ನಿನ್ನನು ಬಿಟ್ಟಿನ್ನಾರು
ಇರುವರು ಇಲ್ಲಿ ನೀ ನೋಡು !

ಕಲ್ಯಾಣಿ

ಹಾಗಾದರೆ ನಾ ಹೇಳುವೆ ಕೇಳು.
ನನ್ನಯ ಇಂದಿನ ಕಥೆಯನ್ನು
ಪಠಾಣರ ಅರಸನು ತಪ್ಪನು ಗೈದು
ಎನ್ನ ರಾಜ್ಯ ಅಪಹರಿಸಿಹನು.

ಕ್ಷೀರೊ

ಹೇಳುವೆ ಏಸು ಹಾಗಾದರೆ
ನಿನ್ನಯ ಹೂವಿನ ನಗರ,
ಗಿರಿಧರಪುರ, ಗೋಪಾಲನಗರ
ಕಾನಾಯಗಂಜ . . .

ಕಲ್ಯಾಣಿ

ನನ್ನದೆಲ್ಲವೂ ಹೋಗಿದೆ ನೋಡು!

ಕ್ಷೀರೊ

ಕೈಯಲಿ ಇರುವುದೆ
ಹಣವೇನಾದರೂ?

ಕಲ್ಯಾಣಿ

ಎಲ್ಲವು ಹೋಗಿದೆ; ಉಳಿದಿಲ್ಲೇನು.

ಕ್ಷೀರೊ

ನಿನ್ನಯ ದೈವದಿ ಇದ್ದಿತು ದುಃಖ!
ವಜ್ರದ ಒಡವೆಗಳಿದ್ದವು ನಿನ್ನಲಿ.
ನೀಲಮಣಿಯ ಆ ಕಂಠೀಸರವು.
ತೋರಮುತ್ತಿನ ಕರ್ಣಾಭರಣ
ಲಕ್ಷಾವಧಿ ಬೆಲೆ ಬರುವಾ ಕಂಕಣ
ಎಲ್ಲವನೊಯ್ದರೆ ಬಳಕೊಂಡು.

ಕಲ್ಯಾಣಿ

ಸೈನಿಕರೆಲ್ಲವನೊಯ್ದಿಹರು.

ಕ್ಷೀರೊ

ಧನಜನ ಬಲವೆಂದಿದಕೇ ಎಂಬರು
ಕಮಲದೆಲೆಯು ಮೇಲಿನ ನೀರೆಂದು!
ಹಿಂದೆ, ಮುಖದ ಮೇಲಿದ್ದ ಕಾಂತಿಯು

ಇಂದಿರಲಾರದು ಎಂದೇ ತಿಳಿದಿಹೆ.
ಅಂದಿನ ಆ ವಸ್ತುಗಳೆಲ್ಲ,
ಚಾಮರ ಛತ್ರ ಬೆಳ್ಳಿಯ ಪಾತ್ರ
ಎಲ್ಲವು ಹೋದವು ಅಲ್ಲವೆ ನಿನ್ನ?
ಮಿಂಚಿನ ತೆರದಲಿ ಧನ, ವೈಭವವು
ಎಂದಿದೆ ಶಾಸ್ತ್ರವು, ಸುಳ್ಳಲ್ಲ!
ಹಾಗಾದರೆ ಈಗಿರುವುದು ಎಲ್ಲಿ?
ಮನೆಯಾದರೂ ಇರುವುದೆ ಅಲ್ಲಿ?

ಕಲ್ಯಾಣಿ

ಸೈನಿಕರೆಲ್ಲರು ಮುತ್ತಿದರು
ಅರಮನೆ ನೆಲಸಮ ಮಾಡಿದರು.

ಕ್ಷೀರೊ

ನಾ ಕೇಳುವ ಕತೆ, ನಿಜವೇನಮ್ಮಾ?
ನಿನ್ನೆ ನೀನು ಆಗಿದ್ದೆ ರಾಣಿ!
ಇಂದಾಗಿಹೆ ನೀ ಭಿಖಾರಿಣಿ!
ಅಂತೇ ಶಾಸ್ತ್ರದಿ ಹೇಳಿದೆ ಒಂದು
ಜಗವಿದು ಬರಿ ಮಾಯೆಯು ಎಂದು.
ಧನ ಜನವೆಂಬುದು ಬರಿ ನೆರಳು
ಮಾಲತಿ, ನೀನೇನೆನ್ನುವೆ ಹೇಳು?

ಮಾಲತಿ

ಅದುವೇ ನಿಜವಾಗಿದೆಯಲ್ಲ!
ಹೆಚ್ಚಿಗೆ ಏರಲು ಪತನವೆ ಬಹುದು.

ಕಲ್ಯಾಣಿ

ಕೆಲದಿನ ನಿಮ್ಮಯ ಬಳಿಯಲ್ಲಿ
ಎನಗಿರಲಾಶ್ರಯ ದೊರೆತಲ್ಲಿ
ಎನ್ನುದ್ಧಾರವೆ ಆದಂತೆ
ನನ್ನದು ರಾಜ್ಯವು ಹೋದಂತೆ!

ಕ್ಷೀರೊ

ಅಯ್ಯೋಪಾಪ! ನೀ ಬಂದಿರುವೆಯಾ
ನಮ್ಮ ಬಳಿ. ಎಂತಹ ಸಂತೋಷದ
ಮಾತು! ಆದರೆ ಹೇಳುವೆ ಕೇಳಕ್ಕ!

ನನ್ನೀ ಅರಮನೆ ದೊಡ್ಡದೆ ಇದ್ದರು
ಜನರೂ ಇರುವರು ಮನೆತುಂಬ.
ದಿನವಿಡಿ ಗದ್ದಲ ಗೈಯುವರು
ಸ್ಥಳವೇ ದೊರೆಯದು ನಿನಗಿಲ್ಲಿ.
ಕೆಲದಿನಮಟ್ಟಿಗೆ ಈ ಮನೆಬಿಟ್ಟು
ಎಲ್ಲಾದರು ಇರು. ಬಂದಿತೆ ಸಿಟ್ಟು ?

ಕಲ್ಯಾಣಿ

ಹೋಗಲಿ ಬಿಡಿ, ನಿಮಗೇತಕೆ ಚಿಂತೆ
ಬಂದಂತೆಯೆ ನಾ ಮರಳುವೆನು.

ಕ್ಷೀರೊ

ನಿಜವಾಗಿಯೆ ನೀ ಹೋಗುವೆಯಾ ?
ಮಾಡಲೇನು ನಾ ಹೇಳುವೆಯಾ ?
ಕೊಡಬೇಕೆಂದರೆ ಸ್ಥಳವೇ ಇಲ್ಲ.
ಬರಿಸ್ಥಳವೆಲ್ಲಿಯು ಉಳಿದಿಲ್ಲ.
ನೋಡಿದ ಕಡೆ ಬರಿ ವಸ್ತುಗಳೇ
ಕೂಡಿವೆ, ಬಿದ್ದಿವೆ, ಮನೆತುಂಬ.
ಸೈನಿಕರಿತ್ತ, ಸೇವಕರತ್ತ
ನೋಡಿದೆಲ್ಲ ಕಡೆ ಜನರೇ ಜನರು.
ಬಂದಿಹೆ, ಇನ್ನೊಂದರಗಳಿಗೆ
ನಿಂದಿರು ಹೇಳಲು ಬರದೆನಗೆ.
ನಾವಿಬ್ಬರೆ ಏಕಾಂತದಲಿ,
ಕುಶಲೋಪರಿ ಮಾತಾಡುತಲಿ.
ಕೂಡಲು ಕೂಡ ಸ್ಥಳವಿಲ್ಲ.
ಹೋಗಲಿ ಬಿಡು ಆ ಈ ಮಾತು
ನಿನ್ನಯ ಒಡವೆಗಳೇನಿದ್ದರು ಕೊಡು.
ಅಡಗಿಸಿ ಇಡುವೆನು ; ಯೋಚನೆಯನು ಬಿಡು.

ಕಲ್ಯಾಣಿ

ಹೆಚ್ಚಿಗೆ ಏನನು ತಂದಿಲ್ಲ.
ನೀನೇ ಎಲ್ಲಿವೆ ನೋಡಲ್ಲ !
ಕೈಗೆರಡೇ ಬಳೆ ; ಕಾಲಿಗೆ ನೂಪುರ.

ಕ್ಷೀರೊ

ಬರುವೆಯಾ ಹಾಗಾದರೆ ನೀನಿಂದು
ಎನ್ನಯ ಮೈಯಲಿ ಸುಖವಿಲ್ಲ.

ಬೆಳಗಿನ ಔಷಧ ತಲೆಯುನೆ
ಹಿಡಿದಿದೆ! ಮಾಲತೀ. . .

ಮಾಲತಿ

ಏನಪ್ಪಣೆ?

ಕ್ಷೀರೊ

ಅರಿಯನೇ "ಕಾನಾಯಿ"
ಸ್ನಾನ ಸಮಯಕೆ ಅವನು
ಬಾರಿಸಿದನೆ ಸಾನಾಯಿ?

ಮಾಲತಿ

ತಕ್ಕ ಶಿಕ್ಷೆ ಗೈವೆ
ಸೊಕ್ಕು ಬಂದಿದೆ ಅವಗೆ.

[ಕಲ್ಯಾಣಿ ಹೋಗುವಳು]

ಕ್ಷೀರೊ

ರತ್ನ ಖಚಿತ ನನ್ನೀ ಆಸನ
ಎತ್ತಿಡು ಮಾಲತಿ ಬೇಗನೆ ಒಳಗೆ.
ಮಾಲತೀ. . . .

ಮಾಲತಿ

ಏನಪ್ಪಣೆ?

ಕ್ಷೀರೊ

ಸುಪ್ರಸಿದ್ಧರ ಸುಖವ
ನೋಡಿದೆಯಾ ನೀನು!

ಮಾಲತಿ

ನಗು ತಡೆದು ಬದುಕಿದೆನು.

ಕ್ಷೀರೊ

ನೋಡು ನನ್ನನು ನೀನು
ಹೆಸರಿನಂತೆಯೆ ರಾಣಿ!
ಸಿಕ್ಕಲ್ಲಿ, ಎಲ್ಲಿ ಬೇಕಾದಲ್ಲಿ
ರೊಕ್ಕ ರೂಪಾಯಿಗಳು,

ಬಿದ್ದಿಹವು ರಾಸಿ, ರಾಸಿ.
ಮಾಲತೀ . . . .

ಮಾಲತಿ

ಏನಪ್ಪಣೆ?

ಕ್ಷೀರೊ

ಅವರ ಆಭರಣಗಳು
ಎಷ್ಟಿದ್ದವೊ ಅಷ್ಟು
ಇನ್ನಾರಿಗೂ ಕೂಡ
ಇರಲಿಲ್ಲ ನೋಡ!
ಎರಡೆ ಬಳೆಗಳ ತೆಗೆದು
ಉಳಿದೆಲ್ಲ ಬಚ್ಚಿಟ್ಟು
ಬಂದುದನು ನೋಡಿ ನಾ
ನಗಲಿಲ್ಲ ನೋಡು.
ಉಳಿದುಕೊಂಡೆನು ಇಂತು.
ಆದರೂ ತಲೆಯ ಬಗ್ಗಿಸಲಿಲ್ಲ.
ಭಿಕ್ಷುಕಿಯ ತೆರದಲ್ಲಿ
ಭಿಕ್ಷೆ ಬೇಡಿದರೇನು?
ರಾಣಿತನ ಬಿಡಲಿಲ್ಲ
ಅದ ಮರೆಯಲಿಲ್ಲ
ಬಡತನದಿ ಇರುವವರ
ನಡಬಗ್ಗಿ ಹೋಗುವುದು
ಆದರೂ ನೋಡಿದೆಯಾ
ಇವಳೊಳಿಹ ಜಂಭ!
ಮತ್ತೇನೊ ದೂರದಲಿ,
ಅಮಿತ ಕೋಲಾಹಲವು
ಕೇಳಬರುತಿದೆಯಲ್ಲ!
ಏತಕಿದು? ಯಾವುದಿದು?

ಮಾಲತಿ

ಬಾಗಿಲಲಿ ಭಿಕ್ಷುಕರು
ಬಂದು ನಿಂತಿಹರು
ಬರಗಾಲ ಬಿದ್ದಿಹುದು
ಕೂಳಿಲ್ಲದಾಗಿಹುದು

ಸಿಕ್ಕಂತೆ ಕಿರುಚುವರು
ಕಿವುಡಾಗುವಂತೆ.

ಕ್ಷೀರೊ

ಇರುವಳಲ್ಲವೆ ರಾಣಿ,
ಕಲ್ಯಾಣಿ, ಕೊಡುವುದಕೆ.
ನನ್ನ ಬಾಗಿಲಿಗೇಕೆ?
ಈ ಜನರ ಕೇಕೆ!
ಕಳಿಸಿಕೊಡು ಅವರನ್ನು
ನಮ್ಮ ಕೇರಿಯೊಳಿರುವ
ಚಿಕ್ಕ ದೊಡ್ಡವರನ್ನು.
ಕೊಡುಗೈಯ ಮಹಾರಾಣಿ
ದಾನಿ ಕಲ್ಯಾಣಿಯ ಮನೆಗೆ
ಅಲ್ಲಿ ಅವಳೆಷ್ಟು ಕೊಡುವಳೊ
ಅದರ ಐದು ಮಡಿ ಆಹಾರ
ನಾನು ಕೊಡುವೆನು ಇಲ್ಲಿ.

[ದಾಸಿಯ ಪ್ರವೇಶ]

ದಾಸಿ

ಸಾಧ್ವಿಯು ಒಬ್ಬಳು
ಬಾಗಿಲ ಮುಂದೆ
ಕಾಯುತ ಬಂದು
ನಿಂತಿಹಳು.
ಅಪ್ಪಣೆಯಾದರೆ
ಸಪ್ಪಳವಿಲ್ಲದೆ
ಹೊಡೆದೋಡಿಸುವೆನು
ಅವಳನ್ನು.

ಕ್ಷೀರೊ

ಬೇಡ! ಬೇಡ! ಕಳಿಸಬೇಡ
ಏಕೊ ಏನೊ, ಇಂದು ಕಾಣೆ
ಸಂತಸದೊಳು ಇರುವೆನು.
ಸುಳ್ಳು ಅಲ್ಲ; ದೇವರಾಣೆ.

[ಸಾಧ್ವಿಶಿರೋಮಣಿಯ ಪ್ರವೇಶ]

ಸಾಧ್ವಿ

ಬಹು ದೊಡ್ಡ ಸಂಕಟದಿ
ಸಿಲುಕಿ ಬಂದಿಹೆನಿಲ್ಲಿ.

ಕ್ಷೀರೊ

ಅದುವೆ ಗೊತ್ತಿರುವಂಥ
ಮಾತೆ ಆಗಿಹುದು!
ಸಂಕಟದಿ ಸಿಲುಕದಿರೆ,
ಯಾರೆನ್ನ ಚಂದ್ರಮುಖ
ಬರಿ ಬಂದು ನೋಡಲಿಕೆ
ಬರಲಾರರು. ನಾನೆಲ್ಲ ಬಲ್ಲೆ!

ಸಾಧ್ವಿ

ನನ್ನ ಮನೆಯಲಿ ಇಂದು
ಕಳವಾಗಿ ಹೋಗಿಹುದು.

ಕ್ಷೀರೊ

ನನ್ನ ಮನೆಯೊಳು ಅದನು
ಹುಡುಕ ಬಂದಿಹೆ ಏನು?

ಸಾಧ್ವಿ

ಏನಾದರೂ ಕೊಟ್ಟು
ಕಳಿಸು ದಯವಿಟ್ಟು.
ನೀ ದಾನಮಾಡಿದರೆ
ನಾ ಬದುಕಿಕೊಳುವೆ!

ಕ್ಷೀರೊ

ಅನ್ಯರಪಹರಿಸಿರುವ
ನಿನ್ನ ಒಡವೆಗೆ ನಾವು
ದಯೆ ತೋರಬೇಕು!
ನಮ್ಮಿಂದ ನೀನೊಯ್ವ
ನಮ್ಮ ಒಡವೆಗೆ ಯಾರು
ದಯವ ತೋರುವರು?

ಸಾಧ್ವಿ

ಯಾರ ಭಾಂಡಾರದಲಿ
ಹಣದ ಸೌಖ್ಯವು ಇಹುದೊ,
ದಾನದಿಂದಲಿ ಅವರ
ಸುಖ ಹೆಚ್ಚಿಸುವುದು.

ದಾನಮಾಡದೆ ಕೃಪಣ-
ರಾಗಿರುವ ದುರ್ಮುಖರು
ದುಃಖದೆಡೆ ಸಾಗುವರು
ಭಿಕ್ಷುಕರ ತೆರದಲ್ಲಿ !
ನೀವು ಶಕ್ತರು ;
ನಾವು ದುರ್ಬಲರು.
ಬಂದ ಎಡರುಗಳನ್ನು
ಹಿಂದೆ ದೂಡುವ ಶಕ್ತಿ
ನಿಮ್ಮಲ್ಲಿ ನೆಲೆಸಿಹುದು.
ದಾನಮಾಡುವ ಇಚ್ಛೆ
ಇಲ್ಲದಿರೆ ನೀನೆನಗೆ
ಏನನೂ ಕೊಡಬೇಡ.
ಮಾನಹೋದವರೆಂತು
ಅಪಮಾನಗೊಳ್ಳುವರು.
ಹೋಗುವೆನು ನಾನಿನ್ನು.
ನಾನು ಬೇಡಿದುದನ್ನು
ಕೊಡುವ ಮನೆ ಯಾವುದಿದೆ ?
ಬೇಡುವೆನು ಹೇಳೆನಗೆ.

ಕ್ಷೀರೊ

ರಾಣಿ ಕಲ್ಯಾಣಿಯರ
ಹೆಸರ ಕೇಳಿಲ್ಲವೇ ?
ದಾನಶೂರರು ಎಂದು
ಖ್ಯಾತಿ ಹೊಂದಿಹರು !
ಈಗ ನೀನಿಲ್ಲಿಂದ
ಹೋಗವರ ಮನೆಗೆ.
ನಿನ್ನ ಜೋಳಿಗೆಯನ್ನು
ತುಂಬಿ ತಾ ಹೊರಗೆ.
ನೋಡದಿರೆ ನೀನವಳು
ಇರುವ ಮನೆಯನ್ನು,
ಕಳಿಸುವೆನು ನಿನ್ನೊಡನೆ
ನನ್ನ ಜನರನ್ನು.

ಸಾಧ್ವಿ

ತಥಾಸ್ತು! ಹೊರಡುವೆ ನಾನು.
ನಾನವಳ ಮನೆಯನ್ನು

ಚೆನ್ನಾಗಿ ಬಲ್ಲೆ!
ಈಗ ನಾನಿಲ್ಲಿಂದ
ಹೋಗುವೆನು ಅಲ್ಲೆ!
ನಾನೆ ಸಾಕ್ಷಾತ್ ಲಕ್ಷ್ಮಿ.
ನಿನ್ನ ಮನೆಗೈತಂದು
ಅವಮಾನಗೊಂಡೆ.
ಹಣವಿದ್ದ ಜನರಲ್ಲಿ
ಮಾನವೆಂಬುದೆ ಇಲ್ಲ.
ಮರೆಯದಿರು ನೀಸಿದಸು
ನಿತ್ಯ ಜ್ಞಾಪಿಸಿಕೊಳ್ಳು.
ಹಣವಿದ್ದ ಜನರುಂಟು
ಗುಣವಿದ್ದ ಜನರುಂಟು
ಆದರವರೆಲ್ಲರೂ
ಕಲ್ಯಾಣಿ ರಾಣಿ ಸಮ
ಆಗಲಾರರು ಎಂದಿಗು.

ಕ್ಷೀರೊ

ಹೋಗುವೆಯಾ ನೀನು? ಎನ್ನನು
ಬಿಟ್ಟು ಹೋಗುವೆಯಾ? ಸರಿ.
ವಾಡಿಕೆಯಂತೆ ನೀನೆನಗೆ
ರಾಜರಿಗೊಪ್ಪುವ ತೆರದಲಿ
ವಂದನೆ ಅರ್ಪಿಸಿ ನೀ ಹೋಗು!
ಮಾಲತಿ! ಏ ಮಾಲತಿ!
ಎಲ್ಲಿಹಳು ತಾರಿಣಿಯು?
ಎಲ್ಲಿ ಹೋದಳು ಎನ್ನ ಛತ್ರ-
ಚಾಮರದ ಧಾರಿಣಿಯು?
ಒಂದು ನೂರರ ಮೇಲೆ
ಮತ್ತೆ ಇಪ್ಪತ್ತೈದು
ದಾಸಿಹರು ಇಹರೆಲ್ಲಿ?
ಹೋದಿರೆಲ್ಲಿಗೆ ನೀವು?
ಉಳಿದವರು! ಬಿನಿ! ಕಿನಿ! ಕಾಶಿ!

ಕಲ್ಯಾಣಿ

ಹುಚ್ಚಿಯಾದೆಯಾ ನೀನು?
ನಿನಗೆ ಆಗಿದೆ ಏನು?

ಈಗಿನ್ನು ಸರಿ ರಾತ್ರಿ
ಬೆಳಗಿನ್ನು ಆಗಿಲ್ಲ.
ದೊಡ್ಡ ದನಿಯನು ತೆಗೆದು
ಕಿರುಚಿಕೊಂಡುದು ಏಕೆ?
ಹೌಹಾರಿ ಊರ ಜನ
ಎದ್ದೇಳ ಬೇಕೆ?

ಕ್ಷೀರೊ

ಅಮ್ಮಾ! ಅಮ್ಮಾ! ಏನ
ಹೇಳಲಿ ನಾನು? ಎನಗೆ
ಆಯಿತು ಏನು? ಗೊತ್ತೆ ಇಲ್ಲ!
ಸಂಪೂರ್ಣ ಸರಿರಾತ್ರಿ
ದುಃಸ್ವಪ್ನ ಬಿದ್ದಿತ್ತು
ಎನ್ನ ದುರ್ದೈವವೇ
ಎನಗದನೆ ಇತ್ತಿತ್ತು.
ಕನಸೊಡೆದು ಹೋದೊಡನೆ
ಎಚ್ಚರಾಯಿತು ಎನಗೆ.
ಅಂತೆ, ಬದುಕಿಕೊಂಡೆನು ಅಕ್ಕ!
ಹೋಗದಿರು ತುಸು ನಿಲ್ಲು.
ಎನ್ನ ಮಸ್ತಕದಲ್ಲು
ನಿನ್ನ ಚರಣದ ಧೂಳಿ
ಧರಿಸುವೆನು ನಾನು.
ನೀನೆ ಎನ್ನಯ ರಾಣಿ,
ನಾನು ನಿನ್ನಯ ದಾಸಿ,
ಇದುವೆ ಎಂದಿಗು ಎನ್ನ
ಚಿರ ಅಮರ ವಾಣಿ!

35. ಕ್ಷುದ್ರನ ಜಂಭ

ಎದೆಯನು ಉಬ್ಬಿಸಿ ತಲೆಯನು ಎತ್ತಿ
ಹಾವಸೆ ಎಂದಿತು ಹೀಗೆಂದು !
ನಾನೇ ಶಿಶಿರಗೆ ಸ್ಫೂರ್ತಿಯನಿತ್ತಿಹೆ
ಕಾಣದೆ ನಿಮಗೆಲ್ಲರಿಗೆಂದು !

36. ಕೌಟುಂಬಿಕ ವಿಚಾರ

ಮಣ್ಣಿನ ಪ್ರಣತಿಯು ದೀಪವ ಕುರಿತು
ಕಲ್ಲೆಣ್ಣೆಯು ಕುಡಿ ಹೇಳಿತು ಇಂತು :
ನಿನ್ನಯ ಕತ್ತನು ಒತ್ತಲು ಬಂದರೆ,
" ಅಣ್ಣನೆ ಬೇಗನೆ ಬಾರೆಂದು "
ಅತ್ತ ಬಾನಿನಲಿ ಅದೇ ಸಮಯದಿ
ಚಂದ್ರನು ಬಂದನು ಅದ ನೋಡಿ
ಕಲ್ಲೆಣ್ಣೆಯ ಕುಡಿ ತವಕದಿ ಕರೆದಿತು
"ಬಾರೈ ಅಗ್ರಜ" ನೀನೆಂದು.

37. ಭಕ್ತಿ ಪಾತ್ರ

ಸಡಗರದಿಂದಲಿ ತೇರನು ಎಳೆವರು
ಜನರೆಲ್ಲರು ಸೇರಿ.
ಹುಡಿಯಲಿ ಹೊರಳುತ ವಂದನೆಗೈವರು
ಭಕ್ತರು ಮಿತಿಮೀರಿ.
"ನಾನೇ ದೇವರು ಎಂದಿತು ದಾರಿಯು,"
ರಥವೆಂದಿತು "ನಾನು."
"ನಾನೇ ದೇವರು" ಎನ್ನಲು ಮೂರ್ತಿಯು
ದೇವನಕ್ಕ ತಾನು.

38. ಮಧ್ಯಮನ ಜಾಗರೂಕತೆ

ಉತ್ತಮ ನಿಶ್ಚಿಂತತೆಯಲಿ ನಡೆದನು
ಅಧಮನ ಜೊತೆಯಲ್ಲಿ.
ಅವನೇ ಮಧ್ಯಮ ಚಿಂತೆಯ ಮಾಡುತ
ಜೊತೆಯಲಿ ನಡೆದಲ್ಲಿ.

39. ಮೋಹ

ನದಿಯ ಈ ದಡವೆಂದಿತು
ಬಿಟ್ಟು ನಿಟ್ಟುಸಿರೊಂದನು.
"ಆಚೆ ದಡದಲಿ ಸರ್ವಸುಖವಿದೆ"
ಎಂಬುದನು ನಾ ಬಲ್ಲೆನು.
ನದಿಯ ಆ ದಡ ಕುಳಿತು ಬಿಟ್ಟಿತು
ದೀರ್ಘ ನಿಟ್ಟುಸಿರೊಂದನು.
"ಇದ್ದ ತುಸು ಸುಖವೆಲ್ಲ ಆ ದಡದಲ್ಲಿ"
ಎಂದದು ಹೇಳಿತು.

40 ವಿಷಮ ವಿಪತ್ತು

ಅನ್ನವಿಲ್ಲದೆ ಐದು ದಿನಗಳು,
ಹಾಲು ಒಂದೇ ಬಿಂದಿಗೆ,
ಬಂದ ಜ್ವರ ತಾ ಆರಿಹೋದರು
ಅದರ ಶಾಖವು ಉಳಿದಿದೆ.
ನೀರು ಹಾಕುವ ಸಾಬು ಹೋದನು
ಅಂತೆ ಹೋದನು ಡಾಕ್ಟರ ಬಾಬುನು
ಕುಳಿತೆನೊಬ್ಬನೆ ಏನು ತೋಚದೆ
ಮಾವ ಮಿಡಿಯನು ಕಚ್ಚುತ

ಶಾಲೆಗಂತೂ ಹೋಗಲಿಲ್ಲ
ಅದುವೆ ಎನಗತಿ ಮಂಗಲ
ಅಲ್ಲಿಯೇ ನೆಲೆಸಿಹುದು ಅದ್ಭುತ
ಗಣಿತಶಾಸ್ತ್ರದ ಜಂಗಲ್.
ದೂರದಿಂದಲೆ ಶಾಲೆ ನೋಡುತ
ಹರಿದು ಹಾಕಿದೆ ಪುಸ್ತಕ
ಆಟವಾಡುವ ಬಯಲಸೇರುತ
ಕೇಕೆ ಹಾಕಿದೆ ಚೀರುತ
ಘೋರ"ಕಿನುರಾಂ" ವೈದ್ಯರ
ಕ್ರೂರ "ಚುನಿಲಾಲ" ಡಾಕ್ಟರ
ನೆನಪು ಬಂದಿತು ; ಭಯವ ತಂದಿತು
ದೇಹ ನಡುಗಿತು ಹೆದರುತ.

ಮದ್ದು ತುಂಬಿದ ಸೀಸೆ ಮುಚ್ಚಳ
ಕದ್ದು ಮೆಲ್ಲನೆ ತೆರೆವ ಸಮಯದಿ
ಬಚ್ಚಬಾಯಿಯ ತೆರೆದ ಡಾಕ್ಟರ
ನೆನಪು ನಗೆಯನು ತಂದಿತು.
ಜ್ವರದ ಸೆರೆಯಲಿ ಸಿಕ್ಕ ವೈದ್ಯಗೆ

ಇರದು ಬಿಡುಗಡೆ ಎಂದಿಗು
ಇವರ ಕೈಯಲಿ ಸಿಕ್ಕ ಜೀವವು
ನಿರುತ ಸಂಕಟ ಪಡುವುದು
ವೈದ್ಯನಂತೆಯೆ ಜ್ವರವು ಕೂಡ
ಮಾನವನ ಚಿರ ಆಸ್ತಿಯು
ಎರಡು ರತ್ನಗಳೆಂದು ತಿಳಿಯಲು
ಯಾವ ಬಾಧೆಯು ಬಾರದು

41 ದಳ್ಳುರಿ

ಆಂದೋಲನವೆದ್ದಿದೆ ದಳ್ಳುರಿಯಂತೆ
ಆದರು ದೇವಗೆ ಬಾರದು ಚಿಂತೆ
ಏಳಿರಿ! ಏಳಿರಿ! ಬೇಗನೆ ಏಳಿರಿ!

ಅಪಾಯಸೂಚಿಸುವ ಗಡಿಯಾರದ ಗಂಟೆ
ಹಾಗೇ ನಿಂತಿದೆ ಹೌಹಾರಿ. ಇಂತಹ
ಸಮಯದಿ ಎಂತದು ಸೂಚನೆ
ಕೊಡಬಲ್ಲುದು? ಆದ ತುಸು ಹೇಳಿ!
ಭಯಸೂಚಕ ಗಡಿಯಾರದ ಗಂಟೆ
ಬಾರಿಸುವುದು ನಸು ತುಸು ತಡೆದು
ಹತ್ತಿದೆ ಬೆಂಕಿ ಮನೆಗಳಿಗೀಗ
ಏಳಿರಿ! ಏಳಿರಿ! ಬಲು ಬೇಗ!

"ಹೊತ್ತಿಲ್ಲದ ಈ ಹೊತ್ತಿನಲಿ
ಅಲ್ಲದೆ ಈ ಅಪರಾತ್ರಿಯಲಿ
ಎದ್ದರೆ ಎನ್ನಯ ತಲೆ ಸಿಡಿಯುವುದು
ಬಲು ಭೀಷಣ ಅದು ಹೊಡೆಯುವುದು
ಹೋಗಲಿ ಬಿಡು ಮನೆಮಠ ಸುಟ್ಟು
ಬೀದಿಗಳಿಲ್ಲವೆ ಅವುಗಳ ಬಿಟ್ಟು
ಕಿಡಕಿಗಳುರಿಯಲಿ ಎತ್ತರವಾಗಿ
ಬೆಂಕಿಯು ಹತ್ತಲಿ ಬಲವಾಗಿ."

42 ಕಿರಿಯ–ಹಿರಿಯ

"ನೀನಿನ್ನೂ ದೊಡ್ಡವನಾಗಿಲ್ಲ!
ಚಿಕ್ಕವನಾಗಿಯೆ ಇರುತಿಹೆ ಎಲ್ಲ!"
ಎಂದೇ ಹುಡುಗರು ಹೇಳುವರು;
ಮೋದದಿ ಆಡುತ ಕುಣಿಯುವರು.

ಅಂಣನಿಗಿಂತಲು ನಾ ಮೊದಲು
ದೊಡ್ಡವನಾಗುವೆ ಆತನ ಬದಲು.
ದೊಡ್ಡವನಾದೊಡೆ ಅಣ್ಣನ ಕಣ್ಣಿಗೆ
ಅಪ್ಪನ ತೆರದಲಿ ಕಾಣುವೆನು.
ಆಗೆಂದಾದರು ಅಣ್ಣನ ಮನಸು,
ಓದನು ಬಿಟ್ಟು ಆಟದ ಕಡೆಗೆ
ಹೋದುದನ್ನು ನಾ ನೋಡಿದರೆ,
ಗದರಿಸಿ, ಗರ್ಜಿಸಿ ಹೇಳುವೆನು
"ಸುಮ್ಮನೆ ಓದಲು ಕೂಡೆಂ"ದು
"ಕೆಟ್ಟಹುಡುಗನಿವ ಇಹನೆಂ"ದು
ಅಪ್ಪನಷ್ಟು ನಾ ದೊಡ್ಡವನಾದೊಡೆ
ಅಣ್ಣನ ಪಕ್ಷಿಯ ಗೂಡೊಳಗಿಂದ
ಒಳ್ಳೆ ಮರಿಗಳ ತೆಗೆಯುವೆನು;
ಪ್ರೀತಿಯಿಂದ ನಾ ಸಾಕುವೆನು.

ಹತ್ತೂವರೆ ಹೊತ್ತಾಗಲು ಮತ್ತೆ
ಹಟವನು ಮಾಡದೆ ಮೀಯುವೆನು.
ಕಾಲಲಿ ಮೆಟ್ಟನು ಧರಿಸುವೆನು.
ತಿರುಗಾಡಲು ನಾ ಹೋಗುವೆನು.
ಗುರುಗಳು ಬಂದು,
ಬೇಗನೆ ಸ್ಲೇಟನು ತಾರೆಂದು,
ಹೊತ್ತಾಗಿದೆ ಬರೆಯಲು ಕೂಡೆಂದು
ಹೇಳಲು, "ಮೊದಲಿನ ಹುಡುಗನು ಅಲ್ಲೆಂದು

ಅಪ್ಪನಷ್ಟು ದೊಡ್ಡವನಾಗಿಹೆನೆಂದು
ಕೂಡಲೇ ಅವರಿಗೆ ಹೇಳುವೆನು."
ನಾ ಹೇಳಿದುದನು ಗುರುಗಳು ಕೇಳಿ
"ಆಯಿತು ಬರುವೆನು" ಎಂದೆನ್ನುವರು
ಮೌನದಿ ಅಲ್ಲಿಂದೇಳುವರು.

ಸಂಜೆಯ ಸಮಯದಿ ಸೇವಕ ಬಂದು
"ಆಟಕೆ ಬಯಲಿಗೆ ನಡೆ" ಎಂದು
ಕರೆಯಲು ನನ್ನನು ನಾನದಕೆ
"ಕಾಣದೆ ಕೆಲಸವ ಮಾಡುವುದು"
ಎಂದು ಬೆದರಿಸುವೆನಾ ಅವನನ್ನು.
ತೇರನು ಎಳೆಯುವ ಜಾತ್ರೆಯಲಿ
ಭಾರೀ ಜನಗಳು ಸೇರುವರು.
ಹೆದರದೆ ಒಬ್ಬನೆ ಹೋಗುವೆನು.
ಮಾವನು ಬಂದು ಎದುರಿಗೆ ನಿಂದು
"ಜನಗಳ ಮಧ್ಯದಿ ಕಳೆದೇ ಹೋಗುವೆ;
"ಬಾರೆನ್ನೆಯ ಹೆಗಲೇರೆಂದು"
ಕರೆದರೆ ನಾನದಕೆ
"ಕಾಣದೆ ಮಾವ, ನಾನಾರೆಂದು
ಅಪ್ಪನಷ್ಟು ದೊಡ್ಡವನಾಗಿಹೆನೆಂದು
ಹೇಳುವೆ" ಅದಕೇಳಿ, "ಸರಿಬಿಡು
ಕಂದ, ನೀನೇನೆಂದರು ಬಲುಚಂದ
ಎನ್ನಯ ಮುದ್ದಿನ ಮಗು ನೀನಲ್ಲವೊ ಈಗ"
ಎಂದಭಿಮಾನದಿ ತನ್ನೊಳು ತಾನೆ
ಸಂಭ್ರಮದಿಂದಲೆ ನುಡಿಯುವನು.

ಯಾವ ದಿನದಿ ನಾ ದೊಡ್ಡವನಾಗುವೆನೊ
ಆ ದಿನ, ಗಂಗಾಸ್ನಾನವ ಮಾಡಿ ಅಮ್ಮನು
ಮನೆಯೊಳು ಹೋಗುವ ಮೊದಲೆ,
ಕಿಡಕಿಯಿಂದಲೇ ಮನೆಯೊಳು ನೋಡಿ
"ಯಾವ ಗೊಂದಲ ಇಂದಿಲ್ಲವೆ ಇಲ್ಲ"
ಎಂದುದ್ಗಾರವ ತೆಗೆಯುವಳು.
ಬೀಗವ ತೆಗೆಯಲು ನಾ ಕಲಿತಂದು
ಹಿಡಿ ಹಿಡಿ ಹಣವನು ಹೊರತೆಗೆದು
ಮನದಣಿ ದಾನವ ಮಾಡುವೆನು.

ನನ್ನಯ ಕೃತಿಯನು ಅಮ್ಮನು ಕಂಡು
"ಎಂತಹ ಆಟವು ನಿನ್ನದು ಕಂದ"
ಎಂದೆನ್ನಲು ಬಲು ಕಸಿವಿಸಿಯಿಂದ,
ನಾನದಕೆ, "ಕಾಣದೆ ಅಮ್ಮ, ನಾನೀಗ
ಅಪ್ಪನಷ್ಟು ದೊಡ್ಡವನಾಗಿಹುದ." ಎಂದೇ
ಹೇಳುತ ವೈಭವದಿಂದ ಮಾತನು ನಾನು
ಮುಂದರಿಸಿ, "ಒಳಗಿಹ ಹಣ ತೀರಿದರೇನು?
ಗಳಿಸಿ ತರಲು ನಾನಿಲ್ಲವೆ ಏನು?"
ಎಂದು ಅಮ್ಮನಿಗೆ ನಾ ಹೇಳುವೆನು.

ಆಶ್ವೀಜದಲಿ ದಸರೆಯ ಹಬ್ಬದಿ
"ಗಾಜನ" ಕೆರೆ ದಂಡೆಯ ಮೇಲೆ
ಭಾರೀ ಜಾತ್ರೆಯು ಕೂಡುವುದು.
ಅಪ್ಪನು ತನ್ನಯ ತೆಪ್ಪದಿ ಕುಳಿತು
ಹೋಗುತ ಮನದಲಿ ಎನ್ನನು ಕುರಿತು
ಚಿಕ್ಕವನೆಂದೇ ಲೆಕ್ಕವ ಹಾಕುತ
ನಾನಾ ಬಣ್ಣದ ಅಂದದ ಚಂದದ
ಚಿಕ್ಕ ಅಂಗಿ, ಪೈಜಾಮು, ಮೆಟ್ಟುಗಳ
ನನಗಾಗಿಯೆ ತಕ್ಕೊಳ್ಳುವರು
ಸಂಭ್ರಮದಿಂದಲಿ ಸಂಜೆಗೆ ಬಂದು
ನನ್ನನು ಹತ್ತಿರ ಕರೆಯುವರು.
ತೊಡಲು ಅವುಗಳನು ಹೇಳುವರು.
ನಾನಿದನೆಲ್ಲವ ಕೇಳುತಲೆ, ಮೆಲ್ಲನೆ
ಹೇಳುವೆ ಅಪ್ಪನಿಗೆ "ಅಣ್ಣನೆ
ತೊಡಲೀ ಬಟ್ಟೆಗಳ. ನಾ ನಿಮ್ಮಂತೆಯೆ
ದೊಡ್ಡವನಾಗಿಹೆ. ನನಗಿವು
ಸಾಲವು. ಕಾಣದೆ ನಿಮಗೆ"ಂದು

43. ಮುಕುಟ

ಪ್ರಥಮ ಅಂಕ

ಪ್ರಥಮ ದೃಶ್ಯ

[ತ್ರಿಪುರಾದ ಸೇನಾಪತಿ ಇಶಾಖಾನ್ ಹಾಗೂ ತ್ರಿಪುರಾದ ಕೊನೆಯ ರಾಜಕುಮಾರ ರಾಜಧರ]

ರಾಜಧರ: ನೋಡಿ ಸೇನಾಪತಿಗಳೇ, ನಾನು ನಿಮಗೆ ಮೇಲಿಂದ ಮೇಲೆ ಹೇಳುತ್ತಿದ್ದೇನೆ. ನೀವು ನನ್ನ ಹೆಸರು ಹಿಡಿದು ಕರೆಯಬೇಡಿ ಎಂದು.

ಇಶಾಖಾನ್: ಹಾಗಾದರೆ ಏನು ಹಿಡಿದು ಕರೆಯಲಿ? ಚಂಡಿಕೆ ಹಿಡಿದೊ? ಅಥವಾ ಕಿವಿ ಹಿಡಿದೊ?

ರಾಜಧರ: ನಾನು ಮೊದಲೇ ಹೇಳಿಡುವೆ. ನನ್ನ ಮಾನವನ್ನು ನೀವು ಉಳಿಸದೆ ಹೋದರೆ, ನಾನು ನಿಮ್ಮ ಮಾನವನ್ನೂ ಕೂಡ ಉಳಿಸುವದಿಲ್ಲ.

ಇಶಾಖಾನ್: ನನ್ನ ಮಾನವನ್ನು ಕಾಯುವ ಭಾರ ನಿನ್ನ ಮೇಲೆ ನಾನು ಹಾಕುವ ಹಾಗಿದ್ದರೆ ನಾನದನ್ನು ಪೇಟಿಯಲ್ಲಿಟ್ಟು ಮಾರಿಬಿಡುತ್ತಿದ್ದೆ. ತಮ್ಮ ತಮ್ಮ ಮಾನವನ್ನು ಕಾಯ್ದುಕೊಳ್ಳುವ ಶಕ್ತಿಯನ್ನು ತಾವೇ ಸಂಪಾದಿಸಿಕೊಳ್ಳಬೇಕಾಗುತ್ತದೆ.

ರಾಜಧರ: ನೀವು ಇನ್ನುಮುಂದೆ ನಿಮ್ಮ ಮಾನವನ್ನು ಕಾಯ್ದುಕೊಳ್ಳಬಲ್ಲಿರಾದರೆ ನನ್ನನ್ನು ಹೆಸರುಗೊಂಡು ಕರೆಯಕೂಡದು.

ಇಶಾಖಾನ್: ಹೋಗಲಿ ಬಿಡು. ಹಾಗೇ ಆಗಲಿ.

ರಾಜಧರ: ಇದು ಸರಿಯಾದುದಲ್ಲ.

ಇಶಾಖಾನ್: ಹಾಹಾಹಾ (ನಗುತ್ತ) ಮಹಾ ರಾಜಾಧಿರಾಜರನ್ನು ಏನೆಂದು ಸಂಬೋಧಿಸಬೇಕು? ಹುಜೂರ್, ಜನಾಬ್, ಜಹಾಪನಾ? . . .

ರಾಜಧರ: ನಾನು ನಿಮ್ಮ ಶಿಷ್ಯನೇನೋ ನಿಜ. ಆದರೆ ನೀವು, ನಾನು ರಾಜಕುಮಾರನೆಂಬುದನ್ನೇ ಮರೆತಂತೆ ತೋರುತ್ತದೆ.

ಇಶಾಖಾನ್: ಅಷ್ಟೇನೂ ಸುಲಭವಾಗಿ ಮರೆತಿಲ್ಲ. ಆದರೆ ನೀವು ರಾಜಕುಮಾರರೆಂದು ನೆನಪಿನಲ್ಲಿಟ್ಟುಕೊಳ್ಳಲು ಮಾತ್ರ ಶಕ್ತನಾಗಿಲ್ಲ.

ರಾಜಧರ: ಹಾಗಾದರೆ ನೀವು ನನ್ನ ಗುರುಗಳು ಎಂಬುದನ್ನೂ ಕೂಡ ನೆನಪಿನಲ್ಲಿಟ್ಟುಕೊಳ್ಳುವುದೂ ಕೂಡ ನನ್ನಿಂದ ಇನ್ನುಮುಂದೆ ಆಗದು.

ಇಶಾಖಾನ್: ಸಾಕು. ಬಾಯಿ ಮುಚ್ಚು.

(ದ್ವಿತೀಯ ರಾಜಕುಮಾರ ಇಂದ್ರಕುಮಾರನ ಪ್ರವೇಶ)

ಇಂದ್ರಕುಮಾರ: ಏನು ಗುರುಗಳೇ, ಏನು ನಡೆದಿದೆ?

ಇಶಾಖಾನ್ : ಕೇಳು ಹಾಗಾದರೆ. ಬಹಳ ಮೋಜಿನ ಕಥೆ. ನಿಮ್ಮಲ್ಲಿ ಯಾವ ವ್ಯಕ್ತಿ ಎಲ್ಲರಿಗಿಂತ ಕನಿಷ್ಠ, ಅಂದರೆ ಕಿರಿಯ ಆ ವ್ಯಕ್ತಿಯನ್ನು ರಾಜೋಚಿತ ಮರ್ಯಾದೆಯಿಂದ ನಾನು ಕರೆಯದೆ ಹೋದರೆ ನನ್ನ ಮರ್ಯಾದೆ ಇನ್ನು ಉಳಿಯುವಂತಿಲ್ಲ. ಈ ಮಾನ,—ಮರ್ಯಾದೆಗಳ ಎಳೆದಾಟ ನಡೆದಿದೆ ಈಗ.

ಇಂದ್ರಕುಮಾರ: ನಿಜವಾಗಿಯೂ! ನೀವು ಹೇಳುವುದಾದರೂ ಏನು? ಹಾ ಹಾ ಹಾ (ನಗುವನು).

ರಾಜಧರ: ಸುಮ್ಮನಿರು ಅಣ್ಣಾ.

ಇಂದ್ರಕುಮಾರ: ನಿಮ್ಮನ್ನು ಹಾಗಾದರೆ ಹೇಗೆ ಸಂಬೋಧಿಸಿ ಕರೆಯಬೇಕು? ಜಹಾಪನಾ? (ಹಾ ಹಾ ಹಾ.) ಮಹಾರಾಜ? (ಹಾ ಹಾ ಹಾ ಎಂದು ನಗುವನು).

ರಾಜಧರ: ಅಣ್ಣಾ, ನೀವು ಸುಮ್ಮನಿರಬೇಕೆಂದು ನಾನು ಮತ್ತೊಮ್ಮೆ ನಿಮಗೆ ಹೇಳುತ್ತೇನೆ.

ಇಂದ್ರಕುಮಾರ: ಮಹಾಶಯರೇ, ಸುಮ್ಮನಿರುವುದು ಅತ್ಯಂತ ಕಠಿಣವಾಗಿದೆ. ನಕ್ಕು ನಕ್ಕು ಹೊಟ್ಟೆ ಒಡೆದುಹೋಗುವಂತಾಗಿದೆ—ಮಹಾರಾಜ!

ರಾಜಧರ: ನೀವು ಬಹಳ ಕಠಿಣ ಹೃದಯರು.

ಇಂದ್ರಕುಮಾರ: ಶಾಂತನಾಗು. ತಮ್ಮಾ, ಶಾಂತನಾಗು. ನಿನ್ನ ಬುದ್ಧಿ ನಿನ್ನಲ್ಲಿಯೇ ಇರಲಿ. ಅದನ್ನೇನೂ ನಾವು ಬೇಕು ಎಂದು ಬಯಸುವುದಿಲ್ಲ.

ಇಶಾಖಾನ್: ಅದು ಬಹಳ ಬೆಳೆದು ನಿಂತಹಾಗೆ ತೋರುತ್ತದೆ.

ಇಂದ್ರಕುಮಾರ: ದಿಕ್ಕುಕೆಟ್ಟು ಓಡಹತ್ತಿದೆ; ಅದಕ್ಕೆ ಲಗಾಮು ಹಾಕಲೇಬೇಕು.

(ಅನುಚರರೊಂದಿಗೆ ಯುವರಾಜ ಚಂದ್ರಮಾಣಿಕ್ಯ ಮತ್ತು ಮಹಾರಾಜ ಅಮರಮಾಣಿಕ್ಯ ಅವರ ಪ್ರವೇಶ.)

ರಾಜಧರ: ಮಹಾರಾಜರ ಬಳಿಯಲ್ಲಿ ನನ್ನದೊಂದು ವ್ಯಾಜ್ಯವಿದೆ.

ಮಹಾರಾಜ: ಏನಾಗಿದೆ?

ರಾಜಧರ: ಇಶಾಖಾನ್ ಅವರು ನನ್ನನ್ನು ಯಾವಾಗಲೂ ಕಡಿಮೆ ರೀತಿಯಲ್ಲಿ ಕಂಡು ನನ್ನ ಅಪಮಾನ ಮಾಡುತ್ತಾರೆ. ಇದರ ವಿಚಾರಣೆಯನ್ನು ನೀವು ಈಗ ನಡೆಸಲೇ ಬೇಕು.

ಇಶಾಖಾನ್: ಕಡಿಮೆ ರೀತಿಯಲ್ಲಿ ನಾನಾರನ್ನೂ ಕಂಡಿಲ್ಲ. ನೀವೇ ಆ ರೀತಿ ನಡೆದುಕೊಂಡಿರುವಿರಿ. ನೀವು ರಾಜಕುಮಾರರೆಂಬುದನ್ನು ನಾನು ಬಲ್ಲೆ. ಅದರೊಂದಿಗೆ ನಾನು ಅವರ ಗುರು ಎಂಬುದನ್ನೂ ಬಲ್ಲೆ. ಅವರು ನನ್ನ ಶಿಷ್ಯರೆಂಬುದನ್ನೂ ನಾನು ಚೆನ್ನಾಗಿ ಬಲ್ಲೆ. ಈ ಸಂದರ್ಭದಲ್ಲಿ ಮಾನ—ಅಪಮಾನಗಳ ಪ್ರಶ್ನೆಯೇ ಏಳುವುದಿಲ್ಲ.

ಮಹಾರಾಜ: ಸೇನಾಪತಿ ಮಹಾಶಯರೇ, ಕುಮಾರರು ಪ್ರಬುದ್ಧರಾಗಿದ್ದಾರೆ. ಅವರ ಮಾನವನ್ನು ಉಳಿಸುವಂತೆ ನೀವು ನಡೆದುಕೊಳ್ಳಬೇಕಲ್ಲವೆ? ಇನ್ನೇನು?

ಇಶಾಖಾನ್: ಮಹಾರಾಜರು ನನ್ನ ಬಳಿ ಯುದ್ಧ ಶಿಕ್ಷಣವನ್ನು ಕಲಿತುಕೊಳ್ಳುವಾಗ ನಾನು ಅವರೊಂದಿಗೆ ಮಹಾರಾಜರಂತೆಯೇ ನಡೆದುಕೊಂಡು ಸನ್ಮಾನ ಮಾಡಿದ್ದೇನೆ. ರಾಜಕುಮಾರರ ಈ ಅಪೇಕ್ಷೆಯನ್ನೇನೂ ನಾನು ಕಡಿಮೆ ಮಾಡಿಲ್ಲ.

ರಾಜಧರ: ಬೇರೆ ರಾಜಕುಮಾರರ ಉದಾಹರಣೆಯನ್ನೇನೂ ಈಗ ತೆಗೆದುಕೊಳ್ಳುವ ಕಾರಣವಿಲ್ಲ. ಆದರೆ—. . .

ಇಶಾಖಾನ್: ರಾಜಪುತ್ರರೇ, ಸುಮ್ಮನಿರಿ. ನಾನು ನಿಮ್ಮ ತಂದೆಯವರೊಂದಿಗೆ ಮಾತಾಡುತ್ತಿದ್ದೇನೆ. ಮಹಾರಾಜ, ಕ್ಷಮಿಸಿ, ರಾಜಮನೆತನದಲ್ಲಿ ಜನಿಸಿರುವ ಎಲ್ಲರಿಗಿಂತ ಚಿಕ್ಕವರಾದ ಇವರು ದೊಡ್ಡವರಾದ ಮೇಲೆ ಕಾರಕೂನರಂತೆ ಲೆಕ್ಕಣಿಕೆ ಹಿಡಿದು ಬರೆಯಬಲ್ಲವರಾಗುತ್ತಾರೆ. ಆದರೆ ಖಡ್ಗವು ಇವರ ಕೈಯ್ಯಲ್ಲಿ ಶೋಭಿಸಲಾರದು. (ಯುವರಾಜ ಹಾಗೂ ಇಂದ್ರಕುಮಾರ ಅವರ ಕಡೆಗೆ ಬೆರಳುಮಾಡಿ ತೋರಿಸಿ) ಪರೀಕ್ಷೆಮಾಡಿ ನೋಡಬೇಕು—ಮಹಾರಾಜರು. ಇವರೂ ಕೂಡ ರಾಜಪುತ್ರರೇ ಅಲ್ಲವೆ? ಇವರು ರಾಜಗೃಹವನ್ನು ಬೆಳಗಿದ್ದಾರಲ್ಲವೆ?

ಮಹಾರಾಜ: ರಾಜಧರ, ಖಾನ್ ಸಾಹೇಬರು ಏನು ಹೇಳುತ್ತಾರೆ? ಶಸ್ತ್ರವಿದ್ಯೆಯಲ್ಲಿ ಅವರನ್ನು ಸಂತುಷ್ಟಗೊಳಿಸುವುದು ನಿನ್ನಿಂದ ಸಾಧ್ಯವಿಲ್ಲವೆ?

ರಾಜಧರ: ಅದು ನನ್ನ ದೈವದ ದೋಷ. ಶಸ್ತ್ರವಿದ್ಯೆಯ ದೋಷವಲ್ಲ. ಮಹಾರಾಜ ನನ್ನನ್ನು ಧನುರ್ವಿದ್ಯೆಯಲ್ಲಿ ಪರೀಕ್ಷೆಮಾಡಿ ನೋಡಬೇಕು. ಇದೇ ನನ್ನ ಪ್ರಾರ್ಥನೆ.

ಮಹಾರಾಜ: ಸರಿ ಹಾಗಾದರೆ. ಒಳಿತಾಯಿತು. ನಾಳೆ ನನಗೆ ಸಮಯವಿದೆ. ನಾಳೆಯೇ ಪರೀಕ್ಷೆ ಆಗಿಬಿಡಲಿ. ನಿಮ್ಮಲ್ಲಿ ಯಾರು ವಿಜಯವನ್ನು ಸಂಪಾದಿಸುವರೊ ಅವರಿಗೆ ವಜ್ರಖಚಿತ ಈ ಖಡ್ಗವನ್ನು ಕಾಣಿಕೆಯಾಗಿ ಕೊಡುತ್ತೇನೆ (ತೆರೆ).

(ಮಹಾರಾಜರು ಪರಿವಾರದೊಂದಿಗೆ ಹೋಗುವರು)

ದ್ವಿತೀಯ ದೃಶ್ಯ

(ಇಂದ್ರಕುಮಾರರ ಅಸ್ತ್ರಶಾಲೆಯ ದ್ವಾರದಲ್ಲಿ)

ಇಂದ್ರಕುಮಾರ: ಏನು ಪ್ರತಾಪ, ಏನು ನಡೆಸಿರುವೆ? ವಿಷಯವಾದರೂ ಏನು? ನನ್ನನ್ನು ಒಮ್ಮಿಂದೊಮ್ಮೆ ಅಸ್ತ್ರಶಾಲೆಗೆ ಏಕೆ ಕರೆತಂದದ್ದು?

ಪ್ರತಾಪ: ನಡುವಿನ ಅಮ್ಮಾ ಅವರು ನನಗೆ ಹೇಳಿದರು, "ಅಸ್ತ್ರಶಾಲೆಯಲ್ಲಿ ಜೀವಂತ ಅಸ್ತ್ರವೊಂದು ಪ್ರವೇಶಮಾಡಿತ್ತು" ಎಂದು. ಅವರೆಂದರು "ವಾಯವ್ಯಾಸ್ತ್ರ

ಇಲ್ಲವೆ ನಾಗಪಾಶ ಅಥವಾ ಉಳಿದ ಎಲ್ಲ ಅಸ್ತ್ರಗಳನ್ನೂ ಹುಡುಕಿ ಇಟ್ಟು ಕೊಳ್ಳುವುದು ಯೋಗ್ಯ" ಎಂದು.

ಇಂದ್ರಕುಮಾರ: ಪ್ರತಾಪ, ಸರಿಯಾಗಿ ಹೇಳು. ಕಲಿಯುಗದಲ್ಲಿ ಈ ರೀತಿ ನಡೆಯ ಬಹುದೋ ಹೇಗೆ?

ಪ್ರತಾಪ: ಅಹುದು ಕುಮಾರ, ಕಲಿಯುಗದಲ್ಲಿ ಇಂತಹದು ನಡೆಯಬಹುದು; ಸತ್ಯ ಯುಗದಲ್ಲಿ ನಡೆಯಲಾರದು. ನಡೆ. ಬಾಗಿಲ ತೆರೆದೊಡನೆ ಎಲ್ಲವೂ ಗೊತ್ತಾಗು ತ್ತದೆ.

ಇಂದ್ರಕುಮಾರ: ನೀನು ಹೇಳುವುದು ನಿಜವೆಂದು ತೋರುತ್ತದೆ. ಒಳಗೆ ಕಾಲುನಡಿಗೆಯ ಶಬ್ದವೇನೋ ಕೇಳಿಬರುವಂತಿದೆ.

(ಬಾಗಿಲು ತೆರೆಯುವರು. ರಾಜಧರನು ಹೊರಗೆ ಬರುವನು) ನಿನ್ನನ್ನಾರೂ ಅಸ್ತ್ರವೆಂದು ತಿಳಿದುಕೊಂಡಿಲ್ಲಲ್ಲವೇ? ಹಾಹಾಹಾ (ನಗುವನು)

ರಾಜಧರ: ಹಿರಿಯ ಅತ್ತಿಗೆಯವರು ತಮಾಶೆಮಾಡಿ ನನ್ನನ್ನಿಲ್ಲಿ ಬಂಧಿಸಿ ಇರಿಸಿದ್ದರು.

ಇಂದ್ರಕುಮಾರ: ಈ ಮನೆಯೇನು ತಮಾಶೆ ನಡೆಯುವ ಮನೆಯಲ್ಲ. ಇಲ್ಲಿ ನಡೆಯುವ ತಮಾಶೆ ಎಂದರೆ ಶಡ್ಡುಹೊಡೆದು ಕುಸ್ತಿಹಿಡಿಯುವ ತಮಾಶೆ. ಇಲ್ಲಿ ನಿಮ್ಮ ಆಗಮನ ಹೇಗೆ?

ರಾಜಧರ: ಇಂದು ರಾತ್ರಿ ಬೇಟೆಗೆ ಹೋಗಬೇಕೆಂದೆಣಿಸಿ ಅಸ್ತ್ರಗಳನ್ನು ಹುಡುಕಲು ಹೋಗಿದ್ದೆ. ನನ್ನ ಅಸ್ತ್ರಗಳೆಲ್ಲ ನಿರ್ಜೀವದಿಂದ ಹಾಗೇ ಬಿದ್ದಿದ್ದವು. ನಾಳೆ ಅಸ್ತ್ರಪರೀಕ್ಷೆ ನಡೆಯಬೇಕಾಗಿರುವುದರಿಂದ ನಾನವುಗಳನ್ನೆಲ್ಲ ಸಾಣೆ ಹಿಡಿದು ಹರಿತಗೊಳಿಸಲು ಕೊಟ್ಟು ಬಂದೆ. ಅದೇ ಪ್ರಕಾರ ನಿನ್ನ ಅಸ್ತ್ರಗಳೇನಾದರೂ ಇವೆಯೋ ಹೇಗೆಂಬುದನ್ನು ಕೇಳಿ, ನೋಡಿ ಸಾಣೆ ಹಿಡಿಯಲು ಕೊಡಬೇ ಕೆಂದು ಅತ್ತಿಗೆಯವರ ಬಳಿಗೆ ಬಂದಿದ್ದೆ.

ಇಂದ್ರಕುಮಾರ: ಹಾಗಾದರೆ ಅವರು ಸಂಪೂರ್ಣ ಅಸ್ತ್ರಶಾಲೆಯನ್ನೇ ಸಾಣೆಹಿಡಿಯಲು ನಿನ್ನನ್ನು ಕೂಡಿಸಿದರೆಂದು ತೋರುತ್ತದೆ. ಹಾಹಾ. ಹಾಹಾ (ನಗುತ್ತ) ಹಾಗಿದ್ದರೆ ಎದ್ದು ಏಕೆ ಹೊರಗೆ ಬಂದದ್ದು? ಹೋಗು ಒಳಗೆ. ಸಾಣೆ ಹಿಡಿಯುವ ಉತ್ಸಾಹ ಕುಗ್ಗಿಹೋಯಿತೆಂದು ತೋರುತ್ತದೆ. (ಹಾಹಾ ಎಂದು ಮತ್ತೆ ನಗುವನು.)

ರಾಜಧರ: ನಗು! ಬೇಕಾದಷ್ಟು ನಗು! ಈ ಪ್ರಸಂಗದಲ್ಲಿ ನಾನೂ ನಗುತ್ತೇನೆ. ಆದರೆ ಇಲ್ಲಿ ಅಲ್ಲ. ನಡೆಯಿರಿ ಅಣ್ಣಾ ಅವರೆ. ಇಂದು ಬೇಟೆಗೆ ಹೋಗುವಿರಲ್ಲವೇ? (ಹೋಗುವನು).

ಪ್ರತಾಪ: ಚಿಕ್ಕ ಕುಮಾರರೊಂದಿಗೆ ನೀವು ನಡೆಸುವ ಈ ಚೇಷ್ಟೆ ನನಗೇನೂ ಅಷ್ಟು ಸರಿಬರುವುದಿಲ್ಲ.

ಇಂದ್ರಕುಮಾರ: ಚೇಷ್ಟೆ ಅಂದ ಮೇಲೆ ಭಯವೆಲ್ಲಿ ಬಂತು? ಯಾರ ಭಯ? ಅವನೂ ಚೇಷ್ಟೆ ಮಾಡಲಿ.

ಪ್ರತಾಪ: ಅವರ ಚೇಷ್ಟೆ ಬಹು ಭಾರಿ ಚೇಷ್ಟೆ. ಸಹಜವಾದುದಲ್ಲ ಅದು.

ತೃತೀಯ ದೃಶ್ಯ

(ಪರಿಕ್ಷಾ ಕ್ಷೇತ್ರ)

(ಮಹಾರಾಜ, ರಾಜಪುತ್ರರೆಲ್ಲ—ಬಂದಿದ್ದಾರೆ. ಇಶಾಖಾನ್ ಹಾಗೂ ಬಾವುಟ ಧಾರಿಗಳು ಹಾಗೂ ಇನ್ನೂ ಕೆಲವು ಯೋಧರೂ ಕೂಡ ನೆರೆದಿದ್ದಾರೆ)

ಇಂದ್ರಕುಮಾರ: ಅಣ್ಣಾ ಅವರೇ, ನಾನಿಂದು ನಿಮ್ಮನ್ನು ಗೆಲ್ಲಲೇ ಬೇಕು. ಇಲ್ಲವಾದರೆ ನಡೆಯುವಂತೆಯೇ ಇಲ್ಲ.

ಯುವರಾಜ: ನಡೆಯುವಂತಿಲ್ಲವಲ್ಲವೇ? ನನ್ನ ಬಾಣಗಳೆಲ್ಲ ಇಂದು ಗುರಿತಪ್ಪಿದರೂ, ಜಗತ್ತು ನಡೆಯುವಂತೆ ನಡೆಯುತ್ತದೆ. ಇಲ್ಲವಾದರೆ ನೀನು ಗೆದ್ದ ಮೇಲೆ ನಿನಗೆ ದೊರೆಯುವ ಸಂಭಾವನೆಯನ್ನು ಯಾರು ನೋಡಬೇಕು?

ಇಂದ್ರಕುಮಾರ: ಅಣ್ಣಾ ಅವರೇ, ನೀವು ಒಂದು ವೇಳೆ ಸೋಡುವ ಪ್ರಸಂಗ ಬಂದರೆ? ಅಂತೇ ಇದನ್ನು ತಪ್ಪಿಸಲು ನಾನು ಇಂದು ಬೇಕೆಂದೇ ನನ್ನ ಎಲ್ಲ ಗುರಿಗಳನ್ನೂ ತಪ್ಪಿಬಿಡುವೆ.

ಯುವರಾಜ: ಇಲ್ಲ ತಮ್ಮಾ, ಹಾಗೇನೂ ಹುಡುಗಾಟ ಮಾಡಬೇಡ. ಗುರುಗಳ ಹೆಸರು ಉಳಿಸಬೇಕಲ್ಲವೆ?

ಇಶಾಖಾನ್: ಯುವರಾಜರೆ, ಸಮಯವಾಗಿದೆ. ಬಿಲ್ಲನ್ನು ಕೈಯ್ಯಲ್ಲಿ ತೆಗೆದುಕೊಳ್ಳಿ. ಏಕಾಗ್ರ ಚಿತ್ತರಾಗಿರಿ. ಕೈ ಅಲುಗಾಡದೆ ಸರಿಯಾಗಿ, ಸ್ಥಿರವಾಗಿ ನಿಲ್ಲಲಿ.

(ಯುವರಾಜ ಬಾಣ ಬಿಡುವನು)

ಅರೆ ತಪ್ಪಿಹೋಯಿತು.

ಯುವರಾಜ: ಮನೋಯೋಗವನ್ನು ಮಾಡುತ್ತಿದ್ದೆ ಖಾನ್‌ಸಾಹೇಬ. ತೀರಯೋಗವನ್ನು ಮಾಡಲು ಸಾಧ್ಯವಾಗಲಿಲ್ಲ.

ಇಂದ್ರಕುಮಾರ: ಎಂದಿಗೂ ಅಲ್ಲ. ನೀನು ಮನಸ್ಸುಮಾಡಿದ್ದರೆ ಖಂಡಿತ ಶಕ್ತನಾಗುತ್ತಿದ್ದೆ. ಅಣ್ಣಾ, ನೀವು ಎಲ್ಲದಕ್ಕೂ ಉದಾಸೀನರಾಗಿ ಎಲ್ಲವನ್ನೂ ಬಿಟ್ಟು ಬಿಸಾಡಿ ಒಗೆದು ಬಿಡುವಿರಿ. ಇದರಿಂದ ನಮಗೆ ತುಂಬ ತೊಂದರೆಯಾಗುತ್ತದೆ.

ಇಶಾಖಾನ್: ನಿಮ್ಮ ಅಂಣನ ಬುದ್ಧಿ, ಇಂದು ಬಾಣದ ಮುಂದೇನೂ ತನ್ನ ಆಟವನ್ನು ತೋರಿಸುವಂತಿಲ್ಲ. ಅದೇನೂ ಅಷ್ಟು ಹರಿತವಾಗಿಲ್ಲ.

ಇಂದ್ರಕುಮಾರ: ಸೇನಾಪತಿ ಸಾಹೇಬರೆ, ನೀವು ತಪ್ಪು ನುಡಿದಿರಿ.

ಇಶಾಖಾನ್: (ರಾಜಧರನನ್ನು ಕುರಿತು) ಕುಮಾರರೇ, ಈಗ ನೀವು ಗುರಿಯನ್ನು ಭೇದಿಸಿರಿ. ನೋಡಿ ಮಹಾಜರೇ.

ರಾಜಧರ: ಮೊದಲಿಗೆ ಅಣ್ಣಾ ಅವರದು ಮುಗಿಯಲಿ.

ಇಶಾಖಾನ್: ಈಗ ವಾದಮಾಡಲು ಸಮಯವಿಲ್ಲ. ನಮ್ಮ ಆಜ್ಞೆಯನ್ನು ಪಾಲಿಸಬೇಕು.

(ರಾಜಧರ ಬಾಣ ಬಿಡುವನು)

ಸಾಕು ನಿನ್ನ ಬಾಣವೂ ಕೂಡ ನಿಮ್ಮಣ್ಣನ ಬಾಣದ ಬೆನ್ನು ಹತ್ತಿ ಹೋಯಿತು. ಗುರಿಯ ಕಡೆಗೆ ಹೋಗಲೇ ಇಲ್ಲ.

ಯುವರಾಜ : ತಮ್ಮಾ, ನಿನ್ನ ಬಾಣವು ಸಾಕಷ್ಟು ಗುರಿಯ ಹತ್ತಿರವೇ ಹೋಗಿದೆ. ತುಸು ಇನ್ನೂ ಹತ್ತಿರ ಹೋಗಿದ್ದರೆ ಗುರಿಯನ್ನು ಖಂಡಿತ ಭೇದಿಸುತ್ತಿತ್ತು.

ರಾಜಧರ : ಗುರಿ ಭೇದಿಸಿಯಾಗಿದೆ. ದೂರದಿಂದ ನಿಮಗದು ಕಂಡಿಲ್ಲ. ಇಗೊ ನೋಡಿ ಭೇದಿಸಿದ್ದನ್ನು.

ಯುವರಾಜ : ಇಲ್ಲ. ರಾಜಧರ. ನಿನ್ನ ದೃಷ್ಟಿಗೆ ಹಾಗೆ ಭ್ರಮೆಯಾಗಿದೆ. ಗುರಿಯ ಭೇದವಾಗಿಲ್ಲ.

ರಾಜಧರ : ನನ್ನ ಧನುರ್ವಿದ್ಯೆಯಲ್ಲಿ ನಿಮಗೆ ನಂಬಿಕೆ ಇಲ್ಲವೆಂದೇ, ಕಾಣಬೇಕಾದದ್ದು ಕೂಡ ನಿಮಗೆ ಕಾಣದಾಗಿದೆ. ಇರಲಿ. ಹತ್ತಿರ ಹೋದರೆ ಅದರ ನಿದರ್ಶನ ವಾಗುತ್ತದೆ.

(ಇಂದ್ರಕುಮಾರ ಬಿಲ್ಲನ್ನು ಕೈಗೆ ತಕ್ಕೊಳ್ಳುವನು)

ಯುವರಾಜ : [ಇಂದ್ರಕುಮಾರನನ್ನು ಕುರಿತು] ತಮ್ಮಾ, ನಾನು ಅಶಕ್ತನಾಗಿದ್ದೇನೆ. ನೀನು ನನ್ನ ಮೇಲೆ ಈ ಕಾರಣಕ್ಕಾಗಿ ಕೋಪಿಸಿಕೊಳ್ಳುವುದೇನೂ ಸರಿಯಲ್ಲ. ನಿನ್ನ ಬಾಣವು ಗುರಿಯನ್ನು ಭೇದಿಸದಿದ್ದರೆ ನನ್ನ ಹೃದಯವನ್ನದು ಖಂಡಿತ ಭೇದಿಸುವುದೆಂಬುದನ್ನು ಮಾತ್ರ ನೀನು ಮರೆಯದಿರು. ಖಂಡಿತ ತಿಳಿದಿರು.

(ಇಂದ್ರಕುಮಾರ ಬಾಣ ಬಿಡುವನು).

[ತೆರೆಯಲ್ಲಿ ಜನರು ಇಂದ್ರಕುಮಾರರಿಗೆ ಜಯವಾಗಲಿ ಎಂದು ಘೋಷಿಸುವರು. ವಾದ್ಯಗಳು ಮೊಳಗುವವು.

(ಯುವರಾಜರು ಇಂದ್ರಕುಮಾರರನ್ನು ಆಲಂಗಿಸುವರು)

ಇಶಾಖಾನ್ : ಬೇಟಾ, ಅಲ್ಲಾನ ಕೃಪೆಯಿಂದ ನೀವು ದೀರ್ಘಾಯುಷಿಯಾಗಿರಿ. ಮಹಾರಾಜರೇ, ನಡುವಿನ ಕುಮಾರರು ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಮೊದಲು ಮಾತುಕೊಟ್ಟಂತೆ ಈಗ ಅದನ್ನು ನಡೆಸಿಕೊಡಬೇಕು.

ರಾಜಧರ : ಇಲ್ಲ ಮಹಾರಾಜರೇ, ಪುರಸ್ಕಾರಕ್ಕೆ ನಾನು ಪಾತ್ರನಾಗಿದ್ದೇನೆ. ನನ್ನ ಬಾಣವೇ ಗುರಿಯನ್ನು ಭೇದಿಸಿದೆ.

ಮಹಾರಾಜ : ಎಂದಿಗೂ ಇಲ್ಲ.

ರಾಜಧರ : ಸೇನಾಪತಿ ಸಾಹೇಬರೇ, ಯಾರ ಬಾಣ ಗುರಿಯನ್ನು ಭೇದಿಸಿದೆ ಎಂಬುದರ ಪರೀಕ್ಷೆಯಾಗಿಹೋಗಲಿ.

ಇಶಾಖಾನ್ : ಸರಿ. ನಾನೇ ನೋಡುತ್ತೇನೆ. (ಹೋಗುವರು) (ತುಸು ಸಮಯದನಂತರ ಬಾಣವನ್ನು ಕೈಯ್ಯಲ್ಲಿ ಹಿಡಿದುಕೊಂಡು ಪ್ರವೇಶಿಸುತ್ತ ಇಂದ್ರಕುಮಾರರನ್ನು ಕುರಿತು) ತಮ್ಮಾ, ನಾನು ಮುದುಕ ಮನುಷ್ಯ. ಕಣ್ಣು ಸರಿಯಾಗಿ ಕಾಣದಿರ

ಬಹುದು. ಈ ಬಾಣದ ಮೇಲೆ ಅದೇಕೊ ರಾಜಧರನಹೆಸರು ಕಾಣುತ್ತಿದೆಯಲ್ಲ!

ಇಂದ್ರಕುಮಾರ: ಅಹುದು, ರಾಜಧರನ ಹೆಸರೇ ಇದೆ.

ಮಹಾರಾಜ: ಎಲ್ಲಿ? ನಾನು ನೋಡುವೆ. ಅಹುದು! ಒಂದೇ ಕಾಲಕ್ಕೆ ನಾವೆಲ್ಲರೂ ಮೋಸ ಹೋದೆವಲ್ಲ. ಎಲ್ಲರೂ ತಪ್ಪು ಮಾಡಿದೆವು.

ರಾಜಧರ: ಇಂದಲ್ಲ ಮಹಾರಾಜರೇ! ನನ್ನ ವಿಷಯದಲ್ಲಿ ಈ ತಪ್ಪು ಸದಾ ನಡೆದು ಬಂದಿದೆ.

ಇಶಾಖಾನ್: ನನಗೇನೂ ತಿಳಿಯದಾಯಿತಲ್ಲ?

ಇಂದ್ರಕುಮಾರ: ನನಗಿದೆಲ್ಲ ಗೊತ್ತಿದೆ.

ರಾಜಧರ: ಮಹಾರಾಜರೇ, ಇಂದು ಇದರ ವಿಚಾರಣೆ ಆಗಿಹೋಗಲಿ.

ಇಂದ್ರಕುಮಾರ: (ಆತ್ಮಗತ) ವಿಚಾರಣೆ! ನಿನಗೆ ವಿಚಾರಣೆಯಾಗಬೇಕೆಂದು ಅನಿಸುತ್ತಿದೆಯಲ್ಲವೆ? ವಿಚಾರಣೆಯಾದರೆ ನಿನ್ನ ಈ ಬಿಳಿ ಮುಖಕ್ಕೆ ಮಸಿ ಬಳೆಯುತ್ತದೆ. ವಂಶದ ಅಪಮಾನವನ್ನು ಹೊರಗೆ ಹಾಕಬೇಡ. ಅಂತರ್ಯಾಮಿ ಪರಮಾತ್ಮನು ನಿನ್ನ ವಿಚಾರಣೆ ಅವಶ್ಯ ಮಾಡುತ್ತಾನೆ.

ಇಶಾಖಾನ್: ಏನಾಗಿದೆ ಬಾಬಾ? ಯಾವ ರಹಸ್ಯ ಇಲ್ಲಿ ಅಡಗಿದೆ? ಸರಿಯಾಗಿ ಹೇಳು. ಕಲ್ಲು ಎಂದಿಗೂ ನೀರಲ್ಲಿ ತೇಲದು; ನೀರಿನೊಂದಿಗೆ ಹರಿದು ತೇಲಿ ಹೋಗದು. ಮಂಗವೆಂದಿಗೂ ಸಂಗೀತ ಹೇಳದು; ಹಾಡು ಹಾಡದು. ಬಾಬಾ ಇಂದ್ರಕುಮಾರ ಏನಾಗಿದೆ ಎಂಬುದನ್ನು ಸರಿಯಾಗಿ ಹೇಳು. ಬಾಣವೇನಾದರೂ ಅದಲು ಬದಲು ಆಗಿಲ್ಲ ತಾನೇ?

ರಾಜಧರ: ಎಂದಿಗೂ ಆಗಿಲ್ಲ. ಬೇಕಾದರೆ ಪರೀಕ್ಷೆಮಾಡಿ ನೋಡಬಹುದು.

ಇಶಾಖಾನ್: ಅದನ್ನೇ ನೋಡುತ್ತಿದ್ದೇನೆ; ಮಾಡುತ್ತಿದ್ದೇನೆ. ಬಾಣವೇನೋ ಸರಿಯಾಗಿಯೇ ಇದೆ. ಒಳ್ಳೇದು, ಬಾಬಾ, ಇಂದ್ರಕುಮಾರ, ನಿಜವಿದ್ದುದನ್ನು ಹೇಳು. ಈ ಮಧ್ಯದಲ್ಲಿ ಯಾರಾದರೂ ನಿನ್ನ ಅಸ್ತ್ರಶಾಲೆಯಲ್ಲಿ ಪ್ರವೇಶಮಾಡಿದ್ದರೊ ಹೇಗೆ?

ಇಂದ್ರಕುಮಾರ: ಆ ಮಾತು ಯಾವ ಪ್ರಯೋಜನಕ್ಕೂ ಈಗ ಬರಲಾರದು ಖಾನ್ ಸಾಹೇಬ.

ಇಶಾಖಾನ್: ಇದ್ದುದನ್ನೆಲ್ಲ ಗೊತ್ತಿದ್ದ ಹಾಗೆ ಸರಿಯಾಗಿ ಹೇಳು ಬಾಬಾ. ನಿನಗೆಲ್ಲ ಖಂಡಿತ ಗೊತ್ತಿದೆ. ಯಾರಾದರೂ ನಿನ್ನ ಅಸ್ತ್ರಶಾಲೆಗೆ ಹೋಗಿ ನಿನ್ನೊಂದಿಗೆ ಅಸ್ತ್ರಗಳನ್ನೇನಾದರೂ ಬದಲು ಮಾಡಿಕೊಂಡು ಹೋಗಿರುವರೇ? ಎಲ್ಲವನ್ನೂ ಸರಿಯಾಗಿ ಹೇಳು ಬಾಬಾ.

ಇಂದ್ರಕುಮಾರ: ಸುಮ್ಮನಿರಿ ಖಾನ್‌ಸಾಹೇಬ. ಆ ಮಾತು ಈಗ ಬೇಡ.

ಇಶಾಖಾನ್: ಹಾಗಾದರೆ ನೀನೀಗ ಸೋಲನ್ನು ಒಪ್ಪುವೆಯಾ?

ಇಂದ್ರಕುಮಾರ: ಒಪ್ಪುವೆ, ನಾನು ಸೋಲನ್ನು ಒಪ್ಪಿಕೊಳ್ಳುತ್ತೇನೆ.

ಇಶಾಖಾನ್: ಶಾಬಾಶ್ ಬಾಬಾ ಶಾಬಾಶ್! ನೀನು ಖಂಡಿತ ರಾಜಪುತ್ರ! ಮಹಾರಾಜ ನನ್ನದೊಂದು ಈಗ ವಿನಂತಿಯಿದೆ. ಆಟದ ಪಂಥ್ಯವಂತೂ ಮುಗಿದು ಹೋಯಿತು. ಇನ್ನು ನಿಜವಾದ ಜೀವನ ಪಂಥ್ಯ ನಡೆಯುಲಿ. ಆ ಪಂಥ್ಯದಲ್ಲಿ ನಿಮ್ಮ ಪುತ್ರರಲ್ಲಿ ಯಾರು ಪುರಸ್ಕಾರ ಪಡೆಯಲು ತಕ್ಕವರಿರುವರೊ ಎಂಬುದನ್ನು ನೋಡೋಣ

ಮಹಾರಾಜ: ಅದಾವ ವಿಷಯವನ್ನು ಕುರಿತು ನೀವು ಈಗ ಹೇಳುತ್ತಿರುವಿರಿ? ಯಾವ ಪಂಥ್ಯ; ಅದಾವ ಜೀವನ ಪಂಥ್ಯ?

ಇಶಾಖಾನ್: ಆರಾಕಾನ್ ರಾಜರೊಂದಿಗೆ ಹೇಗೂ ಮಹಾರಾಜರ ಯುದ್ಧ ನಡೆಯಬೇಕೆಂದು ಈಗಾಗಲೇ ಗೊತ್ತಾಗಿದೆ. ಆ ಪ್ರಕಾರ ಸೈನ್ಯ ಹೊರಟು ಹೋಗಿದೆ. ಈ ಸಲ ಆ ಯುದ್ಧವನ್ನು ಕುಮಾರರು ಹೋಗಿ ಗೆದ್ದುಕೊಂಡು ಬರಲಿ. ನೀವು ಹೋಗುವ ಬದಲು ಅವರನ್ನೇ ಕಳಿಸಿಕೊಡುವ ಕೃಪೆಯಾಗಬೇಕು.

ಮಹಾರಾಜ: ಒಳ್ಳೇ ಮಾತನ್ನೇ ಹೇಳಿದಿರಿ ಸೇನಾಪತಿ. "ಆರಾಕಾನದ ರಾಜ ಆಗಲೇ "ಚಟ್ಟಗ್ರಾಮದ" ಬಳಿ ಬಂದು ತನ್ನ ಸೈನ್ಯದೊಂದಿಗೆ ಠಾಣ್ಯ ಹೊಡೆದಿದ್ದಾನೆ; ಬೀಡಾರ ಬಿಟ್ಟಿದ್ದಾನೆ" ಎಂದು ಸುದ್ದಿ ಬಂದಿದೆ. ಅವನಿಗೆ ಚೆನ್ನಾಗಿ ಪಾಠ ಕಲಿಸಬೇಕಾಗಿದೆ. ಈ ಮೊದಲು ಕಲಿಸಿದ್ದೇವೆ. ಆದರೆ ಮೂರ್ಖರಿಗೆ ಪಾಠ ಕಲಿಸುವ ಕೆಲಸವೆಂದಿಗೂ ಮುಗಿಯುವುದೇ ಇಲ್ಲ. ಯಮರಾಜನ ಪಾಠಶಾಲೆಗೆ ಕಳಿಸಿದ ಹೊರತು ಬೇರೆ ಉಪಾಯವೇ ಇಲ್ಲ. ರಾಜಪುತ್ರರೇ, ಇದಕ್ಕೆ ನಿಮ್ಮ ಅಭಿಪ್ರಾಯವೇನು? ನಮ್ಮ ಆ ಜನ್ಮ ವೈರಿಯೊಂದಿಗೆ ಯುದ್ಧಮಾಡುವ ವೀರ ಕ್ಷಾತ್ರವೃತ್ತಿಯ ದೀಕ್ಷೆಯನ್ನು ತೆಗೆದುಕೊಳ್ಳಲು ನೀವು ಸಿದ್ಧರಿರುವಿರಲ್ಲವೆ?

ಇಂದ್ರಕುಮಾರ: ಸಿದ್ಧರಿದ್ದೇವೆ. ಅಗ್ರಜ ಯುವರಾಜರೂ ಕೂಡ ಹೊರಡುವರು.

ರಾಜಧರ: ನಾನು ಹೊರಡಲಾರೆನೆಂದು ತಿಳಿದೆಯಾ?

ಮಹಾರಾಜ: ಹಾಗಿದ್ದರೆ ಇಶಾಖಾನ್, ನೀವು ಸೈನ್ಯಾಧ್ಯಕ್ಷರಾಗಿ ಇವರನ್ನೆಲ್ಲ ಕರೆದುಕೊಂಡು ಹೋಗಿ, ಶತ್ರುವಿನೊಂದಿಗೆ ಕಾದು ವಿಜಯಶಾಲಿಯಾಗಿ ಬನ್ನಿ. ತ್ರಿಪುರೇಶ್ವರಿಯ ಸಹಾಯ ನಿಮಗೆಲ್ಲರಿಗೂ ಇದೆ.

ದ್ವಿತೀಯ ಅಂಕ

ಪ್ರಥಮ ದೃಶ್ಯ

[ರಾಜಧರನ ಶಿಬಿರ; ರಾಜಧರ ಹಾಗೂ ಧುರಂಧರ]

ಧುರಂಧರ: ನೀವು ಐದು ಸಾವಿರ ಸೈನಿಕರೊಂದಿಗೆ ದೂರ ಸರಿದು ನಿಲ್ಲುವಿರಲ್ಲವೆ?

ರಾಜಧರ: ಅಹುದು. ಇಶಾಖಾನರಿಗೆ ನಾನು ಈ ಸುದ್ದಿಯನ್ನು ಹೇಳಿ ಕಳಿಸಿದ್ದೇನೆ.

ಧುರಂಧರ: ಅದು ನನಗೂ ಗೊತ್ತಿದೆ. ನಾನು ಆಗ ಅಲ್ಲಿಯೇ ಇದ್ದೆ. ಅದರ ಮೇಲೆ ತುಂಬ ಚರ್ಚೆಯಾಯಿತು.

ರಾಜಧರ: ಯಾವ ಚರ್ಚೆ? ಏನು ವಿಶೇಷ? ಚರ್ಚೆ ನಡೆಯಿತಾದರೂ ಏನು?

ಧುರಂಧರ: ಮೊದಲಿಗೆ ಇಂದ್ರ ಕುಮಾರರು ಉಪಹಾಸ್ಯ ಮಾಡಲು ಪ್ರಾರಂಭಿಸಿದರು. "ರಾಜಧರನ ಯುದ್ಧನೀತಿಯೇ ಬೇರೆ. ರಣಕ್ಷೇತ್ರದಿಂದ ಸಾಕಷ್ಟು ದೂರವಿದ್ದೇ ಅವನಿಗೆ ಯುದ್ಧಮಾಡಲು ಚೆನ್ನಾಗಿ ಬರುತ್ತದೆ" ಎಂದು ಅವರೆಂದರು.

ರಾಜಧರ: ಆ ಮಾತು ಸರಿಯಾದದ್ದೆ. ರಣರಂಗದಲ್ಲಿ ಕಾಲಾಳುಗಳು ಮಾತ್ರ ಪ್ರತ್ಯಕ್ಷ ಹೋರಾಡುತ್ತಾರೆ. ದೂರವಿದ್ದು ಯಾರು ಯುದ್ಧವನ್ನು ಮಾಡ ಬಲ್ಲರೋ ಅವರೇ ನಿಜವಾದ ಯೋಧರು. ಇರಲಿ. ಅದಕ್ಕೆ ಮುಂದೆ ಇಶಾಖಾನ್ ಅವರು ಏನೆಂದರು?

ಧುರಂಧರ: ನಿಮ್ಮ ಮೇಲೆ ಅವರ ಪ್ರೀತಿ, ನಂಬಿಕೆ ವಿಶ್ವಾಸವೆಷ್ಟಿದೆ ಎಂಬುದು ನಿಮಗೆ ಗೊತ್ತೇ ಇದೆ. ನೀವು ಅವರ ಕಾಲು ಹಿಡಿಯಲು ಹೋದರೂ ಕೂಡ ಅವರು ಸಂದೇಹ ಪಟ್ಟುಕೊಂಡು ತಮ್ಮ ಮೆಟ್ಟುಗಳನ್ನು ತೆಗೆದುಕೊಂಡು ಹೋಗಲು ಬಂದಿರುವಿರೆಂದು ಅವರು ಸಂಶಯ ಪಟ್ಟುಕೊಳ್ಳುವರು. ಅಂತೇ ಇಶಾಖಾನ್ ಅವರು "ಯುದ್ಧಕ್ಷೇತ್ರದಿಂದ ರಾಜಧರ ದೂರ ನಿಲ್ಲುವ ನೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಅದರ ಬಗ್ಗೆ ನನಗಾವ ಚಿಂತೆಯೂ ಇಲ್ಲ. ಆದರೆ ತನ್ನ ಜೊತೆಗೆ ಐದು ಸಾವಿರ ಸೈನಿಕರನ್ನು ಇಟ್ಟುಕೊಳ್ಳಲು ಅಪೇಕ್ಷಿಸುವನಲ್ಲ. ಇದು ನನಗೆ ಎಷ್ಟೂ ಸರಿಬರದು" ಎಂದು ಸ್ಪಷ್ಟವಾಗಿ ಹೇಳಿದರು.

ರಾಜಧರ: ಯುವರಾಜ ಇದಕ್ಕೇನೂ ಉತ್ತರ ಕೊಡಲಿಲ್ಲವೇ? ಸುಮ್ಮನಿದ್ದರೇ?

ಧುರಂಧರ: ಓ! ಹೇಳಲು ಮರೆತೆ! ಅವರೊಬ್ಬರು ಮಾತ್ರ ನಿಮಗೆ ಅನುಕೂಲರಾಗಿದ್ದಾರೆ. ನಿಮಗೆ ಮೆತ್ತಗಾಗಿ ಇರುವ ಸ್ಥಳವೆಂದರೆ ಅದೇ ಒಂದು. ಯುವರಾಜರು ಎಲ್ಲವನ್ನೂ ಶಾಂತವಾಗಿ ಕೇಳಿಕೊಂಡು "ಇಲ್ಲ! ಇಲ್ಲ! ಅದೆಂದಿಗೂ ಇಲ್ಲ! ರಾಜಧರನ ವಿಷಯವಾಗಿ ನೀವು ಅನ್ಯಾಯವಾಗಿ ಆಲೋಚಿಸುತ್ತಿರುವಿರಿ. ರಾಜಧರನು ಹೇಳುವ ಮಾತು, ಯುಕ್ತಿ ನನಗೆ ಸರಿ ಕಾಣುತ್ತದೆ. ಯುದ್ಧದಲ್ಲಿ ಒಂದು ವೇಳೆ ನಮಗೇನಾದರೂ ಗಂಡಾಂತರ ಪ್ರಾಪ್ತವಾದಲ್ಲಿ ಆ ಕಾಲಕ್ಕೆ ರಾಜಧರನು ತನ್ನ ಸೈನ್ಯದೊಂದಿಗೆ ಬಂದು ನಮಗೆ ಸಹಾಯ ಮಾಡಲು ಶಕ್ತನಾಗುವನು" ಎಂದು ಅವರು ಹೇಳಿದರು. ಯುವರಾಜರು ಹಾಗೆ ಹೇಳಿದರೆಂದೇ ಇಶಾಖಾನ್ ಅವರು ನಿಮ್ಮ ವಿಷಯವಾಗಿ ಸಮ್ಮತಿಸಿದರು. ಇಲ್ಲವಾದರೆ ಅವರ ಉದಾರ ಮನಸ್ಸಿನಲ್ಲಿ ನಿಮಗೆ ಅನುಕೂಲ ಮಾಡಿಕೊಡಬೇಕೆಂದೇನೂ ಇರಲಿಲ್ಲ. ಹೋಗಲಿ ಬಿಡಿರಿ. ಈಗೇಕೆ ಆ ಮಾತು! ಆದರೆ ನೀವು ಸೈನ್ಯದೊಂದಿಗೆ ಯುದ್ಧಮಾಡದೆ ದೂರ ಹೊರಗೆ ಉಳಿಯುವುದರ ರಹಸ್ಯ ನನಗೇ ಇನ್ನೂ ತಿಳಿದಿಲ್ಲ.

ರಾಜಧರ: ಅವರೊಂದಿಗೆ ಕೂಡಿಕೊಂಡು ನಾನು ಯುದ್ಧಮಾಡಿದರೆ ಅದರಿಂದ ನನಗೆ ಬಂದ ಲಾಭವೇನು? ಯುದ್ಧದಲ್ಲಿ ಗೆದ್ದರೆ ನಾನೇ ಗೆದ್ದೆ ಎಂದು ಯಾರೂ ಹೇಳುವುದಿಲ್ಲ. ಅಲ್ಲವೇ?

ಧುರಂಧರ: ತಪ್ಪಿಕೂಡ ನಿಮ್ಮ ಹೆಸರನ್ನು ಒಂದು ಸಲವೂ ಕೂಡ ಯಾರೂ ಹೇಳುವುದಿಲ್ಲ. ಆದರೆ ನೀವು ದೂರವಿರುವಾಗ ನಮಗೆ ಜಯವಾದರೆ ನಿಮಗೆ ಅಪಕೀರ್ತಿಯನ್ನು ಮಾತ್ರ ಹೊರಿಸುತ್ತಾರೆ. ಅಪಜಯವಾದರಂತೂ ನಿಮ್ಮ ಅವಸ್ಥೆ,—ಅದನ್ನು ಕಲ್ಪಿಸುವುದೂ ಕೂಡ ಬೇಡ.

ರಾಜಧರ: ನಮ್ಮ ಈ ಐದುಸಾವಿರ ಸೈನಿಕರಿಂದಲೇ ನಾನು ಈ ಯುದ್ಧವನ್ನು ಗೆಲ್ಲುತ್ತೇನೆ. ಅಲ್ಲದೆ ಬೇರೆ ಯಾರ ಸಹಾಯವನ್ನೂ ತಕ್ಕೊಳ್ಳದೆ ನಾನೊಬ್ಬನೇ ಗೆಲ್ಲುತ್ತೇನೆ. ನೋಡುವಿಯಂತೆ. (ದೂತನೊಬ್ಬನ ಪ್ರವೇಶ) ಏನೋ ಯುದ್ಧದ ವಾರ್ತೆ ಏನು?

ದೂತ: ಅಪ್ಪಣೆ ಮಹಾಸ್ವಾಮಿ. ಯುದ್ಧವೇನೋ ಇಡೀದಿನ ನಡೆದೇ ಇದೆ. ಆದರೆ ಈವರೆಗಂತೂ ಶತ್ರುಗಳ ವ್ಯೂಹಭೇದವನ್ನು ಮಾಡಲು ಸಾಧ್ಯವಾಗಿಲ್ಲ. ಸೂರ್ಯಾಸ್ತವಾಗಲು ಇನ್ನೇನೂ ಬಹಳ ಸಮಯವಿಲ್ಲ. ಕತ್ತಲಾಯಿತೆಂದರೆ ಇಂದಿನ ಮಟ್ಟಿಗೆ ಯುದ್ಧವನ್ನು ನಿಲ್ಲಿಸಬೇಕಾಗಿ ಬರುತ್ತದೆ. (ಎರಡನೇ ದೂತನ ಪ್ರವೇಶ)

ರಾಜಧರ: ನೀನು ಯಾರು?

೨ನೇದೂತ: ಅಪ್ಪಣೆ ಮಹಾಸ್ವಾಮಿ. ನನ್ನ ಹೆಸರು ವ್ಯೋಮಕೇಶ. ಯುವರಾಜರು ನನ್ನನ್ನು ಕಳಿಸಿದ್ದಾರೆ. ಆ ಮಾತಿಗೂ ಈಗಾಗಲೆ ಎರಡು ಪ್ರಹರಗಳು ಕಳೆದು ಹೋಗಿವೆ. ನಿಮಗೆ ಈ ಮೊದಲೇ ತಿಳಿಸಿದ್ದಂತೆ ಯಾವ ಸ್ಥಳದಲ್ಲಿ ನೀವು ಇರಬೇಕಾಗಿತ್ತೊ, ಆ ಸ್ಥಳವನ್ನು ನಾನು ನೋಡಿ ನಂತರ ಬಹುಪ್ರಯಾಸದಿಂದ ನೀವಿರುವ ಈ ಸ್ಥಳವನ್ನು ಗೊತ್ತು ಹಚ್ಚಿ ಬರಲು ತಡವಾಯಿತು. ಕ್ಷಮಿಸಬೇಕು.

ರಾಜಧರ: ಯುವರಾಜರು ಏನೆಂದು ಹೇಳಿ ಕಳಿಸಿದ್ದಾರೆ? ಬೇಗ ಹೇಳು.

೨ನೇ ದೂತ: ನಾವು ತಿಳದುಕೊಂಡಿದ್ದಕ್ಕಿಂತ ವೈರಿಗಳ ಸೈನ್ಯ ಅಧಿಕ ಸಂಖ್ಯೆಯಲ್ಲಿ ಇದ್ದಂತೆ ತೋರುತ್ತದೆ. ಯುದ್ಧವೀಗ ಬಹಳ ಕಠಿಣ ಪರಿಸ್ಥಿತಿಗೆ ಬಂದಿದೆ. ಕುಮಾರರಾದ ಇಂದ್ರಕುಮಾರರು ಶತ್ರು ಸೈನ್ಯವನ್ನು ತಮ್ಮ ಕುದುರೆಯ ದಳದೊಂದಿಗೆ ಉತ್ತರ ದಿಕ್ಕಿನಿಂದ ಮುತ್ತಿದ್ದಾರೆ. ಇನ್ನೊಂದು ತುಸು ಸಮಯ ಕಳೆದರೆ ಸಾಕು ಅವರು ಶತ್ರುಸೈನ್ಯವನ್ನು ನದಿಯ ದಂಡೆಯ ವರೆಗೂ ಓಡಿಸಿ ಬಿಡಲು ಶಕ್ತರಾಗುವರು.

ರಾಜಧರ: ನೀನು ಹೇಳುತ್ತಿರುವುದೆಲ್ಲ ನಿಜವೆ? ಅವಕಾಶ ನನಗೂ ದೊರೆತಿದ್ದರೆ ನಾನೂ ಕೂಡ ಅದೇನು ಮಾಡುತ್ತಿದ್ದೆನೆಂದು ವಿಚಾರ ಮಾಡುವುದಕ್ಕೂ ಈಗ ಸಮಯವಿಲ್ಲದಾಗಿದೆ. ಅದರಿಂದ ಲಾಭವೂ ಇಲ್ಲವೆಂದು ತೋರುತ್ತದೆ. ಈಗೆಲ್ಲವೂ ಕೈಮೀರಿ ಹೋಗಿದೆ ಎಂದೇ ಅನಿಸಹತ್ತಿದೆ.

೨ನೇದೂತ: ಶತ್ರುಸೈನ್ಯವನ್ನು ಬೆನ್ನಟ್ಟಿ ಅತ್ತ ತಿರುಗಿ ಬರುವ ಹೊತ್ತಿಗೆ ಇತ್ತ ಯುವರಾಜರು ಸಂಕಟದಲ್ಲಿ ಸಿಕ್ಕು ಬಿದ್ದಿದ್ದಾರೆ. ಇಶಾಖಾನರು ಆಗ ಬೇರೆ ದಿಕ್ಕಿನ ಯುದ್ಧದಲ್ಲಿ ತೊಡಗಿದ್ದರು. ಅವರಿಗೆ ಮೇಲಿನ ಸುದ್ದಿಯನ್ನು ತಿಳಿಸಲು ಅವರದಕ್ಕೆ "ಯುವರಾಜರನ್ನು ಪಾರುಮಾಡುವುದಕ್ಕೆಂದು ನಾನಿಲ್ಲಿಗೆ ಬಂದಿಲ್ಲ. ನಮಗೆ ಯುದ್ಧವನ್ನು ಗೆಲ್ಲಬೇಕಾಗಿದೆ. ನಾನು ಇಲ್ಲಿಂದ ಯುದ್ಧ ಮಾಡುವುದನ್ನು ನಿಲ್ಲಿಸಿಬಿಟ್ಟರೆ ಇದರಿಂದ ಶತ್ರು ಸೈನ್ಯಕ್ಕೆ ಸುಗಮವಾಗಿ ಹೋಗುವುದು" ಎಂದು ಹೇಳಿದರು.

ರಾಜಧರ: ಅಗ್ರಜರಾದ ಯುವರಾಜರ ಪರಿಸ್ಥಿತಿ ಈಗ ಹೇಗೆ ಇದೆ? ವಿವರಗಳೇನು?

೨ನೇದೂತ: ಅವರಿಗೆ ಈ ವರೆಗಂತೂ ಯಾವ ವಿಪತ್ತೂ ಪ್ರಾಪ್ತವಾಗಿಲ್ಲ. ಇಂದ್ರ ಕುಮಾರರು ತಕ್ಕ ಸಮಯಕ್ಕೆ ದಂಡೆತ್ತಿ ಬಂದು ಅವರನ್ನು ಪಾರುಮಾಡಿದ್ದಾರೆ. ಆದರೆ ಈ ಗಡಿಬಿಡಿಯಲ್ಲಿ ನಮ್ಮ ಹೋರಾಟದಲ್ಲಿ ಆಗಬೇಕಾದಷ್ಟು ಪ್ರಗತಿ ಆಗುತ್ತಿಲ್ಲ. ನಿಮ್ಮನ್ನು ಹುಡುಕಲು ದೂತರು ನಾಲ್ಕು ಕಡೆಗೆ ಹೋಗಿದ್ದಾರೆ. ಆದ್ದರಿಂದ ನೀವು ಮಾತ್ರ ಈಗ ವಿಲಂಬವನ್ನು ಮಾಡಕೂಡದು.

ರಾಜಧರ: ಇಲ್ಲ. ಎಷ್ಟೂ ವಿಲಂಬವನ್ನು ಮಾಡುವುದಿಲ್ಲ. ಹೋಗು. ನೀನು ವಿಶ್ರಾಂತಿ ಯನ್ನು ತೆಗೆದುಕೊ. ನಾನು ಈಗಲೇ ಮುಂದಿನ ಸಿದ್ಧತೆಗೆ ಹೊರಡುತ್ತೇನೆ.

[೨ ನೇ ದೂತನೂ ಹೋಗುವನು] (ತೆರೆ)

ದ್ವಿತೀಯ ದೃಶ್ಯ

[ಆರಾಕಾನ ರಾಜನ ಶಿಬಿರ ಆರಾಕಾನ ರಾಜ ಹಾಗೂ ರಾಜಧರ]

ಆರಾಕಾನರಾಜ: ನೋಡಿರಿ ರಾಜಕುಮಾರರೇ, ನಮ್ಮನ್ನು ಸೆರೆಹಿಡಿಯುವುದರಿಂದ ನಿಮಗೇನೂ ಲಾಭವಿಲ್ಲ.

ರಾಜಧರ: ಏಕೆ ಲಾಭವಿಲ್ಲ—ರಾಜನ್? ಈ ಯುದ್ಧದಲ್ಲಿ ನೀವು ನಮಗೆ ದೊರೆತದ್ದೇ ಲಾಭ! ಬಹು ದೊಡ್ಡ ಲಾಭ!

ಆರಾಕಾನರಾಜ: ಇದರಿಂದ ಯುದ್ಧವೇನೂ ಮುಕ್ತಾಯವಾಗುವುದಿಲ್ಲ. ನನ್ನ ತಮ್ಮಂದಿರಾದ ಹಾಮ್ಜು ಇದ್ದಾರೆ. ಅವರದೂ ಭಾರೀ ದೊಡ್ಡ ಸೈನ್ಯವಿದೆ. ಯುದ್ಧ ಈ ವರೆಗೂ ನಡೆದಂತೆ ಇನ್ನು ಮುಂದೆಯೂ ನಡೆದೇ ನಡೆಯುತ್ತದೆ.

ರಾಜಧರ: ನಿಮ್ಮನ್ನು ನಾನು ಮುಕ್ತಗೊಳಿಸುವೆ. ಆದರೆ ಅದಕ್ಕೆ ನೀವು ಭಾರೀ ಬೆಲೆಯನ್ನು ಕೊಡಬೇಕಾಗುತ್ತದೆ. ಬೇರೆ ಮಾರ್ಗವೇ ಇಲ್ಲ.

ಆರಾಕಾನರಾಜ: ನಾನದನ್ನೆಲ್ಲ ಬಲ್ಲೆ. ಬೆಲೆ ಕೊಡಲೇ ಬೇಕು. ನಾವು ನಿಮ್ಮಿಂದ ಪರಾಜಯ ಹೊಂದಿದೆವೆಂದು ಸಂಧಿಪತ್ರ ಮಾಡಿಕೊಡಲು ನಾನು ಸಿದ್ಧ ನಾಗಿದ್ದೇನೆ.

ರಾಜಧರ: ಕೇವಲ ಸಂಧಿಪತ್ರವನ್ನು ಮಾಡಿಕೊಟ್ಟರೆ ಸಾಲದು. ನೀವು ಪರಾಜಯ

ಹೊಂದಿದ ಗುರುತನ್ನೇನಾದರೂ ನಾವು ನಮ್ಮ ರಾಜಧಾನಿಗೆ ಅವಶ್ಯ ತೆಗೆದುಕೊಂಡು ಹೋಗಬೇಕು.

ಆರಾಕಾನರಾಜ: ನಾನು ನಿಮಗೆ ಬ್ರಹ್ಮದೇಶದ ಐದು ನೂರು ಕುದುರೆಗಳನ್ನೂ ಮೇಲೆ ಮೂರು ಆನೆಗಳನ್ನೂ ಕಪ್ಪಕಾಣಿಕೆಯೆಂದು ಕೊಡುತ್ತೇನೆ.

ರಾಜಧರ: ಆ ಕಾಣಿಕೆಯಿಂದ ನಮಗೇನೂ ಪ್ರಯೋಜನವಿಲ್ಲ. ಮಹಾರಾಜರು ತಮ್ಮ ತಲೆಯ ಮೇಲಿರುವ ರಾಜಮುಕುಟವನ್ನು ನಮಗೆ ಕೊಡಬೇಕು.

ಆರಾಕಾನರಾಜ: ಅದರ ಬದಲು ಪ್ರಾಣಕೊಡುವುದು ಅತಿ ಸುಲಭ.

ರಾಜಧರ: ಪ್ರಾಣಕೊಟ್ಟರೂ ಮುಕುಟವನ್ನೇನೂ ನೀವು ಉಳಿಸಿಕೊಳ್ಳಲಾರಿರಿ. ನಿಮ್ಮಿಂದ ಅದೇನೂ ಶಕ್ಯವಾಗುವಂತಿಲ್ಲ. ಅಂದಮೇಲೆ ವ್ಯರ್ಥ ನನ್ನಿಂದ ಪ್ರಾಣ ಕಳೆದುಕೊಂಡಂತಾಗುತ್ತದೆ.

ಆರಾಕಾನರಾಜ: ಹಾಗಾದರೆ ನೀವು ಮುಕುಟವನ್ನು ತಕ್ಕೊಳ್ಳಬಹುದು. ಆದರೆ ಒಂದು ಮಾತು ನೆನಪಿನಲ್ಲಿ ಇಡಬೇಕು. ಇದರೊಂದಿಗೆ ನೀವು ನಮ್ಮ ವೈರವನ್ನೂ ತೆಗೆದುಕೊಂಡು ಹೋಗುವಿರೆಂಬುದು ಮಾತ್ರ ಗೊತ್ತಿರಲಿ. ಎಲ್ಲಿಯ ವರೆಗೆ ಈ ಮುಕುಟ ನಮ್ಮಲ್ಲಿರುವುದಿಲ್ಲವೊ ಅಲ್ಲಿಯ ವರೆಗೂ ನಮ್ಮ ವಂಶದಲ್ಲಿ ಶಾಂತಿ ನೆಲೆಸಲಾರದು.

ರಾಜಧರ: ಇದು ರಾಜರಾಡುವ ಮಾತೇ! ನಮಗೂ ಕೂಡ ಶಾಂತಿ ಬೇಕಾಗಿಲ್ಲ —ಮಹಾರಾಜರೇ! ನಾವೂ ಕ್ಷತ್ರಿಯರು. ಇನ್ನೊಂದು ಕೆಲಸ ಉಳಿದಿದೆ. ಬೇಗ ಯುದ್ಧವನ್ನು ನಿಲ್ಲಿಸಬೇಕೆಂದು ಆಜ್ಞಾಪತ್ರವನ್ನು ನೀವು ನಿಮ್ಮ ಸೇನಾಪತಿಯ ಕಡೆಗೆ ಕಳಿಸಿಕೊಡಬೇಕು. ಅಲ್ಲಿಯವರೆಗೂ ಅತ್ತ ಯುದ್ಧ ನಡೆದೇ ಇರುತ್ತದೆ.

ಆರಾಕಾನರಾಜ; ಈಗಲೇ ನಮ್ಮ ಆಜ್ಞಾಪತ್ರದೊಂದಿಗೆ ನಮ್ಮ ದೂತನು ಅತ್ತ ಹೋಗುವನು.

ರಾಜಧರ: ನಡೆಯಿರಿ ಹಾಗಾದರೆ. ಸಂಧಿಪತ್ರ ಬರೆಸುವ ಕೆಲಸಕ್ಕೆ ಉದ್ಯುಕ್ತ ರಾಗೋಣ.

ತ್ರಿತೀಯ ದೃಶ್ಯ

ರಣಕ್ಷೇತ್ರ

(ಯುವರಾಜ ಮತ್ತು ಇಂದ್ರಕುಮಾರ)

ಯುವರಾಜ: ಇಂದಿನ ಯುದ್ಧದ ಪ್ರಗತಿಯ ವೃತ್ತಾಂತವು ಚೆನ್ನಾಗಿ ಇದ್ದಂತೆ ತೋರಲಿಲ್ಲ. ನಿನ್ನೆ ನಮ್ಮ ಸೈನಿಕರಿಗೆ ಬಿದ್ದ ಆಘಾತದಿಂದ ಇಂದೂ ಕೂಡ ಅವರು ಉತ್ಸಾಹಗೊಂಡಿಲ್ಲವೆಂದು ನನಗೆ ಅನಿಸುತ್ತಿದೆ. ಅಂತೆಯೇ ಅವರಿಂದು ವೀರತನದಿಂದ ಹೋರಾಡುತ್ತಿಲ್ಲ. ಇಶಾಖಾನ್ ಅವರು ಯಾವ ದಿಕ್ಕಿನಲ್ಲಿ ಯುದ್ಧ ಮಾಡುತ್ತಿರುವರೊ?

ಇಂದ್ರಕುಮಾರ : ಅಲ್ಲಿ. ಪೂರ್ವದಿಕ್ಕಿನಲ್ಲಿ-ಅವರ ಧ್ವಜ ಅಗೋ ಕಾಣುತ್ತಿದೆ.

ಯುವರಾಜ : ತಮ್ಮಾ, ಅದೇಕೆ ನೀನಿಂದು ನನ್ನ ಬೆನ್ನು ಬಿಡದೆ ಇರುವೆ? ಉತ್ತರದ ಕಡೆಗೆ ದಂಡೆತ್ತಿ ಹೋಗುವುದು ಈಗ ನಿನ್ನ ಕರ್ತವ್ಯವಲ್ಲವೆ?

ಇಂದ್ರಕುಮಾರ : ಇಲ್ಲ. ನನಗೆ ಈ ಸ್ಥಳವೇ ಚೆನ್ನಾಗಿದೆ.

ಯುವರಾಜ : ನೀನಿಂದು ನಿನ್ನ ಅಣ್ಣನ ಬುದ್ಧಿಶೂನ್ಯತ್ವದಿಂದ ಅವನನ್ನು ರಕ್ಷಣೆ ಮಾಡಬೇಕೆಂದು ಪ್ರಯತ್ನಿಸುತ್ತಿರುವೆ. ನನ್ನೊಂದಿಗೆ ತರ್ಕ ಹಾಕುತ್ತಿರುವೆ. ನನ್ನನ್ನು ಬಿಡದೆ ಬೆಂಬತ್ತಿರುವೆ. ಖಾನ್‌ಸಾಹೇಬರು ಸಮಯ ಸಾಧಿಸಿ ಎಲ್ಲಿ ನನ್ನ ಬುದ್ಧಿಶೂನ್ಯತ್ವವನ್ನು ಕಾಣುವರೊ ಎಂಬ ಭಯ ನಿನಗೆ. ನನಗೆ ಇದು ಸರಿ ಬರುವುದಿಲ್ಲ. ಆದರೆ ತಮ್ಮಾ, ನನ್ನ ಬುದ್ಧಿಶೂನ್ಯತ್ವಕ್ಕೂ ಒಂದು ಮಿತಿ ಇದೆ. ಮೇರೆ ಇದೆ. ನಾನು ಇಂದು ಸಾವಧಾನವಾಗಿ ನನ್ನ ಎಲ್ಲ ಕೆಲಸಗಳನ್ನೂ ಮಾಡಿಕೊಳ್ಳಬಲ್ಲೆನೆಂದು ನನಗೆ ಅನಿಸುತ್ತಿದೆ. ನೋಡು. ವಿಚಾರ ಮಾಡಿ ನೋಡು. ನಿನ್ನ ಈ ನಡತೆಯು ನನಗೇಕೋ ಸರಿ ತೋರದಾಗಿದೆ. ನಮ್ಮ ಸೈನಿಕರು ಇನ್ನು ಹೆಚ್ಚು ಸಮಯ ಹೋರಾಡಲಾರರು. ಈಗಲೋ ಇನ್ನೊಂದು ಕ್ಷಣಕ್ಕೊ ಅವರು ಓಡಿಹೋಗುವುದರಲ್ಲಿದ್ದಾರೆ. ನೀನಲ್ಲದೆ ಅವರನ್ನು ಇನ್ನಾರೂ ತಡೆದು ನಿಲ್ಲಿಸಲಾರರು. ಇಂದ್ರಕುಮಾರ, ತಡಮಾಡಬೇಡ. ನನ್ನ ವಿಷಯವಾಗಿ ನೀನಾವ ಭಯವನ್ನೂ ತಾಳಬೇಡ. ಏನು? ಏನಿದು? ಇದೇನಾಯಿತು?

ಇಂದ್ರಕುಮಾರ : ಶತ್ರುಗಳು ಒಮ್ಮಿಂದೊಮ್ಮೆ ಯುದ್ಧವನ್ನೇಕೆ ಈ ರೀತಿ ನಿಲ್ಲಿಸಿದರು? ಅದುದಾದರೂ ಏನು? (ಇಶಾಖಾನ್ ಅವರು ಪ್ರವೇಶಿಸುವರು) ಶತ್ರುಸೈನ್ಯದವರು ಒಮ್ಮಿಂದೊಮ್ಮೆ ಅದೇಕೆ ಯುದ್ಧವನ್ನು ನಿಲ್ಲಿಸಿದರು? ನಿಮಗೇನಾದರೂ ಈ ರಹಸ್ಯ ಗೊತ್ತಾಗಿದೆಯೆ?

ಇಶಾಖಾನ್ : ಗೊತ್ತಾಗದೆ ಏನು? ರಾಜಧರನು ಆರಾಕಾನರಾಜರನ್ನು ಸೆರೆಹಿಡಿದಿದ್ದಾನೆ.

ಇಂದ್ರಕುಮಾರ : ರಾಜಧರ? ಇದು ಸುಳ್ಳು.

ಇಶಾಖಾನ : ನಿನ್ನೆ ರಾತ್ರಿಯಾದ ಮೇಲೆ ನಾವೆಲ್ಲರೂ ಯುದ್ಧಮಾಡಿ ದಣಿದು ಶಿಬಿರಕ್ಕೆ ಹಿಂದಿರುಗಿ ಬಂದನಂತರ ಕತ್ತಲೆಯಲ್ಲಿ ರಾಜಧರನು ನದಿಯನ್ನು ರಹಸ್ಯವಾಗಿ ದಾಟಿ ಒಮ್ಮಿಂದೊಮ್ಮೆ ಆರಾಕಾನರಾಜರ ಶಿಬಿರವನ್ನು ಮುತ್ತಿ ಅವರನ್ನು ಸೆರೆಹಿಡಿದಿದ್ದಾನೆ. ನಮಗೆ ಸಹಾಯ ಮಾಡಲು ಎಂದು ನಾವೆಲ್ಲಿ, ಯಾವ ಸ್ಥಳದಲ್ಲಿ ಇರಲು ಹೇಳಿದ್ದೆವೋ ಅಲ್ಲಿ ಅವರು ಇರಲೇ ಇಲ್ಲ. ನಮ್ಮ ಆಜ್ಞೆಯನ್ನು ಅವರು ಮಾನ್ಯ ಮಾಡಿಯೇ ಇಲ್ಲ.

ಇಂದ್ರಕುಮಾರ : ಇದನ್ನು ಸಹಿಸುವುದು ಸಾಧ್ಯವಿಲ್ಲ. ಈ ಮಹಾ ಅಪರಾಧಕ್ಕಾಗಿ ಅವನಿಗೆ ಶಿಕ್ಷೆಯನ್ನು ವಿಧಿಸಲೇ ಬೇಕು.

ಇಶಾಖಾನ : ಇಷ್ಟೇ ಅಲ್ಲ. ಯುವರಾಜರಿರುವಾಗಲೇ ತಾವೊಬ್ಬರೇ ಸಂಧಿಪತ್ರವನ್ನೂ ಕೂಡ ಮಾಡಿಸಿಕೊಂಡಿದ್ದಾರೆ.

ಇಂದ್ರಕುಮಾರ: ಇದಕ್ಕೆ ಶಿಕ್ಷೆಕೊಡದೆ ಹೋದರೆ ಅನ್ಯಾಯ ಮಾಡಿದಂತಾಗುತ್ತದೆ.

ಇಶಾಖಾನ: ನಿಮ್ಮ ಅಗ್ರಜರಿಗೆ ಇಷ್ಟೊಂದು ಸುಲಭವಾದ ವಿಷಯವನ್ನೂ ಕೂಡ ತಿಳಿಸಿ ಹೇಳಬೇಕೆಂದು ತೋರುತ್ತದೆ. (ರಾಜಧರರ ಪ್ರವೇಶ)

ಇಂದ್ರಕುಮಾರ: ರಾಜಧರ, ನೀನೇನು ಪೌರುಷಮಾಡಿರುವೆ ಹೇಳು ನೋಡೋಣ?

ರಾಜಧರ: ನಿನ್ನಂತೆ ಯುದ್ಧಮಾಡುವುದನ್ನು ಬಿಟ್ಟು ಬಣಪೌರುಷ ಕೊಚ್ಚಲು ನಾನಿಲ್ಲಿಗೆ ಬಂದಿಲ್ಲ. ಯುದ್ಧವನ್ನು ಗೆದ್ದುಕೊಂಡು ಬಂದಿದ್ದೇನೆ.

ಇಂದ್ರಕುಮಾರ: ನೀನು ಯುದ್ಧಮಾಡಿದೆಯಾ? ಹಾಗೂ ಗೆದ್ದು ಬಂದಿರುವೆಯಾ? ಹಾಗಾದರೆ ವಿಜಯಲಕ್ಷ್ಮಿಯ ಮುಖವು ಲಜ್ಜೆಯಿಂದ ಕೆಂಪಾಗಿಹೋಗಿರಲು ಸಾಕು! ಅಲ್ಲವೇ?

ರಾಜಧರ: ಹಾಗೆ ಆಗಲೂ ಸಾಧ್ಯವಿದೆ. ಅದು ಪ್ರಣಯದ ಲಜ್ಜೆ. ಆದರೆ ಅವಳು ನನ್ನನ್ನು ವರಿಸಿದ್ದಕ್ಕೆ ಇಗೋ, ಇದೇ ಸಾಕ್ಷಿ,

ಇಂದ್ರಕುಮಾರ: ಈ ಮುಕುಟ ಯಾರದು?

ರಾಜಧರ: ಈ ಮುಕುಟ ನನ್ನದು. ಇದು ನನ್ನ ವಿಜಯಕ್ಕೆ ದೊರೆತ ಪುರಸ್ಕಾರ.

ಇಂದ್ರಕುಮಾರ: ಯುದ್ಧಮಾಡುವುದನ್ನು ಬಿಟ್ಟು ರಣಕ್ಷೇತ್ರದಿಂದ ನೀನು ಓಡಿ ಹೋಗಿರುವೆ. ನೀನೆಂತು ಪುರಸ್ಕಾರಕ್ಕೆ ಯೋಗ್ಯನಾಗಬಲ್ಲೆ? ಈ ಮುಕುಟವನ್ನು ಯುವರಾಜರು ಧರಿಸುವರು. ಅವರೇ ಅದಕ್ಕೆ ಪಾತ್ರರು.

ರಾಜಧರ: ನಾನು ಗೆದ್ದು ತಂದಿರುವೆ. ಆದ್ದರಿಂದ ನಾನೇ ಅದನ್ನು ಧರಿಸುತ್ತೇನೆ.

ಯುವರಾಜ: ರಾಜಧರನು ಸರಿಯಾದ ಮಾತನ್ನೇ ಹೇಳುತ್ತಾನೆ. ಅವನು ತನ್ನ ಜಯದ ಸಂಪತ್ತನ್ನು ತಾನೇ ಪಡೆಯುತ್ತಾನೆ.

ಇಶಾಖಾನ: ಸೇನಾಪತಿಯ ಆಜ್ಞೆಯನ್ನು ಉಲ್ಲಂಘಿಸಿ ಅವನು ನರಿಯಂತೆ ನಡೆದುಕೊಂಡಿದ್ದಾನೆ. ಹೀಗಿರುವಾಗ ಅವನು ಈ ಮುಕುಟವನ್ನೆಂತು ಪಡೆಯುವನು?

ರಾಜಧರ: ಒಂದು ವೇಳೆ ನಾನಿಲ್ಲದೆ ಹೋಗಿದ್ದರೆ ನಿಮ್ಮ ಗತಿ ಏನಾಗುತ್ತಿತ್ತು? ಈಗ ನೀವು ಇರುವಂತೆ ಇಲ್ಲಿ ಇರಲೂಕೂಡ ಸಾಧ್ಯವಾಗುತ್ತಿರಲಿಲ್ಲ.

ಇಂದ್ರಕುಮಾರ: ಎಲ್ಲಿಯೂ ನಿಲ್ಲಲು ಸ್ಥಳ ದೊರೆಯದೆ ಹೋಗಿದ್ದರೂ ನಿನ್ನಂತೆ, ರಣಭೂಮಿಯಿಂದ ಓಡಿಹೋಗುತ್ತಿರಲಿಲ್ಲ.

ಯುವರಾಜ: ಇಂದ್ರಕುಮಾರ, ನೀನು ಅನ್ಯಾಯವಾಗಿ ನುಡಿಯುತ್ತಿರುವೆ ತಮ್ಮಾ, ನಿಜವನ್ನೇ ಹೇಳಬೇಕೆಂದರೆ ಇಂದು ರಾಜಧರನು ಇಲ್ಲದೆ ಹೋಗಿದ್ದರೆ, ನಮಗೆ ಬಹು ದೊಡ್ಡ ಗಂಡಾಂತರ ಒದಗುತ್ತಿತ್ತು.

ಇಂದ್ರಕುಮಾರ: ಯಾವ ಗಂಡಾಂತರವೂ ನಮಗೆ ಬರುತ್ತಿರಲಿಲ್ಲ. ರಾಜಧರನು ಸೈನ್ಯವನ್ನು ಅಡಗಿಸಿ ಇಟ್ಟು ನಮ್ಮನ್ನು ಸಂಕಟದಲ್ಲಿ ಹಾಕಿದನು. ರಾಜಧರನಿಲ್ಲದೆ ಹೋಗಿದ್ದರೂ ನಾನು ಯುದ್ಧಮಾಡಿ ಗೆದ್ದು ಈ ಮುಕುಟವನ್ನು ನಿಮ್ಮ ಅಡಿಗೆ ತಂದು ಒಪ್ಪಿಸುತ್ತಿದ್ದೆ. ರಾಜಧರನು ಇದನ್ನು ಕಳವು ಮಾಡಿ ತಂದಿದ್ದಾನೆ.

ಯುವರಾಜ: (ರಾಜಧರನನ್ನು ಕುರಿತು) ನೀನೇ ಇಂದು ಯುದ್ಧವನ್ನು ಗೆದ್ದಿರುವೆ, ನೀನಿಲ್ಲದೆ ಹೋಗಿದ್ದರೆ ಚಿಕ್ಕ ಸೈನ್ಯದಿಂದ ಇದ್ದ ನಮಗೆ ಅದಾವ ಗಂಡಾಂತರ ಕಾಯ್ದು ಕುಳಿತಿತ್ತೊ ಅದನ್ನು ಊಹಿಸಲಿಕ್ಕೂ ಸಾಧ್ಯವಿಲ್ಲ. ಹೇಳುವ ಮಾತಂತೂ ದೂರ ಉಳಿಯಿತು. ಈ ಮುಕುಟವನ್ನು ನಾನೇ ನಿನ್ನ ತಲೆಯ ಮೇಲೆ ಇರಿಸುತ್ತೇನೆ.

ಇಂದ್ರಕುಮಾರ: (ಕೋಪದಿಂದ ತೇಕುತ್ತ) ರಾಜಧರನು ಕ್ಷಾತ್ರಧರ್ಮವನ್ನು ಉಲ್ಲಂಘಿಸಿದನೆಂದು ಇಂದು ನಿಮ್ಮಿಂದ ಅವನಿಗೆ ಪುರಸ್ಕಾರ ದೊರೆಯುತ್ತಿದೆ. ಆದರೆ ನಾವು ನಮ್ಮ ಪ್ರಾಣಗಳನ್ನು ತೃಣಸಮಾನವೆಂದು ಬಗೆದು ವಿಪತ್ತಿನ ಸಮ್ಮುಖದಲ್ಲಿ ನಿಂತು ಯುದ್ಧ ಮಾಡಿದರೆ ಅದಕ್ಕೆ ಪ್ರತಿಯಾಗಿ ನಿಮ್ಮಿಂದ ಒಂದು ಪ್ರಶಂಸೆಯ ಮಾತೂ ಕೂಡ ಬರಲಿಲ್ಲ. ಆ ಪ್ರಶಂಸೆಯನ್ನು ನಮ್ಮ ಕಿವಿಯಿಂದ ಕೇಳುವ ಸುಸಮಯ ಬರಲಿಲ್ಲ. ಅದರ ಬದಲು ರಾಜಧರನು ಇಂದು ಇಲ್ಲದೆ ಹೋಗಿದ್ದರೆ ನಿಮ್ಮನ್ನು ವಿಪತ್ತಿನಿಂದ ರಕ್ಷಿಸುವವರಾರೂ ಇರಲಿಲ್ಲವೆಂಬ ಮಾತನ್ನೇ ಕೇಳುತ್ತಿದ್ದೇವೆ. ಏನು ಅಗ್ರಜರೇ, ಯುವರಾಜರೇ, ನಾವು ಬೆಳಗಿನಿಂದ ಸಂಜೆಯವರೆಗೂ ನಿಮ್ಮ ಕಣ್ಣೆದುರಿನಲ್ಲಿ ಹೋರಾಡಿ ಯುದ್ಧ ಮಾಡಿಲ್ಲವೇ? ನಾವೇನು ರಣಕ್ಷೇತ್ರದಿಂದ ಓಡಿಹೋಗಿದ್ದೆವೆ? ಶತ್ರು ಪಕ್ಷದ ವಿರುದ್ಧ ಹಂಗು ಹರಿದು ನಿಮ್ಮ ಆಶ್ರಯವನ್ನು ಯಾಚಿಸಿ ನಾವೇನೂ ಬಂದಿಲ್ಲ. ನಿಮ್ಮನ್ನು ಸಂಕಟದಿಂದ ರಾಜಧರನೊಬ್ಬನೇ ಪಾರು ಮಾಡಿದನೆಂದು ಹೇಗೆ ಹೇಳುವಿರಿ? ಏಕೆ ಹೇಳುವಿರಿ? ರಾಜಧರನನ್ನು ಬಿಟ್ಟು ಬೇರೆ ಯಾರೂ ನಿಮ್ಮನ್ನು ಪಾರುಮಾಡಲು ಅಸಮರ್ಥರಾಗಿದ್ದರೆ?

ಯುವರಾಜ: ತಮ್ಮಾ, ನಾನು ನನ್ನ ಸ್ವಂತದ ಸಂಕಟದ ವಿಷಯನ್ನು ಹೇಳಲಿಲ್ಲ.

ಇಂದ್ರಕುಮಾರ: ಇರಲಿ ಬಿಡಿ, ಅಗ್ರಜರೇ, ಇನ್ನೇನೂ ಹೇಳುವ ಅವಶ್ಯಕತೆ ಇಲ್ಲ. ರಾಜಧರನಂತಹ ಅಪ್ರತಿಮ ವೀರನ ಸಹಾಯ ಯುವರಾಜರಿಗೆ ದೊರೆತಿದೆ ಎಂದ ಮೇಲೆ ನಮ್ಮ ಅವಶ್ಯಕತೆ ಇಲ್ಲವೆಂದಾಯಿತು. ನಾವು ಹೊರಟುಹೋಗುತ್ತೇವೆ.

ಯುವರಾಜ: ತಮ್ಮಾ ಶಾಂತನಾಗು. ಇಂದ್ರಕುಮಾರ ಮತ್ತೆ ನೀನು ಆತ್ಮವಿಸ್ಮೃತಿಯನ್ನು ತಂದುಕೊಳ್ಳುತ್ತಿರುವೆ.

ಇಂದ್ರಕುಮಾರ: ಎಲ್ಲಿ ನಮ್ಮ ಪ್ರಯೋಜನವಿಲ್ಲವೊ ಅಲ್ಲಿ ನಿಲ್ಲುವುದೆಂದರೆ ನಮಗೆ ಅಪಮಾನವಾದಂತೆ. (ಹೊರಟು ಹೋಗುವನು)

ಇಶಾಖಾನ: ಯುವರಾಜರೇ, ಈ ಮುಕುಟವನ್ನು ಯಾರಿಗು ಕೊಡುವ ಅಧಿಕಾರ ನಿಮಗೆ ಇಲ್ಲ. ನಾವು ಸೇನಾಪತಿಗಳು. ನಾವು ಇದನ್ನು ಯಾರಿಗೆ ಕೊಡುವೆವೋ ಅದು ಅವರದಾಗುತ್ತದೆ. (ರಾಜಧರನ ತಲೆಯ ಮೇಲಿರುವ ಮುಕುಟವನ್ನು ತೆಗೆದು ಯವರಾಜರ ತಲೆಯ ಮೇಲೆ ಇರಿಸ ಹೋಗುವನು.)

ಯುವರಾಜ: (ದೂರ ಸರಿದು) ಬೇಡ; ನಾನು ಈ ಮುಕುಟವನ್ನು ಧರಿಸಲಾರೆ. ಇದನ್ನು ಸ್ವೀಕರಿಸಲು ನಾನು ಅರ್ಹನಲ್ಲ.

ಇಶಾಖಾನ: ಹಾಗಾದರೆ ಸುಮ್ಮನಿರಿ. ಈ ಮುಕುಟ ಯಾರಿಗೂ ಲಭ್ಯವಿಲ್ಲ. ಕರ್ಣಫುಲಿ ನದಿಯಲ್ಲಿ ಇದನ್ನು ಎಸೆದು ಬಿಡಿ. (ಮುಕುಟವನ್ನು ಒಗೆಯುವನು) ರಾಜಧರನು ಯುದ್ಧದ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಅವನಿಗೆ ಶಿಕ್ಷೆಯಾಗ ಬೇಕು. ಅವನು ಶಿಕ್ಷೆಗೆ ಪಾತ್ರನಾಗಿದ್ದಾನೆ.

ರಾಜಧರ: ಅಣ್ಣಾ, ಇಂದು ನಡೆದುದಕ್ಕೆ ನೀವು ಸಾಕ್ಷಿಯಾಗಿರುವಿರಿ. ನಾನು ಇದ ನ್ನೆಂದಿಗೂ ಮರೆಯುವುದಿಲ್ಲ. ಇಂದಿನ ನನ್ನ ಅಪಮಾನದ ಸೇಡನ್ನು ನಾನು ಖಂಡಿತ ತೆಗೆದುಕೊಳ್ಳುವೆ. (ತೆರೆ)

ಚತುರ್ಥ ದೃಶ್ಯ

ಶಿಬಿರ

ರಾಜಧರ ಮತ್ತು ಧುರಂಧರ

ರಾಜಧರ: ಧುರಂಧರ, ನನ್ನ ಮುಕುಟದೊಂದಿಗೆ ನನ್ನ ಯುದ್ಧದ ಯಶವನ್ನೂ ಕೂಡ ಈ ಕರ್ಣಫುಲಿ ನದಿಯ ನೀರಿನಲ್ಲಿಯೇ ಜಲಾಂಜಲಿಯನ್ನಾಗಿ ಕೊಡುತ್ತೇನೆ

ಧುರಂಧರ: ಅಂದರೆ ಮತ್ತೆ ಸೋತು ಹೋಗುವೆಯಲ್ಲವೆ?

ರಾಜಧರ: ಅಹುದು. ಈ ಸಲ ಸೋತು ಗೆದೆಯುವೆ. ಇಂದ್ರಕುಮಾರನ ಅಹಂಕಾರ ಮಿತಿಮೀರಿದೆ. ಅದನ್ನು ಮಣ್ಣು ಮುಕ್ಕಿಸದೆ ನಾನು ತಿರುಗಿ ಬರುವುದಿಲ್ಲ. ನನ್ನಿಂದಾದ ವಿಜಯವನ್ನು ಅವನು ಸ್ವೀಕರಿಸಲು ಸಿದ್ಧನಿಲ್ಲ. ನೋಡುವೆ! ಈ ಸಲ ಅವನೊಬ್ಬನೆ ಅದು ಹೇಗೆ ವಿಜಯಶಾಲಿಯಾಗುವನೆಂಬುದನ್ನು ನೋಡು ತ್ತೇನೆ.

ಧುರಂಧರ: ಹೀಗೆಂದು ನೀನು ನಿಶ್ಚಿಂತನಾಗಿರಬೇಡ. ಸುದೈವದಿಂದ ಇಂದ್ರ ಕುಮಾರನು ಯುದ್ಧವನ್ನು ಗೆದ್ದು ಬರಲೂ ಕೂಡ ಶಕ್ಯವಿದೆ. ನಿಜ ಸಂಗತಿಗಾಗಿ ಸಿಟ್ಟು ಮಾಡಿಕೊಂಡು ಪ್ರಯೋಜನವಿಲ್ಲ. ಯುದ್ಧ ವಿದ್ಯೆಯನ್ನು ಇಂದ್ರ ಕುಮಾರ ತುಸು ಕಲಿತಿದ್ದಾನೆ. ಇದನ್ನು ನೀನು ಮರೆಯಬೇಡ.

ರಾಜಧರ: ಇರಲಿ. ಆ ತರ್ಕವೆಲ್ಲ ನಂತರ ಮಾಡಿದರಾದೀತು! ಈಗ ನೀನೊಂದು ಕೆಲಸ ಮಾಡಬೇಕು. ಆರಾಕಾನರಾಜನು ನಾಳೆ ಬೆಳಗಿನಲ್ಲಿಯೇ ತನ್ನ ಸೈನ್ಯ ತೆಗೆದುಕೊಂಡು ಹೊರಡುವನು. ಎಂದಿನವರೆಗೆ ಅವನು ಚಟ್ಟಗ್ರಾಮದ ಗಡಿ ಯನ್ನು ಬಿಟ್ಟು ಹೊರಗೆ ಹೋಗುವುದಿಲ್ಲವೊ, ಅಂದಿನ ವರೆಗೂ ಅವರ ಸೇನಾ ಪತಿ ನಮ್ಮ ಶಿಬಿರದಲ್ಲಿ ಬಂದಿಯಾಗಿರಬೇಕೆಂದು ಮಾತಾಗಿದೆ. ಅವನು ಶಿಬಿರ ಕಿತ್ತುಹೋಗುವ ಮೊದಲೇ ಇದೇ ರಾತ್ರಿ ನೀನು ನನ್ನ ಈ ಪತ್ರವನ್ನು ಅವ ರಿಗೆ ಮುಟ್ಟಿಸಬೇಕು.

ಧುರಂಧರ: ಪತ್ರದಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿರುವುದು ಒಳಿತು. ಏಕೆಂದರೆ ನಿಮ್ಮಿಬ್ಬರ ನಡುವೆ ಏನಾದರೊಂದು ಮಾತು ಹೇಳುವುದಿದ್ದಲ್ಲಿ ಹೇಳದೆ ಹೋದರೆ ಅದರಿಂದ ತಪ್ಪಾಗಿ ಹೋಗಬಹುದು.

ರಾಜಧರ: ಹಾಗಾದರೆ ನಾನು ಪತ್ರದಲ್ಲಿ ಏನು ಬರೆದಿರುವೆನೆಂಬುದನ್ನು ಹೇಳುವೆ ಕೇಳು. ನನಗೆ ತುಂಬ ಅಪಮಾನವಾಗಿರುವುದರಿಂದ ನಾನು ನನ್ನ ಅಗ್ರಜರಿಂದ, ನನ್ನ ಸೈನ್ಯದೊಂದಿಗೆ ದೂರ ಸರಿದು ಹೋಗುತ್ತೇನೆ. ನಾನು ನನ್ನ ಐದು ಸಾವಿರ ಸೈನಿಕರೊಂದಿಗೆ ಮರಳಿ ಮನೆಗೆ ಕೂಡಲೆ ಹೊರಟುಹೋಗುತ್ತೇನೆ. ಇಂದ್ರಕುಮಾರರೂ ಕೂಡ ಯುವರಾಜರ ಮೇಲೆ ಕೋಪಗೊಂಡು ದೂರ ಸರಿದು ಹೋಗಿದ್ದಾರೆ. ಯುದ್ಧ ಮುಗಿಯಿತೆಂದು ತಿಳಿದು ಸೈನಿಕರೆಲ್ಲರೂ ಕೂಡ ಹೊರಡುವ ಸಿದ್ಧತೆಯಲ್ಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆರಾಕಾನ ರಾಜರು ಒಮ್ಮಿಂದೊಮ್ಮೆ ದಾಳಿಮಾಡಿದರೆ ತ್ರಿಪುರದ ಸೈನ್ಯ ಸೋತುಹೋಗುವುದು ಖಂಡಿತ.

ತೃತೀಯ ಅಂಕ

ಪ್ರಥಮ ದೃಶ್ಯ

ಇಂದ್ರಕುಮಾರ ಮತ್ತು ಸೈನಿಕರು

ಇಂದ್ರಕುಮಾರ: ಎಲ್ಲಿ? ಓ ಅಣ್ಣಾ! ಎಲ್ಲಿರುವೆ? ಎಲ್ಲಿರುವಿರಿ? ಓ ಎನ್ನ ಬಾರದೆ?

ಸೈನಿಕ: ನಾನೂ ಈಗ ಯುವರಾಜರನ್ನೇ ಹುಡುಕುತ್ತಿದ್ದೇನೆ ಪ್ರಭುಗಳೇ.

ಇಂದ್ರಕುಮಾರ: ಮತ್ತೆ ಇಶಾಖಾನ? ಅವರೆಲ್ಲಿ?

ಸೈನಿಕ: ಇಂದು ಬೆಳಗಿನ ನಾಲ್ಕು ಗಂಟೆಯಲ್ಲಿ ಯುವರಾಜರು ಇಶಾಖಾನರ ದೇಹಕ್ಕೆ ತಮ್ಮ ಕೈಯಿಂದಲೇ ಮಣ್ಣುಕೊಟ್ಟರು. ಆ ಮಣ್ಣಿನಲ್ಲಿ ತಮ್ಮ ರಕ್ತವನ್ನೂ ಬೆರೆಸಿದರು.

ಇಂದ್ರಕುಮಾರ: ಧಿಕ್ ಇಂದ್ರಕುಮಾರ, ಧಿಕ್, ಧಿಕ್! ಇಂದ್ರಕುಮಾರ ನಿನಗೆ ಧಿಕ್ಕಾರವಿರಲಿ! ಧಿಕ್ಕಾರವಿರಲಿ ಆತನ ಆ ಸಿಟ್ಟಿಗೆ; ಆತನ ಅಹಂಕಾರಕ್ಕೆ! ಅಣ್ಣಾ ಈ ನರಾಧಮನಿಗೆ ಒಂದೇ ಒಂದು ಸಲ ಕೂಡ ಕ್ಷಮೆ ಬೇಡಿಕೊಳ್ಳಲು ಅವಕಾಶವನ್ನು ಕೊಡದಾದೆಯಾ? (ದೊಡ್ಡ ದನಿಯಲ್ಲಿ) ಅಣ್ಣಾ, ಅಗ್ರಜಾ, ಎಲ್ಲಿರುವೆ? ದರ್ಶನವನ್ನಾದರೂ ಕೊಡು. ಅಯ್ಯೋ! ಯಾರೂ ಇಲ್ಲವೆ? ಯಾರೂ ನನ್ನ ಅಣ್ಣನನ್ನು ಹುಡುಕಿ-ಕೊಡಲಾರರೆ? ಎಲ್ಲರೂ ಕೂಡಿ ನನ್ನ ಅಗ್ರಜನನ್ನು ಹುಡುಕಿಕೊಡಿರಿ. ನನಗೆ ನನ್ನ ಅಣ್ಣ ಬೇಕೇ ಬೇಕು.

[ಎರಡನೆ ಸೈನಿಕನ ಪ್ರವೇಶ]

ದ್ವಿತೀಯ ಸೈನಿಕ: ಹೀಗೇ ಮುಂದೆ ನಡೆಯಿರಿ ಕುಮಾರರೇ. ಯುವರಾಜರಾದ ನಿಮ್ಮ ಅಣ್ಣ ಸಿಕ್ಕಿದ್ದಾರೆ.

ಇಂದ್ರಕುಮಾರ: ಎಲ್ಲಿ? ಎಲ್ಲಿ?

ದ್ವಿತೀಯ ಸೈನಿಕ: ಕರ್ಣಫುಲಿ ನದಿಯ ದಂಡೆಯ ಮೇಲೆ ಇರುವ ಅರ್ಜುನಗಿಡದ ಕೆಳಗೆ.

ಇಂದ್ರಕುಮಾರ: ನಿಜವೇ? ನಿಜವೇ? ನಿಜವನ್ನು ಹೇಳುತ್ತಿರುವೆಯಾ? ನಾನಿದನ್ನು ನಂಬಲೇ.

ದ್ವಿತೀಯ ಸೈನಿಕ: ಯುವರಾಜರು ಜೀವದಿಂದ ಇರುವರಲ್ಲದೆ ತಮ್ಮ ದಾರಿಯನ್ನೇ ಕಾಯುತ್ತಿದ್ದಾರೆ.

ದ್ವಿತೀಯ ದೃಶ್ಯ

(ಕರ್ಣಫುಲಿ ನದಿಯ ದಂಡೆ. ಮರದ ಕೆಳಗೆ ಚಂದ್ರನ ಮಂದ ಪ್ರಕಾಶದಲ್ಲಿ)

ಯುವರಾಜ: ಏ, ಯಾರಿರುವಿರಿ! ಸರಿಸಿರಿ. ತುಸು ಆಚೆಗೆ ಸರಿಸಿರಿ. ಈ ಮರದ ಟೊಂಗೆಗಳನ್ನು ತುಸು ಆಚೆಗೆ ಸರಿಸಿರಿ. ಇಂದು ಆಕಾಶದಲ್ಲಿ ಬೆಳಗುತ್ತಿರುವ ಚಂದ್ರನನ್ನು ಕೊನೆಯ ಸಲ ಚೆನ್ನಾಗಿ ನೋಡುತ್ತೇನೆ. ಯಾರೂ ಇಲ್ಲವೆ? ಇದೇನು? ಮರದ ನೆರಳು. ನನ್ನ ಕಣ್ಣಿನ ಮೇಲೆಯೇ ಬಿದ್ದಿದೆಯಲ್ಲ! ಇಲ್ಲಿಂದಲೇ ಈ ವರೆಗೂ ಕರ್ಣಫುಲಿ ನದಿಯ ನೀರು ಜುಳು ಜುಳು ಹರಿಯುತ್ತಿರುವುದನ್ನು ಕೇಳುತ್ತಿದ್ದೇನೆ. ಈ ಸ್ವರದಲ್ಲಿಯೇ ಈ ಭೂಮಿಯ, ಇಹ ಲೋಕದ ಕೊನೆಯ ಮಾತುಗಳನ್ನು ಆಲಿಸುತ್ತಿದ್ದೇನೆ. ಇಂದ್ರಕುಮಾರ, ತಮ್ಮಾ ಇಂದ್ರಕುಮಾರ! ಈ ವರೆಗೂ ನಿನ್ನ ಸಿಟ್ಟು ಹೋಗಿಲ್ಲವೆ?

(ಇಂದ್ರಕುಮಾರರ ಪ್ರವೇಶ)

ಇಂದ್ರಕುಮಾರ: ಅಣ್ಣಾ, ಅಣ್ಣಾ!

ಯುವರಾಜ: ಹಾಯ್! ಬದುಕಿದೆ! ತಮ್ಮಾ, ಬದುಕಿದೆ. ನೀನು ಬರುವಿಯೆಂದೇ, ಈ ವರೆಗೂ ಜೀವ ಹಿಡಿದು ಇದ್ದೇನೆ. ನೀನು ಕೋಪಗೊಂಡು ಹೊರಟು ಹೋಗಿದ್ದೆ. ಅಂತೇ ನಾನು ನಿನ್ನೆಡೆಗೆ ಧಾವಿಸಿ ಹೋಗಲಿಲ್ಲ. ಆದರೆ ರಾತ್ರಿ ಬಹಳ ಆಗಿದೆ ತಮ್ಮಾ, ನಾನು ಮರಳಿ ಹೋಗುವೆ. ತಾಯಿಯ ತೊಡೆಯ ಮೇಲೆ ಮಲಗುವೆ.

ಇಂದ್ರಕುಮಾರ: ಅಣ್ಣಾ, ನಮ್ಮನ್ನೆಲ್ಲ ಬಿಟ್ಟು ನೀನೊಬ್ಬನೇ ಹೋಗುವೆಯಾ? ಎಲ್ಲವನ್ನೂ ತೊರೆದು ನೀನು, ಎಲ್ಲದಕ್ಕೂ ನೀರುಬಿಟ್ಟು ನೀನೀಗ ಹೋಗಬೇಕೆನ್ನುವೆಯಾ?

ಯುವರಾಜ: ಎಲ್ಲದಕ್ಕೂ ತಮ್ಮಾ! ಇಲ್ಲಿಯದೆಂಬುದು ಏನೆಲ್ಲ ಇತ್ತೊ, ಅದನ್ನೆಲ್ಲ ಈ ರಕ್ತದಿಂದ ತೊಳೆದು ಹೊರಟಿದ್ದೇನೆ. ಯಾವುದನ್ನೂ ಉಳಿಸಿಲ್ಲ. ಕೇವಲ ಒಂದೇ ದುಃಖ ಉಳಿದಿತ್ತು. ಮಹಾರಾಜರಿಗೆ ಸುದ್ದಿಯನ್ನು ಕಳಿಸುವುದೊಂದು ಮಾತ್ರ ಈಗ ಉಳಿದಿದೆ. ನಮಗೆ ಸೋಲು ಉಂಟಾಗಿದೆ.

ಇಂದ್ರಕುಮಾರ: ಸೋಲು! ನಿನಗೆ ಸೋಲು! ಅಣ್ಣಾ ಸೋಲು ನಿನಗೆ ಆಗಿಲ್ಲ; ನನಗೆ ಆಗಿದೆ. ನಾನೇ ಸಂಪೂರ್ಣ ಸೋತಿದ್ದೇನೆ.

(ಸೈನಿಕನ ಪ್ರವೇಶ)

ಸೈನಿಕ: ರಾಜಧರ ಕುಮಾರರು ಯುವರಾಜರ ಚರಣಧೂಲಿಯನ್ನು ತೆಗೆದುಕೊಳ್ಳಲು ಅನುಮತಿಯನ್ನು ಕೇಳಲು ಕಳಿಸಿಕೊಟ್ಟಿದ್ದಾರೆ.

(ಎಂದು ವಿನಯದಿಂದ ಹೇಳಿ ಬಾಗಿ ನಿಲ್ಲುವನು)

ಇಂದ್ರಕುಮಾರ: ಎಂದೂ ಸಾಧ್ಯವಿಲ್ಲ; ತಿಲ ಮಾತ್ರಕ್ಕೂ ಅದಕ್ಕೆ ಅವಕಾಶಕೊಡಲು ಸಾಧ್ಯವಿಲ್ಲ; ದ್ರೋಹಿ!

ಯುವರಾಜ: ತಮ್ಮಾ, ಇಂದ್ರಕುಮಾರ ನೀನು ಶಾಂತನಾಗು, ಬೇಗ ರಾಜಧರನನ್ನು ಕರೆ! ಬೇಗ ಕರೆ!

ಇಂದ್ರಕುಮಾರ: (ಇನ್ನೂ ತುಸು ಕೋಪದಿಂದ) ಏನು ಅಣ್ಣಾ, ಏನು ಹೇಳುವೆ? ರಾಜಧರ ನನ್ನು . . .

ಯುವರಾಜ: ಅಹುದು ರಾಜಧರನನ್ನೇ ಕರೆ, ಇನ್ನೂ ನಿನ್ನ ಕೋಪ ಹೋಗಿಲ್ಲವೇ? ಹೋಗು ನೀನೇ ಹೋಗು. ಕರೆದುಕೊಂಡು ಬಾ!

ಇಂದ್ರಕುಮಾರ: (ಪಶ್ಚಾತ್ತಾಪದಿಂದ) ಇಲ್ಲ! ಮತ್ತೇನೂ ಇಲ್ಲ! ಇನ್ನೇನೂ ನನ್ನ ಕೋಪ ಉಳಿದಿಲ್ಲ.

(ರಾಜಧರನ ಪ್ರವೇಶ)

ರಾಜಧರ: ನಾನು ಪಾಪಿ! ಈ ಮುಕುಟವನ್ನು ನಿಮ್ಮ ಅಡಿಗಳ ಮೇಲೆ ಇರಿಸಿದ್ದೇನೆ. ಇದು ನಿಮ್ಮದೇ!

ಯುವರಾಜ: ನನಗೆ ಇನ್ನು ಸಮಯವಿಲ್ಲ. ಇಂದ್ರಕುಮಾರನಿಗೆ ಅದನ್ನು ಕೊಡು ತಮ್ಮಾ, ರಾಜಧರ.

ರಾಜಧರ: ಅಗ್ರಜ ಯುವರಾಜರ ಅಪ್ಪಣೆಯನ್ನು ನಾನು ಶಿರಸಾವಹಿಸಿದೆನು. ಈ ಮುಕುಟವನ್ನು ನೀನು ತೆಗೆದುಕೊ (ಎಂದು ಅದನ್ನು ಇಂದ್ರಕುಮಾರನಿಗೆ ಕೊಡಲು ಹೋಗುವನು)

ಇಂದ್ರಕುಮಾರ: ನಾನು ಸೋತೆ! ಈ ಮುಕುಟಕ್ಕೆ ನಾನು ಪಾತ್ರನಲ್ಲ. ನಾನಿದನ್ನು ಮರಳಿ ನಿನಗೇ ಕೊಟ್ಟಿದ್ದೇನೆ. (ತೆರೆ).

44. ಪ್ರಾರ್ಥನೆ

ಚಿತ್ತ ನಿರ್ಭಯವೆಲ್ಲಿ, ಶಿರ, ಮತ್ತೆಲ್ಲಿ
ಮೇಲಕೆ ಇರುವುದೊ, ಎಲ್ಲಿ,
ಮನೆಗಳ ಗೋಡೆ ಅಹರ್ನಿಶಿ,
ಭೂಮಿಯನು ತುಂಡರಿಸಿ
ತನ್ನಂಕಿತದಿ ಬಂಧಿಸಿ ಇಲ್ಲವೊ,
ಎಲ್ಲಿ, ಎದೆ ಕಾರಂಜಿಯಿಂದಲಿ,
ಮಾತು ಚಿಮ್ಮುತಲಿರುವುದೊ,
ಎಲ್ಲಿ, ಕಾರ್ಮಿಕರಾವ ದೇಶದಿ,
ಉದರ ಪೋಷಣೆಗೆಂದು ಸಾವಿರ
ವಿಧದಿ ಸಂತತ ನಡೆವರೋ,
ಎಲ್ಲಿ, ತುಚ್ಛ ಆಚಾರ ಮರಳ
ಮರುಭೂಮಿ ಉಚ್ಚ ವಿಚಾರ
ಧಾರೆಯನು ನುಂಗಿ ನಿಂತಿಲ್ಲವೆಲ್ಲಿ,
ಪೌರುಷವು ತುಂಡರಿಸಿ ಹೋಗಿಲ್ಲವೆಲ್ಲಿ,
ಪ್ರತಿನಿತ್ಯ, ನೀನು, ಸರ್ವಕರ್ಮ ಚಿಂತೆಯನು
ಹೊತ್ತು ಆನಂದದಿಂದ ಸಾಗಿರುವೆ, ನೇತಾ,
ನಿನ್ನ ನಿಜ ಹಸ್ತದಿಂದಲೆ
ನಿರ್ದಯ ಆಘಾತ ಮಾಡುತ, ತಂದೆ—
ಅಲ್ಲಿ, ಆ ಭಾರತದ ಸ್ವರ್ಗದಿ,
ಎನ್ನನೆಚ್ಚರಿಸೆಂಬೆ ಅನವರತ.

45. ನಿನ್ನ ಧ್ವಜವನು ಎತ್ತಿ ಹಿಡಿಯುವ...

ನಿನ್ನ ಧ್ವಜವನು ಎತ್ತಿ ಹಿಡಿಯುವ
ಶಕ್ತಿಯನು ದಯಪಾಲಿಸು.
ನಿನ್ನ ಸೇವೆಗೆ ಕಷ್ಟ ಸಹಿಸುವ
ಭಕ್ತಿಯನು ದಯಪಾಲಿಸು.
ದುಃಖದೊಂದಿಗೆ ದುಃಖ ಸಹಿಸುವ
ಶಕ್ತಿಯನು ನಾ ಬೇಡುವೆ
ನಿನ್ನ ಕೈಯಿಂದದುವೆ ಬಂದರೆ
ನಿನ್ನ ಕೃಪೆಯೆಂದರಿಯುವೆ.
ಕೊಡುವುದಿದ್ದರೆ ಕೆಲಸವನು ಕೊಡು
ಮರೆತು ನಿನ್ನನು ಕೊಡದಿರು.
ಎಲ್ಲ ಜಂಜಾಟದಲಿ ಎನ್ನಯ
ಜೀವ ಅಂಟಲು ಬಿಡದಿರು.
ಬಂಧಿಸೆನ್ನನು ಪ್ರೇಮಪಾಶದಿ
ಮುಕ್ತಗೊಳಿಸುತ ನಿನ್ನಲಿ.
ನಿನ್ನ ಚರಣದ ಧೂಳಿ ಎನ್ನನು
ತೊಳೆದು ಬೆಳಗಲಿ ಎನ್ನಲಿ.
ನೀನು ತೋರಿದ ಮಾರ್ಗದಲಿ ನಾ
ನಿನ್ನ ಸ್ಮರಿಸುತ ತಿರುಗುವೆ
ನಿನ್ನ ಸಾಂತ್ವನದಲ್ಲಿ ಎನ್ನಯ
ಶ್ರಮದ ಶಾಂತಿಯ ಪಡೆಯುವೆ.
ತುಂಬ ದುರ್ಗಮ ಭವದ ಮಾರ್ಗವು
ಎಷ್ಟು ತ್ಯಾಗವು, ವಿರಹವು!
ಸಾವೆ ಜೀವನವೆಸುವ ತೆರದಲಿ
ಬಾಳುತಿರುವುದೆ ಸರಸವು.

46. ರಾಜರ್ಷಿ

ಬ್ರಹ್ಮಪುತ್ರ ನದಿಯ ದಂಡೆಯ ಮೇಲೊಂದು "ಗುಜರಪಾಡಾ"* ಎಂಬ ಚಿಕ್ಕ ಹಳ್ಳಿ. ಅಲ್ಲಿ ಒಬ್ಬ ಚಿಕ್ಕ ಜಮೀನದಾರನಿದ್ದಾನೆ. ಅವನ ಹೆಸರು ಪೀತಾಂಬರ ರಾಯ್ ಎಂದು. ಉತ್ಪನ್ನ ಅಷ್ಟೇನೂ ಹೆಚ್ಚಾಗಿ ಇರಲಿಲ್ಲ.

ಪೀತಾಂಬರ ತನ್ನ ಮನೆತನದಲ್ಲಿ ಬಹು ಪುರಾತನಕಾಲದಿಂದ ಇದ್ದ "ಚಂಡಿ ಮಂಡಪ"*ದಲ್ಲಿ ಕುಳಿತು ತನಗೆ ರಾಜನೆಂದು ಹೇಳಿಕೊಳ್ಳುತ್ತಿದ್ದ. ಅವನ ಪ್ರಜೆಗಳು ಕೂಡ ಅವನಿಗೆ ರಾಜನೆಂದೇ ಸಂಬೋಧಿಸುತ್ತಿದ್ದರು. ಅವನ ರಾಜಮಹಿಮೆಯು ದ್ಯೋತಕವೆಂದರೆ ಮಾವು, ಹಲಸು, ವೃಕ್ಷಗಳಿಂದ ಸುತ್ತುವರಿಯಲ್ಪಟ್ಟ ಆ ಕ್ಷುದ್ರ ಗ್ರಾಮದಲ್ಲಿಯೇ ವಿರಾಜಮಾನನಾಗಿರುವುದು. ಅವನ ಕೀರ್ತಿಯು ಈ ಗ್ರಾಮ ದಲ್ಲಿಯೇ ಜನಿಸಿ ಈ ಗ್ರಾಮದ ಅಂಚಿನಲ್ಲಿಯೇ ವಿಲೀನವಾಗಿತ್ತು. ಜಗತ್ತಿನಲ್ಲಿರುವ ದೊಡ್ಡ ದೊಡ್ಡ ರಾಜಮಹಾರಾಜರ ಪ್ರಖರ ಪ್ರತಾಪಕ್ಕೆ, ಸದಾ ನೆರಳಿನಲ್ಲಿಯೇ ಇರುವ ಈ ಸ್ಥಳವನ್ನು ಪ್ರವೇಶಿಸುವ ಸಾಮರ್ಥ್ಯವಿರಲಿಲ್ಲ. ಕೇವಲ ತೀರ್ಥಸ್ನಾನ ಕ್ಕೆಂದು ಬಂದಾಗ ಅನುಕೂಲವಾಗಲಿ ಎಂದು ನದೀತೀರದಲ್ಲಿ ತ್ರಿಪುರಾದ ರಾಜರು ಕಟ್ಟಿಸಿದ ಒಂದು ಬಹು ದೊಡ್ಡ ಅರಮನೆ ಇತ್ತು. ಆದರೆ ಈಗ ಅನೇಕ ವರ್ಷಗಳಿಂದ ರಾಜರಾರೂ ಸ್ನಾನಕ್ಕೆಂದು ಅಲ್ಲಿಗೆ ಬಂದಿರಲಿಲ್ಲ. ಹಳ್ಳಿಯಲ್ಲಿ ವಾಸಿಸುತ್ತಿದ್ದ ಜನರಲ್ಲಿ ತ್ರಿಪುರಾ ರಾಜರ ವಿಷಯವಾಗಿ ಒಂದು ಅಸ್ಪಷ್ಟವಾದ ಗೌರವ ಪ್ರಚಲಿತವಾಗಿತ್ತು.

ಭಾದ್ರಪದ ಮಾಸದಲ್ಲಿ ಒಂದು ದಿನ ತ್ರಿಪುರಾದ ಒಬ್ಬ ರಾಜಕುಮಾರನು ನದೀ ತೀರದಲ್ಲಿರುವ ಈ ಪುರಾತನವಾದ ಅರಮನೆಯಲ್ಲಿ ವಾಸಿಸಲು ಬರುವ ಸುದ್ದಿ ಬಂತು. ಕೆಲವು ದಿನಗಳನಂತರ ದೊಡ್ಡ ದೊಡ್ಡ ಮುಂಡಾಸ ಸುತ್ತಿಕೊಂಡು ಜನರು ಬಂದರು. ಅರಮನೆಯಲ್ಲಿ ತುಂಬ ವೈಭವದಿಂದ ಅವರು ಇರಲು ಪ್ರಾರಂಭಿಸಿದರು. ಇದಾದ ಮೇಲೆ ಒಂದು ವಾರ ಕಳೆದಿರಬಹುದು. ಆನೆ, ಕುದುರೆ, ಸೈನ್ಯ ಹಾಗೂ ಉಳಿದ ಜನರೊಂದಿಗೆ ಸ್ವಯಂ ನಕ್ಷತ್ರರಾಯನು ಗುಜರಪಾಡಾ ಗ್ರಾಮಕ್ಕೆ ಬಂದನು. ಈ ಪರಿವಾರವನ್ನೆಲ್ಲ ನೋಡಿದ ಊರಿನ ಜನರ ಬಾಯಲ್ಲಿ ಮಾತು ನಿಲ್ಲಲಿಲ್ಲ. ಪೀತಾಂಬರ ನನ್ನು ಅವರು ಬಹು ದೊಡ್ಡ ಅರಸನೆಂದು ಭಾವಿಸಿದ್ದರು. ಆದರೆ ಆ ಭಾವನೆ ಈಗ ಉಳಿಯಲಿಲ್ಲ. ನಕ್ಷತ್ರರಾಜನನ್ನು ನೋಡಿ ಎಲ್ಲರೂ ಒಂದೇ ಕಂಠದಲ್ಲಿ "ಇದ್ದರೆ, ರಾಜಪುತ್ರ ಈ ರೀತಿ ಇರಬೇಕು" ಎಂದು ಹೇಳಿದರು.

ಹೀಗಾಗಿ ಪೀತಾಂಬರ ಹಾಗೂ ಅವನ ಜೀರ್ಣವಾದ "ಚಂಡಿ ಮಂಡಪ",

---

* ಬಂಗಾಲದಲ್ಲಿಯ ಹಳ್ಳಿಯ ಹೆಸರು. ಮಂಡಪ ಅಂದರೆ ಮಂಟಪ.

ಮನೆ ಇತ್ಯಾದಿ ಎಲ್ಲವೂ ಜನರ ಮನಸ್ಸಿನಿಂದ ಅಳಿದು ಹೋದವು. ಆದರೆ ಪೀತಾಂಬರನ ಆನಂದ ಮಾತ್ರ ಅಳಿದು ಹೋಗಲಿಲ್ಲ. ಅದು ತುಂಬಿ ತುಳುಕುತ್ತಿತ್ತು. ನಕ್ಷತ್ರ ರಾಜನನ್ನೇ ನಿಜವಾದ ರಾಜನೆಂದು ತಾನೂ ಭಾವಿಸಿ ಅವನ ಚರಣಗಳ ಮೇಲೆ ತನ್ನ ರಾಜತ್ವವನ್ನೆಲ್ಲ ಪರಿತ್ಯಜಿಸಿ ತುಂಬ ಆನಂದದಿಂದ ಇದ್ದನು. ನಕ್ಷತ್ರರಾಜನು ಆನೆಯ ಮೇಲೆ ಕುಳಿತು ಹೋಗುವುದನ್ನು ನೋಡಿದ ಪೀತಾಂಬರನು ತಾನೆ ತನ್ನ ಪ್ರಜೆಗಳನ್ನು ಕರೆದು "ರಾಜನನ್ನು ನೋಡಿದಿರಾ?" ಎಂದು ಹೇಳುತ್ತಿದ್ದನು. ಮೀನ, ಕಾಯಿಪಲ್ಯ ಇತ್ಯಾದಿ ಆಹಾರದ ಹಾಗೂ ಉಪ ಆಹಾರದ ವಸ್ತುಗಳು ಬರುವುದನ್ನು ಪೀತಾಂಬ ರನು ನಿತ್ಯ ನೋಡುತ್ತಿದ್ದನು. ನಕ್ಷತ್ರರಾಜನ ತರುಣ ಸುಂದರ ಮುಖವನ್ನು ನೋಡಿದ ಪೀತಾಂಬರನ ಸ್ನೇಹವು ಉಕ್ಕಿಬರುತ್ತಿತ್ತು. ನಕ್ಷತ್ರರಾಜನೇ ಆ ಗ್ರಾಮದ ರಾಜ ನಾದನು. ಪೀತಾಂಬರನು ಪ್ರಜೆಗಳಲ್ಲಿ ಒಬ್ಬನಾದನು.

ದಿನಾಲು ಮೂರು ಸಲ "ನವಬತ್" ಬಾರಿಸುತ್ತಿತ್ತು. ಊರಿನಲ್ಲಿ ಆನೆ, ಕುದುರೆ ಗಳು ಸಂಚರಿಸತೊಡಗಿದವು. ರಾಜದ್ವಾರದ ಮುಂದೆ ಬಿಚ್ಚುಗತ್ತಿಯ ವಿದ್ಯುತ್ ಸಂಚಾರ ಕಾಣಿಸುತ್ತಿತ್ತು. ಸಂತೆ ನೆರೆಯಿತು. ಅನೇಕ ಅಂಗಡಿಗಳಾದವು. ಇದನ್ನೆಲ್ಲ ನೋಡಿದ ಪೀತಾಂಬರ ಹಾಗೂ ಅವನ ಪ್ರಜೆಗಳು ಪುಲುಕಿತರಾದರು.

ನಕ್ಷತ್ರರಾಜನು ತನ್ನ ನಿರ್ಜನಪ್ರದೇಶದ ರಾಜನಾಗಿ ತನ್ನೆಲ್ಲ ದುಃಖವನ್ನು ಮರೆತನು. ಅಲ್ಲಿ ರಾಜತ್ವದ ಹೊಣೆ ತನ್ನಮೇಲೆ ಏನೂ ಉಳಿದಿರಲಿಲ್ಲ. ಅದಕ್ಕೆ ಬದಲಾಗಿ ರಾಜಭೋಗವೆಲ್ಲವೂ ಸಮೃದ್ಧವಾಗಿತ್ತು. ಅಲ್ಲಿ ಅವನು ಸಂಪೂರ್ಣ ಸ್ವತಂತ್ರ. ಸ್ವದೇಶದಲ್ಲಿ ಅವನು ಇಷ್ಟು ಪ್ರಬಲನಾಗಿರಲಿಲ್ಲ. ಇದಲ್ಲದೆ ಅಲ್ಲಿ ರಘುಪತಿಯ ನೆರಳೂ ಕೂಡ ಸುಳಿಯುತ್ತಿರಲಿಲ್ಲ. ಹೀಗಾಗಿ ನಕ್ಷತ್ರರಾಜನ ಮನಸ್ಸು ವಿಲಾಸದಲ್ಲಿ ಮಗ್ನವಾಯಿತು. ಢಾಕಾನಗರದಿಂದ ನಟನಟಿಯರು ಬಂದರು. ನೃತ್ಯ, ಗಾಯನಗಳಲ್ಲಿ ನಕ್ಷತ್ರರಾಜನಿಗೆ ಅರುಚಿ ಏನೂ ಇರಲಿಲ್ಲ.

ನಕ್ಷತ್ರರಾಜನು ತ್ರಿಪುರಾದ ರಾಜ್ಯದ ಆಡಳಿತವನ್ನೆಲ್ಲ ಅನುಸರಿಸಿದನು. ಸೇವಕರಲ್ಲಿ ಒಬ್ಬನನ್ನು ಮಂತ್ರಿಯನ್ನಾಗಿ ಮಾಡಿದನು. ಇನ್ನೊಬ್ಬನನ್ನು ಸೇನಾಪತಿ ಎಂದು ಕರೆದನು. ಪೀತಾಂಬರನಿಗೆ ದೇವೊಯಾನಜಿ" ಎಂಬ ಹೆಸರು ಬಳಿಕೆಯಲ್ಲಿ ಬಂತು. ರೀತಿ ರಿವಾಜಿಗೆ ಸರಿಹೋಗುವಂತೆ ರಾಜದರ್ಬಾರಿನಲ್ಲಿ ಕುಳಿತು ನಕ್ಷತ್ರ ರಾಜನು ಆಡಂಬರದಿಂದ ವಿಚಾರಣೆ ನಡೆಸುತ್ತಿದ್ದನು.

"ನಕುಡನು* ಒಂದು ದಿನ ದರ್ಬಾರಿಗೆ ಬಾದು ಅರಿಕೆಮಾಡಿಕೊಂಡನು." ಮಥುರನೆಂಬ ಇನ್ನೊಬ್ಬನು ತನಗೆ "ನಾಯಿ" ಎಂದು ಅನ್ನುತ್ತಾನೆ; ಇದರ ವಿಚಾರಣೆಯಾಗಬೇಕು" ಎಂದು.

ಇದರ ವಿಚಾರಣೆ ಸರಿಯಾಗಿಯೇ ನಡೆಯಿತು. ಅನೇಕ ಸಾಕ್ಷಿಗಳನ್ನು ಕೇಳಿದ ಮೇಲೆ ಮಥುರನ ಆರೋಪವು ನಿಜವಾಯಿತು. ನಕ್ಷತ್ರರಾಜನು ಪರಮ ಗಂಭೀರವಾಗಿ ತನ್ನ ನ್ಯಾಯಾಸ್ಥಾನದಲ್ಲಿ ಕುಳಿತು ತೀರ್ಪುಕೊಟ್ಟನು. "ನಕುಡನು ಮಥುರನ ಕೆನ್ನೆಗೆ ಎರಡು ಏಟುಗಳನ್ನು ಕೊಡಬೇಕು" ಎಂದು.

---

* ಬಂಗಾಲಿ ಜನರ ಹೆಸರು.

ಈ ರೀತಿಯಾಗಿ ಸುಖದಿಂದ ದಿನಗಳು ಉರುಳ ಹತ್ತಿದವು.

ಒಂದೊಂದು ದಿನ ಯಾವ ಕೆಲಸವೂ ಇಲ್ಲದಾಗಲು ಮಂತ್ರಿಯನ್ನು ಕರೆದು ಯಾವುದಾದರೊಂದು ಹೊಸ ವಿನೋದವನ್ನು ಉಂಟುಮಾಡಲು ಅಪ್ಪಣೆಯಾಗುತ್ತಿತ್ತು. ಮಂತ್ರಿಯೂ ಕೂಡ ಸಭಾಸದರೊಂದಿಗೆ ತುಂಬ ವ್ಯಾಕುಲನಾಗಿ ಏನಾದರೊಂದು ಹೊಸ ಆಟವನ್ನೇ ಪ್ರಾರಂಭಿಸುತ್ತಿದ್ದನು. ಆದರಿದೇನೂ ಬಹಳ ಹೊತ್ತು ನಡೆಯುತ್ತಿರಲಿಲ್ಲ.

ಒಂದುದಿನ ಸೈನ್ಯವನ್ನೆಲ್ಲ ತೆಗೆದುಕೊಂಡು ಪೀತಾಂಬರನ ಚಂಡಿಮಂಡಪವನ್ನು ಮುತ್ತಿದರು. ಅವನ ಹೊಂಡದಲ್ಲಿದ್ದ ಮೀನಗಳನ್ನು ಸೆರೆಹಿಡಿದರು; ತೋಟದಲ್ಲಿದ್ದ ಕಾಯಿಪಲ್ಯಗಳನ್ನೂ ಸೊಪ್ಪಿನ ಕಟ್ಟುಗಳನ್ನೂ ಕಿತ್ತುಕೊಂಡರು. ಇವುಗಳನ್ನೇ ಲೂಟಿ ಮಾಡಿಕೊಂಡು ತಂದ ವಸ್ತುಗಳೆಂದು ಭಾವಿಸಿ ಮೆರವಣಿಗೆಯಿಂದ ಊದಿಸಿ, ಬಾರಿಸಿ ಅವುಗಳನ್ನೆಲ್ಲ ಅರಮನೆಗೆ ತಂದರು. ಈ ರೀತಿಯ ಆಟಗಳಿಂದ ನಕ್ಷತ್ರರಾಜ ಹಾಗೂ ಪೀತಾಂಬರ ಇವರಿಬ್ಬರ ಮಧ್ಯದ ಸ್ನೇಹವು ದಿನ ದಿನಕ್ಕೆ ಮತ್ತಿಷ್ಟು ಗಾಢವಾಯಿತು.

ಇಂದು ಅರಮನೆಯಲ್ಲಿ ಬೆಕ್ಕಿನ ಮರಿಯ ಮದುವೆ. ನಕ್ಷತ್ರರಾಜನ ಬಳಿ ಒಂದು ಬೆಕ್ಕಿನ ಮರಿ ಇತ್ತು. ಅದರ ಮದುವೆ "ಮಂಡಲ" ಎಂಬವರ ಬೆಕ್ಕಿನೊಂದಿಗೆ ಗೊತ್ತುಮಾಡಿ ನಿಶ್ಚಯ ಕಾರ್ಯವನ್ನು ಮಾಡಿದ್ದರು. ವರದಕ್ಷಿಣೆಯೆಂದು ಮದುಮಗ ಬೆಕ್ಕಿನ ಮನೆಯ ಯಜಮಾನರಿಗೆ ಮೂರುನೂರು ರೂಪಾಯಿಗಳನ್ನೂ ಮೇಲೊಂದು ಶಾಲನ್ನೂ ಕೊಡಲಾಗಿತ್ತು. ಪುರೋಹಿತರನ್ನೂ ಊರ ಪ್ರತಿಷ್ಠಿತ ಸದ್‌ಗ್ರಹಸ್ಥರನ್ನೂ ಆಮಂತ್ರಿಸಿ ನಿಶ್ಚಯ ಹಾಕಿ ಲಗ್ನಪತ್ರಿಕೆಯನ್ನು ಸಿದ್ಧಪಡಿಸಿದ್ದರು. ಇಂದಿನ ಶುಭ ಲಗ್ನದ ಗೋಧೂಳಿ ಮುಹೂರ್ತದಲ್ಲಿ ಲಗ್ನ ನೆರವೇರಿಸುವ ನಿಮಿತ್ಯವಾಗಿ ರಾಜಮಾರ್ಗದಲ್ಲಿ ಪುರಜನರು ಬೇರಾವ ತಮ್ಮ ಕೆಲಸಗಳನ್ನೂ ಮಾಡುವಂತಿರಲಿಲ್ಲ. ಮದುವೆಗೆ ಬರಬೇಕೆಂದು ಪುರಜನರಿಗೆಲ್ಲ ಆಮಂತ್ರಣ ಕೊಡಲಾಗಿತ್ತು.

ಸಂಜೆಯಾಗುತ್ತಲೆ ದಾರಿಯಲ್ಲಿ ದೀಪಹಚ್ಚಿ ಇರಿಸಿದರು. ನವಬತ್ ಬಾರಿಸಲು ಪ್ರಾರಂಭಿದರು. ಮಂಡಲ ಅವರ ಮನೆಯಿಂದ ಬೀಗರು ತಮ್ಮ ಮದುಮಗ ಬೆಕ್ಕಿಗೆ ಬಣ್ಣಬಣ್ಣದ ಕುತನಿ ಬಟ್ಟೆ ತೊಡಿಸಿ ತೆರೆದ ಪಲ್ಲಕ್ಕಿಯಲ್ಲಿ ಕೂಡಿಸಿ ಮೆರೆಸುತ್ತ ಮದುಮಗ ಬೆಕ್ಕನ್ನು ಅರಮನೆಗೆ ಕರೆದುಕೊಂಡುಹೊರಟಿದ್ದರು. ಪಾಪ! ಇದಾವುದನ್ನೂ ಅರಿಯದ ಆ ಬೆಕ್ಕು ಹೆದರಿಕೊಂಡು ಮ್ಯಾಂವು ಮ್ಯಾಂವು ಎನ್ನುತ್ತ ಕುಳಿತಿತ್ತು. ಮೆರವಣಿಗೆಯಲ್ಲಿ ಹೆಚ್ಚಾಗಿ ಹುಡುಗರೇ ಇದ್ದರು. ಅವರೆಲ್ಲರೂ ಹೊಸ ಬಟ್ಟೆ ಧರಿಸಿದ್ದರು. ನಾನಾ ವಾದ್ಯಗಳನ್ನು ಉದುತ್ತ, ಬಾರಿಸುತ್ತ ಮದುಮಗ ಬೆಕ್ಕನ್ನು ಅರಮನೆಗೆ ಕರೆತಂದು ಲಗ್ನಮಂಟಪದಲ್ಲಿ ಕೂಡಿಸಿದರು.

ಪುರೋಹಿತರ ಹೆಸರು "ಕೇನಾರಾಮ" ಎಂದಿತ್ತು. ಆದರೆ ನಕ್ಷತ್ರರಾಜನು ಅವರಿಗೆ ರಘುಪತಿ ಎಂದು ಹೊಸ ನಾಮಕರಣ ಮಾಡಿದ್ದನು. ಆದರೆ ನಿಜವಾದ ರಾಜಪುರೋಹಿತ ರಘುಪತಿ ಬೇರೊಬ್ಬರಿದ್ದರು. ಆ ರಘುಪತಿಗೆ ನಕ್ಷತ್ರರಾಜನು ಬಹಳ ಹೆದರುತ್ತಿದ್ದನು. ಆದ್ದರಿಂದ ಈ ಕೃತ್ರಿಮ ರಘುಪತಿಯೊಂದಿಗೆ ನಕ್ಷತ್ರರಾಜನು ಹಾಸ್ಯಮಾಡಿ, ಆಟವಾಡಿ ಸಂತೋಷಪಡುತ್ತಿದ್ದನು. ಮಾತುಮಾತಿಗೆ ಕೇನಾರಾಮ

ನಿಗೆ ಕೊಡುತ್ತಿದ್ದ ಹಿಂಸೆಯನ್ನು ಬಡವನಾದ ಅವನು ಬಾಯಿ ಮುಚ್ಚಿಕೊಂಡು ಸಹಿಸಿಕೊಳ್ಳುತ್ತಿದ್ದನು. ಇಂದು ದುರ್ದೈವದಿಂದ ಕೇನಾರಾಮನು ಲಗ್ನಮಂಟಪಕ್ಕೆ ಬಂದಿರಲಿಲ್ಲ. ಅವನ ಮಗನಿಗೆ ವಿಪರೀತ ಜ್ವರ ಬಂದಿದ್ದು ಅವನು ಸಾಯುವ ಸ್ಥಿತಿಯಲ್ಲಿದ್ದನು.

ನಕ್ಷತ್ರರಾಜನು ಗಾಬರಿಯಾಗಿ "ರಘುಪತಿ ಎಲ್ಲಿ" ಎಂದು ಕೇಳಿದನು.

ಅದಕ್ಕೆ ಸೇವಕನು "ಅವರ ಮಗನಿಗೆ ತುಂಬ ಜ್ವರ; ಅದಕ್ಕಾಗಿ ಅವರು ಬಂದಿಲ್ಲ" ಎಂದು ಉತ್ತರ ಕೊಟ್ಟನು.

ಇದಕ್ಕೆ ನಕ್ಷತ್ರರಾಜನು ಸಿಟ್ಟಿನ ಸ್ವರತೆಗೆದು "ಅವನನ್ನು ಹಿಡಿದುಕೊಂಡು ಬಾ" ಎಂದು ಸೇವಕನಿಗೆ ಹೇಳಿದನು.

ಸೇವಕನು ಓಡಿಹೋದನು. ಇತ್ತ ಗಾಬರಿಗೊಂಡು ನರಳುತ್ತ ಕುಳಿತ್ತಿದ್ದ ಮದುಮಗ ಬೆಕ್ಕಿನ ಸಮ್ಮುಖದಲ್ಲಿ ನೃತ್ಯಗಾಯನಗಳು ಪ್ರಾರಂಭವಾದವು.

ನಕ್ಷತ್ರರಾಜನು "ಸಹಾನಾ" ರಾಗವನ್ನು ಹಾಡಲು ಅಪ್ಪಣೆ ಮಾಡಿದನು. ಸಂಗೀತವು ಪ್ರಾರಂಭವಾಯಿತು.

ತುಸು ಸಮಯದ ನಂತರ ಸೇವಕನು ಬಂದು "ರಘುಪತಿ ಬಂದಿದ್ದಾನೆ" ಎಂದು ಬಿನ್ನವಿಸಿಕೊಂಡನು.

ಅದೇ ಕ್ಷಣಕ್ಕೆ ಪುರೋಹಿತರು ಒಳಗೆ ಬಂದರು. ಅವರನ್ನು ಕಂಡೊಡನೆ ಸಿಟ್ಟಿನಿಂದ ನಕ್ಷತ್ರರಾಜನ ಹುಬ್ಬುಗಳು ಗಂಟಿಕ್ಕಿದವು. ಆದರೆ ಮರುಕ್ಷಣದಲ್ಲಿ ರಾಜನ ಸಿಟ್ಟು ಮಾಯವಾಗಿ ಹೋಯಿತು. ಮುಖದ ಬಣ್ಣ ಬದಲಾಯಿತು. ಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿಕೊಂಡವು. ಸಹಾನಾರಾಗದ ಗಾಯನ, ಸಾರಂಗ ಹಾಗೂ ಮೃದಂಗಗಳ ವಾದನ ನಿಂತುಬಿಟ್ಟವು. ಕೇವಲ ಬೆಕ್ಕಿನ ಮ್ಯಾಂವು ಮ್ಯಾಂವು ಎಂಬ ಸ್ವರವು ಮಾತ್ರ ಆ ನಿಶ್ಯಬ್ದ ಮನೆಯಲ್ಲಿ ಇಮ್ಮಡಿಯಾಗಿ ಕೇಳಿಸುತ್ತಿತ್ತು.

ಬಂದು ನಿಂತವರು ನಿಜವಾಗಿ ರಘುಪತಿಯೇ ಆಗಿದ್ದರು. ಅದರಲ್ಲೇನೂ ಸಂದೇಹವೇ ಇರಲಿಲ್ಲ. ನಾಲ್ಕು ದಿನ ಆಹಾರವಿಲ್ಲದೆ ಹಸಿದ ನಾಯಿಯ ಕಣ್ಣುಗಳಂತೆ ಇದ್ದ ಅವರ ತೇಜಸ್ವೀ ಕಣ್ಣುಗಳು ಕಿಡಿಯನ್ನು ಕಾರುತ್ತಿದ್ದವು. ಪ್ರಜ್ವಲಿಸುತ್ತಿದ್ದವು. ಧೂಳಿಯಿಂದ ಸಂಪೂರ್ಣವಾಗಿ ಮುಚ್ಚಿಹೋಗಿದ್ದರೂ ಅವರು ತಮ್ಮ ಪಾದಗಳೆರಡನ್ನೂ ರತ್ನಗಂಬಳಿ ಹಾಸಿದ್ದ ಅರಮನೆಯ ನೆಲದಮೇಲೆ ಗಟ್ಟಿಯಾಗಿ ಊರಿ ತಲೆಯೆತ್ತಿ ನಿಂತಿದ್ದರು. ಉನ್ನತಸ್ವರದಲ್ಲಿ "ನಕ್ಷತ್ರರಾಜ" ಎಂದು ಅವರು ಕರೆದರು.

ನಕ್ಷತ್ರರಾಜನು ಏನೂ ಉತ್ತರಕೊಡದೆ ಸುಮ್ಮನಿದ್ದನು.

"ನೀವು ರಘುಪತಿಯನ್ನು ಕರೆಕಳಿಸಿದ್ದಿರಿ, ಅಂತೆಯೇ ನಾನೀಗ ಬಂದಿದ್ದೇನೆ" ಎಂದು ರಘುಪತಿ ಹೇಳಿದರು.

ಅದಕ್ಕೆ ನಕ್ಷತ್ರರಾಜನು ತೊದಲುತ್ತ "ಠಾಕುರ, ಠಾಕುರ*" ಎಂದು ಗುಣುಗುಟ್ಟಿದನು.

---

* ಬಂಗಾಲದಲ್ಲಿ ಪುರೋಹಿತರಿಗೆ ಠಾಕುರ ಎಂದು ಕರೆಯುವರು.

ಕೂಡಲೇ ರಘುಪತಿ "ಎದ್ದು ಬಾ" ಎಂದು ಆಜ್ಞೆ ವಿಧಿಸಿದರು.

ಇದನ್ನು ಕೇಳಿ ನಕ್ಷತ್ರರಾಜನು ಸಭಾ ಗೃಹದಿಂದ ಎದ್ದು ಮೆಲ್ಲ ಮೆಲ್ಲನೆ ಹೊರಗೆ ಹೋದನು. ರಘುಪತಿ ಅವನನ್ನು ಹಿಂಬಾಲಿಸಿದರು. ಬೆಕ್ಕಿನ ಮದುವೆ, ಸಹಾನಾ ರಾಗ, ಗಾಯನ, ವಾದನಗಳೆಲ್ಲ ನಿಂತುಬಿಟ್ಟವು.

"ಇದೆಲ್ಲ ಏನು ನಡೆದಿದೆ?" ಎಂದು ರಘುಪತಿ ನಕ್ಷತ್ರರಾಜನನ್ನು ಕೇಳಿದರು.

ನಕ್ಷತ್ರರಾಜನು ಕೆಳಗೆ ಮಾಡಿದ್ದ ಮುಖವನ್ನು ಮೇಲಕ್ಕೆತ್ತದೆ "ನೃತ್ಯ, ಗಾಯನ ನಡೆದಿತ್ತು" ಎಂದು ಉತ್ತರಕೊಟ್ಟನು.

ರಘುಪತಿ ಅತಿ ತಿರಸ್ಕಾರದಿಂದ "ಛಿ! ಛಿ! ಎಂದು ತಲೆ ಅಲ್ಲಾಡಿಸಿದರು.

ಅವರೆದುರು ನಕ್ಷತ್ರರಾಜನು ಅಪರಾಧಿಯಂತೆ ಕೈಜೋಡಿಸಿಕೊಂಡು ನಿಂತು ಕೊಂಡಿದ್ದನು.

"ನಾಳೆ ಇಲ್ಲಿಂದ ಹೊರಡಬೇಕು. ಅದರ ಸಿದ್ಧತೆಯನ್ನು ಮಾಡು" ಎಂದು ರಘುಪತಿ ಆಜ್ಞೆ ವಿಧಿಸಿದರು.

ಅದಕ್ಕೆ ನಕ್ಷತ್ರರಾಜನು "ಎಲ್ಲಿಗೆ ಪ್ರಯಾಣ ಮಾಡಬೇಕು?" ಎಂದು ಕೇಳಿ ದನು.

"ಅದನ್ನು ನಂತರ ಹೇಳುತ್ತೇನೆ. ಮೊದಲು ನೀನು ನನ್ನೊಂದಿಗೆ ಹೊರಡ ಬೇಕು" ಎಂದು ರಘುಪತಿ ದರ್ಪದಿಂದ ಹೇಳಿದರು.

ಅದಕ್ಕೆ ನಕ್ಷತ್ರರಾಜನು "ನಾನಿಲ್ಲಿ ಸುಖದಿಂದ ಇದ್ದೇನೆ" ಎಂದು ಮೆಲ್ಲನೆ ಹೇಳಿದನು.

"ಸುಖವಾಗಿ ಇರುವೆ?" ನೀನು ರಾಜರವಂಶದಲ್ಲಿ ಹುಟ್ಟಿರುವೆ. ನಿನ್ನ ಪೂರ್ವಜ ರೆಲ್ಲ ರಾಜ್ಯಾಧಿಕಾರ ನಡೆಸಿಕೊಂಡು ಬಂದಿದ್ದಾರೆ. ನೀನಿಲ್ಲಿ ಕಾಡಿನಲ್ಲಿ ನರಿಗಳ ರಾಜ ನಾಗಿ ಕುಳಿತು ಮತ್ತೆ ಹೇಳುವೆ "ನಾನಿಲ್ಲಿ ಸುಖದಿಂದ ಇರುವೆ" ಎಂದು. ನಿನಗೆ ನಾಚಿಕೆಯಾಗುವುದಿಲ್ಲವೆ? ಎಂದು ರಘುಪತಿ ನಕ್ಷತ್ರರಾಜನನ್ನು ಗದರಿಸಿದರು.

ರಘುಪತಿಯ ಹರಿತ ವಾಕ್ಯಗಳಿಂದ ಹಾಗೂ ತೀಕ್ಷ್ಣ ನೋಟದಿಂದ ನಕ್ಷತ್ರ ರಾಜನು ತಾನು ಸರಿಯಾಗಿ ಇರಲಿಲ್ಲವೆಂದು ಅರಿತುಕೊಂಡನು. ರಘುಪತಿಯ ಮನಸ್ಸಿ ನಲ್ಲಿಯೂ ಕೂಡ ಇದನ್ನೇ ಹೇಳುವುದಿತ್ತು. ಆದರೂ ನಕ್ಷತ್ರರಾಜನು ತೊದಲುತ್ತ "ಇದಕ್ಕಿಂತ ಬೇರೆ ಸುಖ ಯಾವುದಿದೆ? ನಾನೇನು ಮಾಡಲಿ?" ಎಂದು ಕೇಳಿದನು.

"ಮಾಡುವ ಕೆಲಸ ಸಾಕಷ್ಟಿದೆ. ಅದಕ್ಕೆ ಉಪಾಯಗಳೂ ಇವೆ. ನಾನು ನಿನಗೆ ಅವುಗಳನ್ನು ತೋರಿಸಿಕೊಡುವೆ. ನೀನೀಗ ನನ್ನೊಂದಿಗೆ ನಡೆ" ಎಂದು ರಘುಪತಿ ಮತ್ತೆ ಆಜ್ಞೆ ವಿಧಿಸಿದರು.

ಇದಕ್ಕೆ ನಕ್ಷತ್ರರಾಜನು ಒಂದುಸಲ "ದೇವಯಾನಜಿ ಅವರನ್ನು ಕೇಳಿ ಬರುತ್ತೇನೆ" ಎಂದು ಹೇಳಲಾಗಿ ರಘುಪತಿಯು ಬೇಡ ಎಂದು ಸ್ಪಷ್ಟವಾಗಿ ಅವನ ಬೇಡಿಕೆಯನ್ನು ನಿರಾಕರಿಸಿದರು. ಆಗ ನಕ್ಷತ್ರರಾಜನು ಈ ಎಲ್ಲ ಸರಂಜಾಮ? ಇದನ್ನೇನು ಮಾಡಬೇಕು" ಎಂದು ಕೇಳಲಾಗಿ ರಘುಪತಿ ಅದಕ್ಕೆ "ಇವುಗಳ ಅವಶ್ಯ ಕತೆ ಇಲ್ಲ" ಎಂದು ಉತ್ತರಕೊಟ್ಟರು.

ಆಗ ನಕ್ಷತ್ರರಾಜನು ಮೆಲ್ಲನೆ ಹೆದರುತ್ತ "ನನ್ನಲ್ಲಿ ಸಾಕಷ್ಟು ಹಣವಿಲ್ಲ" ಎಂದು ನುಡಿಯಲಾಗಿ ಕೂಡಲೇ ರಘುಪತಿಯು "ನನ್ನಲ್ಲಿ ಬೇಕಾದಷ್ಟು ಹಣವಿದೆ" ಎಂದು ನಕ್ಷತ್ರರಾಜನಿಗೆ ಹೇಳಿದರು. ರಘುಪತಿಯು, ನಕ್ಷತ್ರರಾಜನು ಸುಮ್ಮನಿರುವುದನ್ನು ನೋಡಿ, ತಮ್ಮ ಮಾತುಗಳನ್ನು ಮುಂದುವರಿಸಿ: "ಇನ್ನು ಹೆಚ್ಚು ಆತಂಕ ಮಾಡಬೇಡ; ಇಂದು ಮಲಗಲು ಹೋಗು. ನಾಳೆ ಬೆಳಿಗ್ಗೆ ಹೊರಡಬೇಕು" ಎಂದು ಹೇಳಿ ಯಾವ ಉತ್ತರದ ದಾರಿಯನ್ನೂ ಕಾಯದೆ ಹೊರಟುಹೋದರು.

ಮರುದಿನ ನಸುಕಿನಲ್ಲಿಯೇ ನಕ್ಷತ್ರರಾಜನು ಎದ್ದನು. ಆಸ್ಥಾನದ ಸಂಗೀತಗಾರರು ಲಲಿತರಾಗವನ್ನು ಮಧುರವಾಗಿ ಹಾಡುತ್ತಿದ್ದರು. ನಕ್ಷತ್ರರಾಜನು ಮೊಗಶಾಲೆಗೆ ಬಂದು ಕಿಡಕಿಯ ಹೊರಗೆ ಇಣಿಕಿ ನೋಡಿದನು. ಪೂರ್ವದಿಕ್ಕಿನ ಕ್ಷಿತಿಜದಂಚಿನಲ್ಲಿ ಸೂರ್ಯೋದಯದ ಕೆಂಪುಕಿರಣಗಳು ಪ್ರಕಾಶಮಾನವಾಗಿ ಕಾಣುತ್ತಿದ್ದವು. ತನ್ನ ಎರಡೂ ದಂಡೆಗಳ ಮೇಲೆ ನಿಂತಿದ್ದ ಮರಗಳ ಮಧ್ಯದೊಳಗಿಂದ, ಚಿಕ್ಕಚಿಕ್ಕ ಹಳ್ಳಿಗಳ ಹೊರ ಅಂಚನ್ನು ತಟ್ಟಿ, ಬ್ರಹ್ಮಪುತ್ರನದಿಯು ತುಂಬಿ ಹರಿಯುತ್ತಿತ್ತು. ಅರಮನೆಯ ಕಿಡಕಿಯೊಳಗಿಂದ ನದೀತೀರದ ಮೇಲೆ ಇದ್ದ ಗುಡಿಸಿಲೊಂದು ಕಾಣುತ್ತಿತ್ತು. ಯುವತಿಯೊಬ್ಬಳು ಮನೆಯ ಮುಂದಿನ ಅಂಗಳವನ್ನು ಗುಡಿಸುತ್ತಿದ್ದಳು. ಯುವಕನು ಅವಳೊಂದಿಗೆ ಒಂದೆರಡು ಮಾತುಗಳನ್ನಾಡಿ ತಲೆಗೆ ಮುಂಡಾಸು ಸುತ್ತಿಕೊಂಡು ಉದ್ದವಾದ ಒಂದು ಬಿದಿರಿನ ಬಡಿಗೆಯ ತುದಿಗೆ ಒಂದು ಗಂಟನ್ನು ಕಟ್ಟಿಕೊಂಡು ನಿಶ್ಚಿಂತ ಮನಸ್ಸಿನಿಂದ ಎಲ್ಲಿಗೋ ಹೊರಟನು. ಕೋಗಿಲೆಯು ತನ್ನ ಪಂಚಮ ಸ್ವರದಲ್ಲಿ ಉದಯರಾಗವನ್ನು ಹೇಳುತ್ತಿತ್ತು. ಉಷಾರಾಣಿಯು ಮರದಕೆಳಗೆ ಕುಳಿತು ಕೋಗಿಲೆಯೊಂದಿಗೆ ತಾನೂ ದನಿಗೊಡುತ್ತಿದ್ದಳು.

ಇದನ್ನೆಲ್ಲ ನೋಡಿದ ನಕ್ಷತ್ರರಾಯನು ಒಂದು ನೀಳವಾದ ಉಸಿರನ್ನು ಬಿಟ್ಟನು. ಈ ಸಮಯಕ್ಕೆ ಸರಿಯಾಗಿ ಹಿಂದಿನಿಂದ ರಘುಪತಿ ಬಂದು ನಕ್ಷತ್ರರಾಯನ ಹೆಗಲಮೇಲೆ ಕೈಯಿಟ್ಟನು. ನಕ್ಷತ್ರರಾಯನು ಬೆಚ್ಚಿಬಿದ್ದನು. ರಘುಪತಿ ಮೃದುಗಂಭೀರ ಸ್ವರದಲ್ಲಿ "ಹೊರಡುವ ಸಿದ್ಧತೆಯೆಲ್ಲ ಆಗಿದೆಯಲ್ಲವೇ?" ಎಂದು ಕೇಳಿದನು.

ನಕ್ಷತ್ರರಾಯನು ಕೈಜೋಡಿಸಿ ಅತೀವ ಕಾತರ ಸ್ವರದಿಂದ ಕೇಳಿಕೊಂಡನು. "ಠಾಕುರ ನನ್ನನ್ನು ಕ್ಷಮಿಸಿಬಿಡಿ; ನನಗೆಲ್ಲಿಗೂ ಬೇರೆಡೆ ಹೊರಡುವ ಮನಸ್ಸಿಲ್ಲ. ನಾನಿಲ್ಲಿ ಸುಖವಾಗಿದ್ದೇನೆ" ಎಂದು ಮತ್ತೆ ಬೇಡಿಕೊಂಡನು.

ಇದಕ್ಕೆ ರಘುಪತಿ ಒಂದೂ ಮಾತನ್ನಾಡಲಿಲ್ಲ. ತನ್ನ ಅಗ್ನಿ ದೃಷ್ಟಿಯಿಂದ ನಕ್ಷತ್ರರಾಯನ ಮುಖವನ್ನು ದಿಟ್ಟಿಸಿ ನೋಡಹತ್ತಿದರು. ನಕ್ಷತ್ರರಾಯನು ಕಣ್ಣು ಮುಚ್ಚಿದಂತೆ ಮಾಡಿ, ನೆಲವನ್ನು ನೋಡುತ್ತ "ಎಲ್ಲಿಗೆ ಹೊರಡಬೇಕು" ಎಂದು ಮೆಲ್ಲನೆ ಕೇಳಿದನು.

ಅದಕ್ಕೆ ರಘುಪತಿಯು "ಅದನ್ನೀಗ ಹೇಳಲು ಸಾಧ್ಯವಿಲ್ಲ" ಎಂದು ನುಡಿದರು. ನಕ್ಷತ್ರರಾಜನು ತನ್ನ ಮಾತನ್ನು ಮುಂದರಿಸಿ "ಅಣ್ಣನ ವಿರುದ್ಧ ನಾನಾವ ಗುಪ್ತ ಕಾರಸ್ಥಾನವನ್ನೂ ಮಾಡಲಾರೆ" ಎಂದು ಸ್ಪಷ್ಟವಾಗಿ ಹೇಳಿದನು.

ಇದನ್ನು ಕೇಳಿದ ರಘುಪತಿ ಸಿಟ್ಟಿನಿಂದ ಕಾಯ್ದು ಕೆಂಡವಾಗಿ "ದಾದಾ ನಿನಗೆ ಅಂತಹ ಮಹದುಪಕಾರ ಏನುಮಾಡಿದ್ದಾನೆ ಹೇಳು ನೋಡುವೆ?" ಎಂದು ಗರ್ಜಿಸಿದರು.

ನಕ್ಷತ್ರರಾಯನು ತನ್ನ ಮುಖ ತಿರುಗಿಸಿ ಕಿಡಕಿಯಿಂದ ಹೊರಗೆ ನೋಡುತ್ತ "ನನಗೆ ಗೊತ್ತು, ನನ್ನ ಕ್ಷೇಮಚಿಂತನ ಮಾಡುತ್ತಾನೆ" ಎಂದು ಹೇಳಿದನು.

ಇದಕ್ಕೆ ರಘುಪತಿಯು ಕುತ್ಸಿತ ಹಾಸ್ಯವನ್ನು ಬೀರಿ "ಹರಿಹರಿ! ಎಂತಹ ಬಂಧು ಪ್ರೇಮ! ನಿರ್ವಿಘ್ನವಾಗಿ ಧ್ರುವನಿಗೆ ಯುವರಾಜ್ಯಾಭಿಷೇಕ ಮಾಡುವುದಕ್ಕೆಂದೇ ನಿನ್ನ ಮೇಲೆ ಸುಳ್ಳು ಅಪವಾದವನ್ನು ಹೊರಿಸಿ ನಿನ್ನನ್ನು ಹೊರಗೆ ಹಾಕಿದನು. ಇನ್ನು ರಾಜ್ಯದಲ್ಲಿ ಪ್ರವೇಶಮಾಡಲು ನಿನಗೆ ಸಾಧ್ಯವಿದೆಯೆ? ಯುದ್ಧಮಾಡದೆ ಪ್ರವೇಶ ಮಾಡಲು ಸಾಧ್ಯವೇ ಇಲ್ಲ. ಎಂದಿಗೂ ಇಲ್ಲ" ಎಂದು ನುಡಿದರು.

ನಕ್ಷತ್ರರಾಯನು ಕೂಡಲೇ "ನನಗೆ ಈ ಸಾಮಾನ್ಯ ಸಂಗತಿ ಗೊತ್ತಿಲ್ಲವೆಂದು ಭಾವಿಸುವಿರಾ? ನಾನಿದನೆಲ್ಲವನ್ನೂ ಬಲ್ಲೆ. ಆದರೆ ನಾನೀಗ ಏನುಮಾಡಬಲ್ಲೆ? ನೀವೇ ಹೇಳಿ. ಠಾಕುರರೇ ನಾನೇನು ಮಾಡಬಲ್ಲೆ? ಹೇಳಿ. ಇದಕ್ಕೇನಾದರೂ ಉಪಾಯ ವಿದೆಯೆ?" ಎಂದು ಉಸಿರುಬಿಡದೆ ಉದ್ವೇಗದಿಂದ ಆಲುಪರಿದನು.

ಅದಕ್ಕೆ ರಘುಪತಿಯು "ಆ ಉಪಾಯದ ಹಂಚಿಕೆಯೇ ಈಗ ನಡೆದಿದೆ. ಆ ಕಾರಣಕ್ಕಾಗಿಯೇ ನಾವಿಲ್ಲಿಗೆ ಬಂದಿದ್ದೇವೆ. ಮನಸ್ಸಿದ್ದರೆ ನನ್ನೊಂದಿಗೆ ನಡೆ. ಇಲ್ಲವಾದರೆ, ಈ ಬಿದಿರಿನ ಕಾಡಿನಲ್ಲಿಯೇ ನಿನ್ನ ಅಣ್ಣನ ಧ್ಯಾನಮಾಡುತ್ತ ಕುಳಿತು ಬಿಡು. ನಾನು ಹೊರಟೆ" ಎಂದು ಹೇಳಿ ಅಲ್ಲಿಂದ ಕಾಲುಕಿತ್ತಿದರು.

ನಕ್ಷತ್ರರಾಯನೂ ಕೂಡ ಲಗುಬಗೆಯಿಂದ ಅವರ ಬೆನ್ನು ಹತ್ತಿದನು. ರಘುಪತಿಯನ್ನು ಹಿಂಬಾಲಿಸುತ್ತ ನಕ್ಷತ್ರರಾಯನು "ನಾನೂ ಬರುತ್ತೇನೆ ಠಾಕೂರ; ಆದರೆ ದೇವಯಾನಜಿ ನಮ್ಮೊಂದಿಗೆ ಬರಲು ಒಪ್ಪಿದರೆ ಅವರನ್ನು ನಮ್ಮ ಜೊತೆಗೆ ಕರೆದುಕೊಂಡು ಹೋಗಲು ಏನಾದರೂ ವಿಘ್ನವಿರುವುದೇ?" ಎಂದು ಕೇಳಿದನು.

ಕೂಡಲೇ ರಘುಪತಿಯು "ನಮ್ಮಿಬ್ಬರ ಹೊರತು ಬೇರೆ ಯಾರೂ ಜೊತೆಗೆ ಬರುವ ಅಗತ್ಯವಿಲ್ಲ" ಎಂದು ಗುಡುಗಿದರು.

ಆದರೂ ಮನೆಬಿಟ್ಟು ಹೋಗಲು ನಕ್ಷತ್ರರಾಯನ ಕಾಲುಗಳೇ ಏಳಲಿಲ್ಲ. ಇದೆಲ್ಲ ಸುಖದ ಆಟವನ್ನು ಬಿಟ್ಟು, ದೇವಯಾನಜಿ ಅವರನ್ನು ತೊರೆದು ರಘುಪತಿಯು ಕೂಡ ಒಬ್ಬನೇ ಅದೆಲ್ಲಿಗೆಂದು ಹೋಗುವುದು? ಆದರೆ ರಘುಪತಿ ತನ್ನ ಜುಟ್ಟು ಹಿಡಿದು ಎಳೆದುಕೊಂಡು ಹೋಗುತ್ತಿದ್ದಂತೆ ಅವನಿಗೆ ಅನಿಸಹತ್ತಿತು. ಅವನಿಗೆ ತಿಳಿಯದಂತೆ ಒಳಗೊಳಗೆ ಒಂದು ಭಯಮಿಶ್ರಿತ ಕುತೂಹಲವೂ ಕೆರಳಿತ್ತು. ಅದು ನಕ್ಷತ್ರರಾಯನನ್ನು ಕೈಮಾಡಿ ಕರೆಯುತ್ತಿತ್ತು.

ನೌಕೆಯು ಸಿದ್ಧವಾಗಿತ್ತು. ನದೀತೀರದ ಮೇಲೆ ನಕ್ಷತ್ರರಾಯನು ನಿಂತಿದ್ದನು. ನದಿಯಲ್ಲಿ ಸ್ನಾನಮಾಡಿ ಹೆಗಲಿಗೆ ಪಂಚೆಯನ್ನು ಹಾಕಿಕೊಂಡು ಬರುತ್ತಿದ್ದ ಪೀತಾಂಬರನನ್ನು ನಕ್ಷತ್ರರಾಜನು ನೋಡಿದನು. ನಕ್ಷತ್ರರಾಜನನ್ನು ನೋಡಿದ ಕೂಡಲೆ ಪೀತಾಂಬರನು ಮುಖವರಳಿಸಿ "ಜಯವಾಗಲಿ ಮಹಾರಾಜನಿಗೆ. ನಿನ್ನೆ ಯಾರೊ

ಅವಲಕ್ಷಣ ಬ್ರಾಹ್ಮಣ ಬಂದು ಶುಭವಿವಾಹಕ್ಕೆ ತಡೆಯನ್ನುಂಟುಮಾಡಿದ ಎಂದು ಕೇಳಿದೆ" ಎಂದು ಒಂದೇ ಉಸುರಿನಲ್ಲಿ ನುಡಿದನು.

ನಕ್ಷತ್ರರಾಯನಿಗೆ ಇದರಿಂದ ನಸು ಹೆದರಿಕೆ ಬಂತು. ಅಷ್ಟರಲ್ಲಿ ರಘುಪತಿ ಗಂಭೀರ ಸ್ವರದಲ್ಲಿ "ನಾನೇ ಆ ಕುಚೋದ್ಯ ಬ್ರಾಹ್ಮಣ" ಎಂದು ಅಂದರು.

ಇದನ್ನು ಕೇಳಿ ಪೀತಾಂಬರನು ನಕ್ಕುಬಿಟ್ಟನು. "ಹಾಗಾದರೆ ನಿಮ್ಮ ಸಮಕ್ಷಮದಲ್ಲಿಯೇ ನಿಮ್ಮ ವರ್ಣನೆ ಮಾಡಿದ್ದು ಅಷ್ಟೇನೂ ಸರಿಯಾಗಲಿಲ್ಲ. ಠಾಕೂರ, ನೀವೇನೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಬೆನ್ನ ಹಿಂದೆ ಜನ ಏನಾಡಿಕೊಳ್ಳಲಿಕ್ಕಿಲ್ಲ. ನನ್ನ ಸಮಕ್ಷಮದಲ್ಲಿ ನನ್ನನ್ನು ರಾಜನೆಂದು ಕರೆಯುವವರೇ ನನ್ನ ಪರೋಕ್ಷದಲ್ಲಿ ನನ್ನನ್ನು ಮೂರ್ಖ ಎಂದು ಕರೆಯುತ್ತಾರೆ. ಮುಖಸ್ತುತಿ ಹೇಗೆ ಮಾಡಿದರೂ ನಡೆದೀತು. ನನಗೆ ಇಷ್ಟು ಮಾತ್ರ ತಿಳಿದಿದೆ. ಸತ್ಯ ಯಾರಿಗೆ ತಾನೆ ಗೊತ್ತಿದೆ? ನಿಮ್ಮ ಮುಖ ಅದೆಷ್ಟು ಅಪ್ರಸನ್ನವಾಗಿ ಕಾಣುತ್ತಿದೆ ಎಲ್ಲ. ಮಹಾರಾಜ, ಈ ನಸುಕಿನಲ್ಲಿ ನದೀದಂಡೆಗೆ?" ಎಂದು ಪೀತಾಂಬರನು ಕೇಳಿದನು.

ನಕ್ಷತ್ರರಾಯನು ತುಸು ಕರುಣೆಯ ಸ್ವರದಲ್ಲಿ "ನಾನು ಇಲ್ಲಿಂದ ಹೊರಟು ಹೋಗುತ್ತೇನೆ ದೇವಯಾನಜಿ!" ಎಂದು ಉದ್ಗಾರ ತೆಗೆದ.

ಅದನ್ನು ಕೇಳಿ ಪೀತಾಂಬರ "ಹೊರಟು ಹೋಗುವಿರಿ? ಎಲ್ಲಿಗೆ? ಮುಂಡಲ ಅವರ ಮನೆಗಲ್ಲವೇ?" ಎಂದು ಒಂದೇ ಉಸುರಿನಲ್ಲಿ ಕೇಳಿದ.

"ಇಲ್ಲ ದೇವಯಾನಜಿ. ಮುಂಡಲ ಅವರ ಮನೆಗೆ ಹೋಗುವುದಿಲ್ಲ. ದೂರ, ಬಹುದೂರ ಹೋಗುವೆ" ಎಂದು ದಿಗಂತದತ್ತ ನೋಡಿ ನಕ್ಷತ್ರರಾಯ ಹೇಳಿದ.

"ಬಹುದೂರ? ಆದರೆ ಗುಡ್ಡದಲ್ಲಿರುವ ಈ ನದೀತೀರಕ್ಕೆ ಬೇಟೆಯಾಡಲು ಆಗಾಗ ಬರುವಿರಲ್ಲವೆ? ಎಂದು ಉದ್ವಿಗ್ನನಾಗಿ ಪೀತಾಂಬರ ಕೇಳಿದ.

ನಕ್ಷತ್ರರಾಯನು ಒಂದು ಸಲ ರಘುಪತಿಯ ಮುಖವನ್ನು ನೋಡಿ ವಿಷಣ್ಣಭಾವದಿಂದ ಇಲ್ಲವೆಂದು ಸೂಚಿಸಲು ತಲೆ ಅಲ್ಲಾಡಿಸಿದ.

"ನದಿಯ ನೀರಿನಂತೆ ಸಮಯ ವ್ಯರ್ಥ ಹೋಗಹತ್ತಿದೆ. ಬೇಗ ನೌಕೆಯನ್ನು ಏರಿ ಕುಳಿತುಕೊಳ್ಳಬೇಕು" ಎಂದು ರಘುಪತಿ ಹೇಳಿದರು.

ಪೀತಾಂಬರನು ಸಿಟ್ಟಿನಿಂದ ಹುಬ್ಬುಗಂಟಿಕ್ಕಿ ಸಂದಿಗ್ಧಭಾವದ ಮುಖದಿಂದ ರಘುಪತಿಯನ್ನು ನೋಡಿ "ನೀನಾರು? ನಮ್ಮ ಮಹಾರಾಜರಿಗೆ ಆಜ್ಞೆಕೊಡಲು ಬಂದಿರುವೆಯಾ? ಎಂದು ಗದರಿಸಿದ.

ನಕ್ಷತ್ರನು ತುಂಬ ತೊಂದರೆ ಪಟ್ಟುಕೊಂಡು ಪೀತಾಂಬರನನ್ನು ಬದಿಗೆ ಸೆಳೆದುಕೊಂಡು ಹೋಗಿ ಅವನ ಕಿವಿಯಲ್ಲಿ "ಇವರು ನಮ್ಮ ಗುರು ಠಾಕುರರು." ಎಂದು ಪೂಜ್ಯಭಾವದಿಂದ ಹೇಳಿದ.

ಪೀತಾಂಬರನು ಅದನ್ನು ಕೇಳಿ "ಗುರು ಠಾಕುರ ಆದರೇನಾಯಿತು? ಬೇಕಾದರೆ ಅವರು ಬಂದು ನಮ್ಮ ಚಂಡಿ ಮಂಡಪದಲ್ಲಿ ಕುಳಿತುಕೊಳ್ಳಲಿ. ಪಕ್ಕದ ಮನೆಗಳಿಂದ ಅಕ್ಕಿಯನ್ನು ಸಂಗ್ರಹಿಸಿ ಕೊಡುತ್ತೇನೆ. ಗೌರವದಿಂದ ಇರಲಿ. ಯಾರು ಬೇಡವೆನ್ನುತ್ತಾರೆ. ಮಹಾರಾಜರಿಗೆ ಅಂತಹ ಜನರ ಅವಶ್ಯಕತೆ ಎಲ್ಲಿದೆ?" ಎಂದು ಹೇಳಿದನು.

ರಘುಪತಿ ಇದನ್ನು ಕೇಳಿ "ವ್ಯರ್ಥ ಸಮಯ ಹಾಳಾಗಿ ಹೋಗುತ್ತಿದೆ. ನಾನಿನ್ನು ಹೊರಡುವೆ" ಎಂದು ಹೇಳಿದರು.

ಕೂಡಲೇ ಅದಕ್ಕೆ ಪೀತಾಂಬರನು "ತಮ್ಮ ಇಚ್ಛೆಯಂತೆ ಆಗಲಿ. ತಡ ಮಾಡುವುದರಿಂದ ಏನು ಪ್ರಯೋಜನ? ಮಹಾಶಯರೆ, ಕೂಡಲೇ ಇಲ್ಲಿಂದ ಹೊರಟು ಹೋಗಿ. ಮಹಾರಾಜರನ್ನು ಕರೆದುಕೊಂಡು ನಾವು ಅರಮನೆಗೆ ಹೋಗುವೆವು.

ನಕ್ಷತ್ರರಾಯನು ಇದನ್ನು ಕೇಳಿ, ಒಂದು ಸಲ ರಘುಪತಿಯ ಮುಖವನ್ನೂ ಮತ್ತೊಂದು ಸಲ ಪೀತಾಂಬರನ ಮುಖವನ್ನೂ ನೋಡಿ ಮೃದುಸ್ವರದಲ್ಲಿ "ಇಲ್ಲ. ದೇವಯಾನಜೀ ಅವರೇ, ನಾನೂ ಹೋಗುತ್ತೇನೆ" ಎಂದು ಹೇಳಿದನು.

"ಹಾಗಾದರೆ ನಾನೂ ಹೊರಡುತ್ತೇನೆ. ಈ ಜನರನ್ನೆಲ್ಲ ಕರೆದುಕೊಂಡು ಬರುತ್ತೇನೆ. ರಾಜರಂತೆ ನೀವು ಹೋಗಬೇಕು. ಜೊತೆಗೆ ದೇವಯಾನಜಿ ಹೋಗಬಾರದೆಂದರೇನು?" ಎಂದು ಪೀತಾಂಬರನು ಕೇಳಿದನು.

ನಕ್ಷತ್ರರಾಯನು ಆಗಲೂ ಕೂಡ ಮತ್ತೆ ರಘುಪತಿಯ ಮುಖವನ್ನು ನೋಡಿದನು.

ರಘುಪತಿಯು ನಿರ್ದಾಕ್ಷಿಣ್ಯದಿಂದ "ಬೇರೆ ಯಾರೂ ಜೊತೆಗೆ ಬರಕೂಡದು" ಎಂದೇ ಆಜ್ಞೆ ವಿಧಿಸಿದರು.

ಪೀತಾಂಬರನು ಸಿಟ್ಟಿನಿಂದ ತಪ್ತನಾಗಿ "ನೋಡಿ, ಠಾಕುರರೆ . . . ನೀವು . . .' ಎಂದು ಇನ್ನು ಏನನ್ನೋ ಹೇಳುವಷ್ಟರಲ್ಲಿ . . .

ನಕ್ಷತ್ರರಾಯನು ಲಗುಬಗೆಯಿಂದ ಅವನನ್ನು ಗಟ್ಟಿಯಾಗಿ ತಬ್ಬಿ ತನ್ನ ಕೈಯಿಂದ ಅವನ ಬಾಯಿಮುಚ್ಚಿ "ದೇವಯಾನಜಿ, ನಾನು ಹೊರಡುತ್ತೇನೆ; ತಡವಾಗುತ್ತಿದೆ" ಎಂದು ಗದ್ಗದ ಕಂಠದಿಂದ ನುಡಿದನು.

ಪೀತಾಂಬರನು ಮ್ಲಾನ ವದನದಿಂದ ನಕ್ಷತ್ರರಾಯನ ಎರಡೂ ಕೈಗಳನ್ನು ತನ್ನ ಎರಡೂ ಕೈಗಳಲ್ಲಿ ತೆಗೆದುಕೊಂಡು "ನೋಡು ಮಗು, ನಾನು ನಿನಗೆ ರಾಜನೆಂದು ಕರೆಯುವೆ; ಆದರೆ ನಿಜವಾಗಿ ನಿನ್ನನ್ನು ನನ್ನ ಮಗನಂತೆ ನೋಡುತ್ತಿದ್ದೇನೆ. ನನಗೆ ಮಕ್ಕಳಾರೂ ಇಲ್ಲ. ನಿನ್ನಮೇಲೆ ನನ್ನ ಅಧಿಕಾರವೇನೂ ನಡೆಯುವದಿಲ್ಲ. ಇದನ್ನು ನಾನು ಬಲ್ಲೆ. ನೀನೀಗ ಹೊರಟು ನಿಂತಿರುವೆ. ಅದನ್ನೂ ನಾನು ಬಲ್ಲೆ. ನಾನು ಅಧಿಕಾರದಿಂದ ತಡೆದು ನಿಲ್ಲಿಸಲಾರೆ. ಆದರೆ ನನ್ನದೊಂದು ಬೇಡಿಕೆ ಇದೆ. ನೀನು ಬೇಕಾದಲ್ಲಿಗೆ ಹೋಗು; ಆದರೆ ನಾನು ಸಾಯುವ ಮೊದಲು ಮತ್ತೊಮ್ಮೆ ಇಲ್ಲಿಗೆ ಬಾ. ತಪ್ಪದೆ ಬರಬೇಕು. ನಾನು ನನ್ನ ಕೈಯಿಂದ ನನ್ನ ರಾಜ್ಯವನ್ನೆಲ್ಲ ನಿನ್ನ ಕೈಗೆ ಕೊಟ್ಟು ಹೋಗುತ್ತೇನೆ. ಇದೊಂದೇ ನನ್ನ ಬಯಕೆಯಾಗಿದೆ" ಎಂದು ತುಂಬಿ ಬಂದ ಕಂಠದಿಂದ ಹೇಳಿದನು.

ನಕ್ಷತ್ರರಾಯನು ಹಾಗು ರಘುಪತಿಯು ನೌಕೆಯಲ್ಲಿ ಹೋಗಿ ಕುಳಿತರು. ನೌಕೆಯು ದಕ್ಷಿಣ ದಿಕ್ಕಿನ ಕಡೆಗೆ ಹೋಗ ಹತ್ತಿತು. ಪಿತಾಂಬರನು ಸ್ನಾನ ಮಾಡುವುದನ್ನೇ ಮರೆತು ಪಂಚೆಯನ್ನು ಹೆಗಲಮೇಲೆ ಹಾಕಿಕೊಂಡು ವಿಮನಸ್ಕನಾಗಿ ಮನೆಗೆ ಹಿಂದಿರುಗಿ ಹೋದನು.

ಗುಜರಪಾಡಾ ಗ್ರಾಮವು ಮತ್ತೆ ನಿರ್ಜನವಾಯಿತು; ಶೂನ್ಯವಾಯಿತು. ಅದರ ಉತ್ಸವ, ಆಮೋದ, ಪ್ರಮೋದಗಳೆಲ್ಲ ಮಾಯವಾಗಿ ಹೋದವು. ಕೇವಲ ನಿತ್ಯ ನಿಸರ್ಗದ ಉತ್ಸವವು ಮಾತ್ರ ಅವಿಚ್ಛಿನ್ನವಾಗಿ ಸಾಗಿತ್ತು.

ಬೆಳಿಗ್ಗೆ ಹಕ್ಕಿಗಳ ಹಾಡು, ತರಗೆಲೆಗಳ ಮಧುರನಿನಾದ, ಮಂಜುಳವಾಗಿ ಹರಿಯುವ ನೀರಿನ ಗುಂಜಾರವ ವಿರಾಮವಿಲ್ಲದೆ ನಿತ್ಯ ನಡೆದಿದ್ದವು.

47. ಭಾರತ ತೀರ್ಥ

ಎನ್ನ ಚಿತ್ತವೆ, ಪುಣ್ಯತೀರ್ಥವೆ,
ಏಳು ಮೇಲಕೆ ಧೈರ್ಯದಿ
ನಮ್ಮ ಭಾರತ ಮಹಾಪುರುಷರ
ಭವ್ಯಸಾಗರ ತೀರದಿ.

ನಿಂತು ತೀರದಿ ಕೈಯ ಜೋಡಿಸಿ
ಮನುಜ ದೇವರ ವಂದಿಸು
ಪರಮ ಹರ್ಷದ ಭಾವದಿಂದಲಿ
ಔದಾರ್ಯವ ತೋರಿಸು.

ಹಳ್ಳಹೊಳೆಗಳ ಜಪದ ಸರವನು
ಧರಿಸಿ ತಪವನು ಮಾಡುತ
ಧ್ಯಾನಗೈವಳು ಭೂಮಿ ತಾಯಿಯು
ತಾನೆ ತನ್ನೊಳು ನೋಡುತ.

ಜಗದ ಕಲ್ಯಾಣವನು ಚಿಂತಿಸು—
ತಿಹಳು ಮಾತೆಯು ಮೋದದಿ
ನಮ್ಮ ಭಾರತ ಮಹಾಪುರುಷರ
ಭವ್ಯಸಾಗರ ತೀರದಿ.

ಇಷ್ಟು ಜನರನು ಯಾರು ಕರೆದರು?
ಯಾರು ಬಲ್ಲರು ಇಂಗಿತ!
ಬಿಟ್ಟುಬಿಡದಲೆ ಜನಸಮೂಹವು
ಬಂದು ನೆರೆಯಿತು ನೋಡುತ.

ಇಲ್ಲಿ ಆರ್ಯರು, ಮತ್ತನಾರ್ಯರು
ಇಲ್ಲಿ ದ್ರವಿಡರು, ಚೀನರು
ಶಕ-ಹುಣ-ದಲ ಪಠಾಣ ಮೊಗಲ
ಎಲ್ಲರೊಂದೆಡೆ ನೆರೆದರು.

ಇಂದು ಪಶ್ಚಿಮದ್ವಾರ ತೆರೆದಿದೆ
ಬಂದು ಬಿದ್ದಿದೆ ಭಾಗ್ಯವು.
ಒಂದನೊಂದನು ಅಪ್ಪಿಕೊಂಡಿದೆ
ಬಂಧುಭಾವದ ದೃಶ್ಯವು.

ಮರಳಿ ತೆರಳುವ ಮಾತೆ ಬಾರದು
ಕೂಡಿಕೊಂಡಿರಿ ಧೈರ್ಯದಿ.
ನಮ್ಮ ಭಾರತ ಪುಣ್ಯಪುರುಷರ
ಭವ್ಯಸಾಗರ ತೀರದಿ.

ಎನ್ನ ಸ್ವರದಲಿ ಅವರ ಭೇರಿಯು
ಹುದುಗಿ ಒಳಸೇರಿರುವುದು.
ದೂರ ಸರಿಯದೆ ಎನ್ನ ಉಡಿಯಲಿ
ಅವರು ಪವಡಿಸುತಿರುವರು.

ಮೊಳಗು ಎನ್ನಯ ರುದ್ರವೀಣೆಯೆ,
ದೂರವಿಹ ಜನ ಕೇಳಲಿ!
ಭೇದಭಾವವನೆಲ್ಲ ತೊರೆಯುತ
ಧಾವಿಸೆನ್ನಯ ಸೇರಲಿ!

ಸುತ್ತುವರಿಯಲಿ ಎನ್ನನೆಲ್ಲರು
ಹತ್ತಿನಿಲ್ಲಲಿ ಮೋದದಿ
ನಮ್ಮ ಭಾರತ ದಿವ್ಯಪುರುಷರ
ಭವ್ಯಸಾಗರ ತೀರದಿ.

ಓಂಕಾರದ ಭವ್ಯಭೇರಿಯು
ಹಿಂದೆ ಬಿಡದಲೆ ಮೊಳಗಿತು.
ಯಾವನೊಬ್ಬನ ಹೃದಯ ತಂತ್ರದಿ
ಮಂತ್ರಘೋಷವು ಎದ್ದಿತು.

ತಪದ ಹೆಸರಲಿ ತನ್ನ ಒಬ್ಬನ
ಸಿದ್ಧಿ ಸಾಧನ ನಡೆಯಿತು.
ಮುಚ್ಚಿ ಬಾಗಿಲು ಯಜ್ಞಕುಂಡದಿ
ಅನ್ಯರಾಹುತಿ ಜರುಗಿತು.

ಜನರ ಮಧ್ಯದಿ ಒಡಕು ಹುಟ್ಟಿತು
ಐಕ್ಯವಡಗಿತು ಅವರಲಿ.
ಹಿಂದೆ ಇಲ್ಲಿಯೆ ಬಂಧುಭಾವವು
ಇಲ್ಲದಾಯಿತು ಜನರಲಿ.

ಇಂದು ತೆರೆದಿದೆ ಯಜ್ಞಶಾಲೆಯು
ಬನ್ನಿರೆಲ್ಲರು ಐಕ್ಯದಿ.
ನಮ್ಮ ಭಾರತ ಮಹಾಪುರುಷರ
ಭವ್ಯಸಾಗರ ತೀರದಿ.

ಅದೇ ಹೋಮದ ಅಗ್ನಿ ಇಂದಿಗು
ತಪ್ತ ಶಿಖೆಯನು ಕಾರುತ
ದಹಿಸಿ ದುಃಖವ ಮೇಲಕೆದ್ದಿದೆ
ನಮ್ಮ ಭಾಗ್ಯವ ತೆರೆಯುತ.

ಎಲವೊ ಅಗ್ನಿಯೆ, ದುಃಖವಾಹಕ
ವಂದಿಸುವೆ ನಾನೊಬ್ಬನೆ.
ನಮ್ಮ ಅಪಮಾನವನು ಓಡಿಸಿ
ಜಯವ ಸ್ಥಾಪಿಸು ಬೇಗನೆ.

ಸಹಿಸಲಾಗದ ದುಃಖವಿಂದಿಗೆ
ದಹಿಸಿಹೋಗಲಿ, ತೊಲಗಲಿ.
ರಾತ್ರಿ ಕಳೆಯಿತು, ಬೆಳಗು ಹರಿಯಿತು
ವಿಶ್ವಜೀವನ ಮೊಳಗಲಿ.

ಬನ್ನಿ ಆರ್ಯರೆ, ಮತ್ತನಾರ್ಯರೆ,
ಬನ್ನಿ ಹಿಂದೂ ಮುಸಲರೇ,
ಇಂದು ಬನ್ನಿರಿ ಆಂಗ್ಲ ಜನರೇ
ಬಂದು ಕೂಡಿರಿ ಕ್ರಿಸ್ತರೇ.

ಬನ್ನಿ ಬ್ರಾಹ್ಮಣ, ಮುಂದೆ ಬನ್ನಿರಿ,
ಎಲ್ಲ ಮನವನು ತೊಳೆಯಿರಿ.
ಎಲ್ಲರನು ಬಿಗಿದಪ್ಪಿ ಕೈಗಳ
ನೆಲ್ಲ ಕುಲುಕಿಸಿ ನಿಲ್ಲಿರಿ.

ಪತಿತರೆಂಬರು ಯಾರೆ ಇದ್ದರು
ಎದ್ದು ಬನ್ನಿರಿ ಮುಂದಕೆ
ನಿಮ್ಮ ಅವಮಾನವನು ತ್ಯಜಿಸಿರಿ
ಭಾರ ಉಳಿಯಲಿ ಹಿಂದಕೆ.

ಮಾತೃಭೂಮಿಯ ಪರಮ ಮಂಗಳ
ಸ್ನಾನ ನಡೆದಿದೆ ಬನ್ನಿರಿ
ಸಕಲ ಕೈಗಳ ಸ್ಪರ್ಶ ಪಾವನ
ವನ್ನು ನೀರಿಗೆ ತನ್ನಿರಿ.

ಎನ್ನ ಚಿತ್ತವೆ ಪುಣ್ಯ ತೀರ್ಥವೆ
ಏಳು ಮೇಲಕೆ ಧೈರ್ಯದಿ
ನಮ್ಮ ಭಾರತ ಮಹಾಪುರುಷರ
ಭವ್ಯ ಸಾಗರ ತೀರದಿ

48. ದುಗುಡದಿಂದ ಪಾರುಮಾಡು.

ದುಗುಡದಿಂದ ಪಾರುಮಾಡು
ಎಂದು ಎನ್ನ ಪ್ರಾರ್ಥನೆ
ಅಲ್ಲ, ಅಲ್ಲ! ಯಾವ ದುಗುಡ
ಬಂದರಾನು ಬೆದರೆನೆ!

ಬಂದ ದುಃಖದಿಂದ ವ್ಯಥಿತ–
ಚಿತ್ತನಾಗಿ ಸಾಂತ್ವನ
ಬೇಡ; ಅದನು ಜಯಿಸಿಕೊಳುವ
ಶಕ್ತಿ ನೀಡು ಪಾವನ

ನನಗೆ ನೆರವು ದೊರೆಯಲಿಲ್ಲ
ನನ್ನ ಶಕ್ತಿ ಕುಂದಿತು
ಸಂಸಾರದಿ ಮೋಸ ಪಡೆದೆ
ಆದರು ಮನ ಹಿಗ್ಗಿತು.

ನನ್ನ ಶಕ್ತಿ ನೀನೆಯಾಗು
ಎಂದು ಇಲ್ಲ ಪ್ರಾರ್ಥನೆ
ಶಕ್ತನಾಗಿ ದಾಟಬಲ್ಲೆ
ಇರಲಿ ನಿನ್ನ ಚಿಂತನೆ

ನನ್ನ ಭಾರ ಕಡಿಮೆ ಮಾಡು
ಎಂದು ನಾನು ಕೇಳೆನು.
ಭಾರಹೊತ್ತು ಸಾಗಬಲ್ಲೆ
ಇದನು ನಾನು ಬಲ್ಲೆನು.

ಸುಖದ ದಿನದಿ ನಾನು ನನ್ನ
ಮುಖತಗ್ಗಿಸಿ ಸಾಗುವೆ
ದುಃಖದಲ್ಲಿ ಕೂಡ ನಿನ್ನ
ಮುಖದ ಗುರುತ ಹಿಡಿಯುವೆ!

49. ಸ್ವದೇಶಿಕತೆ

ಹೊರಗಿನಿಂದ ನೋಡಿದರೆ ನಮ್ಮ ಕುಟುಂಬದ ಜನರೆಲ್ಲ ಒಂದು ರೀತಿಯ ವಿದೇಶ ಜೀವನಕ್ರಮವನ್ನು ಅನುಸರಿಸಿಕೊಂಡು ಬಂದಿರುವಂತೆ ತೋರಿದರೂ ಅವರ ಹೃದಯದಲ್ಲಿ ಒಳಗೊಳಗೆ ಸ್ವದೇಶಾಭಿಮಾನದ ನಂದಾದೀಪವು ನಿತ್ಯ ಬೆಳಗುತ್ತಿರುವುದೂ ಕೂಡ ಕಂಡುಬರುತ್ತದೆ. ನಮ್ಮ ಪೂಜ್ಯ ತಂದೆಯವರಲ್ಲಿ (ಪಿತೃ ದೇವರಲ್ಲಿ) ಈ ಸ್ವದೇಶಾಭಿಮಾನವು ಸುಪ್ತವಾಗಿ ಆದರೂ ಜಾಜ್ವಲ್ಯವಾಗಿ ಜನ್ಮತಃ ಒಳ ಮೂಡಿಕೊಂಡು ಬಂದಿದೆ. ಈ ಸ್ವದೇಶಾಭಿಮಾನವೇ ನಮ್ಮ ಮನೆಯ ಉಳಿದ ಜನರಲ್ಲಿ ಕೂಡ ಉಜ್ವಲ ಸ್ವದೇಶ ಪ್ರೇಮವಾಗಿ ಬೆಳಗುತ್ತಿದೆ. ಹಾಗೆ ನೋಡಿದರೆ ಇಂದಿನ ದಿನಗಳು ಸ್ವದೇಶಪ್ರೇಮದ ದಿನಗಳೇನೂ ಅಲ್ಲ. ಇಂದು ಸುಶಿಕ್ಷಿತ ಜನರೆಲ್ಲರೂ ಸ್ವಭಾಷೆ ಹಾಗೂ ಸ್ವದೇಶಾಭಿಮಾನಗಳೆರಡನ್ನೂ ತಮ್ಮ ಅಂತಃಕರಣದಿಂದ ದೂರ ಹೊಡೆದು ಓಡಿಸಿಬಿಟ್ಟಿದ್ದಾರೆ. ಆದರೆ ನಮ್ಮ ಮನೆಯಲ್ಲಿ ಮಾತೃಭಾಷೆಯ ಮಹತ್ವವನ್ನು ಕುರಿತು ಚರ್ಚೆಯನ್ನು ನಮ್ಮ ಅಣ್ಣ ಸದಾ ನಡೆಸಿಕೊಂಡೇ ಬಂದಿದ್ದಾರೆ. ನಮ್ಮ ತಂದೆಯವರಿಗೆ ಯಾರಾದರೂ ಇಂಗ್ಲೀಷ ಭಾಷೆಯಲ್ಲಿ ಪತ್ರ ಬರೆದರೆ ಆ ಪತ್ರವನ್ನು ಅವರು ಓದದೆ ಕೂಡಲೇ ಅದನ್ನು ಬರೆದವರಿಗೆ ತಿರುಗಿ ಕಳಿಸಲಾಗುತ್ತಿತ್ತು.

ನಮ್ಮ ಮನೆತನದ ಸಹಾಯದಿಂದ ಹಿಂದೂ ಜನರ ಜಾತ್ರೆ ಎಂದು ಕರೆಯಿಸಿಕೊಳ್ಳಬಹುದಾದ ಜಾತ್ರೆಯೊಂದು ಜನ್ಮ ತಳೆದಿತ್ತು. ಈ ಜಾತ್ರೆಯ ಸಂಚಾಲಕರೆಂದು ನವಗೋಪಾಲ ಮಿತ್ರ ಎಂಬವರನ್ನು ನೇಮಿಸಲಾಗಿತ್ತು. ಭರತವರ್ಷವನ್ನು ಸ್ವದೇಶವೆಂದು ಭಾವಿಸಿ ಭಕ್ತಿಯನ್ನು ಪ್ರದರ್ಶಿಸಿದ ಪ್ರಥಮ ಪ್ರಸಂಗವಿದೆಂದು ಹೇಳಬಹುದು. ಎರಡನೆಯ ಅಣ್ಣ ಈ ದಿನಗಳಲ್ಲಿಯೇ "ಮಿಲೆ ಸಬ್ ಭಾರತ ಸಂತಾನ" ಅಂದರೆ "ಭಾರತದ ಮಕ್ಕಳೆಲ್ಲ ನಾವು ಒಂದಾಗಿದ್ದೇವೆ" ಎಂಬ ಹಾಡನ್ನೊಂದು ಬರೆದು ಅದಕ್ಕೆ ಸಂಗೀತವನ್ನೂ ಹಾಕಿದ್ದರು. ಈ ಜಾತ್ರೆಯಲ್ಲಿ ಸ್ವದೇಶಪ್ರೇಮದ, ಸ್ವದೇಶ ಸ್ತೋತ್ರದ ಕಾವ್ಯಪಠನಗಳು ನಡೆಯುತ್ತಿದ್ದವು. ದೇಶೀ ಪದ್ಧತಿಯ ವ್ಯಾಯಾಮ ಸಾಧನೆಯನ್ನು ಮಾಡಿದ ಜನರಿಗೆ ಈ ಜಾತ್ರೆಯಲ್ಲಿ ಸ್ವದೇಶಪ್ರೇಮದ ದ್ಯೋತಕವೆಂದು ಪುರಸ್ಕಾರವೂ ದೊರೆಯುತ್ತಿತ್ತು.

ಲಾರ್ಡ ಕರ್ಝನ್ನರ ಕಾಲಕ್ಕೆ ದಿಲ್ಲಿ ದರ್ಬಾರನ್ನು ಕುರಿತು ಒಂದು ಗದ್ಯ ಪ್ರಬಂಧವನ್ನು ಬರೆದಿದ್ದರೆ ಲಾರ್ಡ ಲಿಟನ್ನರ ಕಾಲಕ್ಕೆ ಒಂದು ಪದ್ಯವನ್ನು ಬರೆದಿದ್ದೆ. ಆಗಿನ ಇಂಗ್ಲೀಷ ಸರಕಾರವು ರಶಿಯಾಕ್ಕೆ ಹೆದರುತ್ತಿತ್ತು. ಆದರೆ 14 15 ವರ್ಷದ

ಬಾಲಕವಿಯು ಬರೆದ ಕವಿತೆಗಾಗಲೀ ಲೇಖನಕ್ಕಾಗಲೀ ಹೆದರುತ್ತಿರಲಿಲ್ಲ. ವಯಸ್ಸಿಗೆ ತಕ್ಕ ಉತ್ಸಾಹದೊಂದಿಗೆ ಅಂತಸ್ಸತ್ವವೂ ಆ ಕವಿತೆಯಲ್ಲಿ ಅಧಿಕ ಪ್ರಮಾಣದಲ್ಲಿ ಅಡಗಿತ್ತು. ಅಂದಿನ ಸೇನಾಪತಿಯನ್ನು ಮೊದಲುಮಾಡಿ ಕೊನೆಯ ಸಿಪಾಯಿ ವರೆಗೂ ಅವರವರ ಕರ್ತವ್ಯಪಾಲನೆಗೆ ಆ ಕವಿತೆಯು ಚಾಟಿಯ ಏಟನ್ನು ಕೊಟ್ಟು ಎಚ್ಚರಿಸಿತ್ತು. ಟಾಯಿಮ್ಸ ಪತ್ರಿಕೆಯಲ್ಲಿ, ಅಂದಿನ ಯಾವ ಓದುಗನೂ ಕೂಡ ಇಂಗ್ಲೀಷ ಸರಕಾರದ ಭವಿಷ್ಯಕ್ಕೆ ಅಂದು ವಿವಂಚಿತನಾಗಿ, ಅಂದಿನ ಆಡಳಿತೆಗಾರರು ತೋರುತ್ತಿದ್ದ ಔದಾಸೀನ್ಯವನ್ನು ಕುರಿತು ಟೀಕೆಮಾಡಿ, ಒಂದು ಬಿಸಿ ಉಸಿರನ್ನು ಬಿಟ್ಟು ಪತ್ರ ಬರೆದಿರಲಿಲ್ಲ. ಆ ಕವಿತೆಯನ್ನು ನಾನು, ಒಂದು ಗಿಡದ ನೆರಳಲ್ಲಿ ನಿಂತ ಆ ನಮ್ಮ ಜಾತ್ರೆಯ ಜನರಿಗೆ ಓದಿ ತೋರಿಸಿದ್ದೆ. ಆ ಕವಿತೆ ಕೇಳಿದ ಜನರಲ್ಲಿ ಭಾರತದ ಹೊಸ ಸೈನ್ಯಾಧಿಕಾರಿಯೂ ಇದ್ದರು. ನಾನು ದೊಡ್ಡವನಾದಮೇಲೆ ನನಗೆ ಈ ಪ್ರಸಂಗವನ್ನವರು ನೆನಪಿಗೆ ತಂದುಕೊಟ್ಟರು.

ಅಣ್ಣಾ, ಜ್ಯೋತಿಯವರ ಉದ್ಯೋಗದಿಂದ ನನಗೊಂದು ಸಭೆಯನ್ನೇ ಕರೆಯು ವುದಕ್ಕೆ ಅನುಕೂಲವಾಗಿತ್ತು. ಅಲ್ಲದೆ ಒಂದು ಸಂಘವನ್ನೂ ನಾವು ಮಾಡಿ ಕೊಂಡಿದ್ದೆವು. ಹಿರಿಯರಾದ ರಾಜನಾರಾಯಣಬಾಬು ಅವರು ಈ ಸಂಘದ ಅಧ್ಯಕ್ಷರಾಗಿದ್ದರು. ಈ ಸಂಘವೇ ನಮ್ಮಲ್ಲಿ ಸ್ವದೇಶಾಭಿಮಾನವನ್ನು ಮೊಳಗಿಸಲು ಸಾಧನವಾಗಿತ್ತು.

ಕಲಕತ್ತೆಯ ಒಂದು ಚಿಕ್ಕ ಓಣಿಯ ಹಾಳು ಹಳೆಯ ಮನೆಯಲ್ಲಿ ನಮ್ಮ ಸಂಘದ ಅಧಿವೇಶನಗಳು ನಡೆಯುತ್ತಿದ್ದವು. ಆ ಸಭೆಯ ಸಮಸ್ತ ಚಟುವಟಿಕೆಗಳೂ ರಹಸ್ಯವಾಗಿದ್ದವು. ಈ ರಹಸ್ಯವೆಂಬುದೇ ಭಯಾನಕವಾಗಿತ್ತು. ನಮ್ಮ ಚಟುವಟಿಕೆಗ ಳಲ್ಲಿ ರಾಜರನ್ನಾಗಲೀ, ಅಥವಾ ಪ್ರಜೆಗಳನ್ನಾಗಲೀ ಬೆದರಿಸಿಕೊಳ್ಳುವುದಕ್ಕೇನೂ ಆಸ್ಪದವಿರಲಿಲ್ಲ. ನಾವು ಮಧ್ಯಾಹ್ನ ಎಲ್ಲಿಗೆ ಹೋಗುತ್ತಿದ್ದೆವು, ಏನು ಮಾಡುತ್ತಿದ್ದೆವು ಎಂಬುದರ ರಹಸ್ಯವು ನಮ್ಮ ಯಾವ ಅತಿ ನಿಕಟ ಆತ್ಮೀಯರಿಗೂ ಗೊತ್ತಾಗಿರಲಿಲ್ಲ. ಮಧ್ಯಾಹ್ನದ ಉರಿ ಬಿಸಿಲಲ್ಲಿ ಯಾರು ತಾನೆ ಮನೆಯಿಂದ ಹೊರಬರುವರು ! ಅಂತೆಯೇ ನಾವು ಹೋಗುತ್ತಿದ್ದ ಆ ದಾರಿ ನಿರ್ಜನವಾಗಿತ್ತು.

ಜೊತೆಗೆ, ಸಭೆ ನಡೆಸುತ್ತಿದ್ದ ನಮ್ಮ ಮನೆಯು ಅಂಧಕಾರಮಯವಾಗಿತ್ತು. ಅಲ್ಲಿ ನಾವು ಸ್ವದೇಶಕ್ಕಾಗಿ ತೆಗೆದುಕೊಳ್ಳುವ ದೀಕ್ಷೆ ವೇದಮಂತ್ರವಾಗಿತ್ತು. ನಾವು ಮಾತನಾಡುವುದೂ ಕೂಡ ಯಾರಿಗೆಲ್ಲಿ ಕೇಳಿಬರುವುದೊ ಎಂಬ ಭಯದಿಂದ ಮೌನಕ್ಕೆ ಅತಿ ಸಮೀಪವಾಗಿತ್ತು.

ಈ ವಾತಾವರಣವೇ ಎಲ್ಲರಲ್ಲಿ ರೋಮಹರ್ಷವನ್ನು ತರುತ್ತಿತ್ತು. ಇದಕ್ಕಿಂತ ಹೆಚ್ಚಿನ ಪ್ರಯೋಜನ ಮಾತ್ರ ಆಗ ಏನೂ ಇರಲಿಲ್ಲ. ನಮ್ಮಂತಿರುವ ಇನ್ನೂ ಅನೇಕ ಸುಧಾರಿಸಿದ ನವನಾಗರೀಕರೂ ಕೂಡ ಈ ಸಭೆಯ ಸದಸ್ಯರಿದ್ದರು. ಸಭೆಯ ವಾತಾವರಣವು ಯಾವಾಗಲೂ ಕಾಯ್ದು ತಪ್ತವಾಗಿರುತ್ತಿತ್ತು.

ನಮಗೆ ಆಗ ನೆಲದಮೇಲೆ ನಡೆಯದೆ ಗಾಳಿಯಲ್ಲಿ, ಆಕಾಶದಲ್ಲಿ ಹಾರಾಡುತ್ತಿ ದ್ದಷ್ಟು ಉತ್ಸಾಹವಿತ್ತು. ಈ ಉತ್ಸಾಹದಿಂದ ಉಬ್ಬಿಕೊಂಡಿರುವುದೇ ಆಗ ನಮಗಿದ್ದ

ಪ್ರಧಾನ ಕೆಲಸ. ಸ್ಫೂರ್ತಿಯ ಬೆಂಕಿಯನ್ನು ನಮ್ಮೊಳಗೆ ಹೊತ್ತಿಸಿಕೊಂಡು ಸದಾ ಆದರಿಂದ ನಾವು ತಪ್ತರಾಗಿರುವುದೇ ನಮ್ಮ ಸಭೆಯ ಉದ್ದೇಶ. ವೀರತನವು ವಿಲಕ್ಷಣವಾದ ವಸ್ತು. ಕೆಲವು ಕಡೆ ಅದು ಅಗ್ಗವಾಗಿ ದೊರೆತರೆ ಮತ್ತೆ ಕೆಲವು ಕಡೆಗಳಲ್ಲಿ ಅದಕ್ಕೆ ತುಂಬ ಬೆಲೆ ಕೊಡಬೇಕಾಗುತ್ತದೆ. ಅದೇನಿದ್ದರೂ ಮಾನವರಲ್ಲಿ ಅದರ ಬಗೆಗೆ ಒಂದು ಅಚಲವಾದ ಶ್ರದ್ಧೆ ಇದೆ. ಈ ಶ್ರದ್ಧೆಯನ್ನು ಯಾವಾಗಲೂ ಎಚ್ಚರದಿಂದ ಇರಿಸುವುದು ಎಲ್ಲ ಸಾಹಿತ್ಯದ ಕೆಲಸಗಳಲ್ಲಿ ಒಂದಾಗಿದೆ. ಕಾರಣವಿಷ್ಟೆ, ಸದಾ ಈ ಭಾವದಲ್ಲಿ ಮನುಷ್ಯ ಇರಲಾರ. ಅಂತೇ ಅವನ ಮನಸ್ಸಿನ ಮೇಲೆ ವೀರ ಭಾವದ ಆಘಾತ ಮೇಲಿಂದ ಮೇಲೆ ಆಗುತ್ತಿರಲೇಬೇಕು. ಬೇರೆ ಉಪಾಯವೇ ಇಲ್ಲ. ನಾವು ಸಭೆಯನ್ನು ಕರೆದು, ಕಲ್ಪನೆಯನ್ನು ಮಾಡಿ, ಚರ್ಚಿಸಿ, ವ್ಯಾಖ್ಯಾನ ಗಳನ್ನು ಕೊಟ್ಟು, ವೀರರಸಪ್ರಧಾನದ ಹಾಡುಗಳನ್ನು ಹಾಡಿ ವೀರಭಾವದ ಆಘಾತ ವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆವು. ಯಾವುದು ಮನುಷ್ಯ ಸ್ವಭಾವ ವಾಗಿದೆಯೊ, ಹಾಗೂ ಯಾವುದು ಅವನಿಗೆ ಸದಾ ಆದರಣೀಯವಾಗಿದೆಯೊ, ಅದರ ಅಸ್ತಿತ್ವದ ಎಲ್ಲ ಮಾರ್ಗಗಳನ್ನೂ ಕತ್ತರಿಸಿ, ಅದಕ್ಕೆ ಆಸ್ಪದ ದೊರೆಯದಂತೆ ಎಲ್ಲ ಬಿರುಕುಗಳನ್ನೂ ಬಂದು ಮಾಡಿದ ಮೇಲೆ ಇಂತಹದೊಂದು ವಿಷಮವಿಕಾರದ ಸೃಷ್ಟಿ ಸಾಧ್ಯವೆಂಬುದಕ್ಕೆ ಸಂದೇಹವೇ ಇಲ್ಲ. ಒಂದು ದೊಡ್ಡ ರಾಜ್ಯದ ಆಡಳಿತ ದಲ್ಲಿ ಕೇವಲ ಕಾರಕೂನಿಯ ಮಾರ್ಗವನ್ನು ಮಾತ್ರ ತೆರೆದಿಟ್ಟರೆ ಮಾನವಚರಿತ್ರದಲ್ಲಿ ರುವ ವಿಶಿಷ್ಟ ಶಕ್ತಿಯ ಆವಿರ್ಭಾವಕ್ಕೆ ಬೇಕಾದ ಸ್ವಾಭಾವಿಕ ಹಾಗೂ ಸ್ವಾಸ್ಥ್ಯ ಕರವಾದ ಕ್ಷೇತ್ರವನ್ನು ಮಾಡಿಕೊಟ್ಟಂತೆ ಆಗಲಿಲ್ಲ. ರಾಜ್ಯದಲ್ಲಿ ವೀರಧರ್ಮದ ಬೆಳವಣಿಗೆಗೂ ಒಂದು ವ್ಯವಸ್ಥೆ ಇರಬೇಕು. ಇಲ್ಲವಾದರೆ ಮಾನವ ಧರ್ಮಕ್ಕೆ ಹಿಂಸೆ ಕೊಟ್ಟಂತೆ. ಇದರ ಅಭಾವವಿದ್ದಲ್ಲಿ ಅದು ಗುಪ್ತವಾಗಿ ಒಳಗೊಳಗೆ ಕುದಿಯು ತ್ತಿರುತ್ತದೆ. ಅಲ್ಲಿ ಅದರ ಆವೇಗವು ಅದ್ಭುತವಾಗಿರವುದಲ್ಲದೆ ಅಂತ್ಯವೂ ಕೂಡ ಕಲ್ಪನೆಯನ್ನು ಮೀರಿರುತ್ತದೆ. ಅಂದಿನ ಆ ದಿನಗಳಲ್ಲಿ, ನಾವು ಹುಡುಗರು ಸಭೆ ಸೇರಿ ವೀರರಸ ಪ್ರಧಾನವಾಗಿದ್ದ ಪ್ರಸಂಗಗಳ ಕೇವಲ ಅಭಿನಯವನ್ನು ಮಾತ್ರ ಮಾಡು ತ್ತಿರುವುದನ್ನೇ ಸರಕಾರವು ಸಂಶಯದಿಂದ ನೋಡಿದ್ದರೆ ಮಾತ್ರ ಈ ನಾಟಕವು ಭೀಷಣ ಟ್ರ್ಯಾಜೆಡಿಯಲ್ಲಿ ಮುಕ್ತಾಯಗೊಳ್ಳಬಹುದಾಗಿತ್ತೆಂದು ನಾನು ಖಂಡಿತ ವಾಗಿ ಹೇಳಬಲ್ಲೆ. ಅಭಿನಯವೇನೊ ಪೂರ್ತಿಯಾಗಿ ನಡೆದುಹೋಯಿತು. ಫೋರ್ಟ್ ವಿಲಿಯಂ ಅವರ ಒಂದಾನೊಂದು ಅಭೀಷ್ಟವೂ ಕೂಡ ಅವರ ಹಿಡಿತದಿಂದ ಜಾರಿ ಹೋಗಿರಲಿಲ್ಲ. ಆದರೂ ಆ ದಿನಗಳ ಸ್ಮರಣೆ ಇಂದು ನನ್ನಲ್ಲಿ ನಗೆಯನ್ನುಂಟು ಮಾಡುತ್ತಿದೆ.

ಭಾರತೀಯರೆಲ್ಲರ ಮನ್ನಣೆಗೆ ಪಾತ್ರವಾಗಬಲ್ಲ ಭಾರತದ ಉಡುಪು ಆದಾವು ದಾದರೆ ಯೋಗ್ಯವೆಂಬುದನ್ನು ಕುರಿತು ಜ್ಯೋತಿದಾದಾ ಈ ಸಭೆಯಲ್ಲಿ ಚರ್ಚೆ ಪ್ರಾರಂಭಿಸಿದರು. ಅಲ್ಲದೆ ಅನೇಕ ಪ್ರಯೋಗಗಳನ್ನೂ ಕೂಡ ಮಾಡಿದರು. ಧೋತರ, ಕೆಲಸಮಾಡುವುದಕ್ಕೆ ಅನುಕೂಲವಾದ ಉಡಿಗೆಯಲ್ಲ; ಇನ್ನು ಪಾಯಿಜಾಮಾ ಸ್ವದೇಶದ ಉಡಿಗೆಯಾಗಿದೆ. ಈ ಪ್ರಸಂಗದಲ್ಲಿ ಜ್ಯೋತಿದಾದಾ ಇವೆರಡನ್ನೂ ಒಂದು

ಗೂಡಿಸಿ ಹೊಸದೊಂದು ಉಡಿಗೆಯನ್ನೇ ನಿರ್ಮಿಸಿದರು. ಅದನ್ನು ತೊಟ್ಟುಕೊಂಡಾಗ ಅದು ಧೋತರದಂತೆ ಕಾಣಿಸಿಕೊಂಡು ಪಾಯಿಜಾಮಾ ಪ್ರಯೋಜನವನ್ನು ಕೊಡುತ್ತಿತ್ತು. ಪಾಯಿಜಾಮಾಕ್ಕೆ ಒಂದು ತುಂಡು ಬಟ್ಟೆಯನ್ನು ಜೋಡಿಸಿ ಧೋತರ ಉಟ್ಟುಕೊಂಡಂತೆ ಕಾಣುವ ಸ್ವತಂತ್ರವಾದ ಬೇರೊಂದು ಉಡುಪನ್ನೇ ಅವರು ಕಂಡುಹಿಡಿದರು. ಸೋಲಾರ ಟೊಪ್ಪಿಗೆಯೊಂದಿಗೆ ಪಾಗಡಿಯನ್ನು ಜೋಡಿಸಿ ಹೊಸದೊಂದು ಶಿರಸ್ತ್ರಾಣವನ್ನು ನಿರ್ಮಿಸಿದರು. ಇದನ್ನು ಧರಿಸಲು ಯಾವ ಉತ್ಸಾಹೀ ತರುಣನೂ ಕೂಡ ಒಪ್ಪಿಕೊಂಡು ಮುಂದೆ ಬರಲು ಸಾಧ್ಯವಿರಲಿಲ್ಲ. ಅಲ್ಲದೆ ಇದು ತಲೆಯಮೇಲೆ ಧರಿಸಲು ಯೋಗ್ಯವಾದ ಒಂದು ವಸ್ತು ಎಂದು ಯಾರೂ ಗಣಿಸುವಂತೆ ಇರಲಿಲ್ಲ. ಈ ರೀತಿ ಎಲ್ಲ ಭಾರತೀಯರೂ ಸ್ವೀಕರಿಸಲು ಯೋಗ್ಯವೆಂದು ಕಂಡು ಹಿಡಿದ ಉಡುಪನ್ನೂ ಕೂಡ, ಉಳಿದವರಾರೂ ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡದೆ ಹಾಗೂ ತೊಟ್ಟುಕೊಳ್ಳದೆ ಇರುವಾಗ ಅಂತಹ ಹೊಸ ಉಡುಪನ್ನು ತೊಟ್ಟುಕೊಳ್ಳುವ ಎದೆಗಾರಿಕೆ ಸಾಮಾನ್ಯ ಜನರ ಸೊತ್ತಲ್ಲ. ಜ್ಯೋತಿದಾದಾ ಅಭಿಮಾನದಿಂದ ಈ ಉಡುಪನ್ನು ತೊಟ್ಟುಕೊಂಡು ಯಾವುದೇ ಬಗೆಯ ಸಂಕುಚಿತ ಭಾವ ತಾರದೆ, ಮುಖವನ್ನು ಬಾಡಿಸಿಕೊಳ್ಳದೆ ಮಧ್ಯಾಹ್ನ ಪ್ರಖರವಾದ ಬಿಸಿಲಿನಲ್ಲಿ ಗಾಡಿಯಲ್ಲಿ ಕುಳಿತು ಹೊರಗೆ ಹೋಗಿ ಬರುತ್ತಿದ್ದರು. ತೀರ ಆತ್ಮೀಯರಾದ ಬಂಧುಬಾಂಧವರಿಂದ ಮೊದಲುಮಾಡಿ ದ್ವಾರಪಾಲಕ ಹಾಗೂ ಪ್ರತ್ಯಕ್ಷ ವಾಹನ ಸಂಚಾಲಕ ಸಾರಥಿಯೂ ಕೂಡ ಈ ಉಡುಪನ್ನು ಕಂಡು ಚಕಿತರಾದರು. ಇದಾವುದನ್ನೂ ಜ್ಯೋತಿದಾದಾ ಅವರು ತಮ್ಮ ಮನಸ್ಸಿನಮೇಲೆ ತಕ್ಕೊಳ್ಳಲೇ ಇಲ್ಲ. ದೇಶಕ್ಕಾಗಿ ಎಷ್ಟೂ ಹಿಂಜರಿಯದೆ, ಕಾತರ ಭಾವವನ್ನೂ ಕೂಡ ಎಳ್ಳಷ್ಟೂ ತಾರದೆ ಪ್ರಾಣಕೊಡಲು ಮುಂದೆ ಬರುವ ಅನೇಕ ಯುವಕರು ದೊರೆಯುವುದು ಸಾಧ್ಯವಿದೆ; ಆದರೆ ದೇಶದ ಕಲ್ಯಾಣವನ್ನೇ ಉದ್ದೇಶವಾಗಿಟ್ಟುಕೊಂಡು ಅದಕ್ಕಾಗಿ ಯಾರೂ ಉಪಯೋಗಿಸುವ ಮೊದಲೇ ರಾಷ್ಟ್ರೀಯ ಉಡುಪನ್ನು ತೊಟ್ಟುಕೊಂಡು ಕಲಕತ್ತೆಯ ರಾಜಮಾರ್ಗಗಳಲ್ಲಿ ಸ್ವೇಚ್ಛೆಯಿಂದ ತಿರುಗುವ ಜನರು ಖಂಡಿತ ದುರ್ಲಭರಾಗಿದ್ದಾರೆ.

ಪ್ರತಿ ರವಿವಾರಕ್ಕೊಮ್ಮೆ ಜ್ಯೋತಿದಾದಾ ಅವರು ಸಶಸ್ತ್ರ ಖಾಸಗೀ ಸೈನಿಕ ದಳದವರನ್ನು ಕೂಡಿಕೊಂಡು ಬೇಟೆಗೆಂದು ಹೋಗುತ್ತಿದ್ದರು. ಜೊತೆಗೆ ನಿಮಂತ್ರಿತರಿಗಿಂತ ಹೆಚ್ಚಾಗಿ ತಾವಾಗಿ ಬೇರೆ ಜನರೂ ನಮ್ಮೊಡನೆ ಹೊರಡುತ್ತಿದ್ದರು. ಹಾಗೆ ನೋಡಿದರೆ ನಾವು ಕೂಡಿಕೊಂಡು ಹೋಗುವ ಜನರಲ್ಲಿ ನಮ್ಮ ಪರಿಚಿತರಿಗಿಂತ ಅಪರಿಚಿತರೇ ಹೆಚ್ಚಾಗಿ ಇರುತ್ತಿದ್ದರು. ಇವರಲ್ಲಿ ಕಮ್ಮಾರರು, ಬಡಿಗರು, ಇತ್ಯಾದಿ ಎಲ್ಲ ವರ್ಗದಜನರೂ ಬಂದು ಸೇರಿಕೊಳ್ಳುತ್ತಿದ್ದರು. ವಿಚಿತ್ರಪ್ರಕಾರದ ಈ ಬೇಟೆಯಲ್ಲಿ ರಕ್ತಪಾತಕ್ಕೆ ಅಷ್ಟು ಪ್ರಮುಖವಾದ ಸ್ಥಾನವಿರಲಿಲ್ಲ; ಅಥವಾ ನಮಗದು ಕಂಡು ಬರಲಿಲ್ಲ.ಅಂತಹ ಘಟನೆ ಜರುಗಿದ ನೆನಪೂ ಕೂಡ ಈಗ ಇಲ್ಲ. ತೀರ ಬೆಳಗಿನಲ್ಲಿಯೇ ನಾವು ಬೇಟೆಗೆಂದು ಹೊರಡುತ್ತಿದ್ದೆವು. ಬೌಠಾಕುರಾಣಿ ಅಂದರೆ ನಮ್ಮ ಅತ್ತಿಗೆಯವರು ರಾಶಿ ಪೂರಿಗಳನ್ನೂ ಪಲ್ಯವನ್ನೂ ಕಟ್ಟಿ ಕೊಡುತ್ತಿದ್ದರು. ಈ ರೀತಿ ನೋಡಿದರೆ ಬೇಟೆಯ

ಸಕಲ ಸಿದ್ಧತೆಯೂ ಪರಿಪೂರ್ಣವಾಗಿ ಇರುತ್ತಿತ್ತು. ಬೇಟೆಯಾಡಿದ ಪಶುಪಕ್ಷಿಗಳ ಅವಶ್ಯಕತೆಯಾಗಲೀ, ಅಭಾವವಾಗಲಿ ನಮಗೆಂದೂ ಅನುಭವಕ್ಕೆ ಬರಲೇ ಇಲ್ಲ. ಮನೆಯಿಂದ ಕಟ್ಟಿಕೊಂಡು ಹೋದ ಬೆಟ್ಟದಷ್ಟು ತಿಂಡಿಯನ್ನೇ ನಾವು ಹೊಟ್ಟೆತುಂಬ ತಿಂದು, ತಿರುಗಿ ಬರುತ್ತಿದ್ದವಲ್ಲದೆ ಒಂದೂ ದಿನ ಕೂಡ ಹಸಿದ ಹೊಟ್ಟೆಯಿಂದ ಬರುತ್ತಿರಲಿಲ್ಲ. ಬೇಟೆಗೆ ಹೋದಾಗ ಉಪವಾಸ ಬೀಳುವ ಪ್ರಸಂಗಗಳೇ ಇರಲಿಲ್ಲ.

ಮಾಣಿಕ ತಲಾಯ ಪ್ರದೇಶದಲ್ಲಿ ಹಾಳಾದ ತೋಟಗಳಿಗೆ ಯಾವ ಕೊರತೆಯೂ ಇಲ್ಲ. ನಾವು ಯಾವುದಾದರೊಂದು ತೋಟದೊಳಗೆ ಇದ್ದಕಿದ್ದಂತೆ—ಹೋಗುತ್ತಿದ್ದೆವು. ಅಲ್ಲಿರುವ ಮೆಟ್ಟಲು ಕಟ್ಟಿದ ಚಿಕ್ಕ ಹೊಂಡದ ಮೆಟ್ಟಿಲುಗಳ ಮೇಲೆ ಚಿಕ್ಕ ದೊಡ್ಡವರೆನ್ನುವ ಯಾವ ಭೇದಭಾವವಿಲ್ಲದೆ ಕುಳಿತುಕೊಂಡು ಪೂರಿ ಪಲ್ಯಗಳನ್ನು ಹೊಟ್ಟೆ ಬಿರಿಯುವಂತೆ ಸೇವಿಸುತಿದ್ದೆವು. ಕೇವಲ ಪಾತ್ರೆಗಳನ್ನು ನಾವು ಬಿಡುತ್ತಿದ್ದೆವಲ್ಲದೆ ಉಳಿದಾವುದನ್ನು ಬಿಡುತ್ತಿರಲಿಲ್ಲ.

ಈ ನಮ್ಮ ಅಹಿಂಸಾಮಯ ಬೇಟೆಗಾರರಲ್ಲಿ ಬ್ರಜಬಾಬು ಅವರು ಅತ್ಯಂತ ಉತ್ಸಾಹಿ ಪ್ರಮುಖ ಬೇಟೆಗಾರರು. ಅವರು ಮೆಟ್ರೊಪೊಲಿಟನ ಕಾಲೇಜಿನ ಸುಪರಿಂಟೆಂಡೆಂಟರಾಗಿದ್ದರಲ್ಲದೆ ನಮ್ಮ ಮನೆಯ ಶಿಕ್ಷಕರೂ ಕೆಲವು ಸಮಯ ಆಗಿದ್ದರು. ಒಂದು ದಿನ ಬೇಟೆ ಮುಗಿಸಿಕೊಂಡು ಮರಳಿ ಬರುವಾಗ ಬ್ರಜಬಾಬು ಅವರು ಒಂದು ತೋಟದೊಳಗೆ ಪ್ರವೇಶಿಸಿ "ಮಾವಾ ಅವರು ಈಗ ಯಾವ ತೋಟದೊಳಗೆ ಇರುವರು"? ಎಂದು ಮಾಲಿಯನ್ನು ಕರೆದು ಕೇಳಿದರು. ಯಾವುದನ್ನೂ ಅರಿಯದ ಆ ಮಾಲಿಯು ಗಡಿಬಿಡಿಯಲ್ಲಿ ಹೆದರುತ್ತ "ಬಾಬು ಅವರು ಬರುವ ಬಗ್ಗೆ ನನಗಾರೂ ಹೇಳಿ ಕಳಿಸಿಲ್ಲ; ಬಾಬು ಅವರು ಬಂದಿಲ್ಲ," ಎಂದು ಉತ್ತರಕೊಟ್ಟನು. ಅದಕ್ಕೆ ಬ್ರಜಬಾಬು "ಇರಲಿ ನಮಗೆ ಎಳೆನೀರನ್ನು ತಂದುಕೊಡು," ಎಂದು ಆಜ್ಞೆ ವಿಧಿಸಿದರು. ಅಂದು ನಮಗೆ ಪೂರಿಪಲ್ಯ ತಿಂದಾದ ಮೇಲೆ ನೀರು ಕುಡಿಯುವ ಅವಶ್ಯಕತೆಯೇ ಉಂಟಾಗಲಿಲ್ಲ. ನೀರೂ ಬೇಕಾಗಲಿಲ್ಲ.

ನಮ್ಮ ಶಿಕಾರಿ ದಳದಲ್ಲಿ ಮಧ್ಯಮ ತರಗತಿಯ ಜಮೀನುದಾರರೂ ಒಬ್ಬರಿದ್ದರು. ಅವರು ನಿಷ್ಠಾವಂತ ಹಿಂದೂಗಳಾಗಿದ್ದರು. ಅವರ ಹೆಸರು ರಾಜನಾರಾಯಣಬಾಬು. ಗಂಗಾನದಿಯ ಉಪಪ್ರವಾಹ ಒಂದರ ದಡದಲ್ಲಿ ಅವರದೊಂದು ತೋಟವಿತ್ತು. ನಾವೆಲ್ಲ ಸಭ್ಯ ಮಹಾಶಯರು ಒಮ್ಮೆ ಆ ತೋಟಕ್ಕೆ ಹೋಗಿ ಜಾತೀಯ ಭೇದಭಾವವನ್ನು ಗಣನೆಗೆ ತಾರದೆ ಉಪಹಾರವನ್ನು ಮಾಡಿ ಮುಗಿಸಿದೆವು. ಮಧ್ಯಾಹ್ನಕ್ಕೆ ಬಹು ದೊಡ್ಡ ಬಿರುಗಾಳಿ. ಆ ಬಿರುಗಾಳಿಯಲ್ಲಿ ನಾವು ಗಂಗಾನದಿಯ ಘಾಟಿನ ಮೇಲೆ ನಿಂತು ದೊಡ್ಡದನಿಯಲ್ಲಿ ಕೂಗುತ್ತ ಹಾಡು ಹೇಳತೊಡಗಿದೆವು. ರಾಜನಾರಾಯಣಬಾಬು ಅವರ ಕಂಠದಿಂದ ಸಂಗೀತದ ಏಳೂ ಸ್ವರಗಳು ಸರಿಯಾಗಿ ಬರುತ್ತಿದ್ದವೆಂದೇನೂ ಹೇಳುವಂತಿರಲಿಲ್ಲವಾದರೂ ಅವರೂ ಕೂಡ ದನಿ ಬಿಟ್ಟು ಮುಕ್ತ ಮನಸ್ಸಿನಿಂದ ಹಾಡಹತ್ತಿದರು.

ಮೂಲಸೂತ್ರಗಳಿಗಿಂತ ಅವುಗಳ ಮೇಲಿನ ಟೀಕೆ ಹೆಚ್ಚು ವಿಸ್ತಾರವಾಗುವಂತೆ ರಾಜನಾರಾಯಣಬಾಬು ಅವರ ಸಂಗೀತಕ್ಕಿಂತಲೂ ಹಾವಭಾವಗಳೇ ಹೆಚ್ಚಾ

ಗಿದ್ದವು. ಕ್ಷೀಣವಾದ ಅವರ ಚೀರು ದನಿಯು ಗಾಳಿಯಲ್ಲಿ ದೂರ ಹೋಗಲು ಶಕ್ತವಾಗಿರುವುದಕ್ಕಿಂತ ಹೆಚ್ಚು ಅಮಿತ ಉತ್ಸಾಹದಿಂದ ಬೀಸುವ ಕೈಗಳೇ ಹೆಚ್ಚು ದೂರ ಹೋಗುವವೇನೊ ಎಂದು ಅನಿಸುವಂತಿತ್ತು. ಜೊತೆಗೆ ಅದಕ್ಕೂ ವೇಗದಿಂದ ಅವರು ಕತ್ತನ್ನು ಅಲ್ಲಾಡಿಸುತ್ತಿರುವಾಗ ಅವರ ಉದ್ದನ್ನ ಬಿಳಿ ಗಡ್ಡಗಳು ಗಾಳಿಯ ವೇಗವನ್ನೂ ಮೀರಿದಂತೆ ತೋರುವ ವೇಗದಲ್ಲಿ ಹಾರಾಡುತ್ತಿದ್ದವು. ರಾತ್ರಿ ಬಹಳ ಆಗಿತ್ತು. ಆಗ ನಾವು ಗಾಡಿ ಮಾಡಿಕೊಂಡೇ ಮನೆಗೆ ತಿರುಗಿದೆವು. ಬಿರುಗಾಳಿ ನಿಂತಿತ್ತು. ಸುತ್ತಲಿನ ಹಳ್ಳಿಗಳಿಗೆ ಗುಡ್ಡ ಹತ್ತಿ ಕಾಡಿನಲ್ಲಿ ಹೋಗುವ ಜನರ ಸುಳಿವೂ ಇರಲಿಲ್ಲ. ಕೇವಲ ಎರಡೂ ಬದಿಗಳಲ್ಲಿ ನಿಬಿಡವಾದ ಅರಣ್ಯ. ಒಳಗೆ ಸಂಚರಿಸುವ ಮಿಂಚಿನ ಹುಳುಗಳು. ಒಂದೊಂದು ತಂಡದಲ್ಲಿ ಹೋಗುತ್ತಿದ್ದ ಈ ಮಿಂಚು ಹುಳುಗಳು ತಮ್ಮೊಂದಿಗೆ ಹಿಡಿ ಹಿಡಿ ಬೆಂಕಿಯನ್ನೇ ತೆಗೆದುಕೊಂಡು ಹೋಗುವವೇನೋ ಎಂಬಂತೆ ಭಾಸವಾಗುತ್ತಿತ್ತು.

ಸ್ವದೇಶದಲ್ಲಿ ಕಡ್ಡಿಪೆಟ್ಟಿಗೆ ಮೊದಲಾದ ಕಾರಖಾನೆಗಳನ್ನು ಸ್ಥಾಪಿಸಬೇಕೆಂಬುದು ನಮ್ಮ ಸಭೆಯ ಉದ್ದೇಶಗಳಲ್ಲಿ ಒಂದಾಗಿತ್ತು. ಇದಕ್ಕಾಗಿ ಸಭಿಕರೆಲ್ಲರೂ ತಮ್ಮ ಆದಾಯದ ಹತ್ತರಲ್ಲಿ ಒಂದು ಅಂಶವನ್ನು ಸಂಘಕ್ಕೆ ಕಾಣಿಕೆಯಾಗಿ ಕೊಡುತ್ತಿದ್ದರು. ದೀಪದ ಕಡ್ಡಿಗಳನ್ನು ತಯಾರಿಸಬೇಕಾದರೆ ಅದಕ್ಕೆ ಮೊದಲು ಬೇಕಾಗುವ ಕಡ್ಡಿಗಳನ್ನು ಸಂಗ್ರಹಿಸುವುದು ಅವಶ್ಯವಾದದ್ದು. ಅನೇಕ ಪ್ರಯೋಗಗಳ ನಂತರ ದೀಪದ ಕಡ್ಡಿಯ ಪೊಟ್ಟಣಗಳು ಸಿದ್ಧವಾದವು. ನಮ್ಮ ಪ್ರದೇಶದಲ್ಲಿ ದೊರೆಯುವ "ಸೇಂಗರಾ" ಎಂಬ ಜಾತಿಯ ಕಟ್ಟಿಗೆಯಲ್ಲಿ ತಾನಾಗಿಯೇ ಇರುವ ಬೆಂಕಿಯನ್ನು ಇದಕ್ಕೂ ಅಗ್ಗವಾಗಿ ದೊರಕಿಸುವುದು ಸಾಧ್ಯವಿದ್ದಿತಾದರೂ ಅದು ದೀಪದ ಕಡ್ಡಿಗಳ ಉತ್ಪಾದನೆಯ ಕೆಳಗೆ ಬರುತ್ತಿರಲಿಲ್ಲ. ನಾವು ತಯಾರಿಸಿದ ದೀಪದ ಕಡ್ಡಿಗಳ ಒಂದು ಪೆಟ್ಟಿಗೆಗೆ ತಗಲಿದ ವೆಚ್ಚದಿಂದ ಒಂದು ಚಿಕ್ಕ ಹಳ್ಳಿಗೆ ಒಂದು ವರ್ಷದ ವರೆಗೂ ಸಾಕಾಗುವಷ್ಟು ಉರವಲದ ಕಟ್ಟಿಗೆಗಳನ್ನು ಪೂರೈಸಿ ಕೊಡಲು ಸಾಧ್ಯವಿತ್ತು. ಹೀಗಿದ್ದರೂ ಭಾರತ ಮಾತೆಯ ಮಕ್ಕಳು ದೀಪದ ಕಡ್ಡಿಗಳನ್ನು ತಯಾರಿಸಿದರೆಂಬುದೇನೂ ಕಡಿಮೆ ಹೆಮ್ಮೆಯ ಮಾತಾಗಿರಲಿಲ್ಲ. ಆದರೂ ನಾವು ತಯಾರಿಸಿದ ಕಡ್ಡಿಗಳನ್ನು ಕೊರೆದು ಬೆಂಕಿ ಬಂದ ಕ್ಷಣದಲ್ಲಿಯೇ ಅದನ್ನು ಕಾಯ್ದಿರಿಸಿಕೊಳ್ಳುವ ಶಕ್ತಿಯುಳ್ಳ ಕಟ್ಟಿಗೆಯ ತುಂಡು ಹತ್ತಿರದಲ್ಲಿ ಇಲ್ಲದೇ ಹೋದರೆ ನಾವು ಪಟ್ಟ ಶ್ರಮ ಸಾರ್ಥಕವಾಗುವಂತೆ ಇರಲಿಲ್ಲ. ಈ ಮಾತು ನಮ್ಮ ಸ್ವದೇಶಾಭಿಮಾನದ ಜ್ಯೋತಿಗೂ ಅನ್ವಯಿಸುವಂತಿತ್ತು.

ಚಿಕ್ಕ ವಯಸ್ಸಿನ ವಿದ್ಯಾರ್ಥಿಯೊಬ್ಬ ಬಟ್ಟೆ ತಯಾರಿಸುವ ಒಂದು ಯಂತ್ರವನ್ನು ಸಿದ್ಧಗೊಳಿಸುವ ಪ್ರಯತ್ನದಲ್ಲಿರುವನೆಂಬ ಸುದ್ದಿಯನ್ನು ನಾವು ಕೇಳಿದೆವು. ಕೂಡಲೆ ಅವನ ಯಂತ್ರವನ್ನು ನೋಡಲು ಹೋದೆವು. ಅದೊಂದು ಉಪಯುಕ್ತವಾದ ವಸ್ತುವು ಇದ್ದಿತೊ ಇಲ್ಲವೊ ಎಂದು ಹೇಳಲು ನಮಗೆ ಬಾರದೆ ಹೋದರೂ ಅದು ಏನಿದೆ ಎಂಬುದನ್ನು ತಿಳಿದುಕೊಳ್ಳುವ ಶಕ್ತಿ ನಮ್ಮಲ್ಲಿ ಯಾರಲ್ಲಿಯೂ ಇರಲಿಲ್ಲ. ಆದರೂ ಅದರಲ್ಲಿ ವಿಶ್ವಾಸವಿಡಬೇಕೆಂಬ ಮಾತನ್ನು ಇನ್ನೊಬ್ಬರಿಂದ ಹೇಳಿಸಿಕೊಳ್ಳುವ ಆವಶ್ಯಕತೆ

ಕಂಡುಬರಲಿಲ್ಲ. ಯಂತ್ರ ತಯಾರಿಸುವ ಕೆಲಸದಲ್ಲಿ ಅದರ ತಯಾರಿಕರಿಗೆ ತುಸು ಸಾಲವಾಗಿತ್ತು. ಅದನ್ನು ನಾವು ಗೊತ್ತು ಹಚ್ಚಿ ಆ ಸಾಲವನ್ನು ತೀರಿಸಿದೆವು. ಕೊನೆಗೆ ಒಂದು ದಿನ ಬೃಜಬಾಬು ಅವರು "ಜೋಡಾಸಾಂಕ" ಅವರ ಮನೆಯಿಂದ ಒಂದು ಟಾವಲ್ಲಿನ ತುಂಡನ್ನು ತಲೆಗೆ ಕಟ್ಟಿಕೊಂಡು ನಮ್ಮ ಮನೆಗೆ ಬಂದು "ನಮ್ಮ ಯಂತ್ರದಲ್ಲಿ ಈ ಬಟ್ಟೆ ತಯಾರಾಗಿದೆ" ಎಂದು ಹೇಳುತ್ತ ಆನಂದಪರವಶರಾಗಿ ಕುಣಿದಾಡಹತ್ತಿದರು. ಆ ಹೊತ್ತಿಗೆ ಬೃಜಬಾಬು ಅವರ ತಲೆಗೂದಲು ನೆರೆತು ಬಿಳಿಯಾಗಿತ್ತು.

ಕೊನೆಗೆ ಒಬ್ಬಿಬ್ಬರು ಬುದ್ಧಿವಂತರು ಬಂದು ನಮ್ಮ ಸಂಘವನ್ನು ಸೇರಿಕೊಂಡರು. ನಮಗೆ ಜ್ಞಾನವೃಕ್ಷದ ಫಲಗಳ ಸೇವನೆಯ ಸದವಕಾಶವನ್ನು ಒದಗಿಸಿಕೊಟ್ಟರು. ನಂತರ ಕೆಲವು ದಿನಗಳು ಕಳೆದ ಮೇಲೆ ಸ್ವರ್ಗ ಸದೃಶ ಕಲ್ಪನಾ ಲೋಕದಂತಿದ್ದ ಸಂಘವು ಮುರಿದು ಹೋಯಿತು.

ರಾಜನಾರಾಯಣಬಾಬು ಅವರ ಪರಿಚಯು ನನಗೆ ಬಾಲ್ಯದಲ್ಲಿ ಇದ್ದಾಗ ಜೀವನದ ಸಮಸ್ಯೆಗಳನ್ನು ಕುರಿತು ಅವರಿಗೆ ಎಲ್ಲ ರೀತಿಯಿಂದ ತಿಳಿಸಿ ಹೇಳುವ ಶಕ್ತಿ ನನಗೆ ಇನ್ನೂ ಆಗ ಇರಲಿಲ್ಲ. ಅವರ ಜೀವನದಲ್ಲಿ ನಾನಾ ಬಗೆಯ ವಿರೋಧಾಭಾಸದ ಘಟನೆಗಳು ಘಟಿಸಿದ್ದವು. ಆಗಲೇ ಅವರ ಕೂದಲು, ಗಡ್ಡಸಹಿತ ಬಿಳಿಯಾಗಿದ್ದವು. ಆದರೆ ನಮ್ಮ ದಳದಲ್ಲಿ ವಯಸ್ಸಿನಲ್ಲಿ ತೀರ ಚಿಕ್ಕವನಾಗಿದ್ದ, ನನ್ನೊಂದಿಗೂ ಕೂಡ ಅವರ ಹೆಚ್ಚಾದ ವಯಸ್ಸು ಸಾಮರಸ್ಯವನ್ನು ಹೊಂದಿತ್ತು. ಹೊರನೋಟಕ್ಕೆ ಕಂಡು ಬರುತ್ತಿದ್ದ ಹೊಳೆಯುವ ಚುರುಕುತನವೇ ಅವರೊಳಗೆ ಸದಾ ಹೊಸತನವನ್ನು ನಿರ್ಮಿಸುವ ಶಕ್ತಿದಾಯಕ ಔಷಧಿಯಾಗಿತ್ತು. ಎಷ್ಟೋ ವಿರೋಧದ ಪ್ರಸಂಗಗಳು ಅವರ ಜೀವನದಲ್ಲಿ ಘಟಿಸಿದರೂ ಅವರಲ್ಲಿದ್ದ ಈ ಶಕ್ತಿ ಕಳೆಗುಂದಿರಲಿಲ್ಲ. ಅವರೊಬ್ಬ ತೀರ ಸಾಮಾನ್ಯರಂತೆ ಇರುತ್ತಿದ್ದರು. ಜೀವನದುದ್ದಕ್ಕೂ ಅವರ ಹಾಸ್ಯ ಹರಿಗಡಿಯದೆ ಅವ್ಯಾಹತವಾಗಿ ಹರಿಯುತ್ತಿತ್ತು. ಹೆಚ್ಚಾದ ವಯಸ್ಸಿನ ಗಾಂಭೀರ್ಯ, ಅಸ್ವಾಸ್ಥ್ಯ, ಸಂಸಾರದ ಕಷ್ಟಗಳು, ಕೊನೆಗೆ ಹೇಳಲು ಬಾರದ ಅನೇಕ ಇತರ ಕಾರಣಗಳು ಇವಾವಕ್ಕೂ ಅವರ ಪ್ರಸನ್ನತೆಯ ಪ್ರವಾಹವನ್ನು ತಡೆದು ನಿಲ್ಲಿಸುವುದು ಸಾಧ್ಯವಾಗಿರಲಿಲ್ಲ. ಅವರು ಒಂದು ದಿನ ತಮ್ಮನ್ನೂ ತಮ್ಮ ಸಂಸಾರವನ್ನೂ ಭಗವತ್ಪಾದಾರವಿಂದದಲ್ಲಿ ಸಮರ್ಪಿಸಿ ಸ್ವಸ್ಥಚಿತ್ತರಾಗಿದ್ದರು. ಮುಂದೆ ಮತ್ತೊಂದು ಶುಭದಿನದಲ್ಲಿ ದೇಶದ ಉನ್ನತಿಗಾಗಿ ತಮ್ಮ ಸೇವೆಯನ್ನೂ ಮಾತೃಭೂಮಿಯ ಅಡಿದಾವರಿಗಳಲ್ಲಿ ನೀಡಿದರು. ನಂತರ ಅವರು ಸಂತತವಾಗಿ ಮಾತೃಭೂಮಿಯ ಉದ್ಧಾರಕ್ಕಾಗಿ ಸಾಧ್ಯಾಸಾಧ್ಯವಾದ ಹಂಚಿಕೆಗಳನ್ನು ಮಾಡುತ್ತಿದ್ದರು. ಅವರು ಹಾಕಿದ ಹಂಚಿಕೆಗಳಿಗೆ ಕೊನೆಯೇ ಇರಲಿಲ್ಲ. ಅವರು ರಿಚರ್ಡ್‌ಸನ್ ಅವರ ಪ್ರಿಯ ಶಿಷ್ಯರು. ಬಾಲ್ಯದಿಂದ ಇಂಗ್ಲೀಷ ಭಾಷೆಯನ್ನೇ ಕಲಿತವರು. ಬಂಗಾಲಿ ಭಾಷೆಯನ್ನು ಕಲಿಯದಿದ್ದರೂ ಕೂಡ ಧೈರ್ಯವಾಗಿ ಅವರು ಬಂಗಾಲೀಸಾಹಿತ್ಯ ಕ್ಷೇತ್ರಕ್ಕೂ ಯಾವ ಸಂಕೋಚವೂ ಇಲ್ಲದೆ ಅತೀವ ಉತ್ಸಾಹದಿಂದ ಕಾಲಿರಿಸಿದರು. ಸಂಪೂರ್ಣ ಶ್ರದ್ಧೆಯಿಂದಲೇ ಅವರು ಬಂಗಾಲೀ ಸಾಹಿತ್ಯ ರಂಗದಲ್ಲಿ ಪ್ರವೇಶಿಸಿದರು. ಈ ದೃಷ್ಟಿಯಿಂದ ಅವರು

ನಮ್ಮ ದೇಶದ ಮಣ್ಣಿನಿಂದ ರೂಪಗೊಂಡ ಮಾನವ ಮೂರ್ತಿಯಾಗಿದ್ದರೂ ಅವರ ಅಂತಃಶಕ್ತಿಯು ಪರಿಪೂರ್ಣತೆಯನ್ನು ಪಡೆದಿತ್ತು. ದೇಶಕ್ಕಾಗಿ ತೋರುತ್ತಿದ್ದ ಅವರ ಉಜ್ವಲವಾದ ಅಭಿಮಾನಕ್ಕೆ ಈ ಅಂತಃಸತ್ವವು ಕಾರಣವಾಗಿತ್ತು. ದೇಶದ ಸಮಸ್ತ ಅಲ್ಪತನವನ್ನೂ, ದೈನ್ಯವನ್ನೂ, ಅಪಮಾನವನ್ನೂ ಅವರು ಇಲ್ಲದಂತೆ ಮಾಡಬೇಕೆಂದು ಬಯಸುತ್ತಿದ್ದರು. ಅವರು ತಮ್ಮ ಎರಡೂ ಕಣ್ಣುಗಳಿಂದ ಕಿಡಿಯನ್ನು ಕಾರುತ್ತಿದ್ದರು. ಅವರ ಹೃದಯವು ಉದ್ದೀಪ್ತವಾಗಿರುತ್ತಿತ್ತು. ಉತ್ಸಾಹದಿಂದ ಕೈ ಬೀಸುತ್ತ ನಮ್ಮೆಲ್ಲರೊಂದಿಗೆ ತಮ್ಮ ದನಿಯನ್ನೂ ಸೇರಿಸಿ, ಅದು ಸರಿಯಾಗಿ ಸೇರಿರಲಿ ಅಥವಾ ಬಿಡಲಿ ಈ ಹಾಡನ್ನು ಉಚ್ಚಕಂಠದಿಂದ ಹಾಡುತ್ತಿದ್ದರು.

ಸಾವಿರ ಸಾವಿರ ಮನಸುಗಳೆಲ್ಲ
ಒಂದೇ ಸೂತ್ರದಿ ಕೊಯ್ದಿಹವು
ಒಂದೇ ಕೆಲಸದಿ ಸಾವಿರ ಜೀವ
ಹೊಂದಿಕೊಂಡು ಅವು ಸಾಗಿಹವು.

ಈ ಭಗವದ್ಭಕ್ತರ ನಗುವಿನಿಂದ ಕೂಡಿದ್ದ ಉಜ್ವಲಜೀವನವೂ ಕೂಡ ನಮ್ಮ ದೇಶದ ಸ್ಮೃತಿ ಭಾಂಡಾರದಲ್ಲಿ ಚಿರಕಾಲ ಉಳಿಯುವಂತಹದೆಂದು ನಿಸ್ಸಂದೇಹವಾಗಿ ಹೇಳಬಹುದು.

50. ಅಪರಿಚಿತರ ಪರಿಚಯ

ಎಷ್ಟು ಅಪರಿಚಿತರ ಸ್ನೇಹ
ಎನಗೆ ನೀನು ತಂದುಕೊಟ್ಟೆ!
ಅದೆಷ್ಟು ಮನೆಗಳಲ್ಲಿ ನನಗೆ
ಸ್ಥಾನವನ್ನು ಮಾಡಿಕೊಟ್ಟೆ!

ದೂರವೆಲ್ಲ ಹತ್ತಿರಾಯ್ತು
ಎನ್ನ ಬಂಧು! ಪರಕೀಯರು
ಸ್ವಜನರೆಂಬ ಭಾವ ಬಂತು!
ನಿನ್ನ ಕೃಪೆಯ ಮಹಿಮೆಯಿಂದ!

ಹಳೆಯ ಮನೆಯ ಬಿಟ್ಟು ತೆರಳಿ
ಹೊರಡುವಾಗ ಭಯವು ಬಂತು
ಹೊಸತರಲ್ಲೆ ಹಳೆಯ ನೀನು
ಎಂಬುದನ್ನು ಮರೆತುಬಿಟ್ಟೆ!

ಜನನ ಮರಣದಲ್ಲಿ ಬಿಡದೆ
ವಿಶ್ವದಲ್ಲಿ ಎಲ್ಲ ಕಡೆಗೆ
ನೀನೆ ವ್ಯಾಪಿಸಿರುವೆ ದೇವ,
ಎಲ್ಲರನ್ನು ಗುರುತಿಸುತ್ತ!

ನೀನು ಬಲ್ಲೆ ಎಲ್ಲರನ್ನು
ನಿನಗಿಲ್ಲವೊ ಪರಜನ!
ಅವರ ಗುರುತು ತಂದುಕೊಟ್ಟೆ
ಚಿರಋಣಿ ನಾ ಅನುದಿನ!

51. ಪ್ರವಾಸಿ

ಎಲ್ಲ ಊರುಗಳಲ್ಲಿ
ಎನ್ನ ಮನೆಯೊಂದಿಹುದು ;
ಅದನು ಹುಡುಕುತ ನಾನು
ಹೊರಟಿರುವೆನು.
ಎಲ್ಲ ದೇಶಗಳಲ್ಲಿ
ಎನಗೊಂದು ದೇಶವಿದೆ ;
ಅದನು ಪಡೆಯಲು ನಾನು
ತಿರುಗುತಿಹೆನು.
ಕಂಡವರ ಬಾಗಿಲಿಗೆ
ಬಂದು ನಿಲ್ಲುವೆ ಅತಿಥಿ ;
ಹೋದಲ್ಲಿ ನನ್ನವರು
ಇರುತಿರುವರು.
ಅವರನ್ನು ಕಾಣುವೆನು.
ಮನೆಮನೆಗು ಹೋಗುವೆನು.
ಎಲ್ಲರೊಂದಿಗೆ ಸೇರಿ
ಸುಖದಿ ಬಾಳುವೆನು.

ಹೊಸ ಸುಗ್ಗಿಯಾದಲ್ಲಿ
ಹಿಗ್ಗಿನಲಿ ನೆಲಸುವೆನು.
ಪರಿಮಳವು ತುಂಬಿರುವ
ಗಗನದಲಿ ಚಲಿಸುವೆನು.
ಏಕಾಕಿಯಾಗಿರುವ
ಜನರ ಮಧ್ಯದಿ ಹೋಗಿ
ಅವರನ್ನು ಕೂಡುವೆನು
ಮುದದಿ ಆಡುವೆನು
ಈ ನಾಲ್ಕು ಗೋಡೆಗಳ
ಒಳಗಿರುವ ಬಂಧುಗಳ

ನನ್ನ ವರನೆಂದಿಗೂ ನಾ
ಮಾಡಿಕೊಳಲಿಲ್ಲ.
ಆತ್ಮೀಯರಿಲ್ಲದೆಯೆ
ಕೊರಗುತಿಹ ಎನ್ನೆದೆಯು
ದಿನರಾತ್ರಿ ಕಂಡಲ್ಲಿ
ಅಲೆ ಅಲೆಯುತಿಹುದು.

ಹಸಿರು ಹೊಸ ಹುಲ್ಲಿನಲಿ
ಪುಲಕಗೊಂಡಿದೆ ಮಣ್ಣು.
ಯಾರವರು ಎನ್ನನ್ನು
ಕೂಗಿ ಕರೆಯುವರು ?
ಅಲ್ಲಿ ಆ ಹುಲ್ಲಿನಲಿ,
ಮಣ್ಣಿನಲಿ, ನೀರಿನಲಿ
ಯುಗಯುಗಾಂತರದಿಂದ
ವಾಸವಾಗಿಹೆನು.
ಯಾರು ತೆರೆದರೊ ಏನೊ
ಮುಚ್ಚಿದಾ ಬಾಗಿಲನು
ಹುಚ್ಚೆದ್ದು ಕುಣಿಯುತಿದೆ
ಎನ್ನದೀ ಮನವು.
ಮೂಕ ಮಣ್ಣಿನ ಕರೆಯ
ಕೇಳಿ ಹೊರಟಿಹೆ ನಾನು
ನನ್ನೆದುರು ಅದು ಬಂದು
ಗೋಳಿಡುತಲಿಹುದು.

ಕಾಳರಾತ್ರಿಯು ಎಂತು
ನನ್ನನ್ನು ನೋಡೀತು !
ಚಿಕ್ಕೆಗಳು ಬಲ್ಲವೇ
ನನ್ನ ಹೆಸರನ್ನು !
ಲಕ್ಷಯೋಜನ ದೂರ
ಇರುವ ಈ ಚಿಕ್ಕೆಗಳ
ಕಿವಿಮಾತ ನಾನೆಂತು
ಕೇಳಲದು ಸಾಧ್ಯ !
ಯಾವಾಗಲೂ ಹಗಲು
ನೆನಪಿಡದ ಮಾತುಗಳ
ನಾನೆಂತು ಮನದಲ್ಲಿ

ತಂದುಕೊಳಬಹುದು.
ಮೊದಲಿನಿಂದಲು ಉಷೆಯು
ಬಂಧು ನಾನಾಗಿರುವೆ
ಅವಳೆನ್ನ ಪ್ರತಿನಿತ್ಯ
ನೋಡುತ್ತಲಿಹಳು.

ಈ ಏಳು ಮಾಳಿಗೆಯ
ವಿಶ್ವವೆನ್ನಯ ಮನೆಯು
ಜನುಮ ಜನುಮಾಂತರದ
ಎನ್ನದಿದು ಚಿರಗೃಹವು.
ಸುತ್ತು ನೆಲ, ಸುತ್ತು ಜಲ
ಬಂಧಿಸಿಹವೆನ್ನನ್ನು.
ಆದರೂ ಆಗಾಗ
ನಾನಿದನು ಮರೆಯುವೆನು
ದೂರದೇಶದ ಮನೆಯ
ಮನದಲ್ಲೆ ನೆನೆಯುವೆನು.
ನಾನಿಲ್ಲಿ ಬಂಧಿತನೆ!
ನನ್ನ ಮನೆಯಲಿ ನಾನು
ಪಯಣಿಗನ ವೇಷದಲಿ
ನಿತ್ಯ ವಾಸಿಸುತಿಹೆನು.

ಗೊತ್ತಿದ್ದ ಜನರಿರಲಿ
ಬೇರೆ ಯಾರೇ ಇರಲಿ
ನನ್ನವರೆ ಅವರೆಲ್ಲ
ಎಂದು ನಾ ಮನ್ನಿಸುವೆ
ಬಡವ ಬಲ್ಲಿದರಿರಲಿ
ಹೀನ ಪತಿತರೆ ಇರಲಿ
ಎಲ್ಲರಿಗು ಸ್ಥಾನವಿದೆ
ಈ ಎನ್ನ ಚಿತ್ತದಲ್ಲಿ.
ಮಣ್ಣು ನೀರುಗಳೆಲ್ಲ,
ಹುಲ್ಲು ಹೂವುಗಳೆಲ್ಲ
ಸುತ್ತುವವು ಜಗವನ್ನು
ಎನ್ನನೊಡಗೂಡಿ.
ಎಲ್ಲಿ ಹೋಗುವೆನಲ್ಲಿ
ಭೇದಭಾವವ ತರದೆ

ಬಂಧನವ ಕಿತ್ತೊಗೆದು
ಒಂದಾಗಿ ಬೆರೆಯುವೆನು.

ಈ ವಿಶಾಲ ವಿಶ್ವದ
ಕಣಕಣಗಳು ಎನ್ನನು
ಸುತ್ತುವರಿದು ಎಳೆವವು.
ಜಗವ ತಂದು ಬಾಗಿಲ
ಬಳಿ, ಸೆಳೆದು ಇಡುವವು.
ಎಲವೆ ಮಣ್ಣೆ, ಎನ್ನನು
ಏಕೆ ನೀನು ಕರೆಯುವೆ?
ಎಲವೆ ಗಾಳಿ, ಎನ್ನನು
ಏಕೆ ಬರಲು ಹೇಳುವೆ?
ಬೇರೆ ಭಾವವಿದ್ದರೆ
ಇಂಥ ಕರೆಯು ಬಾರದು.
ಆತ್ಮೀಯತೆ ಇದ್ದರೆ
ಒಂದೆ ಕಡೆಗೆ ನೆರೆವೆವು.

ಕಣಕಣದಲಿ ಪ್ರೇಮವಿದೆ!
ಎಲ್ಲೆಡೆ ಆನಂದವಿದೆ!
ಇದನು ತುಚ್ಛವೆಂದು
ತಿಳಿದು ತಿರುಗೆ ಅದುವೆ
ನಿಜದಿ ವ್ಯರ್ಥ ಭ್ರಮಣ.
ಜಗದಿ ಇರುವ ಅಣುಗಳೆಲ್ಲ
ನಮ್ಮೊಳಗೂ ಅಡಗಿ ಇಹವು.
ಮೌನದ ಚಿರಗಾಂಭೀರ್ಯ
ತಳೆದು ಚಲಿಸುತಿಹವು
ಈ ಸತ್ಯವ ಕಲಿಯದೆ ಬರಿ
ಪ್ರವಾಸಿ ತಿರುಗೆ ಆಜನ್ಮಕು
ಭಯವು ಅವಗೆ ತಪ್ಪದು.

ಗೌರವದಾ ಚರಣತಲದಿ
ಇರುವ ಧೂಳಿಸೊಡನೆ ನಾನು
ಧೂಳಿಯಾಗಿ ವಾಸಗೈವೆ.
ಅವನ ಪೂಜೆ ಹೂಗಳಲ್ಲಿ
ಹೂ ಪಕಳೆಯು ಆಗುವೆ

ಎಲ್ಲಿ ಹೋದರದನೆ ಬಯಸಿ
ತಿಲಮಾತ್ರಕು ಅದನು ಉಳಿದು
ನಾನಾವುದ ಸ್ಮರಿಸೆನು.
ಜೀವನದಲ್ಲಿ ಮರಣದಲ್ಲಿ
ಪ್ರವಾಸವೆಂಬುದಿಲ್ಲ ಎಲ್ಲ
ಎಲ್ಲಿ ಹೋದರಲ್ಲಿ ಅದುವೆ
ನಾನಾಗುತ ವಾಸಿಸುವೆನು—
ಗೌರವದಾ ಚರಣ ತಲದಿ.

ಧನ್ಯ ನಾನು ಚಿರಕಾಲವು!
ಧನ್ಯ ನಮ್ಮ ಪೃಥ್ವಿ!
ಧನ್ಯ ಮಣ್ಣು! ಧನ್ಯ ತಾರೆ!
ಧನ್ಯ ಹೊನ್ನಧಾರೆ!
ಎಲ್ಲಿ ಹೋದರು ನಾನು
ಅಲ್ಲಿ ಆತನ ದ್ವಾರ!
ಅವನ ಬಲವೇ ನನಗೆ
ಆಸರಾಗಿಹುದು.
ಈ ದಡದಿ, ಆ ದಡದಿ
ಎಲ್ಲ ದಡದಡಗಳಲಿ,
ಹಡಗು ನಿಂತಿವೆ ತಂಗಿ
ವಿಪುಲವಾಗಿವೆ ನಮ್ಮ
ಭವದ ಸಾಗರತರಣಿ!
ನಾನು ಏನಾಗಿಹೆನೊ
ಅದಕೆ ಧನ್ಯನು ನಾನು!
ಧನ್ಯವದರಂತೆಯೆ
ನನ್ನದಿದು ಧರಣಿ!

52. ನಿನ್ನ ಕರೆಯ ಕೇಳಿ . . .

ನಿನ್ನ ಕರೆಯ ಕೇಳಿ ಯಾರು ಬಾರದಿರಲು
ನೀನೊಬ್ಬನೆ ಹೊರಡು, ಒಬ್ಬನೆ ಹೊರಡು
ನಿನ್ನ ಕರೆಯ ಕೇಳಿ . . .

ನಿನ್ನ ಜೊತೆಗೆ ಯಾರು ಮಾತನಾಡದಿರಲು,
ನಿನಗೆ ಹೆದರಿಕೊಂಡು ಮುಖವ ತೋರದಿರಲು,
ಎಲವೊ ಮಂದಭಾಗ್ಯ, ನಿನ್ನ ಹೃದಯ ಬಿಚ್ಚಿ
ನಿನ್ನ ಮನದ ಕಥೆಯ ನೀನೆ ಬಾಯಿ ಬಿಟ್ಟು
ನೀನೊಬ್ಬನೆ ಹೇಳು, ಒಬ್ಬನೆ ಹೇಳು.
ನಿನ್ನ ಕರೆಯ ಕೇಳಿ . . .

ಗಹನ ಪಥದಿ ನೀನು ಮುಂದೆ ಸಾಗುವಾಗ,
ಮುಳ್ಳು ಚುಚ್ಚಿ ಚುಚ್ಚಿ ಕಾಲಿನಿಂದ ರಕ್ತ
ಸೋರುತಿರುವುದನ್ನು ಯಾರು ನೋಡದಂತೆ,
ತಿರುಗಿ ಹೋದರೇನು? ಎಲವೊ ಮಂದಭಾಗ್ಯ,
ನೀನೊಬ್ಬನೆ ಹೊರಡು, ಒಬ್ಬನೆ ಹೊರಡು.
ನಿನ್ನ ಕರೆಯ ಕೇಳಿ . . .

ಬೆಳಕು ಇಲ್ಲದಾಗಿ ಕತ್ತಲಾದರೇನು?
ಭೂತ ಗಾಳಿಬೀಸಿ, ಮನೆಯ ಕದವು ಮುಚ್ಚಿ
ಹೋದರೇನು ನಿನ್ನ ಪ್ರಾಣ ವಜ್ರದಿಂದ
ಎದೆಯ ಪಂಜು ಹಚ್ಚಿ ಮುಂದೆ ಮುಂದೆ ಸಾಗು.
ನೀನೊಬ್ಬನೆ ಸಾಗು ಒಬ್ಬನೆ ಸಾಗು!
ನಿನ್ನ ಕರೆಯ ಕೇಳಿ . . .

53. ಪುಕುರಪಾಡು* ಎಂಬ ಊರು

ಪುಕುರಪಾಡು ಎಂಬ ಊರು
ಇಲ್ಲಿ ಇಹುದು ನೋಡು ಅಮ್ಮ !
ಕಳ್ಳಿ ಬೇಲಿ ಅದರ ಸುತ್ತು
ಅಲ್ಲಿ ನಾವು ಇದ್ದು ಬಿಡುವ!
ವನವಾಸಕೆ ತಕ್ಕ ಸ್ಥಳವು
ಇದನು ಬಿಟ್ಟು ಬೇರೆ ಇಲ್ಲ.
ಅಲ್ಲಿ ಮರದ ನೆರಳಿನಲ್ಲಿ
ಚಿಕ್ಕದೊಂದು ಗುಡಿಸಲನ್ನು
ಕಟ್ಟಿಕೊಡುವೆ ನಾನು ನಿನಗೆ.
ನಾವಿಬ್ಬರೆ ಕೂಡಿಕೊಂಡು
ಒಣ ಎಲೆಗಳ ಹಾಸಿಕೊಂಡು
ಅಲ್ಲಿ ಒಳಗೆ ಇದ್ದುಬಿಡುವ!

ಹುಲಿ ಕರಡಿಗಳಲ್ಲಿ ಇಹವು
ನಿನ್ನ ಬಳಿಗೆ ಎಂದು ಬರವು.
ಹಗಲು ರಾತ್ರಿ ಸೊಂಟ ಬಿಗಿದು
ನಿಂತುಬಿಡುವೆ ಕಾಯ್ದುಕೊಂಡು.
ಗಿಡಗಂಟೆಯು ಮಧ್ಯದಲ್ಲಿ
ಅವಿತುಕೊಂಡು ರಾಕ್ಷಸರಿರೆ,
ನಮ್ಮ ಮೇಲೆ ಏರಿ ಬರೆ,
ಅವರ ನಾನು ನೋಡಿಬಿಡುವೆ,
ಬಿಲ್ಲುಬಾಣ ಹಿಡಿದು ನಿಂತು.

ಸೆರಗಿನಲ್ಲಿ ಹುರಿದ ಅಕ್ಕಿ
ತೆಗೆದುಕೊಂಡು ಬಾಗಿಲಲ್ಲಿ
ನೀನು ನಿಂತು ಕರೆಯಲಾಗಿ

---

* ಬಂಗಾಲದಲ್ಲಿಯ ಒಂದು ಹಳ್ಳಿಯ ಹೆಸರು. ಹೊಂಡದೂರು ಎಂದು ಕನ್ನಡದಲ್ಲಿ ಹೇಳಿದಂತೆ.

ಹಿಂಡು ಹಿಂಡು ಕಾಡ ಜಿಂಕೆ
ಬಳಿಗೆ ಬಂದು ನಿಲುವವು.
ಅಂಕ ಡೊಂಕ ಅವಕೆ ಕೋಡು
ಮೈಯಮೇಲೆ ಪಟ್ಟೆ ಪಟ್ಟೆ.
ಕಾಲ ಕೆಳಗೆ ಪ್ರೀತಿಯಿಂದ
ಮಲಗಿದವುಗಳನ್ನು ನಾನು
ಪ್ರೀತಿಮಾಡಿ ಬೆನ್ನ ತಟ್ಟಿ
ಬಳಿಗೆ ಕುಳಿತುಕೊಂಡು ಬಿಡುವೆ.
ನಮ್ಮ ಗುರುತು ಅವಕೆ ಇಹುದು
ನಮ್ಮ ನೋಡಿ ಹೆದರಿಕೊಳವು.

ಕಾಡಹಣ್ಣು ಗಿಡಗಿಡಗಳು
ಹೂತು ಮೇಲೆ ಮೋಡ ಕವಿಯೆ
ನವಿಲು ಅಲ್ಲೆ ಬಂದು ಕುಣಿದು
ನೃತ್ಯವನ್ನು ತೋರಿಸುವವು.
ಹಕ್ಕಿಪಕ್ಕಿ ನಮ್ಮ ಸುತ್ತು
ಕಲಕಲ ದನಿಗೈವವು.
ಅಳಿಲು ಬಂದು ನಮ್ಮ ಕೈಯೊ—
ಳಿರುವ ಕಾಳ ತಿಂದು ನಲಿವವು.

54. ಅನಧಿಕಾರ ಪ್ರವೇಶ

ಒಂದು ಬೆಳಗಿನಲ್ಲಿ ಒಬ್ಬ ಹುಡುಗನು ಇನ್ನೊಬ್ಬ ಹುಡುಗನೊಂದಿಗೆ ದಾರಿಯಲ್ಲಿ ನಿಂತು ಯಾವುದೊ ಒಂದು ಬಹು ದೊಡ್ಡ ಸಾಹಸದ ಕೃತಿಯನ್ನೆಸಗಲು ಪಂಥಹಾಕುತ್ತಿದ್ದನು. "ರಾಧಾನಾಥ ದೇವಾಲಯದ ಆವರಣದಲ್ಲಿರುವ ಮಾಧವೀ ಲತೆಯ ಹೂವನ್ನು ತರಲು ಸಾಧ್ಯವೇ ?" ಎಂಬುದೇ ಆ ಮಹಾಕಾರ್ಯವಾಗಿತ್ತು. ಒಬ್ಬ ಹುಡುಗನು "ನಾನು ತರಲು ಶಕ್ತನಿದ್ದೇನೆ" ಎಂದು ಹೇಳಿದರೆ ಇನ್ನೊಬ್ಬನು ನಿನ್ನಿಂದ ಇದು ಶಕ್ಯವೇ ಇಲ್ಲ? ಎಂದು ಆ ಹೇಳಿಕೆಯನ್ನು ಖಂಡಿಸಿದನು.

ಇದೇನೂ ಅಂತಹ ಮಹಾ ಕಠಿಣವಾದ ಕೆಲಸವಲ್ಲವೆಂದು ಕೇಳಿದವರೆಲ್ಲರೂ ಅಭಿಪ್ರಾಯ ಪಡುವಂತಿದ್ದರೂ ಇದರಲ್ಲಿ ಅಂತಹ ಕಠಿಣವೆನಿಸುವುದೇನಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಈ ವಿಷಯವನ್ನು ಇನ್ನಿಷ್ಟು ಬಿಡಿಸಿ ಹೇಳುವ ಅವಶ್ಯಕತೆ ಇದೆ ಎಂದು ಅನಿಸುತ್ತದೆ.

ದಿವಂಗತ ಮಾಧವಚಂದ್ರ ತರ್ಕವಾಚಸ್ಪತಿ—ಅವರ ವಿಧವಾ ಹೆಂಡತಿ ಜಯಕಾಲೀ ದೇವಿಯೇ ಈ ರಾಧಾನಾಥ ದೇವಾಲಯದ ಅಧಿಕೃತ ವಾರಸದಾರಳಾಗಿದ್ದಳು. ಜಯಕಾಲಿಯು ಸುದೃಢಳಾಗಿದ್ದು ಎತ್ತರವಾಗಿದ್ದಳು. ಅವಳ ಮೂಗು ಉದ್ದವಾಗಿದ್ದು ಮೊನೆಯಾಗಿತ್ತು. ಬುದ್ಧಿಯು ತೀಕ್ಷ್ಣವಾಗಿತ್ತು; ಪ್ರಖರವೂ ಆಗಿತ್ತು. ಅವಳ ಪತಿ ಜೀವಿಸಿರುವಾಗ ಅವರ ದೇವಸ್ಥಾನದ ಆಸ್ತಿಯೆಲ್ಲ ಕೈಬಿಡುವ ಪರಿಸ್ಥಿತಿಯಲ್ಲಿತ್ತು. ಆದರೆ ವಿಧವೆಯಾದರೂ ಇವಳು ಆ ಆಸ್ತಿಯನ್ನೆಲ್ಲ ಒಟ್ಟುಗೂಡಿಸಿದಳು. ಬರತಕ್ಕ ಹಣವನ್ನೆಲ್ಲ ವಸೂಲು ಮಾಡಿದಳು. ದೇವಸ್ಥಾನದ ಜೀರ್ಣೋದ್ಧಾರವನ್ನು ಮಾಡಿಸಿ ಎಲ್ಲವನ್ನೂ ಅಚ್ಚುಕಟ್ಟಾಗಿ ಇರಿಸಿದ್ದಳು. ಅವಳಿಗೆ ಲೆಕ್ಕದ ಮೇರೆಗೆ ಬರಬೇಕಾಗಿದ್ದ ಯಾವುದನ್ನೇ ಆಗಲಿ ಅವಳನ್ನು ಮೋಸಗೊಳಿಸಿ ಒಂದು ಕವಡೆಯನ್ನೂ ಕೂಡ ಕೊಡದಿರುವುದಕ್ಕೆ ಯಾರಿಂದಲೂ ಸಾಧ್ಯವಿರಲಿಲ್ಲ.

ಇವಳ ಸ್ತ್ರೀಸ್ವಭಾವದಲ್ಲಿ ಬಹುಭಾಗ ಪುರುಷಪ್ರಕೃತಿ ಕಂಡುಬರುತ್ತಿದ್ದ ಕಾರಣದಿಂದ ಇವಳಿಗೆ ಸರಿಹೋಗುವ ಜೊತೆಗಾರ್ತಿಯರಾರೂ ಇರಲೇ ಇಲ್ಲ. ಹೆಂಗಸರು ಇವಳನ್ನು ಕಂಡು ಹೆದರುತ್ತಿದ್ದರು. ಪರರ ನಿಂದೆ, ಚಾಡಿಹೇಳುವ ಚಟ, ಲಘುಮಾತು ಇವಾವುವೂ ಇವಳ ಹತ್ತಿರ ಸುಳಿಯುವುದೂ ಕೂಡ ಸಾಧ್ಯವಿರಲಿಲ್ಲ.

ಗಂಡಸರೂ ಕೂಡ ಇವಳನ್ನು ಕಂಡು ಹೆದರುತ್ತಿದ್ದರು. ಕಾರಣವಿಷ್ಟೆ! ಚಂಡಿಮಂಡಪದಲ್ಲಿ* ಸ್ಥೂಲಕಾಯದ ಹಳ್ಳಿಯ ಈ ಗಂಡಸರು, ಆಲಸ್ಯದಿಂದ ಹಗಲು ರಾತ್ರಿ

* ಬಂಗಾಲದ ದೇವಸ್ಥಾನದ ಒಂದು ಭಾಗದ ಹೆಸರು

ಗಳ ಪರಿವೆ ಇಲ್ಲದೆ ಬಿದ್ದುಕೊಂಡಿರುವುದನ್ನು ಇರಿಯುವ ತಿರಸ್ಕಾರದ ನೋಟದಿಂದ ನೋಡುವ ಇವಳ ನೋಟವು, ಅವರ ಆ ಸ್ಥೂಲ ದೇಹವನ್ನೂ ಭೇದಿಸಿ, ಅವರ ಮನವನ್ನು ಚುಚ್ಚಿ ಸಾಕಷ್ಟು ನೋವನ್ನುಂಟುಮಾಡುತ್ತಿತ್ತು.

ಅತಿ ಭಯಂಕರವಾಗಿ ತಿರಸ್ಕರಿಸುವ ಹಾಗೂ ಅಷ್ಟೇ ಭಯಂಕರವಾಗಿ ತನ್ನ ತಿರಸ್ಕಾರವನ್ನು ತೋರಿಸುವ ಅಸಾಧಾರಣವಾದ ಶಕ್ತಿಯು ಈ ಪ್ರೌಢ ಹೆಂಗಸಿನಲ್ಲಿತ್ತು. ಪಾಪ! ಯಾರನ್ನಾದರೂ ಅಪರಾಧಿಗಳೆಂದು ಒಮ್ಮೆ ಅವಳು ನಿರ್ಣಯಿಸಿದರೆ ಸಾಕು, ಅವರನ್ನು ಅವಳು ಮಾತನಾಡಿಸಿದರೂ ಸರಿ, ಆಡಿಸದೆ ಹೋದರೂ ಸರಿ, ಕೇವಲ ತನ್ನ ಇರುವಿಕೆಯಿಂದಲೇ ಅವರನ್ನು ಗಾಸಿಗೊಳಿಸುತ್ತಿದ್ದಳು.

ಹಳ್ಳಿಯಲ್ಲಿ ಏನೇ ನಡೆದರೂ ಅದರಲ್ಲಿ ಇವಳ ಅಂಗ ಇದ್ದದ್ದೇ. ದುಃಖದ ಪ್ರಸಂಗವಿರಲಿ, ಸುಖದ ಸಮಾರಂಭವಿರಲಿ, ಎಲ್ಲದರಲ್ಲಿ ಇವಳ ಹಸ್ತಕ್ಷೇಪವಿಲ್ಲದೆ ಇರುತ್ತಿರಲಿಲ್ಲ. ಎಲ್ಲ ಕಡೆಗೂ ಅವಳಿಗೆ ತನ್ನದೇ ಆದ ಅಧಿಕಾರದ ಉನ್ನತಸ್ಥಾನ ತಾನಾಗಿಯೇ ದೊರೆತಿತ್ತು. ಇದಕ್ಕಾಗಿ ಅವಳು ಯಾವ ವಿಶೇಷ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ. ಅತಿ ಸ್ವಾಭಾವಿಕವಾಗಿ ಇದು ಅವಳಿಗೆ ಸಾಧಿಸಿತ್ತು. ಅವಳಿರುತ್ತಿದ್ದ ಎಲ್ಲ ಸ್ಥಾನಗಳಲ್ಲಿ ಅವಳದೇ ಪ್ರಧಾನ ಪಾತ್ರ. ಈ ವಿಷಯವಾಗಿ ಅವಳಲ್ಲಿಯೇ ಆಗಲಿ ಅಥವಾ ಅಲ್ಲಿ ನೆರೆದವರಲ್ಲಿಯೇ ಆಗಲಿ ಯಾವುದೇ ಬಗೆಯ ಸಂದೇಹಕ್ಕೆ ಆಸ್ಪದವೇ ಇರುತ್ತಿರಲಿಲ್ಲ.

ರೋಗಿಗಳನ್ನು ಆರೈಕೆ ಮಾಡುವುದರಲ್ಲಿ ಇವಳದು ಸಿದ್ಧಹಸ್ತ. ಆದರೆ ರೋಗಿಗಳು ಮಾತ್ರ ಯಮಧರ್ಮರಾಯನಿಗೆ ಹೆದರುವಂತೆ ಅವಳನ್ನು ಕಂಡರೆ ಸಾಕು ಹೆದರುತ್ತಿದ್ದರು. ಔಷಧ ತೆಗೆದುಕೊಳ್ಳುವುದರಲ್ಲಿ, ಇಲ್ಲವೇ ಆಹಾರ ಸೇವಿಸುವುದರಲ್ಲಿ ತುಸುಹೆಚ್ಚು ಕಡಿಮೆಯಾಗಿ ಅಪಥ್ಯವಾದರೆ ಸಾಕು, ಸಿಟ್ಟಿನಿಂದ ಕಾದು ತಪ್ತಳಾಗುತ್ತಿದ್ದಳು. ಆಗ ರೋಗಿಗಳಿಗೆ ತಮ್ಮ ಜ್ವರದ ತಾಪಕ್ಕಿಂತ ಇವಳ ಸಿಟ್ಟಿನ ತಾಪವೇ ಹೆಚ್ಚು ಅಸಹ್ಯವಾಗುತ್ತಿತ್ತು.

ಹಳ್ಳಿಯ ಸಮಸ್ತಜನರ ತಲೆಯ ಮೇಲೆ ಸದಾ ತೂಗುತ್ತಿರುವ ವಿಧಾತನ ಕಠೋರ ನ್ಯಾಯದಂಡವೆಂಬಂತೆ ಈ ವಜ್ರಹೃದಯೀ ದೀರ್ಘದೇಹದ ವಿಧವೆಯು ಇದ್ದಳು. ಹಳ್ಳಿಯಲ್ಲಿ ಯಾರೂ ಅವಳಿಗೆ ಒಳಿತಾಗಬೇಕೆಂದಾಗಲಿ, ಕೆಡುಕಾಗಬೇಕೆಂದಾಗಲಿ ಚಿಂತಿಸುವ ಸಾಹಸ ಮಾಡುತ್ತಿರಲಿಲ್ಲ. ಎಲ್ಲರೊಂದಿಗೂ ಅವಳು ಸದಾ ಇರುತ್ತಿದ್ದಳಾದರೂ ಅವಳಷ್ಟು ಏಕಾಕಿನಿಯಾದವರು ಬೇರೆ ಯಾರೂ ಇರಲಿಲ್ಲ.

ವಿಧವೆಗೆ ಮಕ್ಕಳಾರೂ ಇರಲಿಲ್ಲ. ತಂದೆತಾಯಿಗಳಿಬ್ಬರನ್ನೂ ಕಳೆದುಕೊಂಡಿದ್ದ ಅವಳ ಅಣ್ಣನ ಮಕ್ಕಳಿಬ್ಬರು ಅವಳ ಮನೆಯಲ್ಲಿ ಬೆಳೆದು ದೊಡ್ಡವರಾಗುತ್ತಿದ್ದರು. ಪುರುಷರಿಲ್ಲದ ಮನೆಯಾದುದರಿಂದ ಮಕ್ಕಳಿಗೆ ಯಾವುದೇ ಪ್ರಕಾರದ ನಿರ್ಬಂಧವಿರಲಿಲ್ಲ. ಅಲ್ಲದೆ ಹೃದಯಶೂನ್ಯ ಸೋದರತ್ತೆಯ ಮಮತೆ ಇಲ್ಲದ ಜೀವನದಿಂದ ಆ ಮಕ್ಕಳಿಗಾಗುವ ನಷ್ಟದ ಕಲ್ಪನೆಮಾಡುವುದು ಯಾರಿಗೂ ಸಾಧ್ಯವಿರಲಿಲ್ಲ. ಅವರಲ್ಲಿ ಹಿರಿಯನಾದವನಿಗೆ ವಯಸ್ಸು ಹದಿನೆಂಟು ತುಂಬಿತ್ತು. ಆಗಾಗ ಅವನ ಮದುವೆಯ

ಮಾತು ಮನೆಯಲ್ಲಿ ಕೇಳಿಬರುತ್ತಿತ್ತು. ಅಲ್ಲದೆ ಮದುವೆ ಮಾಡಿಕೊಳ್ಳಬೇಕೆಂಬ ಮನಸ್ಸೂ ಅವನಿಗಿತ್ತು. ಆದರೆ ಈ ಆನಂದವನ್ನು ಮೆಲುಕಾಡಿಸುವ ಸದವಕಾಶವನ್ನು ಅವನ ಅತ್ತೆಯು ಅವನಿಗೆ ಒಂದು ದಿನವೂ ಕೂಡ ಕೊಡಲಿಲ್ಲ. ಅದರ ಬದಲು ಅವಳು "ಪುಲಿನಸು ಮೊದಲು ಗಳಿಸುವುದನ್ನು ಪ್ರಾರಂಭಿಸಲಿ; ಅನಂತರ ಸೊಸೆಯನ್ನು ಮನೆಗೆ ತರುವೆ" ಎಂದೇ ಗದರಿಸುತ್ತಿದ್ದಳು. ಅತ್ತೆಯ ಈ ಕಠೋರ ಉಕ್ತಿಯನ್ನು ಕೇಳಿದ ನೆರೆಹೊರೆಯವರ ಹೃದಯವೂ ಕೂಡ ಒಡೆದು ಹೋಗುತ್ತಿತ್ತು.

ದೇವಾಲಯವೇ ಜಯಕಾಲಿಯ ಎಲ್ಲಕ್ಕೂ ಹೆಚ್ಚಿನ ಪರಿಶ್ರಮದ ಫಲವಾಗಿ ದೊರೆತ ಸಂಪತ್ತು ಆಗಿತ್ತು. ದೇವರ ಪೂಜೆಪುನಸ್ಕಾರ, ಸ್ನಾನ-ವಸನ, ಆಹಾರ, ನೈವೇದ್ಯ, ಶಯನ ಇತ್ಯಾದಿ ನಿತ್ಯ ನಡೆಯಲೇಬೇಕಾದ ಅರ್ಚನೆಯಲ್ಲಿ ಯಾವ ಲೋಪದೋಷಗಳೂ ಜಯಕಾಲಿಗೆ ಸಹ್ಯವಾಗುತ್ತಿರಲಿಲ್ಲ. ಪೂಜೆಯನ್ನು ಮಾಡುವ ಬ್ರಾಹ್ಮಣ ಪೂಜಾರಿಯು ತಾನು ನಿತ್ಯ ಪೂಜೆಮಾಡುತ್ತಿದ್ದ ರಾಧಾಮಾಧವ ರಿಬ್ಬರಿಗಿಂತ ಮಾನವ ದೇವತೆಯಾದ ಜಯಕಾಲಿಯೊಬ್ಬಳಿಗೆ ಹೆಚ್ಚು ಹೆದರುತ್ತಿದ್ದನು. ದೇವರಿಗೆ ದೊರೆಯಬೇಕಾಗಿದ್ದ ನೈವೇದ್ಯ ವಸ್ತುಗಳು ಪೂರ್ತಿಯಾಗಿ ದೊರೆಯದ ಕಾಲವೂ ಹಿಂದೊಮ್ಮೆ ಇತ್ತು. ಆಗ ಪೂಜೆಮಾಡುತ್ತಿದ್ದ ಪೂಜಾರಿಯಿಂದ ಪೂಜೆ ತಕ್ಕೊಳ್ಳುತ್ತಿದ್ದ ಗುಪ್ತದೇವತೆ ಇನ್ನೊಬ್ಬಳು ಯಾರಿಗೂ ಅರಿಯದಂತಹ ರಹಸ್ಯ ಮಂದಿರದಲ್ಲಿದ್ದಳು. ಅವಳ ಹೆಸರು ನಿಸ್ತಾರಿಣಿ ಎಂದು. ತುಪ್ಪ, ಖವಾ, ಮೊಸರು, ಗೋದಿಹಿಟ್ಟು ಇತ್ಯಾದಿ ಪದಾರ್ಥಗಳು ದೇವರ ನೈವೇದ್ಯಕ್ಕೆಂದು ಬಂದವುಗಳೆಲ್ಲ ಸ್ವರ್ಗ, ನರಕ ಎರಡಕ್ಕೂ ಭಾಗವಾಗಿ ಹಂಚಿ ಹೋಗುತ್ತಿದ್ದವು. ಆದರೆ ಈಗ ಮಾತ್ರ ಜಯಕಾಲಿಯ ಆಡಳಿತದಲ್ಲಿ ನೈವೇದ್ಯದ ಸಾಮಗ್ರಿಗಳೆಲ್ಲ ಹದಿನಾರಣೆ ದೇವರಿಗೆ ಸಂದಾಯವಾಗುತ್ತಿದ್ದವು.

ವಿಧವೆಯ ಪ್ರಯತ್ನದಿಂದ ದೇವಾಲಯದ ಪ್ರಾಂಗಣವು ಅತೀವ ಪರಿಷ್ಕಾರ ವಾಗಿ ಇರುತ್ತಿತ್ತು. ಎಲ್ಲಿಯೂ ಒಂದು ಹುಲ್ಲುಕಡ್ಡಿ ಕೂಡ ಕಾಣಿಸಿಕೊಳ್ಳು ವಂತಿರಲಿಲ್ಲ. ಅಲ್ಲಿ ಒಂದು ಮಂಟಪವನ್ನು ಆಶ್ರಯಿಸಿ ಮಾಧವೀಲತೆ ವಿಶಾಲವಾಗಿ ಹಬ್ಬಿ ಎದ್ದು ನಿಂತಿತ್ತು. ಅದರದೊಂದು ಒಣ ಎಲೆ ಉದುರಿ ಕೆಳಗೆ ಬಿದ್ದರೆ ಸಾಕು, ಜಯಕಾಲಿಯು ಅದನ್ನೆತ್ತಿ ಹೊರಗೆ ಹಾಕುತ್ತಿದ್ದಳು. ದೇವಸ್ಥಾನದ ಸಂಪ್ರದಾಯದಲ್ಲಿ ಹಾಗೂ ಪವಿತ್ರ ಪರಂಪರೆಯಲ್ಲಿ ಎಳ್ಳಷ್ಟೂ ಆಘಾತವನ್ನು ವಿಧವೆ ಸಹಿಸುತ್ತಿರಲಿಲ್ಲ. ಮೊದಲು ಇದೇ ನೆವ ಮಾಡಿಕೊಂಡು ಕಣ್ಣುತಪ್ಪಿಸಿ ಅನೇಕ ಹುಡುಗರು ದೇವಾಲಯದ ಪ್ರಾಂಗಣದಲ್ಲಿ ಸೇರಿಕೊಂಡು ಗಲಾಟೆ ಹಾಕುತ್ತಿದ್ದರು. ಅಲ್ಲದೆ ಆಡಿನ ಮರಿಗಳೂ ಕೂಡ ಆಗಾಗ ಬಂದು ಮಾಧವೀಲತೆಯನ್ನು ತಿಂದುಹೋಗುತ್ತಿದ್ದವು.

ಆದರೆ ಈಗ ಇಂತಹದಾವುದಕ್ಕೂ ಆಸ್ಪದವೇ ಇರಲಿಲ್ಲ. ಪರ್ವಕಾಲ, ಹಬ್ಬ, ಹರಿದಿನಗಳನ್ನು ಬಿಟ್ಟರೆ ಉಳಿದ ದಿನಗಳಲ್ಲಿ ಹುಡುಗರಿಗಾರಿಗೂ ಪ್ರಾಂಗಣಕ್ಕೆ ಬರಲು ಪ್ರವೇಶವೇ ಇರಲಿಲ್ಲ. ಅಕಸ್ಮಾತ್ ಹಸಿದು ಅಲ್ಲಿಗೆ ಆಡಿನ ಮರಿಯೊಂದು ಬಂದರೆ ಕೂಡಲೇ ಅದು ತನ್ನ ತಾಯಿ ಆಡನ್ನು ಹುಡುಕಿಕೊಂಡು ಕೂಗುತ್ತ ಓಡಿ ಹೋಗ ಬೇಕಾಗಿತ್ತು.

ಶೀಲ, ನಡತೆ ಸರಿಯಿಲ್ಲದ ಅನಾಚಾರವ್ಯಕ್ತಿಯು ಪರಮ ಆತ್ಮೀಯ ಬಂಧು ವಾಗಿದ್ದರೂ ಕೂಡ ದೇವಾಲಯದ ಪ್ರಾಂಗಣದಲ್ಲಿ ಅವನಿಗೆ ಪ್ರವೇಶ ಮಾಡುವುದು ಸಾಧ್ಯವಿರಲಿಲ್ಲ. ಪರಧರ್ಮೀಯರಿಂದ ಸಿದ್ಧವಾದ ಆಹಾರವನ್ನು ಸೇವಿಸುವವನೂ, ಹಾಗೂ ನಾಯಿಯ ಮಾಂಸ ತಿನ್ನುವವನೂ, ಆದ ಜಯಕಾಲಿಯ ತಂಗಿಯ ಗಂಡನೊಮ್ಮೆ ಮನೆಯುವನಂತೆ ಆತ್ಮೀಯ ಬಂಧುವಾಗಿ ಜಯಕಾಲಿಯ ಸಂದರ್ಶನ ವನ್ನು ತೆಗೆದುಕೊಳ್ಳಬೇಕೆಂದು ದೇವಸ್ಥಾನದವರೆಗೂ ಬಂದು ಪ್ರಾಂಗಣದಲ್ಲಿ ಪ್ರವೇಶ ಮಾಡುವವನಿದ್ದನು. ಅಷ್ಟರಲ್ಲಿ ಜಯಕಾಲಿಯು ತನ್ನ ಅಣ್ಣನ ಮಕ್ಕಳ ಮೂಲಕ ಪ್ರಾಂಗಣದಲ್ಲಿ ಕಾಲಿಡಕೂಡದೆಂದು ಅವನಿಗೆ ಕೂಡಲೆ ಹೇಳಿಕಳಿಸಿದಳು. ಈ ದೇವಾಲಯದ ವಿಷಯವಾಗಿ ಇಷ್ಟೊಂದು ಅನಾವಶ್ಯಕವಾದ ನಿರ್ಬಂಧವನ್ನು ಹಾಕಿದ್ದಲ್ಲದೆ ಜಯಕಾಲಿಯು ಸದಾ ಸರ್ಪಕಾವಲನ್ನೇ ಮಾಡುತ್ತಿದ್ದುದರಿಂದ ಜನ ಸಾಮಾನ್ಯರಾರೂ ದೇವಾಲಯದ ಬಳಿ ಸಹಸಾ ಸುಳಿಯುತ್ತಿರಲಿಲ್ಲ. ಜನರ ಗಾಳಿಯೂ ಕೂಡ ದೇವಾಲಯಕ್ಕೆ ತಾಕುತ್ತಿರಲಿಲ್ಲ.

ಜಯಕಾಲಿಯು ಸ್ವಂತದ ವಿಷಯವಾಗಿ ಕೂಡ ತೀರ ಕಠಿಣಳಾಗಿದ್ದಳು. ಅತ್ಯಂತ ಸ್ವತಂತ್ರ ಮನೋವೃತ್ತಿಯುವಳೂ, ಸದಾ ತನ್ನನ್ನು ಉನ್ನತಸ್ಥಾನದಲ್ಲಿರಿಸಿ ಕೊಂಡು ಬಂದವಳೂ ಆದ ಅವಳು ಈ ಮಂದಿರದ ಸನ್ನಿಧಿಯಲ್ಲಿ ಮಾತ್ರ ಪರಿಪೂರ್ಣ ಭಾವದಿಂದ ತನ್ನ ಆತ್ಮಸಮರ್ಪಣೆಯನ್ನು ಮಾಡಿಕೊಂಡಿದ್ದಳು. ಈ ವಿಗ್ರಹಗಳ ಮುಂದೆ ಅವಳು ಏಕಾಂತವಾಗಿ ಮಾತೆ, ಸುತೆ, ದಾಸಿ, ಪತ್ನಿ ಇತ್ಯಾದಿ ಭಾವಗಳನ್ನು ಪ್ರಕಟಗೊಳಿಸಿದ್ದಳು. ಹಾಗೂ ಈ ವಿಗ್ರಹಗಳೊಂದಿಗೆ ಅವಳು ಮೃದುವಾಗಿ ಸೌಮ್ಯವಾಗಿ ಹಾಗೂ ಅಷ್ಟೇ ತರ್ಕಬದ್ಧವಾಗಿ ಸಂಪೂರ್ಣ ವಿನಮ್ರಭಾವಪರವಶ ಳಾಗಿ ವರ್ತಿಸುತ್ತಿದ್ದಳು. ತಾನು ಹೆಂಗಸು ಎಂಬ ಪೂರ್ಣ ತಿಳಿವಳಿಕೆ ಅವಳಿಗೆ ಈ ದೇವಾಲಯದ ಆವರಣದಲ್ಲಿ ಸದಾ ಇರುತ್ತಿತ್ತು. ಮಾಧವನ ವಿಗ್ರಹವೇ ತನ್ನ ಪತಿ ಯೆಂದು ಅವಳು ಭಾವಿಸಿದ್ದಳು. ಅಲ್ಲದೆ ಸರ್ವಭಾವಗಳಿಂದ ಅರ್ಚಿಸುತ್ತಿದ್ದ ಆ ವಿಗ್ರಹವೇ ಅವಳಿಗೆ ಸರ್ವಸ್ವವಾಗಿತ್ತು.

ಈ ಹಿನ್ನೆಲೆಯು ಮೊದಲೇ ಗೊತ್ತಿದ್ದಲ್ಲಿ ಪ್ರಾರಂಭಕ್ಕೆ ಹೇಳಿದಂತೆ ಈ ದೇವಸ್ಥಾನದ ಪ್ರಾಂಗಣದಲ್ಲಿದ್ದ ಮಾಧವೀಲತೆಯ ಹೂವನ್ನು ತರುವ ಪಂಥ ಕಟ್ಟು ವುದು ಆ ಹುಡುಗರಿಗೆ ಅದೆಂತಹ ಅಪ್ರತಿಮ ಸಾಹಸದ ಮಾತಾಗಿತ್ತು ಎಂಬುದನ್ನು ವಾಚಕರು ಊಹಿಸಿಕೊಳ್ಳಬಹುದು. ಈ ಪಂಥ ಕಟ್ಟಿದ ಆ ಹುಡುಗನು ಜಯಕಾಲಿಯ ಅಣ್ಣನ ಕೊನೆಯ ಮಗನಾಗಿದ್ದನು. ಅವನು ತನ್ನ ಸೋದರತ್ತೆಯ ಸ್ವಭಾವವನ್ನು ಚೆನ್ನಾಗಿ ಬಲ್ಲವನಾಗಿದ್ದನು. ಆದರೂ ಈ ಹುಡುಗನ ಸಾಹಸದ ಕಠೋರ ಪ್ರಕೃತಿಯು ಯಾವ ಶಾಸನಕ್ಕೂ ಅಧೀನವಾಗಿರಲಿಲ್ಲ. ಎಲ್ಲಿ ಸಾಹಸವೋ, ಎಲ್ಲಿ ಗಂಡಾಂತರವೊ ಅಲ್ಲಿ ಅವನ ಮನಸ್ಸು ಆಕರ್ಷಿತ ಹಾಗೂ ಎಲ್ಲಿ ಯಾವುದೇ ಬಗೆಯ ಕಟ್ಟಳೆ ಕಾನೂನಿನ ನಿರ್ಬಂಧವಿದೆಯೋ ಅಲ್ಲಿ ಆ ಕಾನೂನು ಭಂಗಮಾಡಬೇಕೆಂಬ ಹಟ ಹುಡುಗನಲ್ಲಿತ್ತು. ಇದೇ ರೀತಿಯಾಗಿ ಚಿಕ್ಕವಳಿರುವಾಗ ಜಯಕಾಲಿಯ ಸ್ವಭಾವವೂ ಇತ್ತೆಂದು ನೋಡಿದವರು ಹೇಳಿದ್ದನ್ನು ಕೇಳಿದ ಜನರೂ ಇದ್ದಾರೆ.

ಜಯಕಾಲಿಯು ಒಮ್ಮೆ ಮಾತೃಸ್ನೇಹ ಮಿಶ್ರಿತ ಭಕ್ತಿಭಾವದಿಂದ ದೇವರ ಕಡೆಗೆ ಮುಖಮಾಡಿ, ದೇವಸ್ಥಾನದ ಪ್ರಾಂಗಣದಲ್ಲಿ ಏಕಾಗ್ರಚಿತ್ತದಿಂದ ಜಪಸರವನ್ನು ಕೈಯಲ್ಲಿ ಹಿಡಿದುಕೊಂಡು ಜಪ ಮಾಡುತ್ತ ಕುಳಿತಿದ್ದಳು.

ಆಗ ಬಾಲಕನು ಏನೂ ಶಬ್ದಮಾಡದೆ ಮೆಲ್ಲನೆ ಹಿಂದಿನಿಂದ ಬಂದು ಮಾಧವೀ ಲತೆಯ ಬಳಿ ನಿಂತನು. ಕೆಳಗೆ ಅರಳಿದ್ದ ಹೂವುಗಳೆಲ್ಲ ನಾಳಿನ ಪೂಜೆಗೆ ಮೀಸಲು ಎಂದು ಭಾವಿಸಿದನು. ಆದ್ದರಿಂದ ಅವನು ಅತಿ ನಿಧಾನವಾಗಿ ಮಂಟಪವನ್ನು ಹತ್ತಿ ಮೇಲಕ್ಕೆ ಏರಿ ಹೋದನು. ತುಟ್ಟತುದಿಯ ಟೊಂಗೆಯಲ್ಲಿ ಅರೆ ಅರಳಿದ ಒಂದೆರಡು ಹೂವುಗಳನ್ನ ಕಂಡು ಅವುಗಳನ್ನು ಕಿತ್ತುಕೊಳ್ಳಲು ತನಗೆ ಸಾಧ್ಯವಿದ್ದಷ್ಟು ಉದ್ದವಾಗಿ ತನ್ನ ಮೈಯೊಂದಿಗೆ ಕೈಯನ್ನೂ ಚಾಚಿದನು. ಅವನ ಈ ಭಾರವನ್ನು ತಾಳಲಾರದೆ ಆ ಹಳೆಯ ಮಂಟಪವು ಚಟಚಟ ಶಬ್ದ ಮಾಡುತ್ತ ಮುರಿದು ಬಿತ್ತು. ಅದನ್ನು ಆಶ್ರಯಿಸಿದ್ದ ಲತೆಯೊಂದಿಗೆ ಹುಡುಗನೂ ಕೂಡ ನೆಲದಮೇಲೆ ಬಿದ್ದುಬಿಟ್ಟನು.

ಜಯಕಾಲಿ ಲಗುಬಗೆಯಿಂದ ಎದ್ದು ತನ್ನ ಅಣ್ಣನ ಮಗ ಮಾಡಿದ ದುರ್ಘಟನೆಯನ್ನು ನೋಡಿದಳು. ಅವನ ತೋಳನ್ನು ಬಲವಾಗಿ ಹಿಡಿದು ಅವನನ್ನು ಎಬ್ಬಿಸಿ ನಿಲ್ಲಿಸಿದಳು. ಅವನಿಗೆ ಸಾಕಷ್ಟು ಪೆಟ್ಟು ಬಿದ್ದಿತ್ತು. ಆದರೆ ಬಿದ್ದ ಆ ಪೆಟ್ಟಿಗೆ ಶಿಕ್ಷೆ ಎಂದು ಹೇಗೆ ಹೇಳಲು ಬಂದೀತು! ಏಕೆಂದರೆ ಅದು ಅವನಿಗೆ ತಿಳಿಯದೆ ದೊರೆತ ಶಿಕ್ಷೆಯಾಗಿತ್ತು. ಆದ್ದರಿಂದ ಜಯಕಾಲಿಯು ಅವನಿಗೆ ಚೆನ್ನಾಗಿ ತಿಳಿಯುವಂತೆ ಹೊಡೆತಗಳ ಮಳೆಯನ್ನೇ ಸುರಿಸಿದಳು.

ಹುಡುಗನು ಒಂದು ಹನಿ ಕಣ್ಣೀರನ್ನೂ ಕೂಡ ಸುರಿಸದೆ ಎಲ್ಲವನ್ನೂ ಸಹಿಸಿದನು. ನಂತರ ಅವನ ಸೋದರತ್ತೆಯು ಅವನನ್ನು ಮನೆಗೆ ಎಳೆದುಕೊಂಡು ಹೋಗಿ ಕಟ್ಟಿಹಾಕಿದಳು. ಅವನಿಗೆ ರಾತ್ರಿ ಊಟಕ್ಕೆ ಕೊಡಕೂಡದೆಂದು ಅಡಿಗೆಯವಳಿಗೆ ಆಜ್ಞೆ ವಿಧಿಸಿದಳು.

ಊಟ ಕೊಡಕೂಡದೆಂಬ ಆಜ್ಞೆಯನ್ನು ಕೇಳಿದ ದಾಸಿ ಮೋಕ್ಷದಾ ಹುಡುಗನನ್ನು ಕ್ಷಮಿಸಬೇಕೆಂದು ಅಂಗಲಾಚಿ, ಸೆರಗೊಡ್ಡಿ ಸನ್ನೆಯಿಂದಲೇ ಬೇಡಿಕೊಂಡಳು. ಆದರೆ ಜಯಕಾಲಿಯ ಹೃದಯವೇನೂ ಕರಗಲಿಲ್ಲ. ಕದ್ದು ಯಾರಿಗೂ ಗೊತ್ತಾಗದಂತೆ ಅವನಿಗೆ ಆಹಾರ ಕೊಡುವ ಸಾಹಸ ಆ ಮನೆಯಲ್ಲಿ ಯಾರಿಗೂ ಇರಲಿಲ್ಲ.

ಜಯಕಾಲಿಯು ಮಂಟಪವನ್ನು ಸರಿಮಾಡಲು ಜನರನ್ನು ಕರೆಯಲು ಕಳಸಿ ಮತ್ತೆ ಜಪಮಾಲೆಯನ್ನು ಹಿಡಿದು ಜಪಮಾಡುತ್ತ ದೇವಾಲಯದಲ್ಲಿ ಕುಳಿತಳು. ತುಸು ಸಮಯದ ನಂತರ ಮೋಕ್ಷದಾ ಹೆದರುತ್ತ ಹತ್ತಿರ ಬಂದು "ಅಮ್ಮಾ, ಕಾಕಾಬಾಬು ಹಸಿವೆಯಿಂದ ಅಳುತ್ತಿದ್ದಾರೆ; ತುಸು ಹಾಲು ಕೊಡಲೇ ?" ಎಂದು ಕೇಳಿದಳು.

ಅದಕ್ಕೆ ಜಯಕಾಲಿಯು ಎಷ್ಟೂ ಚಂಚಲಳಾಗದೆ ಬೇಡ ಎಂದೇ ಹೇಳಿದಳು. ಮೋಕ್ಷದಾ ತಿರುಗಿ ಹೋದಳು. ತುಸು ದೂರದಿಂದ ಕೇಳುತ್ತಿದ್ದ ನಲಿನನ ಅಳು ಬರಬರುತ್ತ ಕೋಪದ ರೂಪವನ್ನು ತಾಳಿತು. ಕೊನೆಗೆ ಆ ಸ್ವರವು ದಣಿದು ಶಾಂತವಾದರೂ ಜಪಮಾಡುತ್ತ ಕುಳಿತ ಸೋದರತ್ತೆಯ ಕಿವಿಯಲ್ಲಿ ನಿನದಿಸಹತ್ತಿತು.

ನಲಿನನ ಆರ್ತಸ್ವರವು ಪೂರ್ಣವಾಗಿ ಮೌನವನ್ನು ತಾಳುವ ಸಮಯಕ್ಕೆ ಸರಿಯಾಗಿ ಜೀವಭಯದಿಂದ ಆಕ್ರಂದನ ಮಾಡುವ ಇನ್ನೊಂದು ಜೀವದ ಸ್ವರವು ಕೇಳಹತ್ತಿತು. ಅಲ್ಲದೆ ಈ ಆಕ್ರಂದನದ ಬೆನ್ನು ಹತ್ತಿ ಜನರು ಕೇಕೆ ಹಾಕುತ್ತ ಬರುವ ಸ್ವರವೂ ಕೂಡ ಕೇಳಿಸಹತ್ತಿತು. ಹೀಗಾಗಿ ದೇವಾಲಯದ ಮುಂದೆ ದೊಡ್ಡ ಗದ್ದಲವೇ ಎದ್ದಿತು.

ಒಮ್ಮಿಂದೊಮ್ಮೆ ಪ್ರಾಂಗಣದಲ್ಲಿ ಯಾರೊ ನಡೆದು ಬಂದ ಹೆಜ್ಜೆಯ ಶಬ್ದವು ಕೇಳಿ ಬಂತು. ಆಗ ಜಯಕಾಲಿಯು ತಿರುಗಿ ನೋಡಿದಳು. ಭೂಮಿಯ ಮೇಲೆ ಬಿದ್ದಿದ್ದ ಮಾಧವೀಲತೆಯು ಅಲುಗಾಡಹತ್ತಿತು.

ಜಯಕಾಲಿಯು ಸಿಟ್ಟಿನಿಂದ "ಅನಿಲ" ಎಂದು ಕರೆದಳು.

ಯಾರೂ ಉತ್ತರವನ್ನು ಕೊಡಲಿಲ್ಲ. ಕಟ್ಟಿಹಾಕಿದ್ದ ನಲಿನನು ಅದು ಹೇಗೊ ಬಿಚ್ಚಿಕೊಂಡು, ತನ್ನನ್ನು ಸಿಟ್ಟಿಗೆಬ್ಬಿಸಬೇಕೆಂದು ಬಂದಿರಬಹುದೆಂದು ಜಯಕಾಲಿಯು ಭಾವಿಸಿದಳು.

ಆಗ ಆ ವಿಧವೆಯು ಅತ್ಯಂತ ಕಠೋರಭಾವವನ್ನು ತಾಳಿ ತುಟಿಯನ್ನು ಕಚ್ಚಿ ದೇವಸ್ಥಾನದಿಂದ ಕೆಳಗೆ ಇಳಿದು ಬಂದಳು.

ಲತಾಕುಂಜದ ಹತ್ತಿರಕ್ಕೆ ಹೋಗಿ "ನಲಿನ" ಎಂದು ಕರೆದಳು.

ಆಗ ಕೂಡ ಯಾವ ಉತ್ತರವೂ ಬರಲಿಲ್ಲ. ಲತೆಯ ಟೊಂಗೆಗಳನ್ನು ಎತ್ತಿ, ಸರಿಸಿ ಮತ್ತೆ ಹುಡುಕಿದಳು. ಅತ್ಯಂತ ಹೊಲಸಾಗಿದ್ದ ಹಂದಿಯೊಂದು ಪ್ರಾಣಭಯ ದಿಂದ ಓಡಿ ಬಂದು ಆ ಮಾಧವೀಲತೆಯ ದೊಡ್ಡ ಎಲೆಗಳ ಮರೆಯಲ್ಲಿ ಅಡಗಿಕೊಂಡು ಕುಳಿತಿತ್ತು.

ಪೂಜಾರಿ ಬ್ರಾಹ್ಮಣನು ಕೈಯಲ್ಲಿ ಬಡಿಗೆಯನ್ನು ಹಿಡಿದು ಅದನ್ನು ಓಡಿಸಲು ಧಾವಿಸಿ ಬಂದನು.

ಕೂಡಲೆ ಜಯಕಾಲಿಯು ಮುಂದೆ ಬಂದು ಅವನನ್ನು ತಡೆದಳು. ಮತ್ತು ಬೇಗ ಹೋಗಿ ದೇವಸ್ಥಾನದ ಹೊರ ಬಾಗಿಲುಗಳನ್ನು ಬಂದುಮಾಡಿ ಒಳಗಿನಿಂದ ಅಗಳಿ ಹಾಕಿದಳು.

ಅಷ್ಟರಲ್ಲಿಯೇ ಮದ್ಯಪಾನ ಮಾಡಿದ ಡೋಂರರ ಜನಸಮೂಹವು ದೇವಸ್ಥಾನದ ಬಾಗಿಲ ಮುಂದೆ ನಿಂತು ಬಲಿಕೊಡಬೇಕಾಗಿದ್ದ ತಮ್ಮ ಹಂದಿಯನ್ನು ಕೊಡಬೇಕೆಂದು ಕೇಕೆ ಹಾಕುತ್ತಿದ್ದರು.

ಜಯಕಾಲಿಯು ಅಗಳಿ ಹಾಕಿದ್ದ ಬಾಗಿಲ ಹಿಂದೆ ನಿಂತು "ನೀವೆಲ್ಲರೂ ತಿರುಗಿ ಹೋಗಿರಿ; ನಮ್ಮ ದೇವಸ್ಥಾನವನ್ನು ಅಪವಿತ್ರಗೊಳಿಸಬೇಡಿ" ಎಂದು ಹೇಳಿದಳು.

ಡೋಂರರ ದಳವು ತಿರುಗಿ ಹೋಯಿತು. ಜಯಕಾಲಿಯಂತಹಳು ಅಪವಿತ್ರ ಪ್ರಾಣಿಯೊಂದಕ್ಕೆ ತನ್ನ ಪವಿತ್ರ ದೇವಸ್ಥಾನದಲ್ಲಿ ಆಶ್ರಯ ಕೊಟ್ಟಿರಬಹುದೆಂದು ಆ ಜನರು ಪ್ರತ್ಯಕ್ಷ ನೋಡಿದ್ದರೂ ಕೂಡ ಅದರಲ್ಲಿ ಅವರಿಗೆ ವಿಶ್ವಾಸವಿಡಲಾಗಲಿಲ್ಲ.

55. ಜಗವು ಮುಕ್ತಕಂಠದಿಂದ

ಜಗವು ಮುಕ್ತಕಂಠದಿಂದ
ಆನಂದದ ಗಾನವನ್ನು
ಹಾಡಿ ಹಾಡಿ ನಲಿವುದು.
ಆದರೆ ಆ ಹಾಡಿನಲ್ಲಿ
ಆಳವೆಷ್ಟು ತೋರದು
ಅಂತೆ ನಾನು ನನ್ನ ಹೃದಯ
ವೀಣೆಯನ್ನು ನಿನ್ನ ಮುಂದೆ
ನುಡಿಸಿ ನುಡಿಸಿ ನಲಿವೆನು.

ಗಾಳಿ, ನೀರು, ಬಾನು, ಬೆಳಕು
ತಾನಾಗಿಯೆ ಹಾಡಬಹುದೆ!
ಹೃದಯ ಸಭೆಯು ಕೂಡಿದಲ್ಲಿ
ವಿವಿಧ ಸ್ವರವ ತೆಗೆವವು.
ಕಣ್ಗಳೆರಡು ಕೂಡಿದಾಗ
ಮನವು ಹಿಗ್ಗಿ ಕುಣಿವುದು.
ನೀನು ನಡೆದ ದಾರಿಯಲ್ಲಿ
ಮುದದಿ ಜನರು ನಡೆವರು
ನೀನು ನನ್ನ ಬಾಳಿನಲ್ಲಿ
ಸಹಜವಾಗಿ ಎಂದು ಇರುವೆ
ಎಂದು ನಿನ್ನ ನಾಮವನ್ನು
ನನ್ನ ಎಲ್ಲ ಕಾರ್ಯಗಳಲಿ
ನೆನೆದಿಸುತ್ತ ಸಾಗುವೆ.

56. ಪುರಾತನ ಭೃತ್ಯ

ಮುಖದ ಕಳೆಯು ಭೂತದಂತೆ
ಮಹಾಮೂರ್ಖ ಅತಿ ವಿಚಿತ್ರ!
ಏನಾದರು ಕಳೆದು ಹೋಗೆ
ಹೆಂಡತಿ ಹೇಳುವಳು ಒಳಗೆ
"ಕಳ್ಳಕೃಷ್ಣ" ಇರುವನಲ್ಲ!
ಅವನೆ ಮಗ; ಮಹಾ ಕಳ್ಳ!
ಕುಳಿತಾಗಲು, ನಿಂತಾಗಲು,
ಕೇಳಿಯು ಕೇಳಿಸದ ತೆರದಿ
"ಇದರಪ್ಪನ" ವೆಂದೆನ್ನುವ
ಕಿವಿ ಮಾತನೆ ಹೇಳುತಿರುವ.
ಎಷ್ಟು ಶಿಕ್ಷೆ ಕೊಟ್ಟರೇನು?
ಪ್ರತಿಕ್ರಿಯೆ ಅದಕೆ ಇಲ್ಲ.
ಮನಕೆ ಬಿಸಿಯು ತಾಗದಲ್ಲ.
"ಕಳ್ಳಕೃಷ್ಣ" ಕಿರಿಚಿಕೊಳುವ
ಪ್ರಾಣಪಣವ ತೊಟ್ಟು ನಿಲುವ
ಇದೆ ಅದಕೆ ಪ್ರಯೋಜನ
ಕಷ್ಟದಿಂದ ಕೇಳಿದಷ್ಟೆ!
ಮಾರುತ್ತರ ಅದಕೆ ಇಲ್ಲ
ನಾಡ ಸುತ್ತಿ ವ್ಯರ್ಥ ಹುಡುಕಿ
ಅಲೆದಾಡುವ ಸಾರ್ಥಕ
ಮೂರು ಪಾಲು ಕೊಟ್ಟರವಗೆ
ಒಂದೆ ಪಾಲು ಇಟ್ಟುಕೊಳುವ
ಉಳಿದುದೆಲ್ಲಿ ಮಾಯವಾಯ್ತೊ?
ಅದನು ತಿಳಿದ ಜನರೆ ಇಲ್ಲ.
ಒಂದು ಪಾಲು ಕೊಟ್ಟ ಕ್ಷಣಕೆ
ಮೂರು ಪಾಲು ಮಾಡಿ ತರುವ
ಸಿಕ್ಕ ಸ್ಥಳದಿ ಬಿದ್ದು ಕೊಂಡು

ಹಗಲು ರಾತ್ರಿ ನಿದ್ದೆಗೈವ
ನಾಲ್ಕು ಜನರ ಮಧ್ಯದಲ್ಲಿ
ಬೈದರು "ಹತಭಾಗಿ ಕತ್ತೆ"
ಬಾಗಿಲಲ್ಲಿ ನಿಂತು ನಗುವ
ಅದನು ನೋಡಿ ಪಿತ್ತ ನೆತ್ತಿ-
ಗೇರಿದರೂ ಮರು ಕ್ಷಣದಿ
ಮಾಯೆ ಮಮತೆ ಬರುವುದು
ಮನಸು ಎಷ್ಟು ಕಲ್ಲು ಮಾಡೆ
ಇವನ ಬಿಡಲು ಆಗದು
ಇವನೆ ನಮ್ಮ ಮಹಾಭಾರಿ
ಪುರಾತನದ ಭೃತ್ಯನು.

ಮನೆಯ ಒಡತಿ ರುಕ್ಷ್ಮಮೂರ್ತಿ
"ಇನ್ನು ಎನಗೆ ಸಾಧ್ಯವಿಲ್ಲ.
ನಿಮ್ಮ ಮನೆ ನಿಮಗೆ ಇರಲಿ
ಕಳ್ಳನನ್ನೆ ಇಟ್ಟುಕೊಳ್ಳಿ,
ಲಕ್ಷ್ಯವಿಲ್ಲ ಕಟ್ಟು ನಿಟ್ಟು
ಅವಗೆ ಬೇಡ ಊಟ ಉಡಿಗೆ
ಎಲ್ಲಿ ಹೋದರಲ್ಲಿ ಮತ್ತೆ
ನೀರಿನಂತೆ ಹಣವ ಸುರಿವ
ದಿನವಿಡಿ ಬರಿ ಪೇಟೆಯಲ್ಲಿ
ಸಾಕು ಅವನು. ಸಹಿಸಲಾರೆ
ಯತ್ನ ಮಾಡಿ ಹುಡುಕಿ ನೋಡೆ
ಕಳ್ಳ ಕೃಷ್ಣನನ್ನು ಬಿಟ್ಟು
ಬೇರೆ ಕೆಲಸದವರು ನಮಗೆ
ದೊರೆಯದೇನು ಬಂತು" ಎಂದು
ಹೇಳಿದುದನು ಕೇಳಿ ನಾನು
ಸಿಟ್ಟಿನಿಂದ ಮನೆಯ ಬಿಟ್ಟು
ಕಳ್ಳ ಕೃಷ್ಣನನ್ನು ಹುಡುಕಿ
ಅವನ ಜುಟ್ಟು ಹಿಡಿದು ತಂದು
ಇಂದು ಈಗ ಮನೆಯ ಬಿಟ್ಟು
ಹೋಗು ಎಂದು ಹೇಳಿಬಿಟ್ಟೆ
ಮೆಲ್ಲನವನು ಹೋದುದನ್ನು
ನೋಡಿ ನಾನು ಮಲಗಿಬಿಟ್ಟೆ.
ಮರುದಿನ ಎದ್ದೊಡನೆ ಕಂಡೆ

ಹುಕ್ಕ ಹಿಡಿದು ನಿಂತುದನ್ನು !
ಬುದ್ಧಿಯು ಅತಿ ವಿಕೃತ ರೂಪ
"ಕಳ್ಳ ಮಗನು" ಅಪರೂಪ !
ಸುಪ್ರಸನ್ನ; ಸ್ಥಿತಪ್ರಜ್ಞ !
ಇನಿತು ದುಃಖ ಇಲ್ಲವಿಲ್ಲ !
ಬಿಟ್ಟರು ಬಿಡದಿರುವ ಇವನೆ
ಪುರಾತನದ ನಮ್ಮ ಭೃತ್ಯ.

ಆರು ವರ್ಷ ಕೈಯ ಕೊಟ್ಟ
ಹಣವನು ತುಸು ಗಳಿಸಿ ಇಟ್ಟ
ತೀರ್ಥಯಾತ್ರೆಗೆಂದು ಹೊರಟ
ಮತ್ತೆ ಮರಳಿ ಬರುವೆನೆಂದ
ಮಡದಿ ಜೊತೆಗೆ ಇದ್ದರೊಳಿತು
ಎಂದು ನಾನು ಹೇಳಿ ಕೊಟ್ಟೆ
ಪತಿಯ ಪುಣ್ಯ ಸತಿಯ ಪುಣ್ಯ
ಕೂಡದಿರಲು ವೆಚ್ಚ ಹೆಚ್ಚು !
ಗಾದೆಯನ್ನು ಸುತ್ತಿಕೊಂಡ
ಪೆಟ್ಟಿಗೆಯನು ತುಂಬಿಕೊಂಡ
"ಇವರ ಕೂಡಿಕೊಂಡು ಬೇರೆ
ನಾಡಿನಲ್ಲಿ ಯಾತ್ರೆ ಮಾಡೆ
ಕಷ್ಟ ಹೆಚ್ಚು" ಎಂದು ಅವನ
ಮಡದಿ ಅತ್ತು ನುಡಿಯೆ ಅದಕೆ
"ನೀನು ಜೊತೆಗೆ ಇದ್ದ ಮೇಲೆ
ಭಯವೆ ಇಲ್ಲ" ಎಂದು ಅಂದೆ
ರೈಲಿನಲ್ಲಿ ಹೊರಟು ಹೋದ
ವರ್ಧಮಾನ*[1]ದಲ್ಲಿ ಇಳಿದ
ಗಾಡಿ ತಪ್ಪಿ ಹೋಯ್ತು ಮುಂದೆ
ಇವನು ಬಂದ ಮತ್ತೆ ಹಿಂದೆ
"ಕೃಷ್ಣಕಾಂತ" ಅಲೆ ಪ್ರಶಾಂತ
ಹಕ್ಕ ಹಿಡಿದು ನಗುತ ನಿಂತ
ತಪ್ಪು ಮಾಡಿದಷ್ಟು ಹಿಗ್ಗಿ-
ನಿಂದ ಇರುವ ಇವನ ನಾನು
ಸಹಿಸಲೆಂತು ? ಆದರಿವನೆ
ಪುರಾತನದ ನಮ್ಮ ಭೃತ್ಯ.

*1 ಒಂದು ರೈಲ್ವೆ ಜಂಕ್ಶನ್ನಿನ ಹೆಸರು.

ಯಾತ್ರೆಗೊಮ್ಮೆ ಹೊರಟೆ ನಾನು
ತೀರ್ಥಕ್ಷೇತ್ರ ನೋಡಲೆಂದು
ಅಲ್ಲಿ ಹೋಗೆ, ಎಡಕೆ, ಬಲಕೆ,
ಹಿಂದೆ, ಮುಂದೆ ನೆರೆದು ಪಂಡಾ*[2]
ನನ್ನ ಜೀವವನ್ನೆ ತೆಗೆದು
ಘಾಸಿಸಿದರು ಗೈದು 'ಥಂಡಾ'
ಯಾತ್ರೆಗೆಂದು ಅಲ್ಲಿ ಬಂದ
ಏಳು, ಎಂಟು ಜನರ ಕೂಡ
ಒಂದು ಮನೆಯೊಳಿಳಿದುಕೊಂಡೆ
ಸ್ವಸ್ಥವಾಗಿ ಇರುವೆನೆಂದೆ
"ಎಲ್ಲಿ ವ್ರಜ ಕನ್ನಿಕೆಯರು?
ಎಲ್ಲಿ ಇರುವ ವನಮಾಲಿಯು?
ಎಲ್ಲಿ ಚಿರವಸಂತವೆಲ್ಲಿ?
ಪ್ರಾಣ ಹೋಯ್ತು ಉರಿಬಿಸಿಲಲಿ".
ಜೊತೆಯ ಜನರು ಮನೆಯ ಬಿಟ್ಟು
ಎನ್ನನೊಬ್ಬನನ್ನೆ ಇಟ್ಟು
ಹೊರಟು ಹೋಗೆ ಸ್ವಪ್ನದಂತೆ
ಶೂನ್ಯವಾಗಿ ಉಳಿದುಬಿಟ್ಟೆ
ನಡುಕ ಬಂತು; ಜ್ವರವು ಬಂತು
ಮೈಯ ನೋವು ತಾಳದಾಯ್ತು
"ಕಳ್ಳ ಕೃಷ್ಣ"ನೆಲ್ಲಿ ಎಂದು
ಹಗಲು ರಾತ್ರಿ ಕರೆದುದಾಯ್ತು
ಅವನ ಮುಖವ ಕಾಂಬವರೆಗು
ಎನ್ನ ಜೀವ ನಿಲ್ಲದಾಯ್ತು
ಹಗಲು ರಾತ್ರಿ ಮನೆಯೊಳಿರುವ
ಪುರಾತನದ ಸಮ್ಮ ಭೃತ್ಯ

ಮುಖಕೆ ನೀರು ಉಗ್ಗಿಕೊಂಡೆ
ನಸುವೆ ಹಿಗ್ಗು ತಂದುಕೊಂಡೆ
ಕೈಯ ದಿಂಬು ಮಾಡಿಕೊಂಡು
ಬಿದ್ದರೇನು? ನಿದ್ದೆ ಬರದು
ಒಂದು ತುತ್ತು ಅನ್ನವಿಲ್ಲ
ದೇಹಕೇನು ಸ್ವಾಸ್ಥ್ಯವಿಲ್ಲ
ದೇವರನ್ನು ಮನದಿ ನೆನೆದೆ

*2 ಕ್ಷೇತ್ರದ ಸ್ಥಳಗಳಲ್ಲಿ ಯಾತ್ರಿಕರಿಂದ ಕರ್ಮ ಮಾಡಿಸುವ ಭಟ್ಟರು.

ಧೈರ್ಯವನ್ನು ತಂದುಕೊಂಡೆ
ಮನೆಯ ದೇವರನ್ನೆ ಕಂಡು
ಪುಣ್ಯಪಡೆವೆನೆಂದುಕೊಂಡೆ
ಜ್ವರವು ಕಾಯ್ದು, ಪ್ರಜ್ಞೆ ಹೋಗಿ
ಬಿದ್ದುಕೊಂಡೆ ನಾನು ರೋಗಿ
ದಿನಗಳೆಷ್ಟು ಕಳೆದವೆಂದು
ನನಗೆ ತಿಳಿಯಲಿಲ್ಲ ಅಂದು.
ಇಂತು ಯಾತ್ರೆ ಮುಗಿಸಿಕೊಂಡು
ಅಂತು ಮನೆಯನೊಮ್ಮೆ ಕಂಡೆ!
ಆದರಿಂದು "ಕಳ್ಳಕೃಷ್ಣ"
ಮನೆಯೊಳಿಲ್ಲ; ಜೊತೆಯೊಳಿಲ್ಲ
ಜನ್ಮಸಾಥಿ! ಇದುವೆ ಸತ್ಯ
ಪುರಾತನದ ನಮ್ಮ ಭೃತ್ಯ

57. ಇಂದು ನಾನು ಬೆಳಗಿನಲ್ಲಿ

ಇಂದು ನಾನು ಬೆಳಗಿನಲ್ಲಿ
ಎತ್ತು ಕಟ್ಟಿ ನಿಂತುಕೊಂಡ
ತಮಿಜ ಮಿತ್ರರ* ಗಾಡಿಯಲ್ಲಿ
ಕುಳಿತು ಹೊರಟೆನು ಶಹರಕೆ

ಎರಡು ಗಂಟೆಯವರೆಗೆ ಹೊಂದಿಸಿ
ಇರಿಸಿ ಇಟ್ಟಿಗೆ ಕಟ್ಟಿ ಕಟ್ಟಿ
ಅದರ ಮೇಲೆ ಬಿದ್ದುಕೊಂಡು
ನಗುತ ಕಾಲವ ಕಳೆದೆನು.

ಮೇಲೆ ಮಾಳಿಗೆ ಏರಿ ಹೋಗಿ
ಅಲ್ಲಿ ಹಾಡುತ, ಹಾಡ ಕೇಳುತ
ದೂರ ಹೋಗುವ ಗಾಡಿ, ಕುದುರೆ-
ಗಳನು ನೋಡುತ ನಲಿದೆನು.

ಪಾತ್ರೆ ಮಾಡುವ ಜನರು ತಮ್ಮಯ
ಪಾತ್ರೆ ಬಡಿಯುವ ಸ್ವರವ ಕೇಳಿದೆ.
ಹೊತ್ತು ಹಣ್ಣನು ಮಾರುವವರು
ಕೂಗಿ ಕರೆವುದ ಕೇಳಿದೆ.

ನಾಲ್ಕುವರೆ ಸರಿಯಾಗಿ ಗಂಟೆಯು
ಆದ ಕೂಡಲೇ ಮನೆಗಳಿಂದ
ಮಕ್ಕಳೆಲ್ಲರು ಹೊರಗೆ ಬಂದರು
ಹರ್ಷದಿಂದಲಿ ಕೂಗುತ.

---

* ಬಂಗಾಲಿ ಜನರ ಹೆಸರು.

ಬಂದು ಬಿಸಿಲಲಿ ಬಿದ್ದುಕೊಂಡರು.
ಹೇಳಿ ಕರೆಸಿದ ಹಾಗೆ ಕಾಗೆಯು
ಹಿಂಡು ಬಂದಿತು ಪೂರ್ವದಿಕ್ಕಿನ
ಕ್ಷಿತಿಜದಿಂದಲಿ ಹಾರುತ

ಸಂಜೆಯಾಗಲು ನಾವು ಬಿದಿರಿನ
ಮಿಟ್ಟಲಿಳಿದು ಮನೆಗೆ ಬಂದೆವು
ಮತ್ತೆ ಬರುವೆವು ಎಂದುಕೊಂಡೆವು
ಮನದಿ ಹಿಗ್ಗುತ ಕುಣಿವುತ

ಎಲ್ಲಿ ಎತ್ತಿನ ಬಂಡಿ ನಿಂತಿದೆ
ಅಲ್ಲಿ ಗಾಜಿನ ಕೆರೆಯ ಮೇಲೆ
ಪುಕುರಪಾಡು* ನಮ್ಮ ಊರು
ಅಲ್ಲೆ ಇರುವುದು ಬಲ್ಲಿರಾ.

* ಕೆರೆಯು ಮತ್ತು ಬಂಗಾಲಿ ಹಳ್ಳಿಯ ಹೆಸರುಗಳು.

58. ಇಚ್ಛಾಪೂರ್ಣ

ಸುಬಲಚಂದ್ರರ ಮಗನ ಹೆಸರು ಸುಶೀಲಚಂದ್ರ. ಆದರೆ ಎಲ್ಲ ಸಮಯದಲ್ಲೂ ಹೆಸರಿಗೆ ತಕ್ಕಂತೆ ಜನರು ಇರುವುದೇ ಇಲ್ಲ. ಅಂತೆಯೇ ಸುಬಲಚಂದ್ರ ತುಸು ದುರ್ಬಲನಾಗಿದ್ದ; ಹಾಗೂ ಸುಶೀಲಚಂದ್ರನೂ ಕೂಡ ಅಷ್ಟೇನೂ ಶಾಂತನಾಗಿ ಇರಲಿಲ್ಲ.

ಹುಡುಗನು ಮುಕ್ಕಾಲುವಾಸಿ ಹಳ್ಳಿಯ ಜನರನ್ನು ಹೆದರಿಸಿಕೊಂಡು ಅಲೆದಾಡುತ್ತಿದ್ದನು. ತಂದೆಯ ಕಾಲುಗಳೆರಡೂ ವಾತ ಹಿಡಿದು ಬಾತುಹೋಗಿದ್ದವು. ಆದರೆ ಹುಡುಗ ಮಾತ್ರ ಜಿಂಕೆಯಂತೆ ಜಿಗಿದಾಡುತ್ತಿದ್ದ.

ಇಂದು ಶನಿವಾರ. ಮಧ್ಯಾಹ್ನ ಎರಡು ಗಂಟೆಯ ಮೇಲೆ ಶಾಲೆಗೆ ರಜೆ. ಆದರೆ ಶಾಲೆಗೆ ಹೋಗುವ ಮನಸ್ಸೇ ಸುಶೀಲನಿಗೆ ಏನು ಮಾಡಿದರೂ ಆಗಲೇ ಇಲ್ಲ. ಇದಕ್ಕೆ ರಾಶಿ ಕಾರಣಗಳಿದ್ದವು. ಒಂದು, ಇಂದು ಶಾಲೆಯಲ್ಲಿ ಭೂಗೋಲ ಪರೀಕ್ಷೆ ಇತ್ತು.

ಶಾಲೆಯ ಸಮಯವಾದರೂ ಸುಶೀಲ ಹಾಸಿಗೆ ಬಿಟ್ಟು ಎದ್ದಿರಲೇ ಇಲ್ಲ. ಸುಬಲ ಹೋಗಿ "ಏನು ? ಇನ್ನೂ ಹಾಸಿಗೆಯ ಮೇಲೆ ಬಿದ್ದು ಕೊಂಡಿರುವೆಯಲ್ಲ? ಶಾಲೆಗೆ ಹೋಗುವುದಿಲ್ಲವೇ ಇಂದು ?" ಎಂದು ಕೇಳಿದನು.

ಅದಕ್ಕೆ ಸುಶೀಲನು "ನನ್ನ ಹೊಟ್ಟೆ ನೋಯುತ್ತಿದೆ; ಇಂದು ನನಗೆ ಶಾಲೆಗೆ ಹೋಗುವುದು ಆಗುವುದೇ ಇಲ್ಲ" ಎಂದು ಉತ್ತರ ಕೊಟ್ಟನು.

ಮಗನು ಹೇಳಿದ್ದು ಸುಳ್ಳು ಎಂದು ತಂದೆ ಪೂರ್ಣ ಅರಿತಿದ್ದನು. "ಇವನಿಗೆ ಚೆನ್ನಾಗಿ ಪಾಠ ಕಲಿಸಿಕೊಡುತ್ತೇನೆ" ಎಂದು ಮನದಲ್ಲಿ ಮಾಡಿಕೊಂಡು "ಹಾಗಾದರೆ ನಿನಗೆ ಬೇರೆ ಎಲ್ಲಿಯೂ ಹೋಗುವ ಕೆಲಸವಿಲ್ಲ. ಜೋಸ್ ಅವರ ಮನೆಯಲ್ಲಿ ಇಂದು ರಾತ್ರಿ ಪಟಾಕಿ ಹಾರಿಸುವ ಉತ್ಸವವಿದೆ. ಅದನ್ನು ನೋಡಲು ನಾನು ಹರಿಯೊಬ್ಬನನ್ನೇ ಕಳಿಸಿಕೊಡುತ್ತೇನೆ. ನಿನಗಾಗಿ ಎಂದು ನಾನು ಪೆಪ್ಪರಮೆಂಟು ಕೊಂಡು ತಂದು ಇರಿಸಿದ್ದೆನು. ಅವುಗಳನ್ನೂ ಕೂಡ ನೀನು ಇಂದು ತಿನ್ನುವ ಹಾಗಿಲ್ಲ. ನೀನಿಲ್ಲಿಯೇ ಸುಮ್ಮನೆ ಬಿದ್ದುಕೊಂಡಿರು. ನಾನು ಹೋಗಿ ಔಷಧ ತೆಗೆದುಕೊಂಡು ಬರುವೆ" ಎಂದು ಹೇಳಿದನು.

ಇಷ್ಟು ಹೇಳಿ ಅವನ ಕೋಣೆಯ ಬಾಗಿಲಿಗೆ ಕೊಂಡಿ ಹಾಕಿ ತೀರ ಕಹಿಯಾದ ಕಷಾಯವನ್ನು ಸಿದ್ಧಮಾಡಿಕೊಂಡು ತರಲು ಸುಬಲಚಂದ್ರನು ಹೋದನು.

ಸುಶೀಲನು ಸಂಕಟಪಡುತ್ತ ಹಾಸಿಗೆಯಲ್ಲಿಯೇ ಬಿದ್ದುಕೊಂಡಿದ್ದನು. ಪೆಪ್ಪರಮೆಂಟು ತಿನ್ನಲು ಅವನು ಹೇಗೆ ಪ್ರೀತಿಸುತ್ತಿದ್ದನೋ ಹಾಗೆಯೆ ಕಷಾಯ ಕುಡಿಯಲು ದ್ವೇಷಿಸುತ್ತಿದ್ದನು. ಅಲ್ಲದೆ ಬೋಸರ ಮನೆಗೆ ಹೋಗಬೇಕೆಂದು ಅವನ ಮನಸ್ಸು ಹಿಂದಿನ ದಿನದ ರಾತ್ರೆಯಿಂದಲೂ ಚಡಪಡಿಸುತ್ತಿತ್ತು. ಈಗ ಬೋಸರ ಮನೆಗೆ ಹೋಗುವುದೂ ಕೂಡ ಅಸಾಧ್ಯವಾಯಿತು.

ಸುಬಲಚಂದ್ರನು ಒಂದು ಬಟ್ಟಲ ತುಂಬ ಕಹಿಯಾದ ಔಷಧವನ್ನು ತುಂಬಿ ಕೊಂಡು ಕೋಣೆಯೊಳಗೆ ಪ್ರವೇಶಿಸುತ್ತಲೇ ಸುಶೀಲನು ಹಾಸಿಗೆ ಬಿಟ್ಟು ಲಗುಬಗೆ ಯಿಂದ ಎದ್ದು "ನನ್ನ ಹೊಟ್ಟೆನೋವು ಈಗ ಪೂರ್ಣ ಗುಣವಾಗಿದೆ; ನಾನೀಗ ಶಾಲೆಗೆ ಹೋಗುತ್ತೇನೆ" ಎಂದು ಹೇಳಿದನು.

ಅದಕ್ಕೆ ಅವನ ತಂದೆಯು "ಬೇಡ, ಬೇಡ, ಆ ಕೆಲಸ ಮಾಡಬೇಡ. ಕಷಾಯ ವನ್ನು ಕುಡಿದು ಸುಮ್ಮನೆ ಇಲ್ಲಿಯೇ ಬಿದ್ದುಕೊಂಡಿರು" ಎಂದು ಹೇಳಿ ಒತ್ತಾಯ ದಿಂದ ಕಷಾಯವನ್ನು ಕುಡಿಸಿ, ಕೋಣೆಯ ಬಾಗಿಲಿಗೆ ಬೀಗವನ್ನು ಹಾಕಿ ಹೊರಗೆ ಹೋಗಿಬಿಟ್ಟನು.

ಸುಶೀಲನು ಹಾಸಿಗೆಯ ಮೇಲೆ ಅಳುತ್ತ ಬಿದ್ದುಕೊಂಡೇ ಆ ದಿನವನ್ನೆಲ್ಲ ಕಳೆದನು. ಅವನು ತನ್ನ ಮನದಲ್ಲಿ "ನಾಳೆಯೇ ನಾನೂ ಅಪ್ಪನಷ್ಟು ದೊಡ್ಡವನಾದರೆ ನನಗೂ ನನ್ನ ಇಚ್ಛೆಯಂತೆ ಇರಲು ಬರುತ್ತದೆ" ಎಂದು ಭಾವಿಸಿಕೊಂಡನು. "ನನ್ನ ನ್ಯಾರೂ ಆಗ ಬಂಧನದಲ್ಲಿ ಇರಿಸಲಾರರು" ಎಂದು ಅಂದುಕೊಂಡನು.

ಅವನ ತಂದೆ ಸುಬಲಬಾಬು ಹೊರಗೆ ಒಬ್ಬನೇ ಕುಳಿತು "ನನ್ನ ತಾಯಿ ತಂದೆ ನನ್ನನ್ನು ಬಹಳ ಪ್ರೀತಿ ಮಾಡಿದರೆಂದೇ ನನ್ನಿಂದ ಹೆಚ್ಚು ಕಲಿಯಲಾಗಲಿಲ್ಲ. ಮತ್ತೆ ನನಗೆ ನನ್ನ ಬಾಲ್ಯದ ದಿನಗಳು ಒಂದು ಪಕ್ಷ ಮರಳಿ ಬಂದರೆ ನಾನು ಒಂದು ಕ್ಷಣ ಸಹ ಸಮಯ ನಷ್ಟಗೊಳಿಸದೆ ದಿನವಿಡಿ ಅಭ್ಯಾಸವನ್ನೇ ಮಾಡುತ್ತೇನೆ" ಎಂದು ಹಿಂದಿನ ದಿನಗಳನ್ನು ಮೆಲಕಾಡಿಸುತ್ತಿದ್ದನು.

ಆ ಸಮಯಕ್ಕೆ ಸರಿಯಾಗಿ ಇಚ್ಛಾ ದೇವತೆಯು ಆ ಮನೆಯ ಮುಂದಿನಿಂದ ಹೋಗುತ್ತಿದ್ದಳು. ಅವಳು ತಂದೆ ಮಕ್ಕಳಿಬ್ಬರ ಇಚ್ಛೆಗಳೆರಡನ್ನೂ ತಿಳಿದುಕೊಂಡು "ನಾಳೆಯಿಂದ ಕೆಲದಿನಗಳ ಮಟ್ಟಿಗೆ ಇವರು ಇಚ್ಛಿಸಿದಂತೆ ಆಗಲಿ" ಎಂದು ಅನು ಗ್ರಹಿಸಿದಳು.

ಎಂತಹ ಪವಾಡ! ಬೆಳಗಾಗುತ್ತಲೆ ಸುಬಲಬಾಬು ತನ್ನನ್ನೇ ತಾನು ನೋಡಿ ಕೊಂಡು ಆಶ್ಚರ್ಯಚಕಿತನಾದನು. ನಿನ್ನೆ ರಾತ್ರಿ ಸರಿಯಾಗಿ ನಾಲ್ಕು ಹೆಜ್ಜೆ ಅಡ್ಡಾಡಲು ಕೂಡ ಬರುತ್ತಿರಲಿಲ್ಲ. ಆದರೆ ಇಂದು ಬೆಳಿಗ್ಗೆ ತಾನೊಬ್ಬ ಚಿಕ್ಕ ಬಾಲಕನಾಗಿದ್ದು ತನ್ನ ಕಾಲುಗಳೆರಡೂ ಸರಿಯಾಗಿವೆ. ತೀರ ನಸುಕಿನಲ್ಲಿಯೇ ಅವನಿಗೆ ಎಚ್ಚರ ವಾಯಿತು. ಹಾಸಿಗೆಯಿಂದ ಪುಟಿದೆದ್ದು ತನ್ನನ್ನೇ ತಾನು ಮತ್ತೆ ನೋಡಿಕೊಂಡನು. ಬಾಲ್ಯ ಮರಳಿ ದೊರೆತಿದೆ. ತನ್ನ ಬಯಕೆ ಈಡೇರಿದೆ. ಹೋಗಿದ್ದ ಹಲ್ಲುಗಳೆಲ್ಲ ಬಾಯ್ತುಂಬ ಮತ್ತೆ ಬಂದಿವೆ. ಇಡೀ ದೇಹವೇ ಚಿಕ್ಕದಾಗಿದೆ. ಮುಖದ ತುಂಬ ಇದ್ದ ಗಡ್ಡ-ಮೀಸೆಗಳು ಒಮ್ಮಿಂದೊಮ್ಮೆ ಇಲ್ಲದಾಗಿವೆ. ಅದರ ಗುರುತು ಕೂಡ

ಮುಖದ ಮೇಲೆ ಏನೂ ಉಳಿದಿಲ್ಲ. ರಾತ್ರಿ ತೊಟ್ಟುಕೊಂಡಿದ್ದ ಬಟ್ಟೆಗಳೆಲ್ಲ ಬೆಳಗಾಗುತ್ತಲೆ ಬಲು ದೊಡ್ಡವಾಗಿವೆ. ಮೈಗೆ ಹತ್ತಿಕೊಂಡಿದ್ದ ಬಟ್ಟೆಗಳೆಲ್ಲ ಈಗ ವಿಪರೀತ ಸಡಿಲಾಗಿವೆ. ಎದ್ದುನಿಂತರೆ ತೊಟ್ಟಿದ್ದ ಅಂಗಿಯ ತೋಳುಗಳು ನೆಲಕ್ಕೆ ತಾಗುತ್ತವೆ. ಉಟ್ಟಿದ್ದ ಧೋತರ ವಿಪರೀತ ದೊಡ್ಡದಾಗಿ ಹೋಗಿತ್ತು. ಅದನ್ನು ಮತ್ತೆ ಉಟ್ಟುಕೊಳ್ಳುವುದೇ ಅಸಾಧ್ಯವಾಗಿತ್ತು. ಅದನ್ನಲ್ಲಿಯೇ ಬಿಟ್ಟು ಹೋಗುವುದೇ ಸುಲಭವೆಂದು ತೋರಿತು.

ಇತ್ತ ನಮ್ಮ ಸುಶೀಲಚಂದ್ರನ ಸ್ಥಿತಿಯೂ ಕೂಡ ವಿಪರೀತವಾಗಿತ್ತು. ದಿನನಿತ್ಯ ಬೆಳಗ್ಗೆ ಎದ್ದು ತುಂಟತನ ಮಾಡಲು ಪ್ರಾರಂಭಿಸುತ್ತಿದ್ದ ಅವನು ಇಂದು ಅದನ್ನು ಬಿಟ್ಟುಕೊಟ್ಟು ಸ್ವಸ್ಥ ಮಲಗಿಬಿಟ್ಟಿದ್ದನು. ಸುಬಲಚಂದ್ರನ ಗಲಾಟೆಯಿಂದ ಅವನಿಗೆ ಎಚ್ಚರವಾಗಿತ್ತು. ಆಗ ನೋಡುತ್ತಾನೆ, ರಾತ್ರಿ ತಾನು ತೊಟ್ಟಿದ್ದ ಬಟ್ಟೆಗಳೆಲ್ಲ ಮೈಗೆ ಗಟ್ಟಿಯಾಗಿ ಅಂಟಿಕೊಂಡಿದ್ದವು. ತೆಗೆಯಲು ಕೂಡ ಬರುವಂತಿರಲಿಲ್ಲ. ಹರಿದೇ ತೆಗೆಯಬೇಕು. ದೇಹವಿಡಿ ಒಮ್ಮಿಂದೊಮ್ಮೆ ಬೆಳೆದು ದೊಡ್ಡದಾಗಿದೆ. ಮುಖದ ತುಂಬ ಅರ್ಧ ಬಿಳಿ, ಅರ್ಧ ಕರಿ ಕೂದಲುಳ್ಳ ಗಡ್ಡ ಬೆಳೆದು ನೋಡಲು ಕೂಡ ಬರದಂತಾಗಿದೆ. ತಲೆ ತುಂಬ ಇದ್ದ ಕೂದಲುಗಳೆಲ್ಲ ಉದುರಿಹೋಗಿವೆ. ಕೈಯಾಡಿಸಿ ನೋಡಿಕೊಂಡರೆ ಬೋಳು ತಲೆ. ಕನ್ನಡಿಯಲ್ಲಿ ನೋಡಿದಾಗ ಬೋಳು ತಲೆ ಮಿರಿ ಮಿರಿ ಮಿಂಚುತ್ತಿತ್ತು.

ಇಂದು ಬೆಳಿಗ್ಗೆ ಸುಶೀಲಚಂದ್ರನಿಗೆ ಹಾಸಿಗೆ ಬಿಟ್ಟು ಏಳಲು ಮನಸ್ಸೇ ಆಗಲಿಲ್ಲ. ಮಲಗಿದಲ್ಲಿಯೇ ಅತ್ತಿತ್ತ ಹೊರಳಾಡಿದ, ಬೊಬ್ಬೆ ಹೊಡೆದ; ಆದರೆ ಯಾರೂ ಇತ್ತ ಅವನ ಕಡೆಗೆ ಲಕ್ಷ್ಯವನ್ನೇ ಕೊಡಲಿಲ್ಲ. ಕೊನೆಗೆ ತಂದೆ ಸುಬಲಚಂದ್ರನ ಹುಡುಗಾಟದಿಂದ ಬೇಸರಗೊಂಡು ವ್ಯಗ್ರಚಿತ್ತನಾಗಿ ಹಾಗೇ ಬಿದ್ದುಕೊಂಡ.

ಇಬ್ಬರ ಇಚ್ಛಾಪೂರ್ತಿ ಏನೋ ಆಗಿತ್ತಾದರೂ ಅವರಲ್ಲಿ ದೊಡ್ಡದೊಂದು ಗೊಂದಲವೇ ನಡೆದಿತ್ತು. ಈ ಮೊದಲೇ ಹೇಳಿದ ಮೇರೆಗೆ ತಂದೆ ಸುಬಲಚಂದ್ರನಂತೆ ತಾನು ದೊಡ್ಡವನಾದಲ್ಲಿ ಹಾಗೂ ಸ್ವತಂತ್ರನಾದಲ್ಲಿ ತನಗೆ ಗಿಡ ಹತ್ತಬೇಕೆಂದೆನಿಸಿದರೆ, ನೀರಲ್ಲಿ ಹಾರಿಕೊಳ್ಳಬೇಕೆಂದೆನಿಸಿದರೆ, ಮಾವಿನಮಿಡಿ ತಿನ್ನಬೇಕೆಂದೆನಿಸಿದರೆ, ಪಕ್ಷಿಗಳ ಗೂಡನ್ನು ಕಿತ್ತು ಅದರ ಮರಿಗಳನ್ನು ಕೆಳಗೆ ಬೀಳಿಸಬೇಕೆಂದೆಸಿಸಿದರೆ, ಬೇಕಾದಾಗ ಮನೆಗೆ ಬರಬೇಕೆಂದಿನಿಸಿದರೆ, ಬೇಕಾದ್ದನ್ನು ತಿನ್ನಬೇಕೆಂದೆನಿಸಿದರೆ ಯಾರೂ ತನ್ನನ್ನು ತಡೆದು ನಿಲ್ಲಿಸರು ಎಂದು ಮಗ ಸುಶೀಲಚಂದ್ರನು ಭಾವಿಸಿದ್ದನು. ಆದರೆ ಆಶ್ಚರ್ಯದ ಮಾತೆಂದರೆ, ಅಂದು ಬೆಳಗ್ಗೆ ಎದ್ದಮೇಲೆ ಅವನಿಗೆ ಗಿಡ ಹತ್ತಬೇಕೆಂಬ ಇಚ್ಛೆಯೇ ಉಂಟಾಗಲಿಲ್ಲ. ಪಾನಾ ಎಂಬ ಹೆಸರಿನ ಕೆರೆಯನ್ನು ಕಂಡಕೂಡಲೆ ಕೆರೆಯಲ್ಲಿ ಹಾರಿ ಈಸಬೇಕೆಂದು ಅನಿಸಲಿಲ್ಲ. ಅದರ ಬದಲು ಈ ಕೆರೆಯಲ್ಲಿ ಸ್ನಾನಮಾಡಿದರೆ ತನಗೆಲ್ಲಿ ಚಳಿ ಜ್ವರ ಬಂದೀತೋ ಎಂದು ಹೆದರಿಕೊಂಡ. ಮುಂದಕ್ಕೆ ಹೋಗಿ ಒಂದು ಹುಲ್ಲು ದಿನ್ನೆಯ ಮೇಲೆ ಕುಳಿತು ಯೋಚಿಸತೊಡಗಿದ.

ಒಮ್ಮೆಲೆ ಬಾಲ್ಯದ ಆಟಗಳನ್ನೆಲ್ಲ ಬಿಟ್ಟುಬಿಡುವುದು ಆತನಿಗೆ ಸರಿಬರಲಿಲ್ಲ. ಒಂದು ಸಲ ಮರಹತ್ತಿ ನೋಡಬೇಕೆಂದು ಅನಿಸಿತು. ಹತ್ತಿರದಲ್ಲಿಯೇ ಇದ್ದ ಮಾವಿನ ಮರ ಹತ್ತಲು ಎದ್ದುಹೋದ. ಆದೆಷ್ಟು ಪ್ರಯತ್ನಿಸಿದರೂ ಅದನ್ನು ಹತ್ತಲು ಆತ

ನಿಂದ ಆಗಲಿಲ್ಲ. ಬರಿ ಮರವನ್ನು ಸುತ್ತಾಡಿ ನಿಂತುಬಿಟ್ಟ. ಕೆಳಗೆ ನೇತುಬಿದ್ದಿದ್ದ ಮರದ ಟೊಂಗೆಯೊಂದನ್ನು ಹಿಡಿದು ಜೋತು ಬೀಳಲು ತನ್ನ ಮುದಿ ದೇಹದ ಭಾರ ವನ್ನು ತಾಳಲಾರದೆ ಅದು ಮುರಿದು, ಮುದುಕ ಸುಶೀಲಚಂದ್ರನು ನೆಲದಮೇಲೆ ಬಿದ್ದುಬಿಟ್ಟ. ದಾರಿಯ ಮೇಲೆ ಹೋಗುತ್ತಿದ್ದ ಜನರು ಇದನ್ನು ನೋಡಿ ನಗತೊಡಗಿದರು. "ಮುದುಕನಾದರೂ ಹುಡುಗನಂತೆ ಮರವನ್ನೇರಲು ಹೋಗಿದ್ದಾನೆಂದು ಹಾಸ್ಯಮಾಡಿದರು. ಸುಶೀಲಚಂದ್ರ ನಾಚಿಕೆಯಿಂದ ಮುಖ ಕೆಳಗೆ ಹಾಕಿ ಮತ್ತೆ ಮೊದಲು ಕುಳಿತಿದ್ದ ಹುಲ್ಲು ದಿನ್ನೆಯ ಮೇಲೆ ಬಂದು ಕುಳಿತುಕೊಂಡು ಜೊತೆಗೆ ಬಂದಿದ್ದ ಸೇವಕನನ್ನು ಕರೆದು ಪೇಟೆಯಿಂದ ಒಂದು ರೂಪಾಯಿಯ ಪೆಪ್ಪರಮೆಂಟ ಕೊಂಡು ತರಲು ಕಳಿಸಿದ.

ಪೆಪ್ಪರಮೆಂಟು ಅಂದರೆ ಸುಶೀಲಚಂದ್ರನಿಗೆ ಬಲು ಪ್ರೀತಿ. ಶಾಲೆಗೆ ಹೋಗುವ ಮಾರ್ಗದಲ್ಲಿ ಇರುವ ಅಂಗಡಿಗಳಲ್ಲಿ ನಾನಾ ಬಣ್ಣಗಳ ಪೆಪ್ಪರಮಿಂಟ ಇಟ್ಟದ್ದನ್ನು ನಿತ್ಯ ನೋಡುತ್ತಿದ್ದ. ಆಗಾಗ ಒಂದೆರಡು ಆಣೆಗಳನ್ನು ಕೊಟ್ಟು ಬಣ್ಣಬಣ್ಣದ ಪೆಪ್ಪರ ಮಿಂಟ ಕೊಂಡು ತಿನ್ನುತ್ತಿದ್ದ. ಅಷ್ಟರಿಂದ ಅವನಿಗೆ ತೃಪ್ತಿಯಾಗುತ್ತಿರಲಿಲ್ಲ. "ತಂದೆಯ ಬಳಿ ಇದ್ದಂತೆ ತನ್ನ ಬಳಿಯಲ್ಲಿ ರಾಶಿ ಹಣ ಬಂದರೆ ಪೆಪ್ಪರಮಿಂಟಿನ ಡಬ್ಬಿಗಳನ್ನೇ ಕೊಂಡು ತಿನ್ನಬೇಕು" ಎಂದು ಅವನಿಗಾಗ ಅನಿಸುತ್ತಿತ್ತು. ಇಂದು ಸೇವಕನು ಒಂದು ರೂಪಾಯಿ ಕೊಟ್ಟು ಸಾಕಷ್ಟು ಹೆಚ್ಚು ಪೆಪ್ಪರಮಿಂಟು ತಂದಿದ್ದ. ಅದರಿಂದ ಒಂದನ್ನು ತೆಗೆದು ಹಲ್ಲಿಲ್ಲದ ತನ್ನ ಬಾಯಿಗೆ ಹಾಕಿಕೊಂಡ. ಆದರೆ ಮುದುಕನ ಆ ಬಾಯಿಗೆ ಹುಡುಗರ ತಿಂಡಿ ರುಚಿಸಲೇ ಇಲ್ಲ. ಆಗ ಅವನಿಗೆ ಇವುಗಳನ್ನು ಮನೆಗೆ ಒಯ್ದು ಹುಡುಗನಾಗಿದ್ದ ತನ್ನ ತಂದೆಗೆ ಕೊಡಬೇಕೆಂದು ಅನಿಸಿತು. ಮರುಕ್ಷಣದಲ್ಲಿ ಇಷ್ಟೊಂದು ಕೊಟ್ಟರೆ ಅವನ ಹೊಟ್ಟೆ ಖಂಡಿತ ಕೆಟ್ಟುಹೋಗುವುದು ಎಂಬ ಭಯವೂ ಬಂತು.

ನಿನ್ನೆಯವರೆಗೂ ಹುಡುಗರು ಆಟಕ್ಕೆಂದು ಮನೆಯವರೆಗೂ ಬಂದು ಸುಶೀಲ ಚಂದ್ರನನ್ನು ಕರೆದುಕೊಂಡು ಹೋಗುತ್ತಿದ್ದಂತೆ ಇಂದೂ ಬಂದರು. ಆದರೆ ಇಂದು ಸುಶೀಲಚಂದ್ರ ಒಮ್ಮಿಂದೊಮ್ಮೆ ಮುದುಕನಾಗಿದ್ದಾನೆ! ಅದನ್ನು ಕಂಡು ಅವರೆಲ್ಲರೂ ಆಶ್ಚರ್ಯಚಕಿತರಾಗಿ ತಿರುಗಿ ಹೋದರು.

ತನಗೆ ಸ್ವಾತಂತ್ರ್ಯ ದೊರೆತರೆ ತಾನು ಎಲ್ಲ ಹುಡುಗರನ್ನೂ ದೂರ ಕರೆದು ಕೊಂಡು ಹೋಗಿ ಅವರೊಂದಿಗೆ ಇಡೀ ದಿನ ಆಟವಾಡಿ ಬರಬೇಕೆಂದು ಹಿಂದೆ ಅನಿಸುತ್ತಿದ್ದ ಸುಶೀಲನಿಗೆ ಇಂದು ರಾಖಾಲ, ಗೋಪಾಲ, ಅಕ್ಷಯ, ನಿವಾರಣ, ಹರೀಶ ಮತ್ತು ನಂದ ಇತ್ಯಾದಿ ಹುಡುಗರನ್ನು ಕಂಡರೆ ಅವರೆಲ್ಲರ ವಿಷಯದಲ್ಲಿ ವಿರಕ್ತ ಭಾವವು ಉಂಟಾಯಿತು. "ಸುಮ್ಮನೆ ವಿರಾಮವಾಗಿ ಕುಳಿತಿದ್ದೇನೆ; ಈ ಹುಡುಗರೆಲ್ಲ ಬಂದು ತೊಂದರೆ ಕೊಡುತ್ತಿದ್ದಾರೆ" ಎಂದು ಅವನಿಗೆ ಅನಿಸಿತು.

ಈ ಮೊದಲು ಹೇಳಿದಂತೆ ತಂದೆ ಸುಬಲಚಂದ್ರನು ಅದೇ ಹುಲ್ಲುದಿನ್ನೆಯ ಮೇಲೆ ನಿತ್ಯ ಕುಳಿತು ತನ್ನ ಬಾಲ್ಯದ ದಿನಗಳನ್ನು ನೆನೆದು ಪಶ್ಚಾತ್ತಾಪಪಡುತ್ತಿದ್ದ. "ಚಿಕ್ಕವನಿರುವಾಗ ತುಂಟತನದಲ್ಲಿಯೇ ಜೀವನವನ್ನು ಹಾಳುಮಾಡಿಕೊಂಡೆ.

ಸಿಕ್ಕಲ್ಲಿ ಅಲೆದಾಡಿದೆ. ಮತ್ತು ಆ ಬಾಲ್ಯ ತಿರುಗಿ ಬಂದುದೇ ಆದರೆ ಮನೆಯಲ್ಲಿಯೇ ಇದ್ದು ದೊಡ್ಡ ದೊಡ್ಡ ಪುಸ್ತಕಗಳನ್ನು ಓದುವೆ. ಮಂತ್ರಗಳನ್ನು ಹೇಳಿಸಿಕೊಳ್ಳುವೆ. ಕೋಣೆಯ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡು ಒಳಗೆ ಕುಳಿತು ಒಂದೇ ಮನಸ್ಸಿನಿಂದ ಅಭ್ಯಾಸ ಮಾಡುವೆ. ರಾತ್ರಿ ಕೂಡ ಅಜ್ಜಿಯ ಹತ್ತಿರ ಕುಳಿತು ಕತೆ ಕೇಳುತ್ತ ಸಮಯ ಹಾಳು ಮಾಡದೆ ರಾತ್ರಿ ಹತ್ತು, ಹನ್ನೊಂದು ಗಂಟೆಯವರೆಗೂ ಅಭ್ಯಾಸ ಮಾಡುವೆ" ಎಂದು ಮುಂತಾಗಿ ಆಲೋಚಿಸುತ್ತಿದ್ದ.

ಆದರೀಗ ಬಾಲ್ಯವನ್ನು ಮತ್ತೆ ಪಡೆದಿದ್ದ ಆತನ ಮಾತೇ ಬೇರೆಯಾಗಿದೆ. ಅವನಿಗೀಗ ಶಾಲೆಗೆ ಹೋಗಲು ಮನಸ್ಸೇ ಆಗದಾಗಿದೆ. ಸುಶೀಲನು ಸಿಟ್ಟಿಗೆದ್ದು ಬಂದು "ಬಾಬಾ, ಶಾಲೆಗೆ ಹೋಗುವುದಿಲ್ಲವೆ?" ಎಂದು ಕೇಳಿದರೆ "ಇಲ್ಲ. ಇಂದು ನನ್ನ ಹೊಟ್ಟೆ ಕಡಿಯುತ್ತದೆ. ನಾನು ಶಾಲೆಗೆ ಹೋಗಲಾರೆ" ಎಂದು ನರಳುತ್ತ ಹೇಳುತ್ತಾನೆ. ಇದನ್ನು ಕೇಳಿ ಸುಶೀಲನು "ಶಾಲೆಗೆ ಹೋಗಲು ಹೊಟ್ಟೆ ಕಡಿಯುತ್ತದಲ್ಲವೇ? ನಾನೂ ಹೀಗೆ ಹೇಳುತ್ತಿದ್ದೆ. ನನಗೆಲ್ಲ ಗೊತ್ತಿದೆ" ಎಂದು ಸಿಟ್ಟುಮಾಡುತ್ತಾನೆ.

ನಿಜವಾಗಿ ಹೇಳಬೇಕೆಂದರೆ ಹೀಗೆ ಸಿಟ್ಟುಮಾಡಲು ಸ್ವೇಚ್ಛೆಯಂತೆ ತಂದೆಯ ರೂಪ ತಾಳಿದ್ದ ಸುಶೀಲನಿಗೆ ಸಾಕಷ್ಟು ಹಿನ್ನೆಲೆ ಇರಲಿಲ್ಲ. ಏಕೆಂದರೆ ತಾನು ಬಾಲಕನಿದ್ದಾಗ ಅದೆಷ್ಟು ಉಪಾಯಮಾಡಿ ಶಾಲೆ ತಪ್ಪಿಸುತ್ತಿದ್ದನೋ ಅದನ್ನು ಅವನ ತಂದೆ ತನ್ನ ಕರ್ಮ ಎಂದು ತಿಳಿದು ಸುಮ್ಮನಿರುತ್ತಿದ್ದನು. ಆದರೀಗ ತಂದೆ ಸುಶೀಲನು ಮಗ ಸುಬಲನನ್ನು ಶಾಲೆಗೆ ಕಳಿಸುವ ವಿಚಾರದಲ್ಲಿ ತೀವ್ರ ಆಸಕ್ತಿಯನ್ನು ತೋರುತ್ತಿದ್ದನು. ಶಾಲೆಯಿಂದ ಮರಳಿ ಬಂದ ಸುಬಲನು ಮನೆ ತುಂಬ ತಿರುಗಾಡಲು, ಮನ ಬಂದಂತೆ ತುಂಟತನ ಮಾಡಲು ಪ್ರಯತ್ನಿಸುತ್ತಿದ್ದನು. ಆದರೆ ಆ ಸಮಯಕ್ಕೆ ಸರಿಯಾಗಿ ಮುದುಕ ಸುಶೀಲನು ಕಣ್ಣಿಗೆ ಕನ್ನಡಕ ಇಟ್ಟುಕೊಂಡು ಕೃತ್ತಿವಾಸರ ರಾಮಾಯಣವನ್ನು ಸ್ವರ ತೆಗೆದು ರಾಗವಾಗಿ ಹೇಳುತ್ತಿದ್ದನು. ಸುಬಲನ ಗೊಂದಲದಿಂದ ಅವನ ಪಾರಾಯಣಕ್ಕೆ ತೊಂದರೆಯಾಗುತ್ತಿತ್ತು. ಆದ್ದರಿಂದ ಅವನನ್ನು ಹಿಡಿದು ತಂದು ಎದುರಿಗೆ ಕುಳ್ಳಿರಿಸಿಕೊಂಡು ಗಣಿತ ಮಾಡಲು ಒತ್ತಾಯ ಪಡಿಸುತ್ತಿದ್ದನು. ದೊಡ್ಡ ದೊಡ್ಡ ಅಂಕಿಗಳನ್ನು ಗುಣಿಸಲು ಕೊಡುತ್ತಿದ್ದನು. ಅದರಲ್ಲಿಯ ಒಂದು ಅಂಕಿಯ ಗುಣಾಕಾರವನ್ನು ಮಾಡಲು ಕೂಡ ತಂದೆಗೆ ಒಂದು ಗಂಟೆ ಬೇಕಾಗುತ್ತಿತ್ತು. ಸಂಜೆಯ ಹೊತ್ತಿನಲ್ಲಿ ಮುದುಕ ಸುಶೀಲನ ಮನೆಯಲ್ಲಿ ನೆರೆಹೊರೆಯ ಅನೇಕ ಮುದುಕರೂ ಬಂದು ಚದುರಂಗದ ಆಟವನ್ನು ಆಡುತ್ತ ಕೂಡುತ್ತಿದ್ದರು. ಆ ಸಮಯದಲ್ಲಿ ಸುಬಲನಿಗೆ ಪಾಠ ಹೇಳಿಕೊಡುವುದಕ್ಕಾಗಿ ಶಿಕ್ಷಕರೊಬ್ಬರನ್ನು ಗೊತ್ತುಮಾಡಿದ್ದನು. ಅವರು ರಾತ್ರಿ ಹತ್ತರವರೆಗೂ ಪಾಠ ಹೇಳಿಕೊಡುತ್ತಿದ್ದರು.

ಊಟ-ತಿಂಡಿಗಳ ವಿಷಯದಲ್ಲಿ ಸುಶೀಲನು ತುಂಬ ಕಠೋರನಾಗಿದ್ದನು. ಅದಕ್ಕೆ ಕಾರಣವಿಷ್ಟೇ! ತನ್ನ ತಂದೆ ಸುಬಲಚಂದ್ರನು ಮುದುಕನಾಗಿದ್ದಾಗ ತುಸು ಹೆಚ್ಚು ತಿಂದರೆ ಸಾಕು ಅವನಿಗೆ ಅಜೀರ್ಣವಾಗುತ್ತಿತ್ತು. ವಾಯುವಿನ ತೊಂದರೆಯಾಗುತ್ತಿತ್ತು. ಬಾಲಕ ಸುಶೀಲನು ಇದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಿದ್ದನು. ಮುದುಕನಾದ ಅವನು ಈಗ ಅದನ್ನು ನೆನಪಿಗೆ ತಂದುಕೊಂಡು

ಬಾಲಕ ಸುಬಲನಿಗೆ ಅತೀವ ಕಟ್ಟುನಿಟ್ಟುಗಳನ್ನು ಹಾಕಿದ್ದನು. ತನ್ನ ತಂದೆಗೆ ತುಸು ಕೂಡ ಹೆಚ್ಚಿಗೆ ಆಹಾರ ಸೇವಿಸಲು ಬಿಡುತ್ತಿರಲಿಲ್ಲ. ಆದರೆ ಬಾಲಕನಾಗಿದ್ದ ಸುಬಲನ ಪಚನಶಕ್ತಿಯೂ ಕೂಡ ಈಗ ತೀಕ್ಷ್ಣವಾಗಿತ್ತು. ಅವನೀಗ ಏನೇ ತಿನ್ನಲಿ, ಎಷ್ಟೇ ತಿನ್ನಲಿ ಕೂಡಲೆ ಅದೆಲ್ಲ ಪಚನವಾಗಿ ಮತ್ತೆ ಚೆನ್ನಾಗಿ ಹಸಿವೆಯಾಗುತ್ತಿತ್ತು. ಆದರೆ ಸುಶೀಲನು ಸುಬಲನಿಗೆ ಅತಿ ಅಲ್ಪ ಆಹಾರ ಕೊಡುತ್ತಿದ್ದನು. ಇದರಿಂದ ಸುಬಲನು ಸೊರಗಿ, ಒಣಗಿದಂತಾಗಿದ್ದನು. ದೇಹದ ಎಲ್ಲ ಎಲುಬುಗಳೂ ಕಾಣಿಸಿಕೊಂಡಿದ್ದವು. ಇದನ್ನು ಕಂಡು ಸುಶೀಲನು ಸುಬಲನಿಗೆ ಯಾವುದೊ ಮಹಾ ಕಾಯಿಲೆಯಾಗಿದೆ ಎಂದು ಬಗೆದು ಕೇವಲ ಔಷಧವನ್ನೇ ಕುಡಿಸತೊಡಗಿದನು.

ಆದರೂ ಅವನಿಗೆ ತನ್ನ ಹೊಸ ಅವಸ್ಥೆಯು ಸಾಕಾಗಿ ಹೋಗಿತ್ತು. ಹಿಂದೆ ಅವನು ಚಿಕ್ಕ ಹುಡುಗನಾಗಿದ್ದಾಗ ತಾನಿದ್ದ ಗ್ರಾಮದ ಸುತ್ತುಮುತ್ತ ಎಲ್ಲಿ ಯಾದರೂ ಜಾತ್ರೆ, ಕೀರ್ತನ, ಬಯಲಾಟಗಳೇನಾದರೂ ನಡೆಯುವ ಸುದ್ದಿ ಬಂದರೆ ಸಾಕು ಅದನ್ನು ಕೇಳಲಿಕ್ಕೆ ತಪ್ಪದೇ ಹೋಗುತ್ತಿದ್ದನು. ಮಳೆ, ಬಿಸಿಲು, ಹಗಲು, ರಾತ್ರಿ, ಚಳಿ, ಹಿಮ ಇವುಗಳ ಪರಿವೆಯೂ ಅವನಿಗೆ ಆಗ ಇರುತ್ತಿರಲಿಲ್ಲ. ಆದರೆ ಅದೇ ಈಗ ಮುದುಕನಾಗಿದ್ದ ಅವನು ಅದನ್ನೆಲ್ಲ ಮಾಡುವಂತಿರಲಿಲ್ಲ. ಎಂದಾದ ರೊಂದು ಸಲ ಮಾಡಿದರೂ ಕೂಡ ಅತನಿಗೆ ಶೀತವಾಗುತ್ತಿತ್ತು. ಕೆಮ್ಮು ಒರುತ್ತಿತ್ತು. ಕೈಕಾಲುಗಳು ಬಾತು ನೋಯುತ್ತಿದ್ದವು. ಆರೈಕೆ ಮಾಡಿಕೊಂಡು ಗುಣಪಡಿಸಿ ಕೊಳ್ಳಲು ಅವನಿಗೆ ಈಗ ಎರಡು ಮೂರು ವಾರಗಳೇ ಬೇಕಾಗುತ್ತಿದ್ದವು. ಹುಡುಗ ನಿದ್ದಾಗ ಅವನು ನಿತ್ಯ ಕೆರೆಯಲ್ಲಿ ಈಜಲು ಹೋಗುತ್ತಿದ್ದನು. ಆದರೆ ಇಂದು ಕೆರೆಯಲ್ಲಿ ಸ್ನಾನಮಾಡಿ ಬಂದರೆ ಜ್ವರವೇ ಒರುತ್ತಿತ್ತು. ಹೀಗಾಗಿ ಅವನು ಈಗ ನಿತ್ಯ ಬಿಸಿನೀರನ್ನೇ ಸ್ನಾನಕ್ಕೆ ತೆಗೆದುಕೊಳ್ಳುತ್ತಿದ್ದನು. ಅಲ್ಲದೆ ಸುಬಲನಿಗೂ ಕೂಡ ಕೆರೆಯಲ್ಲಿ ಸ್ನಾನ ಮಾಡಲು ಬಿಡುತ್ತಿರಲ್ಲ. ಅವನಿಗೂ ನಿತ್ಯ ಬಿಸಿನೀರಿನ ಸ್ನಾನವನ್ನೇಮಾಡಿಸುತ್ತಿದ್ದನು.

ಸುಶೀಲನು ತನ್ನಿಚ್ಛೆಯಂತೆ ತಾನು ಮುದುಕನಾದುದನ್ನು ಮರೆತು ಹುಡುಗ ನಾಗಿದ್ದಾಗ ಹೇಗೆ ಮಾಡುತ್ತಿದ್ದನೊ ಹಾಗೆ ಮಾಡಿ ಜನರ ಅಪಹಾಸ್ಯಕ್ಕೆ ಗುರಿಯಾಗು ತ್ತಿದ್ದನು. ಒಂದು ಸಲ ಒಬ್ಬ ಮುದುಕಿಯ ಮಣ್ಣಿನ ಕೊಡಕ್ಕೆ ಗುಲೇಲಿನಿಂದ ಹೊಡೆದು ಅದನ್ನು ಒಡೆದುಬಿಡಲು ಜನರು ನೋಡಿ ಮುದುಕನಾದರೂ ಬುದ್ಧಿ ಬರಲಿಲ್ಲ ಎಂದು ಅವನನ್ನು ಅಪಮಾನಗೊಳಿಸಿದರು. ಇದರಿಂದ ಸುಶೀಲನಿಗೆ ಮೋರೆ ತೋರಿಸಿಕೊಂಡು ಇರುವುದೇ ಅಸಾಧ್ಯವಾಯಿತು.

ಸುಬಲನೂ ಕೂಡ ತಾನು ಚಿಕ್ಕಹುಡುಗನಾದುದನ್ನು ಒಂದೊಂದು ಸಲ ಮರೆತು ಉಳಿದ ಮುದುಕರೊಂದಿಗೆ ಇಸ್ಪೇಟು ಆಡಲು ಹೋಗುತ್ತಿದ್ದನು. ಆಗ ಅವರು "ಹೋಗು. ಹೊರಗೆ ಹೋಗು, ಇಲ್ಲಿಗೇಕೆ ಬಂದೆ ? ಹೊರಗೆ ಹುಡುಗರೊಂದಿಗೆ ಆಟವಾಡು. ಇಲ್ಲಿ ಬಂದು ಇಲ್ಲದ ಕಾರಭಾರ ಮಾಡಬೇಡ" ಎಂದು ಅವನನ್ನು ಹೊರಗೆ ಹಾಕುತ್ತಿದ್ದರು. ಅದೇ ರೀತಿ ಶಾಲೆಯಲ್ಲಿ ಕೂಡ ತಾನು ಚಿಕ್ಕಹುಡುಗ ನಾದುದನ್ನು ಮರೆತು ಶಿಕ್ಷಕರೊಂದಿಗೆ ಎಲೆ ಅಡಿಕೆ ತಂಬಾಕು ಕೇಳುತ್ತಿದ್ದನು. ಶಿಕ್ಷಕರು ಅವನನ್ನು ಬೆತ್ತದಿಂದ ಹೊಡೆಯುತ್ತಿದ್ದರು. ಬೆಂಚಿನ ಮೇಲೆ ನಿಲ್ಲಿಸುತ್ತಿದ್ದರು.

ಮನೆಯಲ್ಲಿ ಕೂಡ ಈ ಆಭಾಸಗಳು ನಡೆಯದೆ ಇರಲಿಲ್ಲ. ಒಂದು ಸಲ ಸುಬಲನು ತಾನು ಚಿಕ್ಕ ಹುಡುಗನಾಗಿರುವುದನ್ನು ಮರೆತು ಕ್ಷೌರಮಾಡುವವನ ಮೇಲೆ ಸಿಟ್ಟಿಗೆದ್ದು "ಯಾಕೊ ಮಗನೆ, ಅದೆಷ್ಟು ದಿನಗಳಾದವಲ್ಲ. ನನ್ನ ಗಡ್ಡ ತೆಗೆಯಲು, ಕ್ಷೌರಮಾಡಲು ನೀನು ಬಂದೇ ಇಲ್ಲವಲ್ಲ" ಎಂದು ಸಿಟ್ಟುಮಾಡಿದ್ದಕ್ಕೆ ಅವನು ಹುಡುಗ ತಮಾಷೆ ಮಾಡುವುದನ್ನು ಚೆನ್ನಾಗಿ ಕಲಿತುಕೊಂಡಿದ್ದಾನೆ ಎಂದು ಅಂದುಕೊಂಡು "ಇನ್ನೊಂದು ಹತ್ತು ವರ್ಷಗಳಾದ ಮೇಲೆ ನನ್ನ ಕಡಿಗೆ ಬನ್ನಿ" ಎಂದು ಹೇಳಿದನು.

ಇನ್ನೊಂದು ಸಲ ಸಿಟ್ಟಿಗೆದ್ದು ಸುಶೀಲನನ್ನು ಹಿಂದೆ ಹೊಡೆಯುತ್ತಿದ್ದಂತೆ ಹೊಡೆದುಬಿಟ್ಟನು. ಆಗ ಸುಶೀಲನು "ಕಲಿತ ಹುಡುಗನಾಗಿ ಈ ರೀತಿ ಅನಾಗರಿಕ ರೀತಿಯಲ್ಲಿ ಇರುವುದೇ ? ಚಿಕ್ಕವನಾಗಿ ಹಿರಿಯರ ಮೇಲೆ ಕೈಯೆತ್ತುವುದೇ ?" ಎಂದು ಗದರಿಸಿದನು. ಸುತ್ತು ನೆರೆದವರೆಲ್ಲ ಇದನ್ನು ಬಿಡಿಸಿ ತಮ್ಮ ತಮ್ಮ ಮನಸ್ಸಿಗೆ ಬಂದ ಬಂದಂತೆ ಆಡಿಕೊಳ್ಳುತ್ತಿದ್ದರು.

ಇಂತಹ ಪ್ರಸಂಗಗಳಿಂದ ಖತಿಗೊಂಡು ಸುಬಲನು ಏಕಾಂತದಲ್ಲಿ ಹೋಗಿ ಒಬ್ಬನೇ ಕುಳಿತು ಸುಶೀಲನಂತೆ ತಾನೂ ದೊಡ್ಡವನಾದ ಮೇಲೆ, ಹಾಗೂ ತನಗೆ ಸ್ವಾತಂತ್ರ್ಯ ದೊರೆತ ಮೇಲೆ ಈ ಅಪಮಾನದಿಂದ ಪಾರಾಗಿ ಬದುಕಿ ಉಳಿದುಕೊಳ್ಳುವೆ" ಎಂದು ಆಗಾಗ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದನು.

ಸುಶೀಲನೂ ಕೂಡ ಇದೇ ರೀತಿ ದಿನಾಲು ತನ್ನ ಎರಡೂ ಕೈಗಳನ್ನು ಜೋಡಿಸಿ "ಹೇ ದೇವತೆ, ತಂದೆಯಂತೆ ನನ್ನನ್ನು ಮತ್ತೆ ಚಿಕ್ಕವನನ್ನಾಗಿ ಮಾಡಿಬಿಡು. ಮೊದಲಿದ್ದಂತೆ ನಾನು ಸುಖವಾಗಿ ಇರುವೆ. ಆಡುವೆ; ಅಲೆದಾಡುವೆ. ಕುಣಿಯುವೆ; ನೆಗೆಯುವೆ. ತಂದೆ ಚಿಕ್ಕ ಬಾಲಕನಾಗಿ ಮಾಡುತ್ತಿರುವ ಈ ತುಂಟತನವನ್ನು ನಾನು ಸಹಿಸಲಾರೆ" ಎಂದು ತನ್ನ ಪ್ರಾರ್ಥನೆಯನ್ನೂ ಸಲ್ಲಿಸುತ್ತಿದ್ದನು.

ಇವರ ಪ್ರಾರ್ಥನೆಗಳನ್ನು ಕೇಳಿ ಇಚ್ಛಾದೇವತೆ ಒಂದು ದಿನ ಪ್ರತ್ಯಕ್ಷಳಾಗಿ "ನಿಮ್ಮ ಪರಿಸ್ಥಿತಿ ಈಗ ಹೇಗಿದೆ ?" ಎಂದು ಕೇಳಿದಳು.

ಅವರಿಬ್ಬರೂ ಕೈಜೋಡಿಸಿ "ಇಚ್ಛಾದೇವತೆಯೆ, ದಯಮಾಡಿ ನಮ್ಮನ್ನು ಮೊದಲಿದ್ದಂತೆ ಮಾಡು. ಇಂದಿನ ನಮ್ಮ ಅವಸ್ಥೆಯು ಶೋಚನೀಯವಾಗಿದೆ. ತುಂಬ ದುಃಖದ್ದಾಗಿದೆ. ನಾವಿದನ್ನು ತಾಳಿಕೊಳ್ಳಲಾರೆವು" ಎಂದು ಬೇಡಿಕೊಂಡರು.

ಅದಕ್ಕೆ ಇಚ್ಛಾದೇವತೆಯು "ತಥಾಸ್ತು. ನಾಳೆ ಬೆಳಗ್ಗೆ ನೀವು ಮೊದಲಿನಂತೆ ಆಗುವಿರಿ" ಎಂದು ಹೇಳಿ ಮಾಯವಾದಳು.

ಮರುದಿನ ಬೆಳಗ್ಗೆ ಸುಬಲಚಂದ್ರರು ಮೊದಲಿನಂತೆ ಮುದುಕರಾಗಿಯೂ, ಸುಶೀಲಚಂದ್ರನು ಚಿಕ್ಕಹುಡುಗನಾಗಿಯೂ ಹಾಸಿಗೆಯಿಂದ ಎದ್ದು ಕುಳಿತರು. ಇಬ್ಬರೂ ಇದೊಂದು ದೊಡ್ಡದಾದ ಕನಸೆಂದು ಭಾವಿಸಿದರು.

ಸುಬಲಚಂದ್ರರು ತಮ್ಮ ದಪ್ಪ ಸ್ವರದಲ್ಲಿ "ಸುಶೀಲ, ವ್ಯಾಕರಣ ಸೂತ್ರಗಳನ್ನು ಬಾಯಿಪಾಠ ಮಾಡಿದೆಯೋ ಇಲ್ಲವೋ ?" ಎಂದು ಕೇಳಿದರು.

ಸುಶೀಲಚಂದ್ರನು ತಲೆ ಅಲ್ಲಾಡಿಸುತ್ತ "ಅಪ್ಪಾ, ನನ್ನ ವ್ಯಾಕರಣ ಸೂತ್ರದ ಪುಸ್ತಕವೇ ಕಳೆದುಹೋಗಿದೆ" ಎಂದು ಉತ್ತರಕೊಟ್ಟನು.

59. ನಗುನಗುತ ಬೇಸಾಯ ಗೈಯುವೆವು ನಾವು

ನಗುನಗುತ ಬೇಸಾಯ ಗೈಯುವೆವು ನಾವು
ನೆಗೆಯುತ್ತ ಜಿಗಿಯುತ್ತ ಹೊಲಹೊಲಗಳಲ್ಲಿ
ಹೊತ್ತೇರಿ ಹೋಗುವೆವು ; ಹೊತ್ತಿಳಿಯೆ ತಿರುಗುವೆವು
ಉತ್ತುವೆವು, ಬಿತ್ತುವೆವು, ದಿನವೆಲ್ಲ ದುಡಿಯುವೆವು
ಬಿಸಿಲಿರಲಿ, ಮಳೆಬರಲಿ, ಗಾಳಿಬೀಸಲಿ ಮತ್ತೆ
ಹೊಸಮಣ್ಣು ನರುಗಂಪ ಹೊಲದಲ್ಲಿ ಸೂಸುತ್ತೆ
ನೋಡಿನೋಡಿದ ಕಡೆಗೆ ಸಸ್ಯಪ್ರಾಣದ ಗಾನ
ಗೆರೆಕೊರೆದು ಬರೆದಂತೆ ಕಂಡುಬರುತಿಹುದೆಮಗೆ
ತೂಗಿ ಕುಣಿಯುವ ಛಂದದಲಿ ಬರೆದ ತರುಣ ಕವಿ
ಯಾರವನು ? ಎಲ್ಲಿಹನು ? ಎಲ್ಲಡಗಿ ಕುಳಿತಿಹನು ?
ತೆನೆಬತ್ತ ನಿಂತಿಹುದು ; ನಗುತಿಹುದು ನವಸೃಷ್ಟಿ
ಮಾಘಮಾಸದ ಹೊನ್ನಬಿಸಿಲಲ್ಲಿ ಪೂರ್ಣಿಮೆಯ ಚಂದ್ರನಲ್ಲಿ.

60. ಮೋಡದ ಅಂಚಿಗೆ ನಗುತಿದೆ ಬಿಸಿಲು

ಮೋಡದ ಅಂಚಿಗೆ ನಗುತಿದೆ ಬಿಸಿಲು
ಓಡಿಹೋಯಿತು ಗಾಳಿಯು ಸಿಡಿಲು
ನಮಗೆಲ್ಲರಿಗು ಬಿಡುವಿಂದು
ನಮಗೆಲ್ಲರಿಗೂ ಬಿಡುವು.

ಇಂದೇನು ಮಾಡುವುದು ?
ಹೊಳೆಯದಾಗಿಹುದು.
ದಾರಿ ತಪ್ಪಿಸಿಕೊಂಡು
ಯಾವ ಬನ ಸೇರುವುದು ?
ಹುಡುಗರೆಲ್ಲರ ಕೂಡ
ಎಲ್ಲಿ ಅಲೆದಾಡುವುದು ?

ಕೇದಿಗೆಯ ಪತ್ರಗಳ ನೌಕೆಯನು ಮಾಡಿ
ಅಲ್ಲಿ ಹೂಗಳನೆಲ್ಲ ಶೃಂಗರಿಸಿ ಇಡುವೆ.
ತಾಲಪತ್ರಗಳನ್ನು ತೇಲಿಬಿಡೆ ಹೊಳೆಯಲ್ಲಿ
ವಾಲುತ್ತವಾಲುತ್ತ ಹರಿದು ಹೋಗುವವು.
ಗೋಪಾಲ ಬಾಲಕರ ಜೊತೆಗೆ ಗೋವುಗಳು
ಕೊಳಲದನಿ ಕೇಳುತ್ತ ಸುಖದಿ ಮೇಯುವವು.

61. ಗುಪ್ತಧನ

1

ಅಮಾವಾಸ್ಯೆಯ ಕಾಳ ರಾತ್ರಿ. ತಾಂತ್ರಿಕ ಮತದ ಪೂಜಾ ವಿಧಾನದ ಪ್ರಕಾರ ಮೃತ್ಯುಂಜಯನು ಅನೇಕ ದಿನಗಳಿಂದ ನಡೆದು ಬಂದಿದ್ದ ತನ್ನ ಕುಲದೇವತೆ ಜಯಕಾಲಿಯ ಪೂಜೆ ಮಾಡುತ್ತ ಕುಳಿತಿದ್ದನು. ಪೂಜೆಯನ್ನು ಮುಗಿಸಿ ಅವನು ಎದ್ದಾಗ ಹತ್ತಿರದ ಮಾವಿನ ತೋಪಿನಿಂದ ಕೂಗಿದ ಕೋಳಿಯ ಪ್ರಾತಃಕಾಲದ ಮೊದಲ ಕೂಗು ಕೇಳಿಸಿತು.

ಮೃತ್ಯುಂಜಯನು ಎದ್ದುನಿಂತು ತಿರುಗಿ ನೋಡಿದನು. ಮಂದಿರದ ಬಾಗಿಲು ಮುಚ್ಚಿತ್ತು. ಅವನು ನೆಲಕ್ಕೆ ತನ್ನ ಶಿರವನ್ನು ಬಾಗಿಸಿ ದೇವಿಯ ಚರಣಗಳ ಮೇಲೆ ಇರಿಸಿ ವಂದಿಸಿದನು. ನಂತರ ದೇವಿಯ ವಿಗ್ರಹವನ್ನು ಬದಿಗೆ ಸರಿಸಿ ಕೆಳಗೆ ಹಲಸಿನ ಮರದ ಕಟ್ಟಿಗೆಯಿಂದ ಮಾಡಿದ ಒಂದು ಪೆಟ್ಟಿಗೆಯನ್ನು ಹೊರಗೆ ತೆಗೆದನು. ಅದಕ್ಕೆ ಹಿತ್ತಾಳೆಯ ಬೀಗ ಹಾಕಿತ್ತು. ಬೀಗ ತೆಗೆದು ಪೆಟ್ಟಿಗೆಯ ಮುಚ್ಚಳವನ್ನು ಮೆಲ್ಲನೆ ತೆರೆದನು. ತೆರೆದೊಡನೆ ಅವನು ಬೆಚ್ಚಿಬಿದ್ದು ತನ್ನ ತಲೆಯನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡು ಕುಳಿತನು.

ಮೃತ್ಯುಂಜಯನ ಮನೆಯ ತೋಟದ ಸುತ್ತ ಬಹುಕಾಲದ ಹಿಂದೆ ಕಟ್ಟಿಸಿದ್ದ ಒಂದು ಗೋಡೆ ಇತ್ತು. ಆ ತೋಟದಲ್ಲಿದ್ದ ದೊಡ್ಡ ದೊಡ್ಡ ಮರಗಳ ನಡುವೆ ಅಂಧಕಾರಮಯವಾದ ನೆರಳಿನಲ್ಲಿ ಈ ಚಿಕ್ಕ ಮಂದಿರವಿತ್ತು. ಮಂದಿರದಲ್ಲಿ ಜಯಕಾಲಿಯ ಮೂರ್ತಿಯನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ಒಳಗೆ ಹೋಗಲು ಒಂದು ಬಾಗಿಲು ಮಾತ್ರ. ಮೃತ್ಯುಂಜಯನು, ಕೆಲ ಸಮಯದ ಮೇಲೆ, ತನ್ನ ಮುಂದೆ ಇದ್ದ ಪೆಟ್ಟಿಗೆಯನ್ನೆತ್ತಿ ಅದನ್ನು ಎವೆ ಇಕ್ಕದೆ ನೋಡಿದನು. ಅದರ ಬೀಗವನ್ನು ತೆಗೆಯುವ ಮೊದಲು ಅದನ್ನು ಚೆನ್ನಾಗಿ ಪರೀಕ್ಷೆ ಮಾಡಿ ನೋಡಿದ್ದನು. ಯಾರೂ ಅದಕ್ಕೆ ಕೈ ಹಚ್ಚಿಲ್ಲವೆಂದೂ, ಬೀಗ ಮುರಿಯಲು ಪ್ರಯತ್ನಿಸಿಲ್ಲವೆಂದೂ ಮನವರಿಕೆ ಮಾಡಿಕೊಂಡಿದ್ದನು. ನಂತರ ಅಲ್ಲಿಂದ ಎದ್ದು ಜಯಕಾಲಿಯ ವಿಗ್ರಹದ ಸುತ್ತು ಪ್ರದಕ್ಷಿಣೆಯನ್ನು ಹಾಕುತ್ತ ಏನನ್ನೊ ಹುಡುಕಿದನು. ಕೆಳಗೆ ಕುಳಿತು ಎರಡೂ ಕೈಗಳಾಡಿಸಿ ಏನಾದರೂ ದೊರೆಯುವುದೊ ಹೇಗೆಂದು ನೋಡಿದನು. ಆದರೆ ಏನೂ ದೊರೆಯಲಿಲ್ಲ. ನಿರಾಶನಾಗಿ ಹುಚ್ಚನಂತೆ ಆವೇಶದಿಂದ ಮಂದಿರದ ಎರಡೂ ಬಾಗಿಲುಗಳನ್ನು ಪೂರ್ಣ ತೆರೆದನು. ನಸುಕು ಹರಿದು ಆಗತಾನೆ ಬೆಳಕು ಆಗಿತ್ತು. ಮೃತುಂಜಯನು ಮಂದಿರದ ಸುತ್ತು ಅನೇಕಸಲ ಸುತ್ತಾಡಿ ವ್ಯರ್ಥ ದಣಿದುಕೊಂಡನು.

ಬಿಸಿಲು ಬಿದ್ದಮೇಲೆ ಮೃತ್ಯುಂಜಯನು ದೇವಸ್ಥಾನದ ಚಂಡಿಮಂಡಪದಲ್ಲಿ ತಲೆ ಹಿಡಿದುಕೊಂಡು ಸ್ವಸ್ಥ ಕುಳಿತುಬಿಟ್ಟನು. ಏನನ್ನೋ ವಿಚಾರಮಾಡುತ್ತಿದ್ದನು. ಇಡೀ ರಾತ್ರಿ ನಿದ್ದೆಗೆಟ್ಟಿದ್ದರಿಂದ ದಣಿದ ಅವನ ದೇಹಕ್ಕೆ ಬೆಳಗಿನ ತಂಗಾಳಿ ತಾಕಲಾಗಿ ಅವನಿಗೆ ಕೂಡಲೆ ನಿದ್ದೆಹತ್ತಿತು.

ಆ ಸಮಯಕ್ಕೆ ಸರಿಯಾಗಿ "ಬಾಬಾ ಅವರಿಗೆ ಜಯವಾಗಲಿ!" ಎಂದು ಯಾರೋ ಹೇಳುತ್ತಿದ್ದುದನ್ನು ಕೇಳಿ ಬೆಚ್ಚಿಬಿದ್ದು ಎಚ್ಚತ್ತು ಕುಳಿತನು.

ಅವನ ಎದುರಿಗೆ ಜಟಾಧಾರಿ ಸನ್ಯಾಸಿಯೊಬ್ಬನು ನಿಂತಿದ್ದನು. ಮೃತ್ಯುಂಜಯನು ಎದ್ದುನಿಂತು ಭಕ್ತಿಭಾವದಿಂದ ಅವನಿಗೆ ವಂದಿಸಿದನು. ಸನ್ಯಾಸಿಯು ಅವನ ತಲೆಯಮೇಲೆ ತನ್ನ ಬಲಗೈಯನ್ನಿರಿಸಿ "ಬಾಬಾ, ನೀವು ವ್ಯರ್ಥ ಮನಸ್ಸಿಗೆ ಚಿಂತೆ ಹಚ್ಚಿಕೊಂಡಿರುವಿರಿ" ಎಂದು ಸಮಾಧಾನ ಹೇಳಿದನು.

ಇದನ್ನು ಕೇಳಿದ ಮೃತ್ಯುಂಜಯನಿಗೆ ತುಂಬ ಆಶ್ಚರ್ಯವಾಯಿತು. ಅವನು ಕೈಜೋಡಿಸಿ "ನೀವು ಅಂತರ್ಯಾಮಿ ಪರಮಾತ್ಮನಂತಿರುವಿರಿ. ಇಲ್ಲದೆ ಹೋದಲ್ಲಿ ನನ್ನ ಮನದ ಇಂಗಿತವು ನಿಮಗೆ ಅದು ಹೇಗೆ ತಿಳಿಯಲು ಸಾಧ್ಯ! ನಾನಾರಿಗೂ ಈ ಗುಟ್ಟಿನ ಸಂಗತಿಯನ್ನು ಹೇಳಿಲ್ಲ" ಎಂದು ಉದ್ಗಾರತೆಗೆದನು.

ಅದಕ್ಕೆ ಸನ್ಯಾಸಿಯು "ವತ್ಸಾ, ನೀನೀಗ ಏನನ್ನು ಕಳೆದುಕೊಂಡಿರುವೆಯೋ ಅದಕ್ಕಾಗಿ ಆನಂದಪಡು. ಎಳ್ಳಷ್ಟೂ ದುಃಖಿಸಬೇಡ. ಅದು ಕಳೆದುಹೋಯಿತೆಂದು ಚಿಂತಿಸಬೇಡ" ಎಂದು ಹೇಳಿ ಧೈರ್ಯವನ್ನು ಕೊಡಲು ಪ್ರಯತ್ನಿಸಿದನು.

ಮೃತ್ಯುಂಜಯನು ಸನ್ಯಾಸಿಯ ಎರಡೂ ಪಾದಗಳನ್ನು ಗಟ್ಟಿಯಾಗಿ ಹಿಡಿದು "ಹಾಗಾದರೆ ನೀವು ಎಲ್ಲವನ್ನೂ ಬಲ್ಲಿರಿ. ಅದು ಹೇಗೆ ನಾನದನ್ನು ಕಳೆದುಕೊಂಡೆ? ಅದೆಲ್ಲಿ ಮಾಯವಾಗಿದೆ? "ಎಲ್ಲವನ್ನೂ ನೀವು ನನಗೆ ಹೇಳುವವರೆಗೂ ನಾನು ಈ ಪಾದಗಳನ್ನು ಬಿಡುವುದಿಲ್ಲ" ಎಂದು ಹಟಹಿಡಿದು ಕುಳಿತನು.

ಇದಕ್ಕೆ ಸನ್ಯಾಸಿಯು "ನಾನು ನಿನಗೆ ಅಶುಭವನ್ನು ಕೋರಿದ್ದರೆ ನಿನಗೆಲ್ಲವನ್ನೂ ಹೇಳುತ್ತಿದ್ದೆ. ಆದರೆ ನಿನ್ನ ಮೇಲೆ ದಯೆದೋರಿ ಭಗವತಿ ಜಯಕಾಲಿಯು ಯಾವುದನ್ನು ತೆಗೆದುಕೊಂಡಿರುವಳೋ ಅದಕ್ಕಾಗಿ ನೀನು ದುಃಖಿಸಬೇಡ" ಎಂದು ಸ್ಪಷ್ಟವಾಗಿ ಹೇಳಿದನು.

ನಂತರ ಮೃತ್ಯುಂಜಯನು ಸನ್ಯಾಸಿಯನ್ನು ಪ್ರಸನ್ನಗೊಳಿಸಬೇಕೆಂಬ ಗುರಿಯನ್ನಿರಿಸಿಕೊಂಡು ಹಗಲು ರಾತ್ರಿ ನಾನಾ ಬಗೆಯಿಂದ ಅವನ ಸೇವೆಯನ್ನು ಕೈಕೊಂಡನು. ಮರುದಿನ ನಸುಕಿನಲ್ಲಿ ತನ್ನ ಗೋಶಾಲೆಗೆ ಹೋಗಿ ಒಂದು ಪಾತ್ರೆಯ ತುಂಬ ಬೆಚ್ಚನ್ನ ನೊರೆಹಾಲನ್ನು ಸನ್ಯಾಸಿಗೆ ಕೊಡುವುದಕ್ಕೆಂದು ತೆಗೆದುಕೊಂಡು ಮರಳಿ ಬಂದು ನೋಡುತಾನೆ ಅಲ್ಲಿ ಸನ್ಯಾಸಿ ಇರಲೇ ಇಲ್ಲ.

2

ಮೃತ್ಯುಂಜಯನು ಚಿಕ್ಕ ಬಾಲಕನಾಗಿದ್ದಾಗ ಅವನ ಅಜ್ಜ ಹರಿಹರ ಇದೇ ಚಂಡಿಮಂಟಪದಲ್ಲಿ ಕುಳಿತು ಗುಡಗುಡಿಯನ್ನು ಸೇದುತ್ತಿರುವಾಗ ಇದೇ ರೀತಿ ಒಬ್ಬ ಸನ್ಯಾಸಿಯು ಬಂದಿದ್ದನು. "ಬಾಬಾ, ನಿನಗೆ ಜಯವಾಗಲಿ!"

ಎಂದು ಕೂಡ ಹೇಳಿದ್ದನು. ಹರಿಹರನು ಮುಂದೆ ಆ ಸನ್ಯಾಸಿಯನ್ನು ಅನೇಕ ದಿನಗಳವರೆಗೆ ತನ್ನ ಮನೆಯಲ್ಲಿರಿಸಿಕೊಂಡು ಅವನ ಸೇವೆಯನ್ನು ಮಾಡಿದನು. ಅವನನ್ನು ಸಂತುಷ್ಟಗೊಳಿಸಿದನು.

ಸನ್ಯಾಸಿಯು ಹೊರಡುವ ಕಾಲಕ್ಕೆ "ವತ್ಸಾ, ನಿನಗೇನು ಬೇಕು ?" ಎಂದು ಹರಿಹರನನ್ನು ಕೇಳಿದನು.

ಅದಕ್ಕೆ ಹರಿಹರನು "ಗುರುಗಳಿಗೆ ನಿಜವಾಗಿ ಸಂತುಷ್ಟಿಯಾಗಿದ್ದರೆ ನಮ್ಮ ಇಂದಿನ ದೀನ ಅವಸ್ಥೆ ದೂರಾಗುವಂತೆ ಅನುಗ್ರಹಿಸಬೇಕು. ಹಿಂದೆ ಒಂದು ಕಾಲಕ್ಕೆ ಈ ಗ್ರಾಮದಲ್ಲಿಯೇ ನಾವು ಎಲ್ಲರಿಗಿಂತ ಶ್ರೀಮಂತರಾಗಿದ್ದೆವು. ಮುಂದೆ ನಮ್ಮ ಅಜ್ಜನು ಎಲ್ಲಿಂದಲೋ ಕುಲೀನ ವಂಶದ ಕನ್ಯೆಯನ್ನು ತಂದು ನಮ್ಮ ದಾಯಾದಿಗೆ ಮದುವೆ ಮಾಡಿದನು. ಅಂದಿನಿಂದ ಈ ಗ್ರಾಮದಲ್ಲಿ ಅವರು ನಮಗಿಂತ ಶ್ರೀಮಂತರಾಗಿದ್ದಾರೆ. ಇಂದಿನ ನಮ್ಮ ಪರಿಸ್ಥಿತಿಯು ಚೆನ್ನಾಗಿರುವುದಿಲ್ಲ. ಅಂತೆಯೇ ನಾವು ನಮ್ಮ ದಾಯಾದಿಗಳ ಅಹಂಕಾರವನ್ನು ಈ ವರೆಗೂ ಸಹಿಸಿಕೊಂಡು ಇರಬೇಕಾಗಿ ಬಂದಿದೆ. ಇನ್ನು ಹೆಚ್ಚು ದಿನ ಇದನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ. ಅದಾವ ರೀತಿ ಮತ್ತೆ ನಮ್ಮ ಮನೆತನವು ಮೊದಲಿದ್ದ ಊರ್ಜಿತ ಸ್ಥಿತಿಗೆ ಬರಲು ಸಾಧ್ಯ? ಅದನ್ನು ದಯವಿಟ್ಟು ಹೇಳಬೇಕು. ಹಾಗೂ ಈ ನನ್ನ ಬಯಕೆಯು ಈಡೇರುವಂತೆ ಆಶೀರ್ವದಿಸಬೇಕು" ಎಂದು ಬೇಡಿಕೊಂಡನು.

ಸನ್ಯಾಸಿಯು ಮುಗುಳು ನಗೆ ನಕ್ಕು "ಬಾಬಾ, ಬಡವನಾದರೂ ಸುಖದಿಂದ ಇರು. ಪ್ರತಿಷ್ಠಿತನಾಗಲು ಪ್ರಯತ್ನಿಸುವುದರಲ್ಲಿ ಯಾವ ಶ್ರೇಯವೂ ಇಲ್ಲ" ಎಂದು ಹೇಳಿದನು.

ಆದರೆ ಹರಿಹರನು ಸನ್ಯಾಸಿಯ ಮಾತನ್ನು ಕೇಳಲಿಲ್ಲ. ಅವನು ತನ್ನ ಮನೆತನವನ್ನು ಪ್ರತಿಷ್ಠಿತ ಮನೆತನವನ್ನಾಗಿ ಮಾಡಲು ಸನ್ಯಾಸಿ ಹೇಳಿದ್ದನ್ನೆಲ್ಲ ಕೇಳಲು ಸಿದ್ಧನಾದನು.

ಕೂಡಲೆ ಸನ್ಯಾಸಿಯು ತನ್ನ ಜೋಳಿಗೆಯಲ್ಲಿ ಒಂದು ಹಳೆಯ ಬಟ್ಟೆಯಲ್ಲಿ ಕಟ್ಟಿ ಇಟ್ಟಿದ್ದ ಕೊಳೆಯಾದ ಒಂದು ಕಾಗದದ ಸುರಳಿಯನ್ನು ಹೊರಗೆ ತೆಗೆದನು. ಅದನ್ನು ಮೇಜಿನ ಮೇಲೆ ಬಿಡಿಸಿ ಇರಿಸಿ ಅದರ ತುದಿಗಳನ್ನು ತಾನು ಗಟ್ಟಿಯಾಗಿ ಹಿಡಿದು ನಿಂತನು. ಆ ಕಾಗದದ ಮೇಲೆ ನಾನಾ ಆಕೃತಿಗಳನ್ನೂ, ಅನೇಕ ಅಂಕಿ ಸಂಖ್ಯೆಗಳನ್ನೂ ಬರೆದುದಲ್ಲದೆ ಬುಡದಲ್ಲಿ ಮತ್ತೇನನ್ನೊ ಬರೆದದ್ದನ್ನು ಹರಿಹರನು ನೋಡಿದನು. ಆ ಬರೆಹದ ಪ್ರಾರಂಭ ಈ ಕೆಳಗಿನಂತಿತ್ತು :

ಕಾಲು ಹಿಡಿದಿರೆ ಬಯಕೆ*
ಸುಮ್ಮ ಸಿರಗೊಡಳು ರಾಧಾ
ರಾ ಹೋದರುಳಿಯಿತು ಧಾ
ಕೊನೆಗೆ ಬಂದಿತು ರಾ.

---

* ಮೂಲದಲ್ಲಿ ಕೂಡ ಇದಕ್ಕೆ ವಿಶೇಷ ಅರ್ಥವಿಲ್ಲ; ಸಾಧ್ಯವಿದ್ದ ಮಟ್ಟಿಗೆ ಅದಕ್ಕೆ ಹೋಲುವಂತೆ ಅನುವಾದಿಸಲಾಗಿದೆ.

ಹುಚ್ಚ ಬಿಡು ಕಾಲ ಬೇಗ
ವಟವೃಕ್ಷದಡಿಯಲ್ಲಿ
ಬಲಕೆ ಹೋಗೆಲೊ ನಡೆದು
ಈಶಾನ್ಯ ಮೂಲೆಯಲಿ
ಇಹುದು ಸಂಕೇತ . . . ಇತ್ಯಾದಿ

ಹರಿಹರನು ಇದನ್ನೋದಿಕೊಂಡು "ಬಾಬಾ, ಏನೂ ಅರ್ಥವಾಗಲೇ ಇಲ್ಲ" ಎಂದು ಅಂದನು.

ಅದಕ್ಕೆ ಸನ್ಯಾಸಿಯು "ಹತ್ತಿರ ಇದನ್ನು ಇಟ್ಟುಕೊಂಡಿರು. ದೇವಿಯ ಪೂಜೆಯನ್ನು ನಿತ್ಯ ಮಾಡು. ಅವಳ ಅನುಗ್ರಹದಿಂದ ನಿಮ್ಮ ವಂಶದಲ್ಲಿ ಯಾರಾದರೊಬ್ಬರು ಈ ಲೇಖನದ ಅರ್ಥವನ್ನು ತಿಳಿದುಕೊಳ್ಳಲು ಶಕ್ತರಾಗುವರು. ಆಗ ನಿಮ್ಮ ವಂಶದಲ್ಲಿ ಅದಾವ ರೀತಿ ಐಶ್ವರ್ಯ ಬರುತ್ತದೆಂಬುದಕ್ಕೆ ಈ ಜಗದಲ್ಲಿ ಬೇರೆ ಹೋಲಿಕೆಯೇ ದೊರೆಯಲಾರದು" ಎಂದು ಹೇಳಿದನು.

ಈ ಸಮಯಕ್ಕೆ ಸರಿಯಾಗಿ ಹರಿಹರನ ತಮ್ಮ ಶಂಕರ ಅಲ್ಲಿಗೆ ಬಂದನು. ಅವನನ್ನು ಕಂಡು ಹರಿಹರನು ಎದುರಿಗೆ ಬಿಡಿಸಿ ಇರಿಸಿದ್ದ ಆ ಕಾಗದವನ್ನು ಅಡಗಿಸಿ ಇಡುವ ಪ್ರಯತ್ನ ಮಾಡತೊಡಗಿದನು. ಇದನ್ನು ಕಂಡ ಸನ್ಯಾಸಿಯು ನಗುತ್ತ "ಶ್ರೀಮಂತನಾಗಬೇಕೆಂಬ ಹಂಬಲದ ಹಾದಿಯಲ್ಲಿರುವ ದುಃಖಗಳು ಈಗಿನಿಂದಲೇ ಪ್ರಾರಂಭವಾಡುವು. ಆದರೆ ಯಾವುದನ್ನೂ ರಹಸ್ಯವಾಗಿ ಇಡುವ ಅವಶ್ಯಕತೆ ಇಲ್ಲ. ಏಕೆಂದರೆ ಈ ರಹಸ್ಯವನ್ನು ಕೇವಲ ಒಬ್ಬರು ಮಾತ್ರ ಭೇದಿಸಬಲ್ಲರು. ಸಾವಿರಾರು ಜನರು ಪ್ರಯತ್ನಿಸಿದರೂ ಅವರಾರಿಂದಲೂ ಅದು ಸಾಧ್ಯವಾಗಲಾರದು. ನಿಮ್ಮಲ್ಲಿ ಯಾರೊ ಒಬ್ಬರು ಈ ರಹಸ್ಯವನ್ನು ತಿಳಿದುಕೊಳ್ಳಬಲ್ಲರಾದರೂ ಅವರಾರೆಂದು ಈಗ ಹೇಳಲು ಬರುವಂತಿಲ್ಲ. ಆದ್ದರಿಂದ ಎಲ್ಲರ ಮುಂದೆ ಈ ಕಾಗದವನ್ನು ತೆರೆದೇ ಇಡಬಹುದು" ಎಂದು ಹೇಳಿದನು.

ಸನ್ಯಾಸಿಯು ಹೊರಟು ಹೋದನು. ಆದರೆ ಆ ಕಾಗದವನ್ನು ಬಚ್ಚಿ ಇಡದೆ ಇರುವುದಕ್ಕೆ ಹರಿಹರನಿಂದ ಸಾಧ್ಯವಾಗಲಿಲ್ಲ. ಬೇರೆಯವರು ಯಾರೇ ಆಗಲಿ, ಅಥವಾ ತನ್ನ ತಮ್ಮ ಶಂಕರನೇ ಆಗಲಿ, ಈ ಕಾಗದದಲ್ಲಿ ಬರೆದುದನ್ನು ತಿಳಿದುಕೊಂಡು ಶ್ರೀಮಂತರಾಗಬಹುದೆಂಬ ಅಸೂಯೆಯಿಂದ ಭಯಗೊಂಡ ಹರಿಹರನು ಆ ಕಾಗದವನ್ನು ಹಲಸಿನ ಕಟ್ಟಿಗೆಯಿಂದ ಮಾಡಿದ್ದ ಒಂದು ಪೆಟ್ಟಿಗೆಯಲ್ಲಿಟ್ಟು ಜಯಕಾಲಿಯ ಗದ್ದುಗೆಯ ಕೆಳಗೆ ಯಾರಿಗೂ ಗೊತ್ತಾಗದಂತೆ ಅಡಗಿಸಿಟ್ಟನು. ಪ್ರತಿ ಅಮಾವಾಸ್ಯೆ ಮಧ್ಯರಾತ್ರಿಯಲ್ಲಿ ದೇವಿಯ ಪೂಜೆಯನ್ನು ಮಾಡಿದ ಮೇಲೆ ಆ ಕಾಗದವನ್ನು ರಹಸ್ಯವಾಗಿಯೇ ಹೊರಗೆ ತೆಗೆದು ಅದನ್ನೋದಿ ತಿಳಿದುಕೊಳ್ಳುವ ಕೃಪೆಯನ್ನು ಜಯಕಾಲಿಯು ಅನುಗ್ರಹಿಸುವಳೇನೊ ಎಂದು ಹರಿಹರನು ಓದಿ, ಪರೀಕ್ಷಿಸಿ ನೋಡುತ್ತಿದ್ದನು.

ಇತ್ತೀಚೆಗೆ ಶಂಕರನು ಅಣ್ಣ ಹರಿಹರನೊಂದಿಗೆ ಅತಿ ವಿನಯದಿಂದ ನಡೆದು

ಕೊಳ್ಳುತ್ತಿದ್ದನು. ಒಂದು ಸಲ ಅವನು "ಅಣ್ಣಾ, ನನಗೆ ಆ ಕಾಗದವನ್ನು ಒಂದು ಸಲ ತೋರಿಸು" ಎಂದು ಅತಿ ವಿನಯದಿಂದ ಕೇಳಿಕೊಂಡನು.

ಅದಕ್ಕೆ ಹರಿಹರನು "ಹುಚ್ಚ, ದೂರ ಸರಿ. ಆ ಮಗ, ಭಂಡ ಸನ್ಯಾಸಿ ಆ ಕಾಗದದಲ್ಲಿ ಸಿಕ್ಕಂತೆ ಗೀಟುಗೆರೆಗಳನ್ನು ಎಳೆದು ನಮಗೆ ಮೋಸಮಾಡಿ ಹೋಗಿದ್ದಾನೆ. ನಾನು ಆ ಕಾಗದವನ್ನು ಸುಟ್ಟುಹಾಕಿದ್ದೇನೆ" ಎಂದು ಸಿಟ್ಟಿನಿಂದ ಹೇಳಿದನು.

ಶಂಕರನು ಸುಮ್ಮನಾದನು. ಮುಂದೆ ಕೆಲ ದಿನಗಳ ಮೇಲೆ ಶಂಕರನನ್ನು ಮನೆಯಲ್ಲಿ ಕಾಣುವುದೇ ಅಶಕ್ಯವಾಯಿತು.

ಇದರಿಂದ ಹರಿಹರನ ಮನೆಗೆಲಸಗಳೆಲ್ಲ ಹಾಗೇ ಉಳಿದುಬಿಟ್ಟು ಅದರಿಂದ ಅವನಿಗೆ ತುಂಬ ತೊಂದರೆಯಾಯಿತು. ಬರಬರುತ್ತ ಗುಪ್ತಧನದ ಧ್ಯಾನವನ್ನು ಒಂದು ನಿಮಿಷಕೂಡ ಬಿಟ್ಟು ಇರುವುದು ಅವನಿಂದ ಆಗದಾಯಿತು.

ಸಾಯುವಾಗ, ಹರಿಹರನು ತನ್ನ ಹಿರಿಯಮಗ ಶ್ಯಾಮಪಾದನ ಕೈಯಲ್ಲಿ ಸನ್ಯಾಸಿ ಕೊಟ್ಟಿದ್ದ ಆ ಕಾಗದವನ್ನು ಕೊಟ್ಟು, ಭಕ್ತಿಯಿಂದ ಪೂಜೆಮಾಡಲು ಹೇಳಿ ಪ್ರಾಣಬಿಟ್ಟನು.

ಈ ಕಾಗದ ಕೈಸೇರಿದಮೇಲೆ ಶ್ಯಾಮಪಾದನು ತನ್ನ ಸರಕಾರಿ ನೌಕರಿಯನ್ನು ಬಿಟ್ಟನು. ಜಯಕಾಲಿಯ ಪೂಜೆ ಮಾಡುವುದರಲ್ಲಿ ಮತ್ತು ಒಬ್ಬನೇ ಕುಳಿತು ಏಕಾಂತದಲ್ಲಿ ಆ ಕಾಗದವನ್ನು ಓದಿ ತಿಳಿದುಕೊಳ್ಳುವುದರಲ್ಲಿ ತನ್ನ ಉಳಿದ ಆಯುಷ್ಯವನ್ನು ಕಳೆದ ಅವನ ಬಾಳು ಅದೆಂತು ಇದ್ದಿತೆಂಬುದನ್ನು ತಿಳಿದುಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ.

ಮೃತ್ಯುಂಜಯನು ಶ್ಯಾಮಪಾದನ ಹಿರಿಯಮಗ. ತಂದೆಯ ಮರಣದ ನಂತರ ಇವನು ಈ ಕಾಗದದ ಒಡೆಯನಾಗಿದ್ದನು. ದಿನಗಳೆದಂತೆ ಇವನ ಪರಿಸ್ಥಿತಿಯು ಹಾಳಾಗುತ್ತ ಹೋದಂತೆ ಅವನ ಮನಸ್ಸು ಆ ಕಾಗದದಲ್ಲಿ ಮುಳುಗಿ ಹೋಗಿತ್ತು. ಇಂತಹ ವಿಷಮಪರಿಸ್ಥಿತಿಯಲ್ಲಿ ಮೃತ್ಯುಂಜಯನು ಇರುವಾಗ ಕಳೆದ ಅಮಾವಾಸ್ಯೆಯ ರಾತ್ರಿ ಪೂಜೆ ಮುಗಿದಮೇಲೆ ಇದ್ದುದಿದ್ದಂತೆ ಆ ಕಾಗದವೇ ಇಲ್ಲದಾಗಿಹೋಗಿತ್ತು. ಅದರೊಂದಿಗೆ ಆ ಸನ್ಯಾಸಿಯೂ ಕೂಡ ಓಡಿಹೋಗಿದ್ದನು.

"ಈ ಸನ್ಯಾಸಿಯನ್ನು ಬಿಡಬಾರದು. ಇವನಿಂದಲೇ ಈ ರಹಸ್ಯವು ತಿಳಿಯಲು ಸಾಧ್ಯ" ಎಂದು ಮೃತ್ಯುಂಜಯನು ತನ್ನಷ್ಟಕ್ಕೆ ತಾನು ಅಂದುಕೊಂಡನು.

ಅಂದಿನ ದಿನವೇ ಸನ್ಯಾಸಿಯ ಶೋಧಕ್ಕಾಗಿ ಮೃತ್ಯುಂಜಯನು ಮನೆ ಬಿಟ್ಟು ಹೋದನು. ಅವನ ತಿರುಗಾಟದಲ್ಲಿ ಇಡೀ ಒಂದು ವರ್ಷ ಕಳೆದು ಹೋಯಿತು.

3

ಗ್ರಾಮದ ಹೆಸರು "ಧಾರಾಗೋಲ." ಅಲ್ಲಿ ಒಂದು ಕಿರಾಣಿ ಅಂಗಡಿಯಲ್ಲಿ ಮೃತ್ಯುಂಜಯನು ತಂಬಾಕು ಸೇವಿಸುತ್ತ ಕುಳಿತು ಏನನ್ನೊ ಯೋಚಿಸುತ್ತಿದ್ದನು. ತುಸು ದೂರದಲ್ಲಿ ಒಬ್ಬ ಸನ್ಯಾಸಿಯು ಊರಹೊರಗೆ ಗದ್ದೆಗಳ ಕಡೆಗೆ ಹೋಗುವುದನ್ನು ಅವನು ನೋಡಿದನು. ಕೂಡಲೇ ಅವನಾರೆಂಬುದರ ಕಡೆಗೆ ಮೃತ್ಯುಂಜಯನ ಲಕ್ಷ್ಯ

ಹೋಗಲಿಲ್ಲ. ಆದರೆ ಮರುಕ್ಷಣದಲ್ಲಿ ತಾನು ಹುಡುಕುತ್ತ ಈ ವರೆಗೂ ಅಲೆದಾಡಿದ ಸನ್ಯಾಸಿಯೇ ಅವನು ಎಂದು ಮೃತ್ಯುಂಜಯನಿಗೆ ಫಕ್ಕನೆ ಹೊಳೆದಂತಾಯಿತು. ಇದ್ದುದಿದ್ದಂತೆ ಕೈಯಲ್ಲಿದ್ದ ಗುಡಗುಡಿಯನ್ನು ಕೆಳಗೆ ಇಟ್ಟು ಅಂಗಡಿಯಿಂದ ಹೊರಗೆ ಹೊರಟನು. ಇದನ್ನು ಕಂಡು ಅಂಗಡಿಯವನಿಗೆ ಆಶ್ಚರ್ಯವಾಯಿತು. ಆದರೆ ಮೃತ್ಯುಂಜಯನಿಗೆ ಮತ್ತೆ ಆ ಸನ್ಯಾಸಿಯು ಕಣ್ಣಿಗೆ ಬೀಳಲೇ ಇಲ್ಲ.

ಆಗ ಸಂಜೆಯಾಗಿತ್ತು. ಸುತ್ತಲೂ ಕತ್ತಲು ಮುಸುಕಿತ್ತು. ಆ ಅಪರಿಚಿತ ಪ್ರದೇಶದಲ್ಲಿ ಆ ಸನ್ಯಾಸಿಯು ಕಣ್ಮರೆಯಾದ ಸ್ಥಳವನ್ನು ಗೊತ್ತುಹಚ್ಚುವುದು ಮೃತ್ಯುಂಜಯನಿಗೆ ಸಾಧ್ಯವಾಗಲಿಲ್ಲ. ಮತ್ತೆ ಅವನು ಅಂಗಡಿಗೆ ಮರಳಿ ಬಂದನು. "ದಟ್ಟವಾಗಿ ಬೆಳೆದಿರುವ ಈ ಅರಣ್ಯದಲ್ಲಿ ಏನಿದೆ?" ಎಂದು ಅವನು ಆ ಅಂಗಡಿಕಾರನನ್ನು ಕೇಳಿದನು.

ಅದಕ್ಕೆ ಅಂಗಡಿಕಾರನು "ಒಂದು ಕಾಲಕ್ಕೆ ಈ ಕಾಡು ಒಂದು ದೊಡ್ಡ ರಾಜಧಾನಿಯಾಗಿತ್ತು. ಆದರೆ ಅಗಸ್ತ್ಯಮುನಿಯ ಶಾಪದಿಂದ ಆ ರಾಜನೂ ಅವನ ಪ್ರಜೆಗಳೂ ಇದ್ದುದಿದ್ದಂತೆ ಮರಣಹೊಂದಿದರು. ಅಲ್ಲಿ ಈಗಲೂ ಕೂಡ ಮುತ್ತು, ರತ್ನ, ಬಂಗಾರ ರಾಶಿಯಾಗಿ ಬಿದ್ದಿದೆ ಎಂದು ಜನರಾಡುತ್ತಾರೆ. ಹಗಲಿನಲ್ಲಿ ಕೂಡ ಆ ಕಾಡಿನೊಳಗೆ ಹೋಗುವ ಧೈರ್ಯ ಯಾರಿಗೂ ಇಲ್ಲ. ಅಲ್ಲದೆ ಹೋದವರಾರೂ ತಿರುಗಿ ಬಂದಿಲ್ಲ" ಎಂದು ಹೇಳಿದನು.

ಇದನ್ನು ಕೇಳಿ ಮೃತ್ಯುಂಜಯನ ಮನಸ್ಸು ಚಂಚಲವಾಯಿತು. ಇಡೀ ರಾತ್ರಿ ಆ ಅಂಗಡಿಯ ಮುಂದೆ ಇದ್ದ ಕಟ್ಟೆಯ ಮೇಲೆ ಕುಳಿತು ಅಂಗಡಿಕಾರನು ಹೇಳಿದ್ದನ್ನೇ ಮತ್ತೆ ಮತ್ತೆ ನೆನಪಿಗೆ ತಂದುಕೊಂಡನು. ಆಗ ಅವನಿಗೆ ತಾನು ಹುಡುಕುತ್ತಿದ್ದ ಸನ್ಯಾಸಿ, ಅವನು ಕೊಟ್ಟಿದ್ದ ಆ ರಹಸ್ಯ ಲಿಪಿಯ ಕಾಗದ, ಅದರೊಳಗೆ ಯಾರಿಗೂ ತಿಳಿಯಲಾಗದಂತೆ ಬರೆದಿದ್ದ ಆ ಬರೆಹ ಎಲ್ಲವೂ ಅವನ ಸ್ಮೃತಿಪಟಲದ ಮೇಲೆ ಮೂಡಿ ಕಾಣಿಸಹತ್ತಿದವು. ಆ ಕಾಗದವನ್ನು ಅವನು ಅದೆಷ್ಟೋ ಸಲ ಓದಿದ್ದನಾದ್ದರಿಂದ ಅದು ಅವನಿಗೆ ಕಂಠಪಾಠವಾಗಿತ್ತು.

ಕಾಲು ಹಿಡಿದಿರೆ ಬಯಕೆ
ಸುಮ್ಮನಿರಗೊಡಳು ರಾಧಾ
ರಾ ಹೋದರುಳಿಯಿತು ಧಾ
ಕೊನೆಗೆ ಬಂದಿತು ರಾ ಇತ್ಯಾದಿ

ಮೃತ್ಯುಂಜಯನ ತಲೆ ಕಾಯ್ದು ಕೆಂಡವಾಯಿತು. ಅದೆಷ್ಟು ಪ್ರಯತ್ನಿಸಿದರೂ ಅವನಿಂದ ಇದನ್ನು ಮರೆಯಲಾಗಲಿಲ್ಲ. ತಲೆಯಿಂದ ಆ ವಿಚಾರವನ್ನು ಬಿಸುಟು ಹಾಕುವುದು ಅವನಿಂದ ಸಾಧ್ಯವಾಗಲಿಲ್ಲ. ಕೊನೆಗೆ ಬೆಳಗಿನ ತಂಗಾಳಿಗೆ ಅವನಿಗೆ ತುಸು ನಿದ್ದೆ ಹತ್ತಿತು. ಸ್ವಪ್ನದಲ್ಲಿ ಈ ನಾಲ್ಕು ಸಾಲುಗಳ ಅರ್ಥ ಒಮ್ಮಿಂದೊಮ್ಮೆ ಅವನಿಗೆ ಅತಿ ಸುಲಭವಾಗಿ ಗೊತ್ತಾಯಿತು. ರಾಧಾದಲ್ಲಿಯ ರಾ ಹೋದರೆ ಧಾ ಉಳಿಯಿತು. ಹೋದ ರಾ ಅಕ್ಷರವನ್ನು ಧಾದ ಮುಂದೆ ಇಡಲು ಧಾರಾ ಎಂದಾಯಿತು. ಧಾರಾ

ದಿಂದ ಪ್ರಾರಂಭವಾದ ಈ ಊರಿನ ಹೆಸರು ಧಾರಾಗೋಲ ಎಂಬುದೇ ತಾನು ಈ ವರೆಗೂ ಹುಡುಕುತ್ತಿದ್ದ ಸ್ಥಳವೆಂದು ಅವನಿಗೆ ಗೊತ್ತಾಯಿತು.

ಇಷ್ಟರಲ್ಲಿ ಸ್ವಪ್ನವು ಮುಕ್ತಾಯವಾಗಲು ಅವನಿಗೆ ಎಚ್ಚರವಾಯಿತು. ಮಲಗಿದ್ದ ಅವನು ಚಂಗನೆ ಎದ್ದು ಕುಳಿತನು.

4

ಇಡೀ ದಿನ ಅರಣ್ಯದಲ್ಲಿ ಸುತ್ತಾಡಿ, ಸಾಯಂಕಾಲ ಅತಿ ಪ್ರಯಾಸದಿಂದ ಹಾದಿಯನ್ನು ಹುಡುಕಿಕೊಂಡು ಮೃತ್ಯುಂಜಯನು ಆಹಾರವಿಲ್ಲದೆ ಉಪವಾಸ, ಬಳಲಿ ಬೆಂಡಾಗಿ ಮೃತಪ್ರಾಯ ಅವಸ್ಥೆಯಲ್ಲಿ ಹಳ್ಳಿಗೆ ಮರಳಿ ಬಂದನು.

ಮರುದಿನ ಮತ್ತೆ ಧೋತರದಲ್ಲಿ ಅವಲಕ್ಕಿಯನ್ನು ಕಟ್ಟಿಕೊಂಡು ಮೃತ್ಯುಂಜಯನು ಮತ್ತೆ ಕಾಡಿನಲ್ಲಿ ಹೊರಟನು. ಮಧ್ಯಾಹ್ನ ಒಂದು ಸರೋವರಕ್ಕೆ ಬಂದನು. ಸರೋವರದ ನೀರು ತಿಳಿಯಾಗಿತ್ತು. ಪರಿಶುದ್ಧವಾಗಿತ್ತು. ಸರೋವರದ ದಂಡೆಗುಂಟ ಕಮಲದ ಬಳ್ಳಿ ಬೆಳೆದಿತ್ತು. ನಾಲ್ಕೂ ಕಡೆಗೆ ದಾರಿಯು ಸುತ್ತಿಕೊಂಡಿತ್ತು. ಕಲ್ಲಿನಿಂದ ಕಟ್ಟಿದ್ದ ಸರೋವರದ ಮೆಟ್ಟಿಲುಗಳು ಶಿಥಿಲಗೊಂಡು ಕೆಲವಡೆ ಬಿದ್ದು ಹೋಗಿದ್ದವು. ಅಲ್ಲಿಯೇ ಮೃತ್ಯುಂಜಯನು ತಾನು ತಂದಿದ್ದ ಅವಲಕ್ಕಿಯನ್ನು ನೀರಿನಲ್ಲಿ ನೆನೆಸಿ ತಿಂದನು. ಅನಂತರ ಸರೋವರದ ಸುತ್ತಲೂ ಇದ್ದ ಗೋಡೆಯ ಪ್ರದಕ್ಷಿಣೆಯನ್ನು ಹಾಕುತ್ತ ಏನನ್ನೋ ಹುಡುಕಹತ್ತಿದನು.

ಪಶ್ಚಿಮದಿಕ್ಕಿನ ಗೋಡೆಯಗುಂಟ ಹೋಗುತ್ತಿದ್ದ ಅವನು ಅದೇನನ್ನೋ ಕಂಡಂತಾಗಿ ಇದ್ದುಕಿದ್ದಂತೆ ನಿಂತುಬಿಟ್ಟನು. ಒಂದು ಹುಣಸೆ ಮರವನ್ನು ಸುತ್ತಿಕೊಂಡು ಬೆಳೆದ ಒಂದು ವಟವೃಕ್ಷವನ್ನು ಕಂಡನು. ಕೂಡಲೇ ಅವನಿಗೆ—

"ವಟವೃಕ್ಷದಡಿಯಲ್ಲಿ
ಬಲಕೆ ಹೋಗಲೊ ನಡೆದು

ಎಂಬ ಸಾಲುಗಳು ಮಿಂಚಿನಂತೆ ಹೊಳೆದು ನೆನಪಿಗೆ ಬಂದವು. ದಕ್ಷಿಣಕ್ಕೆ ತುಸು ದೂರ ಮೃತ್ಯುಂಜಯನು ನಡೆದು ಹೋಗಲಾಗಿ ನಿಬಿಡವಾಗಿ ಬೆಳೆದ ಕಾಡಿನ ಮಧ್ಯಕ್ಕೆ ಬಂದು ನಿಂತನು. ಎದುರಿಗಿದ್ದ ಬೆತ್ತದ ಗಿಡಗಳ ಗುಂಪನ್ನು ಭೇದಿಸಿಕೊಂಡು ಹೋಗುವುದು ಅಸಾಧ್ಯವಾಗಿತ್ತು. ಆದರೂ ಆ ಗಿಡವನ್ನು ಬಿಟ್ಟು ಬೇರೆ ಕಡೆಗೆ ಹೋಗಬಾರದೆಂದು ಮೃತ್ಯುಂಜಯನು ನಿರ್ಧಾರ ಮಾಡಿದನು.

ತಿರುಗಿ ಆ ವೃಕ್ಷದ ಹತ್ತಿರ ಬರುವಾಗ ಅಲ್ಲಿಯೇ ಸನಿಹದಲ್ಲಿದ್ದ ಒಂದು ಗುಡಿಯ ಗೋಪುರ ಅವನಿಗೆ ಕಾಣಿಸಿತು. ಆ ದಿಕ್ಕನ್ನೇ ಕಣ್ಣೆದುರು ಇರಿಸಿಕೊಂಡು ನಡೆದು ಹೋಗಿ ಹಾಳುಬಿದ್ದ ಒಂದು ದೇವಸ್ಥಾನಕ್ಕೆ ಬಂದನು. ಅಲ್ಲಿ ಒಂದು ಒಲೆ, ಸುಟ್ಟ ಸೌದೆಯ ತುಂಡುಗಳು ಬಿದ್ದಿದ್ದವು. ಅಲ್ಲದೆ ಅಲ್ಲಲ್ಲಿ ತುಸು ಮೊಸರೂ ಬಿದ್ದದ್ದು ಕಾಣಿಸಿತು. ಮೃತ್ಯುಂಜಯನು ಸಾವಧಾನವಾಗಿ ಮುರಿದುಹೋಗಿದ್ದ ಬಾಗಿಲೊಳಗಿಂದ ದೇವಸ್ಥಾನದೊಳಗೆ ಹೋದನು. ಅಲ್ಲಿ ಯಾರೂ ಇರಲಿಲ್ಲ. ಯಾವ ದೇವತಾ

ವಿಗ್ರಹವೂ ಕೂಡ ಇರಲಿಲ್ಲ. ಕೇವಲ ಒಂದು ಕಂಬಳಿ, ಒಂದು ಕಮಂಡಲು ಹಾಗೂ ಸನ್ಯಾಸಿಗಳು ಉಪಯೋಗಿಸುವ ಕಾವಿಬಣ್ಣದ ಒಂದು ಧೋತರ ಅಲ್ಲಿ ಬಿದ್ದಿದ್ದವು.

ಆಗ ಸಂಜೆಯಾಗುತ್ತ ಬಂದಿತ್ತು. ಊರಿನಿಂದ ಬಹು ದೂರ, ಆ ಅರಣ್ಯದ ಮಧ್ಯದಲ್ಲಿ, ಯಾರಿಗೂ ಬರಲು ಅಸಾಧ್ಯವಾದ ಆ ಮಂದಿರದಲ್ಲಿ ಜನವಸತಿಯ ಕುರುಹುಗಳನ್ನು ಕಂಡ ಮೃತ್ಯುಂಜಯನಿಗೆ ಸಂತೋಷವಾಯಿತು. ದೇವಸ್ಥಾನದ ಕಲ್ಲಿನ ಕಂಬವೊಂದು ಮುರಿದು ಬಾಗಿಲ ಬಳಿ ಬಿದ್ದಿತ್ತು. ಅದರಮೇಲೆ ಕುಳಿತು ಮೃತ್ಯುಂಜಯನು ತಲೆತಗ್ಗಿಸಿ ಆಲೋಚನೆ ಮಾಡುತ್ತಿರುವಾಗ ಪಕ್ಕನೆ ಆ ಕಲ್ಲು ಕಂಬದಮೇಲೆ ಕೆತ್ತಿದ್ದ ಶಿಲಾಲಿಪಿಯೊಂದು ಅವನ ಕಣ್ಣಿಗೆ ಬಿತ್ತು. ಕೂಡಲೆ ಎದ್ದು ನೋಡಲಾಗಿ ಒಂದು ಚಕ್ರ ಕೆತ್ತಿದ್ದನ್ನೂ ಕೂಡ ಅವನು ಕಂಡನು. ಅತಿ ಸ್ಪಷ್ಟವಾಗಿ ಕಾಣಿಸಿದ ಆ ಚಕ್ರದಲ್ಲಿ ಅಷ್ಟೇ ಸ್ಪಷ್ಟವಾಗಿ ಕಾಣುವಂತೆ ಕೆಳಗೆ ಬರೆದ ಪ್ರಕಾರ ಸಾಂಕೇತಿಕ ಅಂಕಿ ಅಕ್ಷರಗಳನ್ನು ಕೆತ್ತಲಾಗಿತ್ತು.

ಈ ಚಕ್ರದ ಪರಿಚಯವು ಮೃತ್ಯುಂಜಯನಿಗೆ ಸಾಕಷ್ಟು ಇತ್ತು. ಅದೆಷ್ಟು ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಈ ಚಕ್ರದ ಪೂಜೆಯನ್ನೂ, ಕಾಳಿ ಮಹಾದೇವಿಯ ಪೂಜೆಯನ್ನೂ ಮಾಡಿ ಈ ಚಕ್ರದ ಅರ್ಥವನ್ನು ಹೇಳಿಕೊಡಲು ಮೃತ್ಯುಂಜಯನು ತನ್ನ ಕುಲದೇವತೆಯನ್ನು ಪ್ರಾರ್ಥಿಸಿಕೊಂಡಿದ್ದನು! ತುಪ್ಪದ ದೀಪ, ಊದಿನ ಕಡ್ಡಿ ಇತ್ಯಾದಿಗಳನ್ನು ಹಚ್ಚಿ ದೇವೀಮಂದಿರದಲ್ಲಿ ಅದೆಷ್ಟು ರಾತ್ರಿ ಭಕ್ತಿಯಿಂದ ಅವನು ದೇವಿಯನ್ನು ಮರೆಹೊಕ್ಕಿದ್ದನು! ಇಂದು ತನ್ನ ಅಭೀಷ್ಟವು ಈಡೇರುವ ಸುಸಮಯವು ಒದಗಿಬಂದಿದೆ ಎಂದು ಮೃತ್ಯುಂಜಯನಿಗೆ ಅನಿಸಿ ಅವನಿಗೆ ಸಂತೋಷದ ಭರದಲ್ಲಿ ರೋಮಾಂಚನವಾಯಿತು.

ನೌಕೆ ದಡದ ಹತ್ತಿರ ಬಂದ ಮೇಲೂ ಮುಳುಗಬಹುದು. ಒಂದು ಚಿಕ್ಕ ತಪ್ಪು ಮಾಡಿದರೂ ಅನರ್ಥವು ಸಂಭವಿಸಬಹುದು. ಅಲ್ಲದೆ ಹಿಂದೆ ಬಂದು ಉದ್ಧಾರ ಮಾಡು

ವೆನೆಂದು ಹೇಳಿದ ಆ ಸನ್ಯಾಸಿಯು ಮತ್ತೆ ಈಗ ಬಂದು ಏನಾದರೂ ಆತಂಕ ತಂದೊಡ್ಡ ಬಹುದು ಎಂದು ಮೃತ್ಯುಂಜಯನಿಗೆ ಭಯಬಂದು ಅವನ ಮನಸ್ಸು ಹೊಯ್ದಾಡ ಹತ್ತಿತು. ಈಗ ತಾನು ಏನು ಮಾಡಬೇಕು? ತನ್ನ ಕರ್ತವ್ಯವೇನು? ಎಂಬುದು ಅವ ನಿಗೆ ಆ ಕ್ಷಣಕ್ಕೆ ಹೊಳೆಯದಾಯಿತು. ತಾನು ಈಗಾಗಲೇ ಪ್ರತ್ಯಕ್ಷವಾಗಿ ಧನಕನಕ ವಜ್ರವೈಡೂರ್ಯಗಳಿಂದ ತುಂಬಿ ತುಳುಕುವ ಕೊಪ್ಪರಿಗೆಯ ಮೇಲೆ ಕುಳಿತಿರುವೆನೆಂದು ಅವನು ಭಾವಿಸಿಕೊಂಡನು.

ಕುಳಿತಲ್ಲಿಯೇ ಅವನು ಜಯಕಾಲಿಯ ಹೆಸರನ್ನು ಉಚ್ಚರಿಸುತ್ತ ಜಪಮಾಡ ತೊಡಗಿದನು. ರಾತ್ರಿಯಾದಂತೆ ಕತ್ತಲೆಯು ಹೆಚ್ಚಾಗುತ್ತ ಸಂಪೂರ್ಣ ಅಂಧಕಾರವೇ ಮುಸುಕಿತು. ಕಾಡುಪ್ರಾಣಿಗಳ ಚೀತ್ಕಾರದಿಂದ ಆ ಅರಣ್ಯವು ನಿನದಿಸಹತ್ತಿತು.

5

ತುಸು ಸಮಯ ಕಳೆದ ಮೇಲೆ ಅರಣ್ಯದ ಮಧ್ಯ ಒಂದು ಕಡೆ ಬೆಂಕಿಯು ಕಾಣಿಸಿತು. ಮೃತ್ಯುಂಜಯನು ತನ್ನ ಚೌಕಾಸನದಿಂದ ಎದ್ದು ಆ ಜೆಂಕಿ ಕಂಡ ಕಡೆಗೆ ಧಾವಿಸಿ ಹೋದನು. ಅತಿ ಪ್ರಯಾಸದಿಂದ ತುಸು ದೂರ ಹೋದ ಮೇಲೆ ಒಂದು ಅಶ್ವತ್ಥ ವೃಕ್ಷದ ಬುಡದ ಹೊದರಿನಲ್ಲಿ ಈ ಮೊದಲೇ ತನಗೆ ಪರಿಚಿತನಾದ ಆ ಸನ್ಯಾ ಸಿಯು ಒಂದು ಮಲಿನ ಕಾಗದದ ಮೇಲೆ ಬರೆದ ಅಂಕಿಗಳ ಪ್ರಕಾರ ಒಂದು ಅಳತೆಗೋಲನ್ನು ಕೈಯಲ್ಲಿ ಹಿಡಿದು ಲೆಕ್ಕಹಾಕುತ್ತಿದ್ದುದನ್ನು ಮೃತ್ಯುಂಜಯನು ನೋಡಿದನು.

ಸನ್ಯಾಸಿಯು ಕೈಯಲ್ಲಿ ಹಿಡಿದ ಕಾಗದವು ಮೃತ್ಯುಂಜಯನ ತಂದೆಯ ಬಳಿ ಇದ್ದಂತಹ ಕಾಗದವೇ ಆಗಿತ್ತು. ಆ ಕಾಗದದ ಮೇಲೆ ಅದೇ ರೀತಿ ಬರೆದಿತ್ತು. ಇದನ್ನು ಕಂಡು ಮೃತ್ಯುಂಜಯನು ಸಿಟ್ಟಿಗೆದ್ದು "ಎಲೆ ಕಳ್ಳ, ಭಂಡ ಸನ್ಯಾಸಿ, ಈ ರೀತಿ ಮೃತ್ಯುಂಜಯನಿಗೆ ನೀನು ಮೋಸಮಾಡಿ ದುಃಖಕೊಡುತ್ತಿರುವೆಯಲ್ಲವೇ ? " ಎಂದು ಅವನು ತನ್ನ ಮನದೊಳಗೆ ಅಂದುಕೊಂಡನು.

ಸನ್ಯಾಸಿಯು ಒಮ್ಮೆ ಅಂಕಿಗಳ ಲೆಕ್ಕಹಾಕುವನು. ಕೂಡಲೆ ಅಳತೆಗೋಲ ನ್ನೆತ್ತಿಕೊಂಡು ನೆಲವನ್ನು ಅಳೆಯುತ್ತ ಮುಂದೆ ಸಾಗುವನು. ತುಸು ದೂರ ಹೋಗಿ ಲೆಕ್ಕ ತಪ್ಪಿಹೋದುದನ್ನು ಕಂಡು ಹತಾಶನಾಗಿ ಕತ್ತು ಚಲ್ಲಿ ಮತ್ತೆ ಮೊದಲಿದ್ದ ಸ್ಥಳಕ್ಕೆ ಬಂದು ಪುನಃ ಅಂಕಿಗಳನ್ನು ಗುಣಿಸಿ ಲೆಕ್ಕ ಮಾಡುತ್ತಿದ್ದನು.

ಇದೇ ರೀತಿ ಆ ಸನ್ಯಾಸಿಯು ಇಡೀ ರಾತ್ರಿ ಕಳೆದನು. ಬೆಳಗಿನ ತಂಗಾಳಿಗೆ ಮರಗಳ ತುದಿಯಲ್ಲಿದ್ದ ನವ ಪಲ್ಲವಗಳು ಸಯವಾಗಿ ಬೀಸಿದ ಇನಿದನಿಯನ್ನು ಕೇಳಿ ಸನ್ಯಾಸಿಯು ತನ್ನ ಕಾಗದವನ್ನು ಸುತ್ತಿಕೊಂಡು ಅಲ್ಲಿಂದ ಹೊರಟು ಹೋದನು.

ಇದನ್ನು ಕಂಡ ಮೃತ್ಯುಂಜಯನಿಗೆ ಮುಂದೇನು ಮಾಡಬೇಕೆಂಬುದೇ ತಿಳಿಯದಾಯಿತು. ಸನ್ಯಾಸಿಯ ಸಹಾಯವಿಲ್ಲದೆ ಈ ಕೆಲಸ ತನ್ನೊಬ್ಬನಿಂದ ಸಾಧ್ಯ ವಿಲ್ಲ" ಎಂದು ಅವನಿಗೆ ಅನಿಸಿತು. ಅದರೊಂದಿಗೆ ಆ ಸ್ವಾರ್ಥಿ ಸನ್ಯಾಸಿಯು ತನಗೆ ಯಾವ ಸಹಾಯವನ್ನೂ ಮಾಡಲಾರನೆಂದೂ ಅವನಿಗೆ ಮನದಟ್ಟಾಯಿತು. ಹೀಗಿರು

ವಾಗ ಸನ್ಯಾಸಿಯು ಮಾಡುವುದನ್ನೆಲ್ಲ ತಾನು ರಹಸ್ಯವಾಗಿ ನೋಡುವುದನ್ನು ಬಿಟ್ಟು ಅವನಿಗೆ ಬೇರೆ ಮಾರ್ಗವಿಲ್ಲವೆಂದು ತೋರಿತು. ಆದರೆ ಹಗಲು ತಾನು ಗ್ರಾಮಕ್ಕೆ ಹೋಗದಿದ್ದರೆ ತನಗೆ ಊಟ ದೊರೆಯುವ ಬಗೆ ಹೇಗೆ? ಕೊನೆಗೆ ನಾಳೆ ಒಂದು ದಿನ ವಾದರೂ ಹಳ್ಳಿಗೆ ಹೋಗಿ ಆಹಾರದ ವ್ಯವಸ್ಥೆಯನ್ನು ಮಾಡಿಕೊಂಡು ಬರುವುದೇ ಅನಿವಾರ್ಯವೆಂದು ಅವನು ನಿರ್ಧರಿಸಿದನು.

ಪೂರ್ವದಿಕ್ಕಿನ ಕ್ಷಿತಿಜದಲ್ಲಿ ಕಂಡ ನಸುಕಿನ ತುಸು ಬೆಳಕು ಮುಂದೆ ಅರಣ್ಯ ವನ್ನೂ ಬೆಳಗಿತು. ಮೃತ್ಯುಂಜಯನು ಸನ್ಯಾಸಿಯು ಲೆಕ್ಕಮಾಡುತ್ತ ಕುಳಿತ ಸ್ಥಳವನ್ನು ಚೆನ್ನಾಗಿ ನೋಡಿಕೊಂಡನು. ಅದರ ಗುರುತನ್ನು ನೆನಪಿನಲ್ಲಿಟ್ಟುಕೊಂಡನು.

ಕಾಡಿನೊಳಗಿನ ಕತ್ತಲೆಯು ಬರಬರುತ್ತ ಕಡಿಮೆಯಾಗುತ್ತ ಬಂತು. ಮೃತ್ಯುಂಜ ಯನು ಅಲ್ಲಿಂದೆದ್ದು ಸಾವಧಾನದಿಂದ ಊರಿನ ದಾರಿಯನ್ನು ಹಿಡಿದನು. ಆಗಾಗ ನಿಂತು ನಾಲ್ಕೂಕಡೆಗೆ ನೋಡಿ ಮುಂದೆ ಸಾಗಿದನು. ತನ್ನನ್ನೆಲ್ಲಿ ಆ ಸನ್ಯಾಸಿಯು ಕದ್ದುನೋಡುವನೋ ಎಂಬ ಭಯ ಅವನಿಗಿತ್ತು.

ಮೃತ್ಯುಂಜಯನು ಉಳಿದುಕೊಂಡಿದ್ದ ಕಿರಾಣಿ ಅಂಗಡಿಯ ಪಕ್ಕದಲ್ಲಿಯೇ ಒಬ್ಬ ಬ್ರಾಹ್ಮಣ ಮುದುಕಿ ಇದ್ದಳು. ಅವಳು ಅಂದು ತಾನು ಹಿಡಿದಿದ್ದ ವ್ರತವನ್ನು ಮುಗಿಸಿ ಉದ್ಯಾಪನೆ ಮಾಡಿದ್ದಳು. ಅನೇಕ ಬ್ರಾಹ್ಮಣರು ಊಟಕ್ಕೆ ಆಗಮಿಸಿದ್ದರು. ಅವರೊಂದಿಗೆ ಮೃತ್ಯುಂಜಯನಿಗೂ ಅಂದು ಸುಗ್ರಾಸ ಭೋಜನವಾಯಿತು. ಅನೇಕ ದಿನಗಳ ಮೇಲೆ ದೊರೆತ ಈ ಸುಗ್ರಾಸ ಭೋಜನದಿಂದ ಅವನ ಹೊಟ್ಟೆ ಭಾರವಾಗಿ ಅವನಲ್ಲಿ ತುಸು ಆಲಸ್ಯ ತಲೆದೋರಿತು. ಊಟವಾದ ಮೇಲೆ ಅವನಿಗೆ ತಂಬಾಕು ಸೇವಿಸಬೇಕೆಂದೆನಿಸಿ ಅಂಗಡಿಗೆ ಹೋಗಿ ಗುಡಗುಡಿಯನ್ನು ತರಬೇಕೆನ್ನುವಷ್ಟರಲ್ಲಿಯೇ ಅವನಿಗೆ ಗಾಢ ನಿದ್ದೆ ಬಂತು. ರಾತ್ರಿ ನಿದ್ದೆ ಇರಲೇ ಇಲ್ಲ. ಅಲ್ಲದೆ ಅವನು ತುಂಬ ದಣಿದಿದ್ದನು.

6

ಇಂದು ಮೃತ್ಯುಂಜಯನು ಬೆಳಗ್ಗೆ ಆದಷ್ಟು ಬೇಗ ಊಟ ಮುಗಿಸಿಕೊಂಡು ಇನ್ನೂ ಸಾಕಷ್ಟು ಹೊತ್ತಿರುವಾಗಲೇ ಮತ್ತೆ ಕಾಡಿಗೆ ಹೊರಡಬೇಕೆಂದು ಮೊದಲೇ ಗೊತ್ತುಮಾಡಿಕೊಂಡಿದ್ದನು. ಆದರೆ ಎಲ್ಲವೂ ತಲೆಕೆಳಗಾಗಿ ಹೋಯಿತು. ಅವನಿಗೆ ಎಚ್ಚರವಾದಾಗ ಸೂರ್ಯಾಸ್ತವಾಗುತ್ತ ಬಂದಿತ್ತು. ಆದರೂ ಅವನು ಧೃತಿಗೆಡದೆ ಕಾಡಿನಲ್ಲಿ ಮತ್ತೆ ಪ್ರವೇಶಮಾಡಿದನು.

ನೋಡನೋಡುವಷ್ಟರಲ್ಲಿ ಕತ್ತಲೆಯು ಹೆಚ್ಚಾಗಿ ಗಾಢ ಅಂಧಕಾರವೇ ಕವಿ ದಿತು. ಗಿಡಗಳ ನೆರಳಿನಲ್ಲಿ ಏನೂ ಕಾಣದಂತಾಯಿತು. ಯಾವ ದಿಕ್ಕಿನಲ್ಲಿ ಎತ್ತ ಕಡೆಗೆ ತಾನು ಹೊರಟಿರುವನೆಂಬುದೇ ಅವನಿಗೆ ಗೊತ್ತಾಗಲಿಲ್ಲ. ರಾತ್ರಿ ಕಳೆದು ಬೆಳಗು ಆದಾಗಲೇ ತಾನು ಮತ್ತೆ ಮತ್ತೆ ಒಂದೇ ಸ್ಥಳದಲ್ಲಿ ಸುತ್ತುತ್ತಿದ್ದನೆಂಬುದು ಅವನಿಗೆ ಗೊತ್ತಾಯಿತು.

ದೂರದಿಂದ ಕೋಳಿಯ ಕೂಗು ಕೇಳಿಸಿತು. ಆಗ ಅವನಿಗೆ ಆ ದಿಕ್ಕಿಗೆ ಹಳ್ಳಿ ಇದೆ ಎಂದು ಗೊತ್ತಾಯಿತು. ತನ್ನ ಶೋಚನೀಯ ಅವಸ್ಥೆಯನ್ನು ಕಂಡು ಕೋಳಿ

ಗಳೂ ಕೂಡ ತನ್ನ ಅಪಹಾಸ್ಯಮಾಡಿ ಧಿಕ್ಕಾರ ಮಾಡುತ್ತಿವೆ ಎಂದು ಮೃತ್ಯುಂಜಯು ನಿಗೆ ಅನಿಸಿತು.

ಇತ್ತ ಸನ್ಯಾಸಿಯು ತನ್ನ ಕೆಲಸವನ್ನು ಭರದಿಂದ ಮುಂದುವರಿಸಿದ್ದನು. ತಪ್ಪು ಲೆಕ್ಕ ಮಾಡುತ್ತ, ಮತ್ತೆ ಅದನ್ನು ತಿದ್ದಿಕೊಳ್ಳುತ್ತ ಕೊನೆಗೆ ಅವನು ಒಂದು ಸುರಂಗಮಾರ್ಗವನ್ನು ಕಂಡುಹಿಡಿದಿದ್ದನು. ಸುರಂಗಮಾರ್ಗದಲ್ಲಿ ಸದಾ ಕತ್ತಲೆ ಕವಿದಿತ್ತು. ಉರಿಯುತ್ತಿರುವ ಒಂದು ಪಂಜನ್ನು ಹಿಡಿದುಕೊಂಡು ಧೈರ್ಯದಿಂದ ಸನ್ಯಾಸಿಯು ಸುರಂಗಮಾರ್ಗವನ್ನು ಪ್ರವೇಶಿಸಿದನು. ಭದ್ರವಾಗಿ ಕಟ್ಟಿದ್ದ ಸುರಂಗದ ಗೋಡೆಗುಂಟ ನೀರು ಒಸರಿ ಅಲ್ಲಿಯ ಹವೆಯು ತಂಪಾಗಿತ್ತು. ಅಲ್ಲಲ್ಲಿ ನೀರು ಹನಿಹನಿಯಾಗಿ ಬೀಳುತ್ತಿತ್ತು. ಕೆಲವೆಡೆಗಳಲ್ಲಿ ಕಪ್ಪೆಗಳು ಬಿದ್ದುಕೊಂಡು ನಿದ್ದೆ ಮಾಡುತ್ತಿದ್ದವು. ಒಂದರ ಮೇಲೊಂದು ಬಿದ್ದಿದ್ದ ಅಸಂಖ್ಯ ಕಪ್ಪೆಗಳು ದೂರದಿಂದ ದಿನ್ನೆಯಂತೆ ಕಾಣುತ್ತಿದ್ದವು. ನೀರಿನಿಂದ ತೊಯ್ದುಹೋದ ದಾರಿಯಲ್ಲಿ ಕಾಲು ಜಾರುತ್ತಿದ್ದವು. ಎಡವುತ್ತ ತಡವುತ್ತ ಜಾರಿ ಮುಗ್ಗರಿಸಿ ಬಿದ್ದು ಮತ್ತೆ ಏಳುತ್ತ ಸನ್ಯಾಸಿಯು ಮುಂದೆ ನಡೆದಿದ್ದನು. ತುಸು ದೂರ ಹೋದ ಮೇಲೆ ಎದುರಿಗೆ ಅಡ್ಡ ವಾಗಿ ಇದ್ದ ಒಂದು ಗೋಡೆ ಅವನಿಗೆ ತನ್ನ ದೀಪದ ಬೆಳಕಿನಲ್ಲಿ ಕಾಣಿಸಿತು. ಮುಂದಿನ ದಾರಿಯನ್ನು ಕಾಣದೆ ಸನ್ಯಾಸಿಯು ಆ ಗೋಡೆಯ ಮುಂದೆ ಬಂದು ನಿಂತುಬಿಟ್ಟನು. ಮುಂದೇನು ಮಾಡಬೇಕೆಂಬುದು ಅವನಿಗೆ ತಿಳಿಯದಾಯಿತು. ತಿರುಗಿ ಹೋಗಲು ಮನಸ್ಸು ಬರಲಿಲ್ಲ. ತನ್ನ ಕೈಯಲ್ಲಿದ್ದ ಕಬ್ಬಿಣದ ಬಡಿಗೆಯಿಂದ ಸನ್ಯಾಸಿಯು ಆ ಗೋಡೆಯ ತುಂಬ ಬಡಿದು ನೋಡಿದನು. ಎಲ್ಲಿಯೂ ಅವನಿಗೆ ಮಾರ್ಗವಿದ್ದಂತೆ ತೋರಿಬರಲಿಲ್ಲ. ಗೋಡೆಯ ಒಳಗೆ ಪೊಳ್ಳು ಇದ್ದರೆ ಯಾವ ಸ್ವರ ಬರಬಹುದಿತ್ತೊ ಆ ಸ್ವರವು ಬಾರದೆಹೋಯಿತು. ಗೋಡೆಯಲ್ಲಿ ಒಂದು ಸಣ್ಣ ರಂಧ್ರವೂ ಕೂಡ ಅವನಿಗೆ ಕಾಣಿಸಲಿಲ್ಲ. ಇದನ್ನು ಕಂಡು ಈ ದಾರಿ ಇಲ್ಲಿಗೆ ಮುಗಿದಂತಾಯಿತೆಂದೇ ಅವನು ನಿರ್ಧಾರ ಮಾಡಿಕೊಂಡನು.

ಸನ್ಯಾಸಿಯು ಅಲ್ಲಿಯೇ ಕುಳಿತು ಮತ್ತೆ ಆ ಕಾಗದವನ್ನು ಬಿಡಿಸಿ ದೀಪದ ಬೆಳಕಿನಲ್ಲಿ ಅದನ್ನು ನೋಡುತ್ತ ತಲೆಗೆ ಕೈಹಚ್ಚಿಕೊಂಡು ವಿಚಾರಮಾಡುತ್ತಿರು ವಂತೆಯೇ ಆ ರಾತ್ರಿ ಕಳೆದುಹೋಯಿತು.

ಮರುದಿನ ಲೆಕ್ಕ ಸರಿಯಾಗಿ ಮಾಡಿಕೊಂಡು ಸನ್ಯಾಸಿಯು ಸುರಂಗಮಾರ್ಗ ದಲ್ಲಿ ಒಂದು ಸೀಳು ದಾರಿಯನ್ನು ಕಂಡುಹಿಡಿದು ಮುಂದೆ ಸಾಗಿದನು. ಅದು ಕೂಡ ಅವನನ್ನು ಬಹಳ ದೂರ ಕರೆದುಕೊಂಡು ಹೋಗಲಿಲ್ಲ.

ಹೀಗೆ ಐದು ರಾತ್ರಿ ಪ್ರಯತ್ನಪಟ್ಟು ಕೊನೆಗೆ ಸನ್ಯಾಸಿಯು "ಇಂದು ಯಾವುದೇ ತಪ್ಪು ನನ್ನಿಂದ ಆಗಲು ಸಾಧ್ಯವೇ ಇಲ್ಲ. ಖಂಡಿತ ಸರಿಯಾದ ಮಾರ್ಗ ನನಗೀಗ ಗೊತ್ತಾಗಿದೆ" ಎಂದು ತನ್ನ ಮನಕ್ಕೆ ಹೇಳಿಕೊಂಡು ಧೈರ್ಯತಂದುಕೊಂಡನು.

ಅವನು ಕಂಡುಹಿಡಿದಿದ್ದ ಈ ಹೊಸ ದಾರಿಯು ದುರ್ಗಮವಾಗಿತ್ತು. ಅದಕ್ಕೆ ಇದ್ದ ಶಾಖಾ ಮಾರ್ಗಗಳಿಗೆ ಲೆಕ್ಕವೇ ಇರಲಿಲ್ಲ. ಕೈಯಲ್ಲಿ ದೀಪವನ್ನು ಹಿಡಿದು ಅತಿ ಪ್ರಯಾಸದಿಂದ ಸನ್ಯಾಸಿಯು ಸುರಂಗಮಾರ್ಗದಲ್ಲಿ ನಡೆದು ವರ್ತುಳಾಕಾರದ ಒಂದು

ಮನೆಗೆ ಬಂದು ತಲುಪಿದನು. ಆ ಮನೆಯ ಮಧ್ಯದಲ್ಲಿ ಒಂದು ದೊಡ್ಡ ಬಾವಿ ಇತ್ತು. ಅದನ್ನು ಕಲ್ಲಿನಿಂದ ಕಟ್ಟಿದ್ದರು. ಆ ಬಾವಿಯ ತಳಕ್ಕೆ ಏನಿದೆ ಎಂಬುದನ್ನು ಕತ್ತಲೆ ಇದ್ದುದರಿಂದ ಗೊತ್ತುಮಾಡಿಕೊಳ್ಳಲು ಸಾಧ್ಯವಿರಲಿಲ್ಲ. ಪಂಜಿನ ದೀಪಕ್ಕೆ ಅದರ ಆಳವನ್ನು ಮುಟ್ಟುವ ಶಕ್ತಿ ಇರಲಿಲ್ಲ. ಮೇಲಿನಿಂದ ಒಂದು ಕಬ್ಬಿಣದ ಸರಪಳಿಯನ್ನು ಒಳಗೆ ಇಳಿಬಿಟ್ಟಿದ್ದರು. ಅತ್ಯಂತ ಧೈರ್ಯವನ್ನು ತಂದುಕೊಂಡು ಸನ್ಯಾಸಿಯು ಆ ಸರಪಳಿಯನ್ನು ತುಸು ಅಲುಗಿಸಿದ ಮಾತ್ರಕ್ಕೆ ಬಾವಿಯೊಳಗಿಂದ ಢಣ್ ಎಂದು ಸ್ವರವು ಬಂದು ಆ ಮನೆಯನ್ನೆಲ್ಲ ತುಂಬಿಬಿಟ್ಟಿತು. ಸನ್ಯಾಸಿಯ ಪ್ರಾಣವೇ ಹಾರಿಹೋದಂತೆ ಆಯಿತು. ಅದನ್ನು ಕೇಳುತ್ತಲೆ ಸನ್ಯಾಸಿಗೆ ಪರಮ ಸಂತೋಷವಾಗಿ "ದೊರಕಿಸಿದೆ" ಎಂದು ತಾನೂ ದೊಡ್ಡ ದನಿ ತೆಗೆದು ಕೂಗಿಕೊಂಡನು.

ಸನ್ಯಾಸಿಯ ಕೂಗು ಅಡಗಿ ಮತ್ತೆ ಸುರಂಗದಲ್ಲಿ ಶಾಂತತೆಯು ನೆಲಸುವ ಸಮಯಕ್ಕೆ ಸರಿಯಾಗಿ ಸನ್ಯಾಸಿಯ ಹತ್ತಿರದ ಒಂದು ಗೋಡೆಯಿಂದ ಭಾರಿ ದೊಡ್ಡದೊಂದು ಬಂಡೆಗಲ್ಲು ಸರಿದು ಕೆಳಗೆ ಬಿತ್ತು. ಸನ್ಯಾಸಿಯ ತಲೆಯ ಮೇಲೆ ಇದು ಬಿದ್ದಿದ್ದರೆ ಅವನು ಬದುಕಿ ಉಳಿಯುತ್ತಿರಲಿಲ್ಲ. ಕಲ್ಲು ಬಿದ್ದ ಸ್ಥಳದ ಕಡೆಗೆ ಸನ್ಯಾಸಿಯು ನೋಡುತ್ತಿರುವಾಗಲೇ ಮತ್ತೇನೋ ಸಜೀವ ಒಂದು ವಸ್ತು ಬಿದ್ದದ್ದು ಕಂಡಿತು. ಅನಪೇಕ್ಷಿತವಾದ ಈ ಸಜೀವ ವಸ್ತುವನ್ನು ನೋಡಿ ಸನ್ಯಾಸಿಯು ಹೆದರಿಕೊಂಡನು. ಕಲ್ಲಿನ ಪರಿಚಯವಿದ್ದ ಸನ್ಯಾಸಿಗೆ ಆ ಜೀವಂತ ವಸ್ತುವಿನ ನಿರೀಕ್ಷಣೆ ಇರಲೇ ಇಲ್ಲ. ಅವನು ಬೆಚ್ಚಿಬಿದ್ದನು. ಕೈಯಲ್ಲಿದ್ದ ಪಂಜು ಹಿಡಿತ ತಪ್ಪಿ ಕೆಳಗೆ ಬಿದ್ದು ಆರಿ ಹೋಯಿತು.

7

"ನೀನು ಯಾರು?" ಎಂದು ಸನ್ಯಾಸಿಯು ಕೇಳಿದನು. ಯಾವ ಉತ್ತರವೂ ದೊರೆಯಲಿಲ್ಲ. ಕತ್ತಲೆಯಲ್ಲಿ ಕೈಯಾಡಿಸಿ ನೋಡಿದಾಗ ಅವನ ಕೈಗೆ ಒಂದು ಮನುಷ್ಯ ದೇಹವು ಸಿಕ್ಕಿತು. ಅದನ್ನು ಬಲವಾಗಿ ಅಲುಗಾಡಿಸುತ್ತ "ಯಾರು ನೀನು" ಎಂದು ಸಿಟ್ಟಿನಿಂದ ಕೇಳಿದನು.

ಇದಕ್ಕೂ ಕೂಡ ಯಾವ ಉತ್ತರವೂ ಬರಲಿಲ್ಲ. ಆ ಮನುಷ್ಯ ಎಚ್ಚರತಪ್ಪಿ ಬಿದ್ದಿದ್ದನು.

ಆಗ ಸನ್ಯಾಸಿಯು ತನ್ನ ಚೀಲದಲ್ಲಿದ್ದ ಚಕಮುಕಿಯನ್ನು ಕಟೆದು ಬಹಳ ಹೊತ್ತಿನ ಮೇಲೆ ತನ್ನ ಪಂಜನ್ನು ಹೊತ್ತಿಸಿಕೊಂಡನು. ಅತ್ತ ಎಚ್ಚರತಪ್ಪಿ ಬಿದ್ದಿದ್ದ ಆ ಮನುಷ್ಯನಿಗೂ ಕೂಡ ಅಷ್ಟರಲ್ಲಿ ಸ್ಮೃತಿ ಬಂದು ಅವನು ಎದ್ದುನಿಲ್ಲಲು ಪ್ರಯತ್ನಿಸುತ್ತಿದ್ದನು. ಬಲವಾಗಿ ಪೆಟ್ಟುತಾಗಿದ್ದರಿಂದ ನೋವನ್ನು ತಡೆಯಲಾರದೆ ದೊಡ್ಡ ದನಿ ತೆಗೆದು ನರಳಹತ್ತಿದ್ದನು.

ದೀಪದ ಬೆಳಕಿನಲ್ಲಿ ಅವನನ್ನು ಕಂಡ ಸನ್ಯಾಸಿಯು ಅವನ ಗುರುತುಹಿಡಿದು "ಇದೇನು ಮೃತ್ಯುಂಜಯ ? ನಿನಗೆ ಈ ಬುದ್ಧಿ ಹೇಗೆ ಬಂತು ?" ಎಂದು ಕೇಳಿದನು.

ಮೃತ್ಯುಂಜಯನು ಅದಕ್ಕೆ "ಬಾಬಾ, ನನ್ನನ್ನು ಕ್ಷಮಿಸು. ದೇವರೇ ನನಗೆ ತಕ್ಕ ಶಿಕ್ಷೆಯನ್ನು ವಿಧಿಸಿದ್ದಾನೆ. ನಿನ್ನಮೇಲೆ ದೊಡ್ಡದೊಂದು ಕಲ್ಲನ್ನು ಉರುಳಿಸಿ

ನಿನ್ನನ್ನು ಕೊಲ್ಲಬೇಕೆಂದು ಮಾಡಿದ್ದೆ. ಆದರೆ ಜೋಲಿಹೋಗಿ ನಾನೇ ಬಿದ್ದುಬಿಟ್ಟೆ ಕಲ್ಲಿನಂತೆ. ಬೆನ್ನು ಖಂಡಿತ ಮುರಿದೇಹೋಗಿರಬೇಕು" ಎಂದು ಉತ್ತರ ಕೊಟ್ಟನು.

"ನನ್ನನ್ನು ಕೊಲ್ಲುವುದರಲ್ಲಿ ನಿನ್ನ ಲಾಭವೇನಿತ್ತು?" ಎಂದು ಸನ್ಯಾಸಿಯು ಕೇಳಿದನು.

ಅದಕ್ಕೆ ಮೃತ್ಯುಂಜಯನು "ಲಾಭವೇನೆಂದು ಕೇಳುವೆಯಾ? ನೀನು ಯಾವ ಆಶೆಗಾಗಿ ನಮ್ಮ ದೇವತೆಯ ಆಸನದ ಕೆಳಗೆ ಇರಿಸಿದ್ದ ಸಂಕೇತ ಲಿಪಿಯ ಪಟವನ್ನು ಕದ್ದು ಈ ಸುರಂಗದಲ್ಲಿ ಸುತ್ತಾಡುತ್ತಿರುವೆ? ನೀನು ಕಳ್ಳ! ನೀನು ಮೋಸಗಾರ! ನಮ್ಮ ಅಜ್ಜನಿಗೆ ಈ ರಹಸ್ಯಲಿಪಿ ಕಾಗದವನ್ನು ಕೊಟ್ಟುಹೋದ ಸನ್ಯಾಸಿಯು "ನಿಮ್ಮ ವಂಶದಲ್ಲಿಯೇ ಯಾರೊಬ್ಬರು ಈ ರಹಸ್ಯ ಬರೆಹವನ್ನು ತಿಳಿದುಕೊಳ್ಳಲು ಶಕ್ತರಾಗುತ್ತಾರೆ" ಎಂದು ಹೇಳಿದ್ದನು. ಈ ಗುಪ್ತಧನವು ನಮ್ಮ ಮನೆತನಕ್ಕೆ ದೊರೆಯಬೇಕಾದದ್ದು. ಅಂತೆಯೇ ನಾನು ಈಗ ಕೆಲವು ದಿನ ಸರಿಯಾಗಿ ಊಟ, ನಿದ್ದೆಗಳನ್ನು ಮಾಡದೆ ನಿನ್ನ ಬೆನ್ನು ಹತ್ತಿ ಸುತ್ತಾಡಿದ್ದೇನೆ. ಇಂದು ನೀನು ಗುಪ್ತಧನ ಸಿಕ್ಕಿತು ಎಂದು ಗಟ್ಟಿಯಾಗಿ ಕೂಗಿದ್ದನ್ನು ಕೇಳಿ ನನಗೆ ತಾಳಿಕೊಳ್ಳಲು ಆಗಲಿಲ್ಲ. ಆಗ ನಾನು ನಿನ್ನ ಬೆನ್ನುಬಿಡದೆ ಬಂದು ಈ ಸುರಂಗಮಾರ್ಗದಲ್ಲಿ ಅಡಗಿ ಕುಳಿತುಕೊಂಡೆ. ನೀನು ಕೆಳಗೆ ಇಳಿದುಹೋಗುವಾಗ ನಿನ್ನ ಮೇಲೆ ಒಂದು ಬಂಡೆಗಲ್ಲನ್ನು ಉರುಳಿಸಿ ನಿನ್ನನ್ನು ಕೊಂದು ಹಾಕಬೇಕೆಂದು ಹೊಂಚುಹಾಕಿದೆ. ಆದರೆ ನನ್ನ ಶಕ್ತಿ ಸಾಲಲಿಲ್ಲ. ಅಲ್ಲದೆ ಸ್ಥಳವೂ ಸಾಕಷ್ಟು ಇರಲಿಲ್ಲ. ಕಲ್ಲನ್ನು ಉರುಳಿಸುವ ಬದಲು ನಾನೇ ಜೋಲಿಹೊಗಿ ಬಿದ್ದುಬಿಟ್ಟೆ. ಈಗ ನೀನು ನನ್ನನ್ನು ಕೊಂದುಹಾಕು. ಅದೇ ನನಗೆ ಒಳಿತು. ನಾನು ಪಿಶಾಚಿಯಾಗಿ ಈ ಧನವನ್ನು ಪಡೆಯುವೆ. ಆದರೆ ನಿನಗೆ ಮಾತ್ರ ಅದನ್ನು ಮುಟ್ಟಲು ಕೂಡ ಬಿಡುವುದಿಲ್ಲ. ಆದದ್ದು ಆಗಲಿ. ಇದೆಲ್ಲವನ್ನೂ ಮೀರಿ ನೀನು ಈ ಹಣವನ್ನು ಪಡೆಯಬೇಕೆಂದು ಪ್ರಯತ್ನಿಸಿದರೆ ನಾನು ಬ್ರಾಹ್ಮಣ. ನಿನಗೆ ಶಾಪಕೊಟ್ಟು ಈ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವೆ. ಆಗ ಈ ನಿಧಿಯು ನಿನ್ನ ಪಾಲಿಗೆ ಬ್ರಾಹ್ಮಣರಕ್ತ, ಗೋರಕ್ತವಾಗುವುದು. ಆಗ ನೀನು ಎಂದೂ ಈ ಹಣವನ್ನು ಸುಖದಿಂದ ಭೋಗಿಸಲಾರೆ. ನಮ್ಮ ತಂದೆ, ಅಜ್ಜ ಎಲ್ಲರೂ ಈ ಹಣದ ಮೇಲೆ ಆಶೆಯನ್ನಿರಿಸಿ ಸತ್ತಿದ್ದಾರೆ. ಈ ಹಣದ ಧ್ಯಾನಮಾಡುತ್ತ ನಾವು ದರಿದ್ರರಾಗಿದ್ದೇವೆ. ಈ ಹಣಕ್ಕಾಗಿಯೇ ನಾನು ಹೆಂಡತಿ ಮಕ್ಕಳನ್ನು ಮನೆಯಲ್ಲಿ ಉಪವಾಸ ಬಿಟ್ಟು, ಅನ್ನ ನೀರಿನ ಪರಿವೆ ಇಲ್ಲದೆ ಸಿಕ್ಕಲ್ಲಿ ಅಲೆದು, ಕೈಯಲ್ಲಿ ಕಾಸಿಲ್ಲದೆ ಸಿಕ್ಕಸಿಕ್ಕ ಕಟ್ಟೆಯಮೇಲೆ ಬಿದ್ದುಕೊಂಡು ಹುಚ್ಚನಂತೆ ಸುತ್ತುತ್ತಿದ್ದೇನೆ. ಈ ಹಣವನ್ನು ನೀನು ನನ್ನ ಕಣ್ಣ ಮುಂದೆ ಎಂದಿಗೂ ತೆಗೆದುಕೊಂಡು ಹೋಗಲಾರೆ" ಎಂದು ಮುಂತಾಗಿ ಆಕ್ರೋಶದಿಂದ ಹೇಳಿದನು.

8

ಇದನ್ನೆಲ್ಲ ಕೇಳಿಕೊಂಡ ಸನ್ಯಾಸಿಯು "ಮೃತ್ಯುಂಜಯ, ಹಾಗಾದರೆ ಕೇಳು. ಸಂಪೂರ್ಣ ಕತೆಯನ್ನು ನಿನಗೆ ನಾನಿಂದು ಹೇಳುತ್ತೇನೆ" ಎಂದು ಹೇಳಿ ಕತೆಯನ್ನು ಹೇಳತೊಡಗಿದನು.

"ನಿಮ್ಮ ಅಜ್ಜನಿಗೆ ಎಲ್ಲರಿಗೂ ಚಿಕ್ಕ ತಮ್ಮನೊಬ್ಬನಿದ್ದನೆಂಬುದು ನಿನಗೆ ಗೊತ್ತಿದೆ ಅಲ್ಲವೆ? ಅವನ ಹೆಸರು ಶಂಕರ ಎಂದು ಇತ್ತಲ್ಲವೇ?" ಎಂದು ಮೃತ್ಯುಂಜಯನನ್ನು ಕೇಳಿದನು.

ಅದಕ್ಕೆ ಮೃತ್ಯುಂಜಯನು "ಅವನು ನಿರಾಶನಾಗಿ ಎಂದೋ ಮನೆ ಬಿಟ್ಟು ಹೋಗಿದ್ದಾನೆ" ಎಂದು ಹೇಳಿದನು.

ಆಗ ಸನ್ಯಾಸಿಯು "ನಾನೇ ಆ ಶಂಕರ" ಎಂದು ಹೇಳಿದನು.

ಇದನ್ನು ಕೇಳಿ ಮೃತ್ಯುಂಜಯನು ಹತಾಶನಾಗಿ ಒಂದು ನೀಳವಾದ ಉಸಿರನ್ನು ಬಿಟ್ಟನು. ಈ ವರೆಗೂ ಆ ಗುಪ್ತನಿಧಿಯ ಮೇಲೆ ಇರಿಸಿಕೊಂಡು ಬಂದಿದ್ದ ವಂಶ ಪರಂಪರಾಗತ ಅಧಿಕಾರವನ್ನೆಲ್ಲ ಈ ಸನ್ಯಾಸಿಯು ಕಸಿದುಕೊಂಡುಬಿಟ್ಟನೆಂದು ಅವನಿಗೆ ಅನಿಸಿತು.

ಸನ್ಯಾಸಿಯು ತನ್ನ ಮಾತನ್ನು ಮುಂದುವರಿಸಿ: "ನನ್ನ ಅಣ್ಣನು ಈ ರಹಸ್ಯ ಲಿಪಿಯ ಕಾಗದವನ್ನು ಸನ್ಯಾಸಿಯಿಂದ ಪಡೆದುಕೊಂಡ ದಿನದಿಂದ ಅದನ್ನು ನನಗೆ ತೋರಿಸದೆ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದನು. ಅವನು ಪ್ರಯತ್ನಿಸುತ್ತಿದ್ದಷ್ಟು ನನ್ನ ಕುತೂಹಲವು ಕೆರಳಿತು. ಆ ಕಾಗದವನ್ನು ಹೇಗಾದರೂ ಮಾಡಿ ಎತ್ತಿ ಹಾಕಬೇಕೆಂದು ನನಗೆ ಅನಿಸಿತು. ನಮ್ಮ ಅಣ್ಣನು ಅದನ್ನು ದೇವಿಯ ಆಸನದ ಕೆಳಗೆ ಒಂದು ಪೆಟ್ಟಿಗೆಯಲ್ಲಿ ಭದ್ರವಾಗಿ ಇರಿಸಿದ್ದನ್ನು ನಾನು ಅದು ಹೇಗೊ ಅತಿ ಪ್ರಯಾಸದಿಂದ ಗೊತ್ತು ಹಚ್ಚಿದೆನು. ಹಾಗೂ ಆ ಪೆಟ್ಟಿಗೆಯ ಇನ್ನೊಂದು ಬೀಗದ ಕೈ ಮಾಡಿಸಿಕೊಂಡು ಪ್ರತಿದಿನ ತುಸು ತುಸು ಆ ಪಟದಲ್ಲಿ ಬರೆದುದನ್ನೆಲ್ಲ ಪ್ರತಿ ಮಾಡಿಕೊಂಡೆನು. ಪ್ರತಿ ಮಾಡಿಕೊಳ್ಳುವ ಕೆಲಸವು ಮುಗಿದ ದಿನವೇ ಮನೆ ಬಿಟ್ಟುಹೋದೆನು. ಆಗ ನನಗೂ ಹೆಂಡತಿ ಹಾಗೂ ಒಂದು ಮಗು ಇದ್ದರು. ಈಗ ಅವರಿಬ್ಬರೂ ಬದುಕಿ ಉಳಿದಿಲ್ಲ.

"ನಾನೆಷ್ಟು ದೇಶಗಳನ್ನು ಸುತ್ತಾಡಿದ್ದೇನೆ ಎಂಬುದರ ಸವಿಸ್ತರ ವರ್ಣನೆಯನ್ನು ಮಾಡುವ ಅವಶ್ಯಕತೆ ಇಲ್ಲ. ಸನ್ಯಾಸಿಯು ನಮಗೆ ಕೊಟ್ಟಿದ್ದ ಈ ರಹಸ್ಯ ಲಿಪಿಯ ಅರ್ಥವನ್ನು ಬೇರೆ ಯಾವನೊಬ್ಬ ಸನ್ಯಾಸಿಯು ನನಗೆ ಹೇಳಿಕೊಡುವನೆಂಬ ವಿಶ್ವಾಸವನ್ನು ತಾಳಿ ನಾನು ಅನೇಕ ಸನ್ಯಾಸಿಗಳ ಸೇವೆಯನ್ನು ಕೈಕೊಂಡೆ. ಇವರಲ್ಲಿ ಕೆಲವು ಭಂಡ ಸನ್ಯಾಸಿಗಳು ನನ್ನ ಹತ್ತಿರ ಇದ್ದ ರಹಸ್ಯಲಿಪಿಯ ಕಾಗದವನ್ನು ಎತ್ತಿಹಾಕಬೇಕೆಂದು ಪ್ರಯತ್ನಿಸಿದರು. ನನ್ನ ಮನದಲ್ಲಿ ಒಂದು ಕ್ಷಣ ಕೂಡ ಶಾಂತಿ ಸಮಾಧಾನಗಳು ಇರಲಿಲ್ಲ. ಸುಖವೂ ಇರಲಿಲ್ಲ.

ಅನಂತರ ಪೂರ್ವಜನ್ಮದ ಪುಣ್ಯವಿಶೇಷದಿಂದ ಕುಮಾಯುನ ಪರ್ವತದಲ್ಲಿದ್ದ ಬಾಬಾ ಸ್ವರೂಪಾನಂದರು ನನಗೆ ದೊರೆತರು. ಅವರು ನನಗೆ "ಆಶೆಯನ್ನು ಬಿಡು. ಆಮೇಲೆ ವಿಶ್ವವ್ಯಾಪಿ ತುಂಬಿರುವ ಅನಂತ ಐಶ್ವರ್ಯವನ್ನು ನಾನು ನಿನಗೆ ಕೊಡುತ್ತೇನೆ" ಎಂದು ಉಪದೇಶ ಮಾಡಿದರು.

ಮುಂದೆ ಅವರು ನನ್ನಲ್ಲಿದ್ದ ಆಶೆಯ ಬೇರನ್ನೇ ಕಿತ್ತು ಎಸೆದುಬಿಟ್ಟರು. ಅವರ ಕೃಪೆಯಿಂದ ನೀಲವರ್ಣದ ಆಕಾಶ, ಶ್ಯಾಮವರ್ಣದ ಪೃಥ್ವಿ ನನಗೆ ಸಕಲೈಶ್ವರ್ಯವಾಗಿ ಕಂಡವು. ಒಂದು ದಿನ ಸಾಯಂಕಾಲ ಪರಮಹಂಸರ ಅಗ್ನಿಕುಂಡದಲ್ಲಿ ಬೆಂಕಿ

ಉರಿಯುತ್ತಿತ್ತು. ಆ ಅಗ್ನಿಯಲ್ಲಿ ನಾನು ನಮ್ಮ ರಹಸ್ಯಲಿಪಿ ಕಾಗದವನ್ನು ಆಹುತಿಯಾಗಿ ಸಮರ್ಪಿಸಿದೆ. ಇದನ್ನು ಕಂಡು ಬಾಬಾ ಅವರು ನಸುನಕ್ಕರು. ಆಗ ನನಗೆ ಆ ನಗೆಯ ಅರ್ಥ ಆಗಲಿಲ್ಲ. ಇಂದು ಈಗ ಮನದಲ್ಲಿ ಮಿಂಚಿನಂತೆ ಹೊಳೆಯಿತು. "ಕಾಗದವನ್ನು ಸುಟ್ಟು ಬೂದಿಯನ್ನಾಗಿ ಮಾಡುವುದು ಎಷ್ಟು ಸುಲಭವೊ ಅಷ್ಟು ಮನದ ವಾಸನೆಯನ್ನು ಸುಟ್ಟು ಬೂದಿಮಾಡುವುದು ಕಷ್ಟ" ಎಂದು ಬಾಬಾ ಅವರ ಮನಸ್ಸಿನಲ್ಲಿ ಆಗ ಖಂಡಿತ ಇತ್ತು. ಅವರ ನಸುನಗೆಯ ಅರ್ಥವೂ ಇದೇ ಆಗಿತ್ತು. ಈ ಮಾತು ಇಂದು ಈಗ ನನಗೆ ಹೊಳೆಯಿತು.

"ನಾನು ಬೆಂಕಿಯಲ್ಲಿ ಕಾಗದವನ್ನು ಹಾಕಿದ್ದೆ ತಡ ಅದು ಸುಟ್ಟು ಭಸ್ಮವಾಗಿ ಹೋಯಿತು. ಅದರೊಂದಿಗೆ ನನ್ನನ್ನು ಆ ವರೆಗೂ ಹಾವಿನಂತೆ ಬಿಗಿದಿದ್ದ ಒಂದು ನಾಗಪಾಶವೂ ಕೂಡ ಕಳಚಿಹೋಯಿತೆಂದೂ ನನಗೆ ಅನಿಸಿತು. ಬಂಧನದಿಂದ ಬಿಡುಗಡೆಹೊಂದಿ ಮುಕ್ತನಾದೆ. ನನಗೆ ಆಗ ಅತೀವ ಆನಂದವೂ ಆಯಿತು." ಈಗ ನನಗೆ ಯಾವ ಆಶೆಯೂ ಇಲ್ಲ; ಯಾವ ಭಯವೂ ಇಲ್ಲ. ನಾನು ಈ ಜಗತ್ತಿನಿಂದ ಏನನ್ನೂ ಅಪೇಕ್ಷಿಸುವುದಿಲ್ಲ ಎಂಬ ವಿಚಾರಗಳು ಅಂದು ನನ್ನಲ್ಲಿ ಸುಳಿದವು."

"ಇದು ಆಗಿ ಬಹಳ ದಿನಗಳೇನೂ ಕಳೆದಿರಲಿಲ್ಲ. ಒಮ್ಮಿಂದೊಮ್ಮೆ ನನಗೆ ಬಾಬಾ ಅವರ ಸಹವಾಸವೇ ತಪ್ಪಿಹೋಯಿತು. ಅವರನ್ನು ನಾನು ಬಹಳ ಹುಡುಕಿದೆ. ಆಮೇಲೆ ನನಗೆ ಅವರು ಎಲ್ಲಿಯೂ ಸಿಕ್ಕಲೇ ಇಲ್ಲ."

"ಆಗ ನಾನೂ ಸನ್ಯಾಸಿಯ ದೀಕ್ಷೆಯನ್ನು ತೆಗೆದುಕೊಂಡೆ. ನಿರಾಸಕ್ತ ಮನದಿಂದ ಸಂಚರಿಸಹತ್ತಿದೆ. ಈ ರೀತಿ ಅನೇಕ ವರ್ಷಗಳನ್ನು ಕಳೆದೆ. ರಹಸ್ಯ ಲಿಪಿಯ ಕಾಗದವನ್ನು ಸಂಪೂರ್ಣವಾಗಿ ಮರೆತುಬಿಟ್ಟೆ."

"ಹೀಗಿರುವಾಗ ಈ "ಧಾರಾಗೋಲ" ಕಾಡಿನಲ್ಲಿ ಒಂದು ದಿನ ಪ್ರವೇಶ ಮಾಡಿದೆ. ಹಾಳುಬಿದ್ದ ಒಂದು ಗುಡಿಯಲ್ಲಿ ವಾಸಿಸಿದೆ. ಒಂದೆರಡು ದಿನ ಅಲ್ಲಿ ಕಳೆದ ನಂತರ ಆ ಗುಡಿಯ ಗೋಡೆಯ ಮೇಲೆ ಅಲ್ಲಲ್ಲಿ ನನಗೆ ಚಿರಪರಿಚಿತವಾದ ಬರೆಹ ಹಾಗೂ ಚಿತ್ರ ಕಾಣಿಸಿಕೊಂಡವು."

"ಹಿಂದೊಮ್ಮೆ ಯಾವ ರಹಸ್ಯ ಲಿಪಿಯ ಗೂಢವನ್ನು ಗೊತ್ತುಮಾಡಿಕೊಳ್ಳಬೇಕೆಂದು ನಾನು ಸಿಕ್ಕಲ್ಲಿ ಸುತ್ತಾಡಿದ್ದೆನೊ ಆ ಲಿಪಿಯನ್ನು ತಿಳಿದುಕೊಳ್ಳುವ ಅವಕಾಶವಿಲ್ಲಿ ಪ್ರಾಪ್ತವಾಯಿತೆಂದು ನನಗೆ ಅನಿಸಿತು. ಇದರಲ್ಲಿ ಸಂದೇಹವೇನೂ ಉಳಿಯಲಿಲ್ಲ. ಆಗ ನನಗೆ ಆ ಸ್ಥಳವನ್ನೇ ಬಿಟ್ಟು ದೂರ ಹೋಗಬೇಕೆಂದೆನಿಸಿತು."

"ಆದರೆ ಅಲ್ಲಿಂದ ಕಾಲುಕೀಳುವುದು ನನ್ನಿಂದ ಆಗಲಿಲ್ಲ. ಈ ರಹಸ್ಯದಲ್ಲಿ ಇರುವುದಾದರೂ ಏನು ಎಂಬುದನ್ನು ತಿಳಿದುಕೊಳ್ಳಬೇಕೆಂಬ ತವಕವು ಹೆಚ್ಚಾಯಿತು. ಈ ಬಯಕೆಯನ್ನು ಬೇರು ಸಹಿತ ಕಿತ್ತುಹಾಕಿ ಇಲ್ಲಿಂದ ದೂರ ಹೋಗಲು ನನ್ನ ಅಂತರಾತ್ಮವು ನನಗೆ ಹೇಳಿದರೂ ಅದರಂತೆ ನಡೆದುಕೊಳ್ಳಲು ನನ್ನಿಂದ ಆಗಲಿಲ್ಲ. ಎದುರಿಗೆ ಕಾಣುವ ರಹಸ್ಯ ಲಿಪಿಯನ್ನೂ ಚಿತ್ರಗಳನ್ನೂ ಚೆನ್ನಾಗಿ ನೋಡಿ ಪರೀಕ್ಷಿಸತೊಡಗಿದೆ. ಮನಸ್ಸಿನಲ್ಲಿ ಅನೇಕ ವಿಚಾರಗಳು ಬಂದವು. ನನ್ನಲ್ಲಿದ್ದ ರಹಸ್ಯ ಲಿಪಿಯ ಕಾಗದವನ್ನು ನಾನು ಅದೇಕೆ ಸುಟ್ಟುಹಾಕಿದೆನೆಂದು ಹಳಹಳಿಯೂ ಆಯಿತು.

ಈ ದಿನಗಳಲ್ಲಿ ನಾನು ಮತ್ತೊಮ್ಮೆ ನನ್ನ ಜನ್ಮಸ್ಥಳದ ಊರಿಗೆ ಹೋದೆನು. ಅಲ್ಲಿ ನನ್ನ ವಂಶಜರೆಲ್ಲ ಅತೀವ ಬಡತನದಲ್ಲಿರುವುದನ್ನು ಕಣ್ಣಾರೆ ಕಂಡೆನು. ಆಗ ನನ್ನ ಮನದಲ್ಲಿ "ನಾನು ಸನ್ಯಾಸಿ. ನನಗೇನೂ ಬೇಡ. ಯಾವ ಸಂಪತ್ತಿನ ಆಶೆಯೂ ನನಗೆ ಇಲ್ಲ. ಆದರೆ ಇಲ್ಲಿರುವವರೆಲ್ಲ ಗೃಹಸ್ಥರಾಗಿದ್ದಾರೆ. ಅವರಿಗೆ ಸಂಪತ್ತಿನ ಪ್ರಯೋಜನವಿದೆ. ಆದ್ದರಿಂದ ನಾನು ಆ ಗುಪ್ತಧನವನ್ನು ಗೊತ್ತುಹಚ್ಚಿ ಅದನ್ನು ಪಡೆದು ಈ ಜನರಿಗೇಕೆ ಕೊಡಬಾರದು? ಇದರಲ್ಲಿ ಯಾವ ದೋಷವೂ ಇಲ್ಲ; ಪಾಪವೂ ಬರದು" ಎಂದು ಮುಂತಾಗಿ ವಿಚಾರಗಳು ಬಂದವು.

ಅದಾವ ರಹಸ್ಯಲಿಪಿಯ ಪ್ರತಿಯನ್ನು ನಾನು ಹಿಂದೆ ಮಾಡಿಕೊಂಡಿದ್ದೆನೋ ಆ ಲಿಪಿಯ ಮೂಲಪ್ರತಿ ಇರುವ ಸ್ಥಳವು ನನಗೆ ಗೊತ್ತಿತ್ತು. ಆದ್ದರಿಂದ ಅದನ್ನು ನನ್ನ ವಶಕ್ಕೆ ತೆಗೆದುಕೊಳ್ಳಲು ನನಗೇನೂ ತೊಂದರೆಯಾಗಲೇ ಇಲ್ಲ.

ಮುಂದೆ ಒಂದು ವರ್ಷ ಈ ಕಾಡಿನಲ್ಲಿಯೇ ನೆಲಸಿ, ರಹಸ್ಯ ಲಿಪಿಯ ಈ ಕಾಗದವನ್ನು ಎದುರು ಇರಿಸಿಕೊಂಡು ಅದರ ಗೂಢವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡತೊಡಗಿದೆ. ಮನಸ್ಸಿನಲ್ಲಿ ಬೇರೆ ಚಿಂತೆಯೂ ಇರಲಿಲ್ಲ. ಪ್ರಾರಂಭಕ್ಕೆ ಆತಂಕಗಳು ಬಂದವು. ಆದರೆ ಅದರ ಜೊತೆಗೆ ನನ್ನಲ್ಲಿ ಇಮ್ಮಡಿ ಉತ್ಸಾಹವೂ ಇತ್ತು. ಅದೇಕೆ ಆಗ ನನ್ನಲ್ಲಿ ಒಂದು ಬಗೆಯ ಉನ್ಮಾದವೇ ಇತ್ತು.ರಾತ್ರಿ, ಹಗಲು ಶೋಧ ನಡೆಸಿದೆ.

ಹೀಗಿರುವಾಗ ನೀನು ಎಂದಿನಿಂದ ನನ್ನ ಬೆನ್ನು ಹತ್ತಿ ನನ್ನೊಂದಿಗೆ ಸುತ್ತಾಡಿದೆ ಎಂಬುದು ನನಗೆ ಗೊತ್ತಾಗಲಿಲ್ಲ. ನಾನು ಮೊದಲು ಇದ್ದಂತೆ ಸ್ವಾಭಾವಿಕವಾಗಿ ಜಾಗ್ರತನಾಗಿ ಇರುತ್ತಿದ್ದರೆ ನಿನಗೆ ಈ ರೀತಿ ಗುಪ್ತವಾಗಿ ನನ್ನ ಬೆನ್ನುಹತ್ತಿ ಸುತ್ತಾಡಲು ಸಾಧ್ಯವಾಗುತ್ತಿರಲಿಲ್ಲ. ನಾನು ನನ್ನ ಕೆಲಸದಲ್ಲಿಯೇ ತನ್ಮಯನಾಗಿದ್ದ ರಿಂದ ನನಗಾಗ ಹೊರಗಿನ ಯಾವುದರ ಅರಿವೂ ಇರಲಿಲ್ಲ. ಯಾವ ಘಟನೆಯೂ ನನ್ನನ್ನು ಆಕರ್ಷಿಸುವಂತಿರಲಿಲ್ಲ.

ಇದಾದಮೇಲೆ ನಾನು ಯಾವುದನ್ನು ಈ ವರೆಗೂ ಹುಡುಕುತ್ತಿದ್ದೆನೋ ಆ ಗುಪ್ತಧನವು ಇಂದು ನನಗೆ ಸಿಕ್ಕಿದೆ. ಇಲ್ಲಿ ಇರುವಷ್ಟು ಐಶ್ವರ್ಯವು ಈ ಜಗತ್ತಿನಲ್ಲಿ ಯಾವ ರಾಜಮಹಾರಾಜರ ಬಳಿಯಲ್ಲೂ ಇಲ್ಲ. ಇನ್ನು ಒಂದೇ ಒಂದು ರಹಸ್ಯ ವನ್ನು ಗೊತ್ತು ಹಚ್ಚಬೇಕಾಗಿದೆ. ಅದಾಯಿತೆಂದರೆ ಈ ಐಶ್ವರ್ಯವೆಲ್ಲ ನನ್ನ ದಾಗುವುದು.

ಈ ವರೆಗಿನ ಎಲ್ಲ ರಹಸ್ಯಗಳಿಗಿಂತ ಈ ಕೊನೆಯ ರಹಸ್ಯ ಕಠಿಣವಾಗಿದೆ. ಅಗಮ್ಯವಾಗಿದೆ. ಆದರೂ ನಾನದನ್ನು ಈಗಾಗಲೇ ನನ್ನ ಮನದಲ್ಲಿ ತಿಳಿದು ಕೊಂಡಿದ್ದೇನೆ. ಅಂತೆಯೇ ನಾನು ಅತಿ ಉತ್ಸಾಹದಿಂದ ತುಸು ಸಮಯದ ಹಿಂದೆ ಈ ಗುಪ್ತನಿಧಿಯನ್ನು ನಾನು ಪಡೆದಿದ್ದೇನೆ ಎಂದು ಕೂಗಿಕೊಂಡೆ. ಮನಸ್ಸು ಮಾಡಿದರೆ ಇನ್ನೊಂದು ಗಳಿಗೆಯಲ್ಲಿ ನಾನು ಆ ಐಶ್ವರ್ಯದ ಮಧ್ಯದಲ್ಲಿ ಹೋಗಿ ನಿಲ್ಲಬಲ್ಲೆ.

ಇದನ್ನು ಕೇಳಿ ಮೃತ್ಯುಂಜಯನು ಸನ್ಯಾಸಿಯ ಎರಡೂ ಕಾಲುಗಳನ್ನು ಗಟ್ಟಿ ಯಾಗಿ ಹಿಡಿದು "ನೀನು ಸನ್ಯಾಸಿ. ನಿನಗೆ ಈ ಐಶ್ವರ್ಯ ಬೇಕಾಗಿಲ್ಲ. ನಿನಗದರ

ಪ್ರಯೋಜನವಿಲ್ಲ. ಆದರೆ ನಮಗೆ ಅದು ಅವಶ್ಯಬೇಕು. ನನ್ನನ್ನು ಕೂಡಲೇ ಆ ಐಶ್ವರ್ಯವಿದ್ದಲ್ಲಿಗೆ ಕರೆದೊಯ್ದು ಅಲ್ಲಿ ನಿಲ್ಲಿಸು. ನನ್ನನ್ನು ವಂಚಿಸಬೇಡ" ಎಂದು ಬೇಡಿಕೊಂಡನು.

ಶಂಕರನು ತನ್ನ ಮಾತನ್ನು ಮುಂದುವರಿಸಿ "ಇಂದು ನನ್ನ ಕೊನೆಯ ಬಂಧನವು ಹರಿದುಹೋಗಿದೆ. ನಾನು ಅದರಿಂದ ಮುಕ್ತನಾಗಿದ್ದೇನೆ. ನೀನು ಯಾವ ದೊಡ್ಡ ಕಲ್ಲನ್ನು ನನ್ನ ಮೇಲೆ ಉರುಳಿಸಿ ನನ್ನನ್ನು ಕೊಲ್ಲಬೇಕೆಂದು ಮಾಡಿದ್ದೆಯೊ ಆ ಕಲ್ಲು ನನ್ನ ದೇಹಕ್ಕೆ ಯಾವ ಅಪಾಯವನ್ನೂ ಮಾಡದೆ ಹೋದರೂ ನನ್ನಲ್ಲಿದ್ದ ಮೋಹವನ್ನು ಮಾತ್ರ ಕೊಂದು ಹಾಕಿದೆ. ಆಶೆಯ ಕರಾಳ ರೂಪವನ್ನು ನಾನಿಂದು ಕಂಡೆ. ನನ್ನ ಗುರುಗಳಾದ ಪರಮಹಂಸರ ಆಳವಾದ ಅಂದಿನ ಮುಗುಳುನಗೆಯು ನನ್ನಲ್ಲಿ ಇಷ್ಟು ದಿನಗಳಾದ ಮೇಲೆ ಕಲ್ಯಾಣದ ಪ್ರಣತಿಯನ್ನು ಹಚ್ಚಿ ಬೆಳಗಿ ಆ ಬೆಳಕಿನಲ್ಲಿ ಇದನ್ನು ನನಗೆ ತೋರಿಸಿಕೊಟ್ಟಿದೆ" ಎಂದು ಹೇಳಿದನು.

ಮೃತ್ಯುಂಜಯನು ಮತ್ತೆ ಶಂಕರನ ಕಾಲು ಹಿಡಿದು ಕಾತರಸ್ವರದಿಂದ "ನೀನು ಮುಕ್ತ ಮಾನವ. ನಾನು ಬರಿ ಮಾನವ. ನನಗೆ ಮುಕ್ತಿ ಬೇಕಿಲ್ಲ. ಈ ಗುಪ್ತನಿಧಿ ಬೇಕು. ಆದ್ದರಿಂದ ನೀನು ನನ್ನನ್ನು ಈ ಗುಪ್ತಧನದಿಂದ ವಂಚಿತನನ್ನಾಗಿ ಮಾಡಬೇಡ" ಎಂದು ಅಂಗಲಾಚಿದನು.

ಅದಕ್ಕೆ ಸನ್ಯಾಸಿಯು ತನ್ನ ದಂಡವನ್ನೂ ಹಾಗೂ ಆ ರಹಸ್ಯ ಲಿಪಿಯ ಕಾಗದವನ್ನೂ ಮೃತ್ಯುಂಜಯನ ಬಳಿಯಲ್ಲಿಟ್ಟು ಅಲ್ಲಿಂದ ಹೊರಟುಬಿಟ್ಟನು. ಮೃತ್ಯುಂಜಯನು "ನನ್ನ ಮೇಲೆ ದಯೆ ತೋರಿಸು. ನನ್ನನಿಲ್ಲಿ ಬಿಟ್ಟು ಹೋಗಬೇಡ. ನನಗೆ ಆ ಗುಪ್ತನಿಧಿ ಇದ್ದ ಸ್ಥಳವನ್ನು ತೋರಿಸು" ಎಂದು ಚೀರಿಕೊಂಡನು.

ಆದರೆ ಅದಕ್ಕೆ ಯಾವ ಉತ್ತರವೂ ಬರಲಿಲ್ಲ. ಅನಂತರ ಮೃತ್ಯುಂಜಯನು ದಂಡವನ್ನು ಕೈಗೆತ್ತಿಕೊಂಡು ಅದರ ಆಧಾರದಿಂದ ಸುರಂಗದ ಹೊರಗೆ ಹೋಗಲು ಪ್ರಯತ್ನಿಸಿದನು. ಆದರೆ ಮಾರ್ಗವು ದುರ್ಗಮವಾಗಿತ್ತು. ವರ್ತುಳಾಕಾರವಾಗಿತ್ತು. ಮತ್ತೆ ಮತ್ತೆ ಮೃತ್ಯುಂಜಯನು ಅದೇ ಸ್ಥಳಕ್ಕೆ ಬರಹತ್ತಿದನು. ಕೊನೆಗೆ ದಣಿದು, ಹತಾಶನಾಗಿ ಒಂದು ಕಡೆಗೆ ಬಿದ್ದುಕೊಂಡನು. ಅಲ್ಲಿಯೇ ಅವನಿಗೆ ನಿದ್ದೆ ಬರಲು ತಡವೇನೂ ಆಗಲೇ ಇಲ್ಲ.

ನಿದ್ದೆಯಿಂದ ಎಚ್ಚತ್ತ ಮೃತ್ಯುಂಜಯನಿಗೆ ಆಗ ರಾತ್ರಿ, ಹಗಲು ಎಂಬುದಾವುದೂ ಗೊತ್ತಾಗಲೇ ಇಲ್ಲ. ಗೊತ್ತಾಗುವುದು ಸಾಧ್ಯವೂ ಇರಲಿಲ್ಲ. ತಡೆಯಲಾರದಷ್ಟು ಹಸಿವೆಯಾಗಿತ್ತು. ತನ್ನ ಧೋತರದ ಚುಂಗಿಗೆ ಕಟ್ಟಿಕೊಂಡು ತಂದಿದ್ದ ಅವಲಕ್ಕಿಯನ್ನು ಬಿಚ್ಚಿ ತಿಂದು ತನ್ನ ಹಸಿವನ್ನು ಹಿಂಗಿಸಿಕೊಂಡನು. ಆಮೇಲೆ ಮತ್ತೆ ಸುರಂಗದಿಂದ ಹೊರಗೆ ಹೋಗಲು ತನ್ನ ಪ್ರಯತ್ನವನ್ನು ಪ್ರಾರಂಭಿಸಿದನು. ಆದರೆ ಅವನಿಂದ ಇದು ಸಾಧ್ಯವಾಗಲೇ ಇಲ್ಲ. ಹೋದ ಹೋದಲ್ಲೆಲ್ಲ ದಾರಿ ಗಾಣದೆ ಬಂಧಿತನಾಗಿ ನಿಂತುಬಿಟ್ಟನು. ಕೊನೆಗೆ ಅವನು "ಎಲವೊ ಸನ್ಯಾಸಿಯೇ ನೀನೆಲ್ಲಿರುವೆ" ಎಂದು ಚೀರಿಕೊಂಡನು.

ಅವನ ಸ್ವರವು ಆ ಸುರಂಗದಲ್ಲಿ ಪ್ರತಿಧ್ವನಿಸತೊಡಗಿತು. ಎಲ್ಲ ಕಡೆಗಳಲ್ಲಿ ತುಂಬಿ

ಕೊಂಡಿತು. ಹತ್ತಿರದಿಂದಲೇ "ನಾನು ನಿನ್ನ ಬಳಿಯಲ್ಲಿಯೇ ಇರುವೆ" ಎಂದು ಸನ್ಯಾಸಿಯ ಸ್ವರವು ಕೇಳಿಬಂತು.

ಅದಕ್ಕೆ ಮೃತ್ಯುಂಜಯನು "ನಿಧಿ ಎಲ್ಲಿರುವುದೆಂಬುದನ್ನು ನನಗೆ ತೋರಿಸು" ಎಂದು ಕೇಳಿದನು.

ಇದಕ್ಕೆ ಯಾವ ಉತ್ತರವೂ ಬರಲಿಲ್ಲ. ಮೃತ್ಯುಂಜಯನು ಮತ್ತೆ ಕೂಗಿದನು. ಆದರೂ ಉತ್ತರ ಬರಲೇ ಇಲ್ಲ.

ಕೈಯಲ್ಲಿ ದಂಡವನ್ನು ಹಿಡಿದು ಕತ್ತಲೆಯಲ್ಲಿ ಅದನ್ನು ಅತ್ತ ಇತ್ತ ತಾಗಿಸುತ್ತ ಮೃತ್ಯುಂಜಯನು ಮತ್ತೆ ಕೆಲಹೊತ್ತು ಸುತ್ತಾಡಿದನು. ದಣಿದು ಹೋಗಿದ್ದ ಅವನ ಬುದ್ಧಿಗೂ ಬೆಳಕಿನ ಸಂಪರ್ಕವೇ ಇಲ್ಲದೆ ಮಂಕುಹಿಡಿದಂತಾಗಿತ್ತು. ಮತ್ತೊಮ್ಮೆ ಅವನು "ಇಲ್ಲಿಯೇ ಇರುವೆಯಲ್ಲವೇ ?" ಎಂದು ಕೇಳಿದನು.

ಮತ್ತೆ ಹತ್ತಿರದಿಂದಲೇ "ಇಲ್ಲಿಯೇ ಇರುವೆ. ಏನು ಬೇಕು ?" ಎಂದು ಸನ್ಯಾಸಿಯ ದನಿಯು ಕೇಳಿಸಿತು.

"ನನಗೆ ಏನೂ ಬೇಡ. ಈ ಸುರಂಗದಿಂದ ಒಮ್ಮೆ ನನ್ನನ್ನು ಪಾರುಮಾಡು" ಎಂದು ಮೃತ್ಯುಂಜಯನು ಬೇಡಿಕೊಂಡನು.

"ನಿನಗೆ ಗುಪ್ತಧನವು ಬೇಡವೇ ?" ಎಂದು ಸನ್ಯಾಸಿಯು ಮತ್ತೆ ಕೇಳಿದನು.

"ಬೇಡ, ಬೇಡ" ಎಂದು ಮೃತ್ಯುಂಜಯನು ಅದಕ್ಕೆ ಉತ್ತರ ಕೊಟ್ಟನು.

ಆಗ ಚಕಮಕಿಯನ್ನು ಕಟೆಯುವ ಶಬ್ದ ಕೇಳಿಸಹತ್ತಿತು. ತುಸು ಹೊತ್ತಿನ ಮೇಲೆ ದೀಪ ಆ ಕತ್ತಲೆಯನ್ನು ಬೆಳಗಿತು.

ಆಗ ಸನ್ಯಾಸಿಯು "ನಡೆ. ಮೃತ್ಯುಂಜಯ, ಹಾಗಾದರೆ ಹೊರಗೆ ಹೋಗೋಣ" ಎಂದು ಕರೆದನು.

ಮೃತ್ಯುಂಜಯನು ಕಾತರಸ್ವರದಿಂದ "ಬಾಬಾ, ಇಷ್ಟೆಲ್ಲ ಶ್ರಮವು ವ್ಯರ್ಥ ವಾಗುವುದು. ಇಷ್ಟು ಕಷ್ಟಪಟ್ಟಮೇಲೆ ಕೂಡ ಹಣ ಸಿಕ್ಕುವುದಿಲ್ಲವೇ ?" ಎಂದು ಮತ್ತೆ ವಿಚಾರಿಸಿದನು.

ಆ ಕ್ಷಣದಲ್ಲಿಯೇ ದೀಪ ಆರಿಹೋಯಿತು. ಮತ್ತೆ ಕತ್ತಲು ಮೊದಲಿದ್ದಂತೆ ಮುತ್ತಿಕೊಂಡಿತು. "ನೀನೆಂತಹ ನಿಷ್ಠುರ" ಎಂಬ ಮಾತುಗಳು ಮೃತ್ಯುಂಜಯನ ಬಾಯಿಯಿಂದ ಹೊರಬಂದವು. ಅವನು ಅಲ್ಲಿಯೇ ಕುಳಿತು ಚಿಂತಿಸಹತ್ತಿದನು. "ಈ ರೀತಿ ಅದೆಷ್ಟು ಸಮಯ ಕಳೆದರೂ ಪ್ರಯೋಜನವಿಲ್ಲ. ಈ ಕತ್ತಲೆಗೆ ಕೊನೆಯಿಲ್ಲ; ನನಗೆ ಮುಕ್ತಿಯಿಲ್ಲ" ಎಂದು ಅವನು ಭಾವಿಸಿದನು. ಇಲ್ಲಿಂದ ಒಂದುಸಲ ಪಾರಾಗಿ ಹೋದರೆ ಸಾಕು ಎಂದು ಅವನಿಗೆ ಅನಿಸಿತು. ಆಗ ಅವನು "ಎಲವೊ ನಿಷ್ಠುರ ಸನ್ಯಾಸಿ, ನನಗೆ ಧನ ಬೇಡ; ನಿಧಿ ಬೇಡ. ಏನೂ ಬೇಡ. ನನ್ನನ್ನೊಮ್ಮೆ ಇಲ್ಲಿಂದ ಉದ್ಧಾರಮಾಡು" ಎಂದು ಬೇಡಿಕೊಂಡನು.

"ನಿನಗೆ ಧನ ಬೇಡ ಅಲ್ಲವೇ ? ಹಾಗಾದರೆ ನನ್ನ ಕೈ ಹಿಡಿದು ನಡೆ" ಎಂದು ಸನ್ಯಾಸಿಯು ಹೇಳಿದನು.

ಈ ಸಲ ದೀಪ ಹತ್ತಲೇ ಇಲ್ಲ. ಒಂದು ಕೈಯಲ್ಲಿ ದಂಡವನ್ನೂ ಇನ್ನೊಂದು ಕೈಯಲ್ಲಿ ಸನ್ಯಾಸಿಯ ಧೋತರದ ಸೆರಗನ್ನೂ ಹಿಡಿದು ಮೃತ್ಯುಂಜಯನು ಮೆಲ್ಲನೆ ಮುಂದೆ ನಡೆದನು. ಅತ್ತ ಸುತ್ತಿ, ಇತ್ತ ಸುತ್ತಿ, ಅನೇಕ ಅಂಕಡೊಂಕ ದಾರಿಯನ್ನು ತುಳಿದು ಕೊನೆಗೆ ಅವರಿಬ್ಬರೂ ಒಂದು ಸ್ಥಳಕ್ಕೆ ಬಂದರು. ಆಗ ಸನ್ಯಾಸಿಯು "ಇಲ್ಲಿ ನಿಲ್ಲು" ಎಂದು ಮೃತ್ಯುಂಜಯನಿಗೆ ಹೇಳಿದನು.

ಅನಂತರ ಜಂಗುಹತ್ತಿದ್ದ ಒಂದು ಕಬ್ಬಿಣದ ಬಾಗಿಲನ್ನು ತೆರೆಯುವ ಕರ್ಕಶ ಸ್ವರವು ಕೇಳಿಸಿತು. ಸನ್ಯಾಸಿಯು ಮೃತ್ಯುಂಜಯನ ಕೈ ಹಿಡಿದು "ನಡೆ" ಎಂದು ಹೇಳಿದನು.

ಮೃತ್ಯುಂಜಯನು ಒಂದು ಮನೆಯೊಳಗೆ ತಾನು ಹೋಗುತ್ತಿದ್ದಂತೆ ಅವನಿಗೆ ಭಾಸವಾಯಿತು. ಆಗ ಮತ್ತೆ ಚಕಮಕಿ ಕಟೆಯುವ ಶಬ್ದ ಕೇಳಿಸಿತು. ಮುಂದೆ ತುಸು ಹೊತ್ತಿನಲ್ಲಿ ದೀಪ ಹತ್ತಿ ಸುತ್ತೆಲ್ಲ ಬೆಳಕಾಯಿತು. ಎಂತಹ ಆಶ್ಚರ್ಯಕರವಾದ ದೃಶ್ಯವದು! ಸುತ್ತಲೂ ಗೋಡೆಗೆ ಹತ್ತಿ ದೊಡ್ಡದೊಡ್ಡ ಬಂಗಾರದ ಗಟ್ಟಿಗಳನ್ನು ಒಂದರ ಮೇಲೊಂದು ಏರಿಸಿ ಇಟ್ಟಿದ್ದನ್ನು ಮೃತ್ಯುಂಜಯನು ನೋಡಿದನು. ನೆಲದ ಒಡಲೊಳಗಿಂದ ಸೂರ್ಯನ ಪ್ರಕಾಶ ಬರುತ್ತಿರುವಂತೆ ಅವು ಥಳಥಳ ಹೊಳೆಯುತ್ತಿದ್ದವು. ಇದನ್ನು ನೋಡಿ ಮೃತ್ಯುಂಜಯನ ಕಣ್ಣುಗಳು ಕುಕ್ಕಿದವು. ಅವನು ಹುಚ್ಚನಂತೆ "ಈ ಬಂಗಾರವೆಲ್ಲ ನನ್ನದೇ ? ನಾನಿದನ್ನು ಬಿಟ್ಟು ಸರ್ವಥಾ ಎಲ್ಲಿಯೂ ಹೋಗಲಾರೆ" ಎಂದು ಹೇಳಿದನು.

ಅದಕ್ಕೆ ಸನ್ಯಾಸಿಯು "ಸರಿ. ಬಿಟ್ಟು ಎಲ್ಲಿಯೂ ಹೋಗಬೇಡ. ಇಗೊ ಇಲ್ಲಿ ದೀಪವಿದೆ. ಹಾಗೂ ಹಿಟ್ಟು, ಅವಲಕ್ಕಿ ಅಲ್ಲದೆ ಒಂದು ಕಮಂಡಲು ತುಂಬ ನೀರೂ ಇದೆ." ಎಂದು ಹೇಳಿದನು.

ಕೂಡಲೇ ಸನ್ಯಾಸಿಯು ಹೊರಗೆ ನಡೆದನು. ಅವನು ಹೋಗುತ್ತಲೇ ತಾನಾಗಿಯೇ ಆ ಕಬ್ಬಿಣದ ಬಾಗಿಲು ಗಟ್ಟಿಯಾಗಿ ಮುಚ್ಚಿಕೊಂಡಿತು.

ಮೃತ್ಯುಂಜಯನು ಆ ಬಂಗಾರದ ಗಟ್ಟಿಗಳನ್ನು ಭಯದಿಂದ ಮುಟ್ಟುತ್ತ, ತಟ್ಟುತ್ತ ಆ ಕೋಣೆಯಲ್ಲಿ ಸಾವಕಾಶವಾಗಿ ಸುಳಿದಾಡತೊಡಗಿದನು. ಮೊದಮೊದಲಿಗೆ ತುಸು ಸಂಕೋಚವೆನಿಸಿತು. ಆದರೆ ಅಲ್ಲಿ ತನ್ನನ್ನು ತಡೆಯುವರಾರೂ ಇಲ್ಲವೆಂದು ತಿಳಿದು ಬಂದಾಗ ಅವನಿಗೆ ಒಂದು ಪ್ರಕಾರದ ಸಂತೋಷವೆನಿಸಿತು. ಬರಬರುತ್ತ ಈ ಸಂತೋಷವು ಅತಿಯಾಗಿ ಉನ್ಮಾದದ ರೂಪ ತಾಳಿತು. ಅವನು ಸಣ್ಣಸಣ್ಣ ಬಂಗಾರದ ತುಂಡುಗಳನ್ನೆತ್ತಿ ಮೇಜಿನ ಮೇಲೆ ಸಾಲಾಗಿ ಇರಿಸಿದನು. ದೊಡ್ಡದೊಡ್ಡ ಗಟ್ಟಿಗಳನ್ನು ತನ್ನ ಹೆಗಲಮೇಲೆ ಹೊತ್ತು ಸುತ್ತಾಡಿ ಸಂತೋಷಪಟ್ಟನು. ಒಂದಕ್ಕೊಂದು ತುಂಡುಗಳನ್ನು ತಾಗಿಸಿ ಅದರಿಂದ ಬರುವ ನಾದವನ್ನು ಕೇಳಿ ಮೈಮರೆತನು. ಅವುಗಳನ್ನು ಅಪ್ಪಿಕೊಂಡು ಸ್ಪರ್ಶ ಸುಖವನ್ನು ಮನದಣಿ ಪಡೆದನು. ಕೊನೆಗೆ ದಣಿದು ಅಲ್ಲಿಯೇ ಇದ್ದ ಬಂಗಾರದ ಹಲಗೆಯೊಂದರ ಮೇಲೆ ಮಲಗಿಕೊಂಡನು. ಮನೆಯ ಹಾಗೂ ಮಡದಿ ಮಕ್ಕಳ ನೆನಪು ಅವನಿಗೆ ಬಂತು. ಅದನ್ನೇ ಚಿಂತಿಸುತ್ತ ಮಲಗಿಕೊಂಡ ಅವನಿಗೆ ಬೇಗ ನಿದ್ದೆಯೂ ಹತ್ತಿತು.

ನಿದ್ದೆಯಿಂದ ಎಚ್ಚತ್ತು ನೋಡುತ್ತಾನೆ–ಸುತ್ತಲೂ ಬಂಗಾರವು ಥಳ ಥಳ ಹೊಳೆಯುತ್ತಿದೆ. ಬಂಗಾರವನ್ನು ಬಿಟ್ಟರೆ ಅಲ್ಲಿ ಮತ್ತೇನೂ ಇರಲೇ ಇಲ್ಲ. ಮಲಗಿಕೊಂಡೇ ಅವನು "ಈಗ ಹೊರಗೆ ಭೂಮಿಯ ಮೇಲೆ ಬೆಳಗಾಗಿರಬೇಕು. ಎಲ್ಲ ಜೀವಜಂತುಗಳೂ ಆನಂದದಿಂದ ಎಚ್ಚತ್ತಿರಬೇಕು" ಎಂದು ಆಲೋಚಿಸುತ್ತಿರುವಾಗಲೇ ಮತ್ತೆ ಅವನಿಗೆ ತನ್ನ ಮನೆಯ ನೆನಪಾಯಿತು. ತನ್ನ ತೋಟದಿಂದ ನಿತ್ಯ ಬೆಳಗಿನಲ್ಲಿ ಬರುತ್ತಿರುವ ಹೂವುಗಳ ಪರಿಮಳವು ಬಂದಂತೆ ಅವನಿಗೆ ಭಾಸವಾಯಿತು. ತೋಟದಲ್ಲಿದ್ದ ಬಾತುಕೋಳಿಗಳು ಕಲಕಲ ಶಬ್ದ ಮಾಡುತ್ತ ಬಂದು ಕೆರೆಯಲ್ಲಿ ಇಳಿಯುತ್ತಿರುವುದನ್ನೂ, ಮನೆಯ ಜನರು ಪಾತ್ರೆಗಳನ್ನು ಎತ್ತಿಕೊಂಡು ಕೆರೆಗೆ ಬರುತ್ತಿರುವುದನ್ನೂ, ಕೆರೆಯ ನೀರಿನಲ್ಲಿ ಬಟ್ಟೆಗಳನ್ನು ಸ್ವಚ್ಛಮಾಡುತ್ತಿರುವುದನ್ನೂ ನೋಡುತ್ತಿದ್ದಂತೆ ಅವನಿಗೆ ಅನಿಸಿತು. ಜೊತೆಗೆ ಅಲ್ಲಿಗೆ ಹೋಗಬೇಕೆಂಬ ಇಚ್ಛೆಯೂ ಬಂತು.

ಕೂಡಲೇ ಅವನು ಅಲ್ಲಿಂದ ಎದ್ದು ಬಾಗಿಲಿಗೆ ಬಂದು ಅದನ್ನು ಬಲವಾಗಿ ತಟ್ಟುತ್ತ "ಸನ್ಯಾಸಿ ಠಾಕುರರೇ ನೀವು ಇರುವಿರಲ್ಲವೇ ?" ಎಂದು ಕರೆದು ಕೇಳಿದನು.

ಬಾಗಿಲು ತೆರೆಯಿತು. "ಏನು ಬೇಕು" ಎಂದು ಸನ್ಯಾಸಿಯು ಕೇಳಿದನು.

"ನನಗೆ ಹೊರಗೆ ಹೋಗಬೇಕೆಂದೆನಿಸಿದೆ. ಆದರೆ ಜೊತೆಗೆ ಈ ಬಂಗಾರದ ಒಂದೆರಡು ಹಲಗೆಗಳನ್ನೂ ತಕ್ಕೊಂಡು ಹೋಗಬೇಕೆನ್ನುತ್ತೇನೆ. ಆಗಬಹುದಲ್ಲವೇ ?" ಎಂದು ಮೃತ್ಯುಂಜಯನು ಕೇಳಿದನು.

ಇದಕ್ಕೆ ಸನ್ಯಾಸಿಯು ಯಾವ ಉತ್ತರವನ್ನೇ ಕೊಡದೆ ಹೊಸದೊಂದು ದೀಪವನ್ನು ಹಚ್ಚಿಕೊಟ್ಟನು. ನೀರು ತುಂಬಿದ ಮತ್ತೊಂದು ಕಮಂಡಲವನ್ನು ಒಳಗೆ ಇರಿಸಿದನು. ಹಾಗೂ ತನ್ನ ಜೊತೆಗೆ ತಂದಿದ್ದ ನಾಲ್ಕು ಹಿಡಿ ಅವಲಕ್ಕಿಯನ್ನು ಮೇಜಿನ ಮೇಲೆ ಹಾಕಿ ಹೊರಗೆ ಹೋದನು. ಬಾಗಿಲು ಮತ್ತೆ ಮುಚ್ಚಿಕೊಂಡಿತು.

ಇದನ್ನು ಕಂಡು ಮೃತ್ಯುಂಜಯನಿಗೆ ತಡೆಯಲಾರದಷ್ಟು ಸಿಟ್ಟು ಬಂದಿತು. ತೆಳ್ಳಗಿದ್ದ ಒಂದು ಬಂಗಾರ ಎಲೆಯನ್ನು ಹರಿದು ತುಂಡುಮಾಡಿ, ಕೈಯಲ್ಲಿ ತಿಕ್ಕಿ ಅದನ್ನು ಪುಡಿಪುಡಿ ಮಾಡಿ ತೂರಿದನು. ಮತ್ತೆ ಕೆಲವು ಬಂಗಾರದ ಎಲೆಗಳನ್ನು ತೆಗೆದುಕೊಂಡು ಹುಚ್ಚನಂತೆ ಕಚ್ಚಿ ಕಚ್ಚಿ ಎಸೆದನು. ಒಂದು ಬಂಗಾರದ ಎಲೆಯನ್ನು ನೆಲದ ಮೇಲೆ ಹಾಕಿ ಅದನ್ನು ತುಳಿದು ಮಣ್ಣಿನಲ್ಲಿ ಹೂಳಹತ್ತಿದನು. ಕಾಲಿನಿಂದ ಒದೆದು ಅದಕ್ಕೆ ಅಪಮಾನಮಾಡಿ ಸೇಡು ತೀರಿಸಿಕೊಂಡನು. "ಜಗತ್ತಿನಲ್ಲಿರುವ ಎಲ್ಲ ಬಂಗಾರವನ್ನೂ ಇದೇ ರೀತಿ ಕೊಳ್ಳೆಹೊಡೆದು ಸೂರೆಗೊಳ್ಳುವೆ" ಎಂದು ಅವನು ಚೀರಿಕೊಂಡನು. ಆಗ ಅವನ ಮೈಯಲ್ಲಿ ಅದಾವುದೊ ಒಂದು ಅವ್ಯಕ್ತ ಪ್ರಳಯ ಶಕ್ತಿ ಪ್ರವೇಶಿಸಿದಂತಾಯಿತು. ಕ್ರಾಂತಿಯ ಪ್ರತಿ ರೂಪವೇ ತಾನೆಂದು ಅವನು ಭಾವಿಸಿದನು. ತನ್ನ ಎದುರಿನಲ್ಲಿ ಸಂಗ್ರಹಿಸಿ ಇಟ್ಟಿದ್ದ ಬಂಗಾರವನ್ನೆಲ್ಲ ಪುಡಿ ಪುಡಿ ಮಾಡಿ ಮಣ್ಣಿನ ಹುಡಿಯಂತೆ ಆಕಾಶದಲ್ಲಿ ಹಾರಿಸಿಬಿಡಬೇಕೆಂದು ಅವನಿಗೆ ಅನಿಸಿತು. ಅಲ್ಲದೆ ಬಂಗಾರದ ಲೋಭಿಗಳಾದ ರಾಜ-ಮಹಾರಾಜರನ್ನೂ ಕೂಡ ಇದೇ ರೀತಿ ತಾನು ನಾಶಗೊಳಿಸಬಲ್ಲನೆಂದು ಅವನು ತನ್ನ ಆವೇಶದ ಭರದಲ್ಲಿ ತಿಳಿದುಕೊಂಡನು.

ಈ ರೀತಿ ಮೃತ್ಯುಂಜಯನು ಅಲ್ಲಿದ್ದ ಬಂಗಾರದೊಂದಿಗೆ ಒಂದು ಯುದ್ಧವನ್ನೇ ಮಾಡಿ ದಣಿದು ಬಿದ್ದುಕೊಂಡನು. ಮೈಯಲ್ಲಿ ಎಚ್ಚರವೇ ಉಳಿದಿರಲಿಲ್ಲ. ನಿದ್ದೆಯೊ ವಿಸ್ಮೃತಿಯೊ ಅದು ಕೂಡ ತಿಳಿಯುವಂತಿರಲಿಲ್ಲ. ಎಚ್ಚತ್ತು ನೋಡಿದಾಗ ಮತ್ತೆ ಅದೇ ಬಂಗಾರ. ರಾಶಿ ರಾಶಿ ಬಂಗಾರ. ಮೃತ್ಯುಂಜಯನಿಗೆ ಆ ನಿರ್ಜೀವ ವಸ್ತುವನ್ನು ನೋಡಿ ಸಾಕಾಗಿಹೋಗಿತ್ತು. ಒಮ್ಮೆ ಹೊರಗೆ ಹೋದರೆ ಸಾಕೆಂದು ಅವನು ಧಾವಿಸಿ ಬಾಗಿಲ ಬಡಿಯಹತ್ತಿದನು. "ಎಲವೊ ಸನ್ಯಾಸಿಯೆ, ಎಲ್ಲಿರುವೆ ಬಾ, ಬೇಗ ಬಾ, ಬಾಗಿಲು ತೆರೆ. ನನಗೆ ಬಂಗಾರ ಬೇಡ" ಎಂದು ಒಂದೇ ಉಸಿರಿನಿಂದ ಚೀರಿಕೊಂಡನು.

ಆದರೆ ಈ ಸಲ ಬಾಗಿಲು ತೆರೆಯಲಿಲ್ಲ. ಮೃತ್ಯುಂಜಯನು ಮತ್ತೆ ಚೀರಿಕೊಂಡನು. ಚೀರಿ ಚೀರಿ ಅವನ ಗಂಟಲು ಬಿದ್ದುಹೋಯಿತು. ಸ್ವರವೇ ಹೊರಡದಂತಾಯಿತು. ಆಗ ಅವನು ಬಂಗಾರದ ತುಂಡುಗಳನ್ನು ಕೈಗೆ ತೆಗೆದುಕೊಂಡು ಬಾಗಿಲಿಗೆ ಹೊಡೆಯಹತ್ತಿದನು.—ಬಾಗಿಲನ್ನು ಮುರಿಯಬೇಕೆಂದು ಪ್ರಯತ್ನಿಸಿದನು. ಏನು ಮಾಡಿದರೂ ಬಾಗಿಲನ್ನು ತೆರೆಯುವಂತೆ ಮಾಡುವುದು ಅವನಿಂದಾಗಲಿಲ್ಲ. ಆಗ ಅವನು "ಇನ್ನೇನು ಸನ್ಯಾಸಿಯು ಬರುವುದೇ ಇಲ್ಲ. ಈ ಸ್ವರ್ಗದಂತಿರುವ ಸೆರೆಮನೆಯಲ್ಲಿ ಕೊರಗಿ, ಸೊರಗಿ ಸಾಯುವುದೇ ನನ್ನ ಪಾಲಿಗೆ ಬಂತು" ಎಂದು ನಿರಾಶನಾದನು.

ಮುಂದೆ ಅವನಿಗೆ ಬಂಗಾರವನ್ನು ನೋಡುವುದೂ ಕೂಡ ಆಗಲಿಲ್ಲ. ಕಣ್ಮುಚ್ಚಿಕೊಂಡರೂ ಬಂಗಾರದ ಹೊರತು ಬೇರೇನೂ ಅವನಿಗೆ ಕಾಣಿಸಲೇ ಇಲ್ಲ. ಜೀವವಿಲ್ಲದೆ ಬಿದ್ದ ಆ ಬಂಗಾರವೆಲ್ಲ ಭಯಂಕರ ರಾಕ್ಷಸನ ನಿಶ್ಶಬ್ದ ನಗೆಯಂತೆ ಅವನಿಗೆ ತೋರಿತು. ಅದರಲ್ಲಿ ಯಾವುದೇ ಬಗೆಯ ಸ್ಪಂದನವಿರಲಿಲ್ಲ, ಸ್ಥಿತ್ಯಂತರವಿರಲಿಲ್ಲ. ಮೃತ್ಯುಂಜಯನು ಗಾಬರಿಗೊಂಡನು. ಅವನ ಎದೆಯು ಬಲವಾಗಿ ಬಡಿದುಕೊಳ್ಳಹತ್ತಿತು. ತನಗೂ ಆ ಬಂಗಾರಕ್ಕೂ ಇನ್ನು ಸಂಪರ್ಕವೇ ಬೇಡ ಎಂದು ಅನಿಸುವಷ್ಟು ಅವನಲ್ಲಿ ಜುಗುಪ್ಸೆ ಉಂಟಾಯಿತು. ಈ ಅಂಧಕಾರದ ಮಧ್ಯದಲ್ಲಿ ತಾನು ಇರುವುದಕ್ಕಿಂತ ಸಾಯುವುದೇ ಲೇಸು ಎಂದು ಕೂಡ ಅವನಿಗೆ ಅನಿಸಿತು. ಅಲ್ಲಿಂದ ಪಾರಾಗಿ ಹೋಗಲು ಅವನ ಮನಸ್ಸು ಹಾತೊರೆಯಹತ್ತಿತು.

ಅವನು ಕುಳಿತಲ್ಲಿಯೇ ಮನದಲ್ಲಿ "ಮೇಲೆ ಭೂಮಿಯ ಮೇಲೆ ಈಗ ಗೋಧೂಳಿ ಸಮಯವಿರಬೇಕು. ಆ ಗೋಧೂಳಿಯೇ ಸ್ವರ್ಗ. ಇದೆಲ್ಲ ಅಸ್ಥಿರವಾದದ್ದು. ಈ ಬಂಗಾರ, ಈ ಬೆಳಕು ಕ್ಷಣಿಕವಾದದ್ದು. ತುಸು ಹೊತ್ತು ನಮ್ಮ ಕಣ್ಣನ್ನು ಕುಕ್ಕಿಸಿ ಆಜನ್ಮ ಕುರುಡರನ್ನಾಗಿ ಮಾಡುವ ಬೆಳಕು ಇದು. ಇದು ನನಗೆ ಬೇಡ. ಇನ್ನು ಮುಂದೆ ಎಂದೆಂದಿಗೂ ನಾನಿದನ್ನು ಬಯಸುವುದಿಲ್ಲ. ಮನೆಗೆ ಹೋಗಿ ಆ ಮಂದ ಪ್ರಕಾಶದಲ್ಲಿ—ಆದರೆ ಚಿರಪ್ರಕಾಶದಲ್ಲಿ ಸ್ವಸ್ಥವಾಗಿ ಸುಖದಿಂದ ಇದ್ದುಬಿಡುವೆ. ಮಂದಿರದಲ್ಲಿ ಮತ್ತೆ ದೀಪವನ್ನು ಸ್ಥಾಪಿಸಿ ಗಂಟೆಯನ್ನು ಬಾರಿಸಿ ದೇವಿಯನ್ನು ನಿತ್ಯ ಪೂಜೆಮಾಡುವೆ" ಎಂದು ಮೃತ್ಯುಂಜಯನು ಶಪಥ ಮಾಡಿಕೊಂಡನು.

ಅವನಿಗೆ ತನ್ನ ಗ್ರಾಮದಲ್ಲಿದ್ದ ತನ್ನ ಮನೆಯ ದಾರುಣವಾದ ಚಿತ್ರ ಕಣ್ಮುಂದೆ

ಬಂದು ನಿಂತಿತು. ತನ್ನ ಪ್ರೀತಿಯ ನಾಯಿಯೊಂದಿಗೆ ತಾನು ನಿತ್ಯ ಸಾಯಂಕಾಲ ಹೊರಗೆ ಹೋಗುತ್ತಿದ್ದ ನೆನಪು ಬಂತು. ಮಡದಿ, ಮಕ್ಕಳ ನೆನಪೂ ಸುಳಿದು ಅವನನ್ನು ಗಾಸಿಗೊಳಿಸಿತು. ಕೆಲವು ದಿನಗಳ ಹಿಂದೆ ತಾನು ಧಾರಾಗೋಲ ಗ್ರಾಮಕ್ಕೆ ಬಂದು ಆ ಕಿರಾಣಿ ಅಂಗಡಿಯ ಕಟ್ಟೆಯ ಮೇಲೆ ಒಂದು ರಾತ್ರಿಯನ್ನು ಕಳೆದ ನೆನಪೂ ಬಂತು. "ಆ ವರ್ತಕನೀಗ ಎಷ್ಟು ಸುಖದಿಂದ ಇರುವನಲ್ಲ!" ಎಂಬ ಉದ್ಗಾರವು ಅವನ ಬಾಯಿಂದ ತಾನಾಗಿ ಹೊರಬಿತ್ತು. "ಯಾರು ಬಲ್ಲರು! ಇಂದು ರವಿವಾರವೂ ಇರಬಹುದು. ಸಂತೆಗೆ ಸುತ್ತಲಿನ ಹಳ್ಳಿಯ ಜನರು ಬಂದು ತಿರುಗಿ ತಮ್ಮ ಮನೆಗಳಿಗೆ ಹೋಗುತ್ತಿರಬಹುದು. ಆ ಜನರು ತಮ್ಮ ಕೈಯಲ್ಲಿ ಒಂದೆರಡು ಮೀನುಗಳನ್ನು ಹಿಡಿದು ತೂಗಾಡಿಸುತ್ತ ಹೋಗುತ್ತಿರುವ ದೃಶ್ಯ ಎಂತಹ ದೃಶ್ಯ!" ಎಂದು ಮುಂತಾಗಿ ಮೃತ್ಯುಂಜಯನು ಹಿಂದಿನದೆಲ್ಲವನ್ನೂ ನೆನೆಸಿಕೊಂಡನು. ವ್ಯಥೆಪಟ್ಟುಕೊಂಡನು.

"ಭೂಮಿಯ ಮೇಲೆ ನಿತ್ಯ ಜೀವನ ನಡೆಯುತ್ತದೆ. ನಿತ್ಯ ಬದಲಾವಣೆ ನಡೆದಿದೆ. ಜೀವನದ ಯಾತ್ರೆ ಕ್ಷಣ ಸಹ ನಿಂತಿಲ್ಲ. ಈ ಜೀವನದಲ್ಲಿ ನಿನ್ನ ದೈನ್ಯ ಜೀವನವನ್ನೂ ಬೆರಸು" ಎಂದು ಯಾರೋ ಹೇಳುತ್ತಿದ್ದಂತೆ ಮೃತ್ಯುಂಜಯನಿಗೆ ಕೇಳಿಸಿತು. ಭೂಮಿಯ ನೂರಾರು ಪದರುಗಳನ್ನು ತೋಡಿ ತೆಗೆದು ತಾನು ಒಳಗೆ ಸುರಂಗದಲ್ಲಿ ಕುಳಿತಿದ್ದರೂ ಇದನ್ನೆಲ್ಲ ಭೇದಿಸಿಕೊಂಡು ಈ ಕರೆಯು ಬಂದಿದೆ ಎಂದು ಅವನಿಗೆ ಮನದಟ್ಟಾಯಿತು. "ಆ ಜೀವನ, ಆ ಆಕಾಶ, ಆ ಬೆಳಕು, ಜಗತ್ತಿನಲ್ಲಿರುವ ಸಕಲ ಐಶ್ವರ್ಯಗಳಿಗಿಂತ ಹೆಚ್ಚು. ಕೇವಲ ಒಂದೇ ಒಂದು ಕ್ಷಣ ಮತ್ತೆ ಭೂಮಿಯ ಮೇಲೆ ಹೋಗಿ ಆ ಶ್ಯಾಮವರ್ಣದ ಮಣ್ಣಿನ ಮೇಲೆ ನಿಂತು ನೀಲ ಆಕಾಶವನ್ನೂ, ಹಸಿರು ನೆಲವನ್ನೂ ನೋಡಬೇಕು. ನಿಸರ್ಗದ ಪರಿಮಳವನ್ನು ಮೂಸಬೇಕು. ಕೂಡಲೇ ಮರಣ ಬಂದರೂ ಈ ಜನ್ಮ ಸಾರ್ಥಕವಾದಂತೆ ಎಂದು ಮೃತ್ಯುಂಜಯನು ತನ್ನೊಳಗೆ ತಾನು ಭಾವಿಸಿದನು. ಅವನಲ್ಲಿ ಪೂರ್ಣ ಪರಿವರ್ತನೆಯಾಗಿತ್ತು.

ಈ ಹೊತ್ತಿಗೆ ಸರಿಯಾಗಿ ಬಾಗಿಲು ತೆರೆಯಿತು. ಸನ್ಯಾಸಿಯು ಒಳಗೆ ಬಂದು "ಮೃತ್ಯುಂಜಯ, ನಿನಗೆ ಏನು ಬೇಕು?" ಎಂದು ಕೇಳಿದನು.

ಇದನ್ನು ಕೇಳಿದ ಮೃತ್ಯುಂಜಯನು "ನನಗೆ ಇನ್ನು ಏನೂ ಬೇಡ. ಈ ದುರ್ಗಮ ಚಕ್ರಕೋಟೆಯಿಂದ, ಈ ಬಂಗಾರದ ಗಟ್ಟಿಗಳಿಂದ ಒಮ್ಮೆ ದೂರ ಹೋಗಬೇಕೆಂದು ಅನಿಸಿದೆ. ನನಗೆ ಬೆಳಕು ಬೇಕಾಗಿದೆ. ನೀಲ ಆಕಾಶವನ್ನು ನೋಡಬೇಕೆಂದೆನಿಸಿದೆ" ಎಂದು ಒಂದೇ ಉಸುರಿನಲ್ಲಿ ಹೇಳಿದನು.

"ಈ ಬಂಗಾರದ ಭಾಂಡಾರಕ್ಕಿಂತಲೂ ಬೆಲೆಯುಳ್ಳ ರತ್ನಭಾಂಡಾರವು ಬೇರೊಂದು ಇಲ್ಲಿಯೇ ಹತ್ತಿರದಲ್ಲಿ ಇದೆ. ಅದನ್ನು ನೋಡುವ ಇಚ್ಛೆ ನಿನಗೆ ಇದೆ ಅಲ್ಲವೆ? ನೋಡಲು ಒಂದು ಸಲ ಬರುವೆಯಲ್ಲವೇ?" ಎಂದು ಸನ್ಯಾಸಿಯು ಕೇಳಿದನು.

"ಇಲ್ಲ. ನಾನು ಹೋಗುವುದಿಲ್ಲ" ಎಂದು ಮೃತ್ಯುಂಜಯನು ಸ್ಪಷ್ಟವಾಗಿ ಹೇಳಿದನು.

" ಒಂದೇ ಒಂದು ಸಲ ನೋಡಬೇಕೆಂಬ ಕುತೂಹಲ, ಅದೂ ಕೂಡ ಇಲ್ಲವೇ ನಿನಗೆ" ಎಂದು ಮತ್ತೆ ಸನ್ಯಾಸಿಯು ಕೇಳಿದನು.

" ಇಲ್ಲ, ಯಾವ ಕುತೂಹಲವೂ ಇಲ್ಲ. ನನಗೆ ನೋಡುವ ಮನಸ್ಸಿಲ್ಲ. ನನಗೀಗ ಕೌಪೀನ ಹಾಕಿಕೊಂಡು ಬೀದಿಯಲ್ಲಿ ಭಿಕ್ಷಾಟನೆ ಮಾಡುವ ದುರ್ದೆಶೆ ಪ್ರಾಪ್ತವಾದರೂ ನನಗಿಲ್ಲಿ ಒಂದು ಕ್ಷಣ ಸಹ ನಿಲ್ಲುವ ಮನಸ್ಸಿಲ್ಲ" ಎಂದು ಮೃತ್ಯುಂಜಯನು ಹೇಳಿದನು.

" ಹಾಗಾದರೆ ಬಾ" ಎಂದು ಸನ್ಯಾಸಿಯು ತನ್ನ ಕೈ ಚಾಚಿದನು.

ಮೃತ್ಯುಂಜಯನ ಕೈ ಹಿಡಿದು ಸನ್ಯಾಸಿಯು ಅವನನ್ನು ಆ ಆಳವಾದ ಬಾವಿಯ ಹತ್ತಿರ ಕರೆದೊಯ್ದು ತನ್ನಲ್ಲಿದ್ದ ಮೊದಲಿನ ಆ ರಹಸ್ಯಲಿಪಿಯ ಕಾಗದವನ್ನು ಅವನಿಗೆ ಕೊಟ್ಟು " ಇದನ್ನು ತೆಗೆದುಕೊಂಡು ನೀನೇನು ಮಾಡುವೇ" ಎಂದು ಕೇಳಿದನು.

ಮೃತ್ಯುಂಜಯನು ಅದನ್ನು ಹರಿದು ಆಳವಾದ ಆ ಬಾವಿಯಲ್ಲಿ ಹಾಕಿದನು.

62. ಪಾದರಕ್ಷೆಯ ಸಂಶೋಧನ

ಗೋಬು*ರಾಯರೆ ಕೇಳಿರಿ ಎಂದು
ಹಬು* ಹೇಳಿದನು ಹೀಗೆಂದು :
"ನಿನ್ನೆ ರಾತ್ರಿ ನಾ ಬಲು ಯೋಚಿಸಿದೆ
ನಿದ್ದೆಮಾಡದೆ ರಾತ್ರಿಯ ಕಳೆದೆ
ಭೂಮಿಯ ಮೇಲೆ ಕಾಲಿಟ್ಟೊಡನೆ
ಧೂಳಿಯು ಕಾಲಿಗೆ ತಾಗುವುದೇಕೆ ?
ನೀವು ವೇತನ ಪಡೆವುದು ವ್ಯರ್ಥ
ರಾಜನ ಕೆಲಸವ ಮರೆವುದೆ ಸ್ವಾರ್ಥ
ಎನ್ನಯ ಮಣ್ಣೆ ಎನ್ನಯ ಮೇಲೆ
ಮಣ್ಣೆರಚುವುದಿದು ಅವಮಾನ
ಕೂಡಲೆ ಮಾಡಿರಿ ಪ್ರತೀಕಾರ
ಇಲ್ಲವೆ ಮುಗಿಸುವೆ ನಿಮ್ಮವತಾರ."

ಗೋಬುರಾಯನು ಕೇಳುತಲಿದ್ದನು
ಯೋಚಿಸಿ ಯೋಚಿಸಿ ಕಳವಳಿಸಿದನು
ಬೆವರನು ಸುರಿಸುತ ರಾತ್ರಿಯ ಕಳೆದನು
ಪಂಡಿತರನು ಕರೆಕಳಿಸಿದನು.
ಉತ್ತರ ತೋಚದೆ ಬಳಲಿದರವರು
ಕತ್ತನು ಚೆಲ್ಲಿ ಬರಿ ಮರಳಿದರು
ಸೇವಕರಾರೂ ಮಲಗಲೆ ಇಲ್ಲ
ಅಡಿಗೆಯನಂತೂ ಮಾಡಲೆ ಇಲ್ಲ
ನಂಬಿದ ಸೇವಕರೆಲ್ಲರು ಬಂದು
ಕಂಬನಿ ಸುರಿಸುತ ಹೇಳಿದರಂದು
"ಹಬುಗೋಬುಗಳಾ ಪದಪದ್ಮಕೆ ಧೂಳಿ
ತಾಗದೆ ಹೋದರೆ ನಮಗೆಂತು

---

* ಬಂಗಾಲದಲ್ಲಿಯ ಜನರ ಹೆಸರುಗಳು.

ಪದಧೂಳಿಯು ದೊರಕುವದೆಂತು ?"
ರಾಜನು ಕೇಳಿ ಕಾತರಿಸಿದನು
ಸೋಜಿಗವೇನು ? ಮಾತಿದು ಸತ್ಯ ?
ಆದರು ಮೊದಲು ಧೂಳಿಯನೋಡಿಸಿ,
ಪಾದದ ಧೂಳು ವಿಚಾರಿಸಿರಿ.
ಪಾದದ ಧೂಳಿಯು ಸಿಗದಿರೆ ಇಲ್ಲ.
ವಾದಿಸಿ ವೇತನಕೊಂಬುದು ಹೊಲ್ಲ
ಏತಕೆ ನಿಮ್ಮನು ನಾ ಪೋಷಿಸಲಿ ?
ಪದವೀಧರ ವೈಜ್ಞಾನಿಕರೇಕೆ ?
ಮೊದಲಿನ ಕೆಲಸವೆ ಮುಗಿಸಿರಿ ಮೊದಲು
ತದನಂತರವೆ ಹೇಳಿರಿ ಬದಲು.

ರಾಜನ ಆಜ್ಞೆಯ ಕೇಳಿದ ಮಂತ್ರಿಯು
ಕಣ್ಣಿಗೆ ಕತ್ತಲು ಕವಿದಿರಲು
ಹಾಗೂ ಹೀಗೂ ತಡವುತ ಬಂದನು
ವೈಜ್ಞಾನಿಕರಿಹ ಪುರಸಭೆಗೆ
ದೇಶವಿದೇಶದ ತಜ್ಞರು ಇದ್ದರು
ಯಾಂತ್ರಿಕಜ್ಞಾನವ ಪಡೆದವರು
ಕಣ್ಣಿಗೆ ಕನ್ನಡಕವ ಧರಿಸಿ
ಮೂಗಿಗೆ ನಶ್ಯವ ಅತಿ ಸುರಿಸಿ
ತುಂಬಾ ಯೋಚಿಸಿ ನುಡಿದರು ಇಂತು
"ಮಣ್ಣಿಲ್ಲದೆ ಮರ ಬದುಕುವದೆಂತು ?"
ರಾಜನು ಅಂದನು ಇದ ಕೇಳಿ
"ವೈಜ್ಞಾನಿಕರಿಹರೇತಕೆ ಹೇಳಿ."

ಎಲ್ಲರು ಸೇರಿದರೊಂದೆಡೆ ಮತ್ತೆ
ಯುಕ್ತಿಯ ಕಂಡರು ಹುಡುಕುತ್ತೆ.
ಕೊಂಡರು ಹದಿನೇಳೂವರೆ ಲಕ್ಷ
ಕಸಬರಿಕೆಗಳನು ಕೂಡಲೆ ದಕ್ಷ
ಬೀದಿಯ ಗೂಡಿಸೆ ಧೂಳಿಯು ಎದ್ದು
ರಾಜನ ಮೈ ಮುಖ ಮೆತ್ತಿತು ಬಿದ್ದು.
ಕೆಲವರ ಕಣ್ಣಲಿ ಧೂಳಿಯು ಹೊಕ್ಕು
ಕಣ್ಣನು ಕಳೆಯಿತು ಗಂಟಲು ಸಿಕ್ಕು
ಕೆಲವರು ಕೆಮ್ಮುತ ಅಸು ನೀಗಿದರು.

ಧೂಳಿಯ ಮೋಡವು ಸೂರ್ಯನ ಮುಸುಕಲು
ಕತ್ತಲು ಕವಿದಿತು ಗಗನದಲಿ
ಗೊಂದಲವೆದ್ದಿತು ಪುರದಲ್ಲಿ.
"ಧೂಳಿಯನಡಗಿಸಹೋದರೆ ಮತ್ತೆ
ಧೂಳಿಯೆ ಹೆಚ್ಚಿತು ಜಗ ತುಂಬುತ್ತೆ."
ಎಂದನು ರಾಜನು ನೋಡುತಲದನು
ಬೆಂದು ತೆಗೆದನೊಂದುದ್ಗಾರವನು.

ಕೂಡಲೆ ಹೊರಟರು ಜನ ಗುಂಪಾಗಿ
ಕೊಂಡರು ಹದಿನೆಂಟೂವರೆ ಲಕ್ಷ
ನೀರನು ತುಂಬುವ ತೊಗಲಿನ ಚೀಲ.
ಕೆರೆಬಾವಿಗಳು ಬತ್ತಿದವೆಲ್ಲ.
ಹೊಳೆಹಳ್ಳಗಳು ತಳವನು ಕಂಡವು.
ಜಲಚರಗಳು ಅಸುನೀಗಿದವು
ರೋಗವು ಹಬ್ಬಿತು ರಾಜ್ಯದಲಿ
ಜನ ಮಲಗಿದರು ಜ್ವರದಲ್ಲಿ
"ಧೂಳನು ಓಡಿಸ ಹೇಳಿದರೆ
ಕೆಸರಿನ ಹೊಂಡವ ಮಾಡಿದಿರಿ.
ನೀವೆಲ್ಲರು ಬರಿ ಕತ್ತೆಗಳು"
ಎಂದನು ರಾಜನು ಸಿಡುಕಿನಲಿ.

ಪುನರಪಿ ದೀರ್ಘಾಲೋಚನೆ ಗೈಯಲು
ಕುಳಿತರು ತಜ್ಞರು ತವಕದಲಿ
ತಲೆಯನು ಕೊಡವುತ, ಕಣ್ಣಲಿ ಎಣ್ಣೆಯ
ಹಾಕಿಕೊಂಡು ಬಲು ನೋಡಿದರು.
ಧೂಳಿಯನೋಡಿಸೆ ದಾರಿಯ ಕಾಣದೆ
ತಮ್ಮೊಳು ಮಮ್ಮಲ ಮರುಗಿದರು.
ಬೀದಿಯನೆಲ್ಲ ಚಾಪೆಗಳಿಂದ
ಮುಚ್ಚಿಸೆ, ಧೂಳಿಯು ಅಡಗುವುದೆಂದು
ಯಾರೋ ಒಬ್ಬರು ಹೇಳಿದರು.
"ಧೂಳಿಯು ಸೇರಲು ರಂಧ್ರವೆ ಇಲ್ಲದ
ಮನೆಯಲಿ ರಾಜನನಿರಿಸಿದರಾಯಿತು!
ಧೂಳಿಯ ಮೇಲೆ ಕಾಲನೆ ಇಡದಿರೆ
ಕಾಲಿಗೆ ಧೂಳಿಯು ತಾಗುವುದೆಂತು?"
ಎಂದಿನ್ನೊಬ್ಬರು ಉಸಿರಿದರು.

"ಆಗದ ಮಾತಿದು" ಎಂದನು ರಾಜ.
ಮಣ್ಣಿಗೆ ಹೆದರಿ ಹಗಲೂ ರಾತ್ರಿ
ಒಳಗೇ ಕುಳಿತರೆ ಎನ್ನಯ ರಾಜ್ಯ
ಮಣ್ಣುಗೂಡಿ ಹೋಗುವುದದು ಸಾಜ!
"ಹಾಗಿದ್ದರೆ ಬಲು ಬೇಗನೆ ಕರೆಸಿರಿ
ಚರ್ಮದ ಕೆಲಸವ ಮಾಡುವವನನ್ನು
ಚರ್ಮದಿ ಹೊದಿಸಿರಿ ಭೂತಲವನ್ನು
ಚರ್ಮದ ಚೀಲದಿ ಭೂ-ಗೋಲವನು
ಹಾಕಿದ ಕೀರ್ತಿಯು ರಾಜಗೆ ಬಹುದು
ಇಲ್ಲವೆ ಸಾಯಲಿ ಚಮಗಾರವನು"
ಎಂದರು ಸಭೆಯಲಿ ಕೂಡಿದ ಜನರು.

ರಾಜನ ದೂತರು ಹೊರಟರು ಹುಡುಕುತ
ಕೆಲಸವನೆಲ್ಲಾ ಕೈಬಿಟ್ಟು
ಸಿಕ್ಕಲ್ಲಲೆದರು ಆ ಕಡೆ ಈ ಕಡೆ
ಎಲ್ಲಾ ಕಡೆಯಲಿ ಸುತ್ತಿದರು.
ಚರ್ಮದ ಕೆಲಸವ ಮಾಡುವ ಜನರು
ಅವರಿಗೆ ಕೊನೆಗೂ ದೊರೆಯಲೆ ಇಲ್ಲ.
ಚರ್ಮವ ಕೂಡ ಬೇಕಾದಷ್ಟು
ದೊರಕಿಸಿಕೊಡುವರು ಇರಲಿಲ್ಲ.
ಚಮಗಾರರ ಮುದಿ ಕುಲಪತಿಯನ್ನೆ
ಬಂಧಿಸಿ ತಂದರು ರಾಜನ ಮುಂದೆ.
ನಗುನಗುತಲೆ ಅವ ಹೇಳಿದನು
"ಭೂಮಿಗೆ ಚರ್ಮವ ತೊಡಿಸುವ ಬದಲು
ಎಲ್ಲರು ನಿಮ್ಮಯ ಕಾಲುಗಳನ್ನು
ಚರ್ಮದಿ ಮುಚ್ಚಲು ನಿಮ್ಮಯ ಬಯಕೆ
ಈಡೇರುವುದಿದು ಖಂಡಿತ"ವೆಂದು.

"ಇಷ್ಟು ಸುಲಭದಲಿ ಎಂತದು ಸಾಧ್ಯ?"
ಎಂದನು ರಾಜನು ಕೌತುಕದಿ.
"ಕುಳಿತವರೆಲ್ಲರು ಯೋಚಿಸಿ ಹೇಳಿರಿ"
ಎಂದನು ಮಂತ್ರಿಯು ಆತುರದಿ
"ಆಗದೆ ಹೋದರೆ ಕುಲಪತಿಯನ್ನು
ಗಲ್ಲಿಗೆ ಹಾಕಿರಿ" ಎಂದರು ಜನರು.

ಕುಲಪತಿ ಬಂದನು ರಾಜನ ಬಳಿಗೆ
ಕುಳಿತನು ಆತನ ಪಾದದ ಬದಿಗೆ
ಜೋಡನು ಹೊಲಿದನು ; ತೊಡೆಸಿದನು.
ಜನ ತಲೆದೂಗಿತು ಹರ್ಷದಲಿ
ಮೆಟ್ಟನು ಮೆಟ್ಟುವ ರೂಢಿಯು ಅಂದೇ
ಜಗದಲಿ ಬಂದಿತು ಮುದದಿಂದೆ.

63. ಕಠಿಣ ಕಬ್ಬಿಣವು ಮಲಗಿತ್ತು

ಚೇತನವಿಲ್ಲದೆ ಗಾಢ ನಿದ್ದೆಯಲಿ
ಕಠಿಣ ಕಬ್ಬಿಣವು ಮಲಗಿತ್ತು
ನಿದ್ದೆಯ ತೊರೆಯುತ ಚೇತರಿಸಿ
ಇಂದದು ನಿಂತಿದೆ ಎಚ್ಚತ್ತು.

ಅಂಧಕಾರದಲಿ ಗುಪ್ತವಾಗಿ ಅದು
ಲಕ್ಷಯುಗಗಳಿಂದೊರಗಿತ್ತು
ಅದನಿಂದೆಬ್ಬಿಸಿ ಕೈಯಿಂದೆತ್ತಿ
ಮೌನವ ಬಿಡಿಸಿರಿ ಆದಷ್ಟು.

ಅಚಲವಿದ್ದುದು ಸಚಲವಾಗಿದೆ
ಜಗವ ಗೆಲ್ಲಲು ಬಿಡಿರದನು
ನಿರ್ಭಯದಿಂದಲಿ ಸಾಗಲಿ ಮುಂದಕೆ
ಸುಗ್ಗಿಯ ಮಾಡಿರಿ ಸಂತಸಕೆ.

64. ಮುಂಬೈ ನಗರ

ಮುಂಬೈ ನಗರದ ಮೇಲೆ ಒಂದು ಸಲ ಕಣ್ಣಾಡಿಸಿ ಬರಬೇಕೆಂದು ನಿನ್ನೆ ಸಂಜೆ ಹೊರಗೆ ಹೋಗಿದ್ದೆ. ಮೊದಲಿಗೆ ಕಂಡ ಚಿತ್ರದಿಂದ ಮುಂಬೈಗೊಂದು ವಿಶೇಷ ವ್ಯಕ್ತಿತ್ವವಿದೆ ಎಂದು ನನ್ನ ಮನಸ್ಸಿಗೆ ಅನಿಸಿತು. ಆ ವ್ಯಕ್ತಿತ್ವ ಅದೇಕೊ ಕಲಕತ್ತೆಗೆ ಇಲ್ಲ. ಆ ನಗರವನ್ನು ಹೇಗೆ ಹೇಗೊ ತುಂಡು-ತುಣುಕುಗಳನ್ನು ಜೋಡಿಸಿ ಸಿದ್ಧಗೊಳಿಸಲಾಗಿದೆ.

ಸತ್ಯವಾದ ಮಾತೆಂದರೆ, ಸಮುದ್ರವು ಮುಂಬೈಗೆ ಒಂದು ಆಕಾರವನ್ನು ಕೊಟ್ಟಿದೆ. ತನ್ನ ಅರ್ಧಚಂದ್ರಾಕೃತಿಯ ದಡದ ಸ್ಥಳವನ್ನು ಇತ್ತು ಅದಕ್ಕೆ ತಾನು ಆಸರಾಗಿ ಉಳಿದಿದೆ. ಮುಂಬೈ ನಗರದ ಹೆದ್ದಾರಿ ಮೊದಲುಗೊಂಡು ಚಿಕ್ಕಚಿಕ್ಕ ಓಣಿಗಳಲ್ಲಿ ಕೂಡ ಸಮುದ್ರದ ಆಕರ್ಷಣವು ಸೇರಿಕೊಂಡು ಅಲ್ಲಿ ಕೆಲಸ ಮಾಡುತ್ತಿದೆ. ಸಮುದ್ರವೇ ಮುಂಬೈ ನಗರದ ಹೃತ್ಪಿಂಡವೆಂದು ಹೇಳಬಹುದು. ನನಗೆ ಹಾಗೆ ಅನಿಸಿದೆ. ಈ ನಗರವನ್ನು ಸಜೀವವಾಗಿ ಇರಿಸುವುದಕ್ಕೆಂದು ಸಮುದ್ರವು ಅದರ ನಾಡಿನರಗಳಲ್ಲಿ ಸದಾ ತುಂಬಿ ಹರಿಯುತ್ತಿದೆ. ವಿಶಾಲ ವಿಶ್ವದ ದಿಕ್ಕಿನ ಕಡೆಗೆ ಮುಂಬೈ ನಗರದ ಮುಖವನ್ನು ಯಾವಾಗಲೂ ತಿರುಗಿಸಿ ಸಮುದ್ರವು ಈ ನಗರವನ್ನು ನಿಲ್ಲಿಸಿದೆ.

ಕಲಕತ್ತೆಗೆ ಪ್ರಪಂಚದೊಂದಿಗೆ ಸಂಪರ್ಕವಿಟ್ಟುಕೊಳ್ಳುವುದಕ್ಕೆ ಗಂಗಾನದಿಯೊಂದೇ ಸಾಧನವಾಗಿದೆ. ದೂರದ ರಹಸ್ಯವನ್ನು ಕಲಕತ್ತೆಗೆ ತರುವುದಕ್ಕೂ ತಿರುಗಿ ಕೊಂಡೊಯ್ಯುವುದಕ್ಕೂ ಗಂಗಾಕೊಳದ ಈ ಮಾರ್ಗ ಬಹುಕಾಲದಿಂದ ಒಂದೇ ಒಂದಾದ ಸಾಧನವಾಗಿತ್ತು. ನಿತ್ಯ ಜೀವನದ ಜಡತ್ವವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ವಿಶ್ವದ ಕಡೆಗೆ ದೃಷ್ಟಿಯನ್ನು ಬೀರಲು ಇದೊಂದೇ ಬೆಳಕಿಂಡಿಯಾಗಿದೆ. ಇಷ್ಟೆ ಜನರಿಂದ ತುಂಬಿರುವ ಈ ನಗರದಲ್ಲಿಯೇ ವಿಶ್ವವು ಸಿಕ್ಕಿಕೊಂಡು ಬಿದ್ದಿಲ್ಲವೆಂಬ ಭಾವನೆಯನ್ನು ಈ ಬೆಳಕಿಂಡಿಯು ನಮಗೆ ಬೀರುತ್ತದೆ. ಆದರೆ ಗಂಗಾನದಿಯ ನೈಸರ್ಗಿಕರೂಪವೂ, ಸೌಂದರ್ಯವೂ ಈಗ ಉಳಿದಿಲ್ಲ. ಅದರ ಎರಡೂ ದಂಡೆಗಳ ಗುಂಟ ಗಂಗಾನದಿಗೆ ಅಸ್ತವ್ಯಸ್ತ ಉಡುಪನ್ನು ತೊಡಿಸಿ, ನಡುವಿಗೆ ಬಿಗಿಯಾದ ನಡುಪಟ್ಟಿಯನ್ನೂ ಕಟ್ಟಿ ಅದನ್ನು ಈ ನಗರವೆಂಬ ಆಫೀಸಿನ ಜವಾನನನ್ನಾಗಿ ಮಾಡಿದಂತಾಗಿದೆ. ಅದರ ಬೆನ್ನಿನ ಮೇಲೆ ಭಾರವನ್ನು ಹೇರಿದ ನಾವೆಗಳನ್ನು ಸಡಸುವ ಕೆಲಸವನ್ನು ಬಿಟ್ಟರೆ ಅದರಿಂದ ಬೇರೆ ಮಹತ್ವದ ಕೆಲಸವನ್ನು ತೆಗೆದುಕೊಳ್ಳುವುದು ಸಾಧ್ಯವಿದೆ ಎಂದೂ ಕೂಡ ಜನರಿಗೆ ತಿಳಿಯದಾಗಿದೆ. ಹಡಗುಗಳ ಭಾವಣಿಗಳಿಂದ

ತುಂಬಿ ಕಂಟಕಪ್ರಾಯವಾಗಿರುವ ಅರಣ್ಯದಂತೆ ಕಾಣುವ ಈ ನದಿಯಲ್ಲಿ ಆಮೆಗಳೂ, ಮೊಸಳೆಗಳೂ ನಾಚಿಕೊಂಡು ಎಲ್ಲಿ ಅಡಗಿಹೋಗಿವೆಯೊ ಯಾರು ಬಲ್ಲರು!

ಮಾನವನು ಕೆಲಸಮಾಡದೆ ವಿಧಿಯಿಲ್ಲವೆಂದಿದ್ದರೂ ಅದರ ಪ್ರತೀಕವೆಂಬಂತೆ ಗುಲಾಮತನದ ಒಂದು ಮಾಲೆಯನ್ನು ತನ್ನ ಕೊರಳಿಗೆ ಹಾಕಿಕೊಳ್ಳದೆ ಇರುವುದರಲ್ಲಿ ಸಮುದ್ರದ ವಿಶೇಷವಾದ ಮಹತ್ವವು ಕಂಡುಬರುತ್ತದೆ. ದಡದ ಮೇಲೆ ನಿತ್ಯ ನಡೆಯುವ ಅಸಂಖ್ಯ ಚಟುವಟಿಕೆಗಳೂ ಕೂಡ, ಸಮುದ್ರವು ತನ್ನ ವಿಶಾಲ ನೀಲ ವಕ್ಷಃಸ್ಥಲದ ಮೇಲೆ ಧರಿಸಿರುವ ವಜ್ರಹಾರದ ಒಂದು ಮಣಿಯನ್ನೂ ಮುಚ್ಚಲಾರವು. ದಣಿವಿನ ಚಿಕ್ಕ ಗುರುತೂ ಕೂಡ ಕಾಣದ ನಗೆಮುಖದಿಂದ ನೋಡುತ್ತ ನಿಂತ ವಿಗ್ರಹದಂತೆ ಸಮುದ್ರವು ಕಂಡುಬರುತ್ತದೆ. ಒಂದು ಕಡೆಗೆ ನೆಲವು ದುಡಿಯುವ ಮನುಷ್ಯನಿಗೆ ದಣಿವನ್ನು ಕೊಡುತ್ತಿದ್ದರೆ ಇನ್ನೊಂದು ಕಡೆ ಜಲವು ಆ ದಣಿವನ್ನೆಲ್ಲ ತಾನು ತೆಗೆದು ಕೊಳ್ಳುತ್ತದೆ. ಘನ ಘೋರವಾದ ಕರ್ಮದ ಸಮ್ಮುಖದಲ್ಲಿ ಅನಂತವಾದ ಅವಕಾಶದ ವಿರಾಟ ರೂಪವನ್ನೇ ನಿಲ್ಲಿಸಿದಂತಿದೆ ಈ ಸಮುದ್ರ.

ಸಾವಿರಾರು ಸ್ತ್ರೀಪುರುಷರು ಅಚ್ಚುಕಟ್ಟಾಗಿ ಬಟ್ಟೆಬರೆಗಳನ್ನು ತೊಟ್ಟು ಕೊಂಡು ಸಮುದ್ರದ ದಂಡೆಗೆ ಹೋಗಿ ಕುಳಿತುಕೊಂಡ ನೋಟವನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ಸಾಯಂಕಾಲದ ಸಮುದ್ರದ ಕರೆಯನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಸಮುದ್ರದ ಉಡಿಯಲ್ಲಿಯೇ ಈ ಜನರ ವಿಶ್ರಾಂತಿ. ನಮ್ಮ ಕಲಕತ್ತೆಯಲ್ಲಿ "ಈಡನ್ ಗಾರ್ಡನ್" ಎಂಬ ಹೆಸರಿನ ಒಂದು ಉಪವನವಿದೆ. ಆದರದು ಒಬ್ಬ ಕೃಪಣ ಗೃಹಸ್ಥನ ಮನೆಯ ಗೃಹಿಣಿ. ಅವಳ ಕಂಠದಲ್ಲಿ ಆಹ್ವಾನವಿಲ್ಲ. ಅದು ರಾಜರು ಮಾಡಿದ ಉಪವನ. ಅಲ್ಲಿ ಎಷ್ಟು ಕಾನೂನುಗಳು! ಅದೆಷ್ಟು ಬಂಧನಗಳು! ಆದರೆ ಸಮುದ್ರವು ಯಾರ ಕೃತಿಯೂ ಅಲ್ಲ. ಅಂತೆ ಇದ ನ್ನಾರೂ ಬಂಧಿಸಿ ಇಡಲಾರರು. ಆದ್ದರಿಂದ ಸಮುದ್ರದ ದಂಡೆಯ ಮೇಲೆ ಮುಂಬೈ ನಗರದ ನಿತ್ಯ ಉತ್ಸವ ನಡೆಯುತ್ತಿದೆ. ಈ ಬಗೆಯ ಸಂಕೋಚವೆನಿಸದ ಆನಂದದ ಒಂದಿಷ್ಟು ಸ್ಥಳವೂ ಕೂಡ ಕಲಕತ್ತೆಯಲ್ಲಿ ಇಲ್ಲವೇ ಇಲ್ಲ.

ಎಲ್ಲಕ್ಕಿಂತ ಹೆಚ್ಚು ಇಲ್ಲಿ, ಮುಂಬೈಯಲ್ಲಿ ಸ್ತ್ರೀಪುರುಷರು ಒಟ್ಟಿಗೆ ಸಂತೋಷ ದಿಂದ ಸೇರಿ ನಿತ್ಯ ನಡೆಯುತ್ತಿರುವ ಜಾತ್ರೆಯನ್ನು ಕಂಡರೆ ನನ್ನ ಹೃದಯವು ತುಂಬಿ ಹೊರಸೂಸುತ್ತದೆ. ಸ್ತ್ರೀಯರಿಲ್ಲದ ಕಲಕತ್ತೆಯ ಜೀವನವು ಅದೆಷ್ಟು ರಸಹೀನವೆಂಬುದು ಇಲ್ಲಿಗೆ ಬಂದು ನೋಡಿದಾಗ ತಿಳಿದುಬರುತ್ತದೆ. ಕಲಕತ್ತೆಯಲ್ಲಿ ನಾವು ಮಾನವ ಜನಾಂಗದ ಅರ್ಧಭಾಗವನ್ನು ಮಾತ್ರ ನೋಡುತ್ತೇವೆ. ಅಂತೆಯೆ ನಾವು ಪುರುಷರ ಆನಂದದ ರೂಪವನ್ನು ನೋಡುವುದೇ ಇಲ್ಲ. ಇದನ್ನು ನೋಡದೆ ಇರುವುದೆಂದರ ನಿಜವಾಗಿ ನಮಗೊಂದು ಶಿಕ್ಷೆ ಇದ್ದಂತೆ.

ಇದರಿಂದ ಕಲಕತ್ತೆಯಲ್ಲಿರುವ ಮಾನವರ ಮನಸ್ಸನ್ನು ಅದುಮಿ, ಹತ್ತಿಕ್ಕಿ ದಂತಾಗಿದೆ. ಸ್ವಾಭಾವಿಕವಾಗಿ ಮನೋವಿಕಾಸಕ್ಕೆ ಆಸ್ಪದ ದೊರೆಯದಂತಾಗಿದೆ. ಸಮುದ್ರದ ದಂಡೆಯ ಮೇಲೆ ದಿನಾಲು ಸ್ತ್ರೀಪುರುಷರು ಮಕ್ಕಳೊಂದಿಗೆ ಬಂದು ಆನಂದದಿಂದ ವಿಹರಿಸುವ ನೈಸರ್ಗಿಕ ನೋಟವನ್ನು ನೋಡುವುದೇ ಒಂದು ಪುಣ್ಯ.

ಇದೊಂದು ಅತಿ ಸುಂದರವಾದ ಸತ್ಯ ಜೀವನದ ಮುಖವಾಗಿದೆ. ಇದನ್ನು ನೋಡುವ ಭಾಗ್ಯ ಯಾರಿಗೆ ಇಲ್ಲವೊ ಅವರಷ್ಟು ಭಾಗ್ಯಹೀನರು ಬೇರೆ ಯಾರೂ ಇಲ್ಲ. ಈ ದುಃಖವು ನಮಗೆ ಅಭ್ಯಾಸವಾಗಿ ಹೋಗಿದೆ. ಇದು ನಮ್ಮನ್ನು ಬಹುಮಟ್ಟಿಗೆ ಅಚೇತರನ್ನಾಗಿ ಮಾಡಿದೆ. ಅಲ್ಲದೆ ಸತ್ಯ ಈ ಕ್ರಿಯೆಯು ಇನ್ನೂ ನಡೆಯುತ್ತಿದ್ದು ದಿನ ದಿನಕ್ಕೂ ತನ್ನ ಪಾಲಿನ ಜಮೆಯನ್ನು ತಂದು ತುಂಬಿಸುತ್ತಲೇ ಇದೆ. ಇದರಲ್ಲಿ ಯಾವ ಸಂದೇಹವೂ ಇಲ್ಲ. ಮನೆಯ ಕೋಣೆಯಲ್ಲಿ ನಮ್ಮ—ಕಲಕತ್ತೆಯ ಸ್ತ್ರೀ ಪುರುಷರು ಕೂಡಿಕೊಂಡೇ ಇರುತ್ತಾರೆ. ಆದರೆ ಈ ಮಿಲನವು ಸಂಪೂರ್ಣವಾದ, ಮುಕ್ತವಾದ ಮಿಲನವೆಂದು ಹೇಗೆ ಹೇಳಲು ಬಂದೀತು. ವಿಶಾಲ ವಿಶ್ವದಲ್ಲಿ, ಹೊರಗೆ ನಾವು ಒಬ್ಬರನ್ನೊಬ್ಬರು ನೋಡಿದಾಗ ಪಡೆದ ಆನಂದವು ಒಂದಾದರೂ ದಿನ ನಮಗೆ ಒಳಗೆ—ಕೋಣೆಯೊಳಗೆ ಆಗುವುದಕ್ಕೆ ಸಾಧ್ಯವಿಲ್ಲ.

ನಮ್ಮ ಗಾಡಿಯು ಮಾಥೆರಾನ ಗುಡ್ಡದ ಮೇಲೆ ಏರಿಹೋಗಿ ಒಂದು ಚಿಕ್ಕ ಉಪವನದ ಎದಿರು ಬಂದು ನಿಂತಿತು. ಆ ಚಿಕ್ಕ ತೋಟದ ಸುತ್ತು ನಾಲ್ಕೂದಿಕ್ಕುಗಳಲ್ಲಿ ಕುಳಿತುಕೊಳ್ಳಲು ಬೆಂಚುಗಳನ್ನೂ ಇರಿಸಿದ್ದರು. ಅಲ್ಲಿಯೂ ಕೂಡ ಕುಲಸ್ತ್ರೀಯರು, ಗೃಹಿಣಿಯರು ತಮ್ಮ ತಮ್ಮ ಆತ್ಮೀಯ ಪುರುಷರೊಂದಿಗೆ ಬಂದು ವಾಯು ಸೇವನೆ ಮಾಡುತ್ತ ಕುಳಿತಿದ್ದರು. ಕೇವಲ ಪಾರಸೀ ಮಹಿಳೆಯರು ಮಾತ್ರ ಇರದೆ, ಹಣೆಗೆ ಅಂದವಾಗಿ ಕುಂಕುಮವನ್ನು ಹಚ್ಚಿಕೊಂಡ ಮಹರಾಷ್ಟ್ರ ಮಹಿಳೆಯರೂ ಅಲ್ಲಿ ಕುಳಿತಿದ್ದರು. ಅವರ ಮುಖದಲ್ಲಿ ಅದೆಷ್ಟು ಪ್ರಶಾಂತವಾದ ಕಳೆಯಿತ್ತು. ತಾವು ಪ್ರತ್ಯಕ್ಷವಾಗಿ ಕುಳಿತಿರುವುದೇ ಒಂದು ಗಂಡಾಂತರವಾಗಿದ್ದು, ನಾಲ್ಕೂದಿಕ್ಕುಗಳಿಂದ ತಮ್ಮನ್ನು ನೋಡುತ್ತಿರುವ ವಿಪತ್ತಿನಿಂದ ಅದು ಹೇಗೆ ರಕ್ಷಿಸಿಕೊಳ್ಳಬೇಕೆಂಬ ಭಾವನೆಯು ಕೂಡ ಅವರ ಮನಸ್ಸಿನಲ್ಲಿ ಎಷ್ಟೂ ಬಂದಿರಲಿಲ್ಲ. ನಮ್ಮ ದೇಶದ ಮೇಲೆ ಸಂಪೂರ್ಣವಾಗಿ ಇರುವ ಅತಿ ಭಾರವಾದ ಸಂಕೋಚವೆಂಬ ಹೊರೆಯು ಇಲ್ಲದಾಗಿ ಇಲ್ಲಿಯ ಜನರ ಜೀವನವು ನಮ್ಮ ಜನರ ಜೀವನಕ್ಕಿಂತ ಅದೆಷ್ಟು ಕಡೆಗಳಿಂದ ಉತ್ತಮಗೊಂಡಿದ್ದು ತನ್ನದೇ ಆದ ಸೌಂದರ್ಯವನ್ನು ಪಡೆದಿದೆ ಎಂಬ ಭಾವನೆಯು ನನ್ನ ಮನದಲ್ಲಿ ಮೂಡಿಕೊಂಡಿತು. ಜನ್ಮದಾರಭ್ಯ ತಾನಾಗಿಯೇ ದೊರೆಯಬೇಕಾಗಿದ್ದ ನಿಸರ್ಗದ ಗಾಳಿ ಬೆಳಕುಗಳಿಗೂ ಕೂಡ ಮಹಿಳೆಯರನ್ನು ಎರವಾಗಿ ಮಾಡಿದ ಮನುಷ್ಯನು ಅಸ್ವಾಭಾವಿಕವಾಗಿ ಅದು ಹೇಗೆ ತಾನೇ ತನ್ನ ವಿರೋಧಿಯಾಗಿರುವನೆಂಬುದು, ನಮ್ಮ ದೇಶದ ಮುಗ್ಧ ಮಹಿಳೆಯರು ಯಾವಾಗಲೂ ಸಂಕೋಚದಿಂದ ಅಸಹಾಯರಾಗಿ ಇರುವುದನ್ನು ನೋಡಿದಾಗ ಕಂಡುಬರುವುದು. ರೇಲ್ವೆ ನಿಲ್ದಾಣಗಳಲ್ಲಿ ನಮ್ಮ ಮಹಿಳೆಯರನ್ನು ನಾವು ನೋಡಿದಾಗ ಅವರ ವಿರುದ್ಧ ದೇಶಕ್ಕೆ ದೇಶವೇ ಬಹುಕಾಲದಿಂದ ತೋರಿಸುತ್ತ ಬಂದ ನಿಷ್ಠುರತೆಯು ಸ್ಪಷ್ಟವಾಗಿ ಕಂಡುಬರುವುದು. ಮ್ಯಾಥೆರಾನದ ಈ ಚಿಕ್ಕ ಉಪವನದಲ್ಲಿ ತಿರುಗುತ್ತಿರುವಾಗ ಕಲಕತ್ತೆಯಲ್ಲಿರುವ ನಮ್ಮ "ಬೀಡನ್ ಪಾರ್ಕ್" ಮತ್ತು "ಗೋಲದಿಘಿ" ಉಪವನಗಳ ನೆನಪು ಬಂದು ಅವುಗಳ ದುರ್ದೈವ ಹಾಗೂ ಕಾರ್ಪಣ್ಯ ಕಣ್ಣೆದುರು ನಿಂತಂತಾಯಿತು.

ಮಧುಸಂಚಯನಕ್ಕೆಂದು ಹೂವುಗಳ ತೋಟಗಳಲ್ಲಿ ಹೋಗುವ ಪಾತರಗಿತ್ತಿ

ಗಳ ಮನದಲ್ಲಿ ತಮ್ಮ ಬಣ್ಣಬಣ್ಣದ ಪಕ್ಕಗಳನ್ನು ಮರಸುವ ಉದ್ದೇಶವು ಇರದೆ ತಮ್ಮ ಕೆಲಸದಲ್ಲಿ ನಿರತರಾಗಿರುವುದೇ ಇರುತ್ತದೆ. ಹಾಗೆಂದು ಅವು ಆಫೀಸಿಗೆ ಹೊರಟಿರುವೆ ವೆಂಬ ಭಾವನೆಯನ್ನು ತಾಳಿ ಆಫೀಸಿನ ನೀರಸ ಬಟ್ಟೆಗಳನ್ನೇನೂ ಧರಿಸುವುದಿಲ್ಲ. ಇದೇ ರೀತಿ ಇಲ್ಲಿಯ ಜನರು ತೊಟ್ಟುಕೊಳ್ಳುವ ಬಣ್ಣಬಣ್ಣದ ಬಟ್ಟೆಗಳನ್ನು ನೋಡಿ ನನಗೆ ಮೇಲಿನ ಮಾತು ನೆನಪಿಗೆ ಬರುತ್ತದೆ. ಕೆಲಸಕ್ಕೆ ಹೋಗುವೆವೆಂಬ ಮಾತ್ರಕ್ಕೆ ಏಕಾಂತ ದಲ್ಲಿ ಪ್ರಯೋಜನಕ್ಕೆ ಬರಬಹುದಾದರೂ ಬಣ್ಣಗೆಟ್ಟ ಅನಾಕರ್ಷಕ ಬಟ್ಟೆಗಳನ್ನು ಹಾಕಿಕೊಂಡು ಹೋಗಬೇಕೆಂದು ನನಗೆ ತೋರುವುದಿಲ್ಲ. ಈ ಜನರು ತಲೆಯ ಮೇಲೆ ಧರಿಸುವ ಪಗಡಿಯಲ್ಲಿ, ಕಾಲಲ್ಲಿ ಮೆಟ್ಟುವ ಮೊಚ್ಚೆಗಳಲ್ಲಿ ಹಾಗೂ ಮಹಿಳೆಯರು ಉಟ್ಟುಕೊಳ್ಳುವ ಸೀರೆಗಳಲ್ಲಿ ಕಂಡುಬರುವ ವರ್ಣ ವೈವಿಧ್ಯವು ಜೀವನಕ್ಕೆ ಒಂದು ಪ್ರಕಾರದಲ್ಲಿ ಆನಂದವನ್ನು ತಂದು ಕೊಡುವುದಲ್ಲದೆ ನೋಡುವವರ ಒಳಗಿರುವ ಆನಂದವನ್ನೂ ಬಡಿದೆಬ್ಬಿಸುತ್ತದೆ. ಬಂಗಾಲ ದೇಶವನ್ನು ಬಿಟ್ಟು ಹೊರಗೆ ಅನೇಕ ದೇಶ ಗಳಲ್ಲಿ ಪ್ರವಾಸಮಾಡಿ ನಾನಿದನ್ನು ಕಂಡಿದ್ದೇನೆ. ಇಲ್ಲಿಯೂ ಒಕ್ಕಲಿಗನು ಹೊಲದಲ್ಲಿ ಕೆಲಸಮಾಡುತ್ತಾನೆ; ಆದರೆ ಆತನು ತಲೆಗೊಂದು ಪಗಡಿ, ಮೈಯಲ್ಲೊಂದು ಅಂಗಿ ಹಾಕಿಕೊಂಡಿರುತ್ತಾನೆ. ಮಹಿಳೆಯರ ಮಾತಂತೂ ಹೇಳುವುದೇ ಬೇಡ. ಇಲ್ಲಿಯ ಜನರು ನಾನು ಹೊರಗಿನವನೆಂದು ತಿಳಿದುಕೊಂಡು ಪರಕೀಯರಂತೆ ನನ್ನೊಂದಿಗೆ ನಡೆದುಕೊಳ್ಳುವುದಿಲ್ಲ. ಈ ಕಾರಣದಿಂದಾಗಿ ಈ ಜನರಲ್ಲಿ ಕಂಡುಬರುವ ಭೇದದಲ್ಲಿ ಕೂಡ ನನಗೆ ಒಂದು ಬಗೆಯ ಶ್ರದ್ಧೆಯುಂಟಾಗಿದೆ. ಈ ಜನರು ತಮ್ಮ ವ್ಯಕ್ತಿತ್ವಕ್ಕೆ ಅವಜ್ಞೆಯನ್ನು ತೋರಿಸುವುದಿಲ್ಲ. ಅದರ ಬದಲು ಅದಕ್ಕೊಂದು ಸುಂದರವಾದ ರೂಪ ಕೊಟ್ಟಿದ್ದಾರೆ. ಆ ವ್ಯಕ್ತಿತ್ವಕ್ಕೆ ಅದರದೇ ಆದ ಅಸ್ತಿತ್ವವನ್ನು ಇತ್ತಿದ್ದಾರೆ. ಇದು ಒಬ್ಬರಿಗೊಬ್ಬರು ಅವಶ್ಯವಾಗಿ ತೋರಿಸುವ ಆದರವೆಂದು ನಾನು ಭಾವಿಸು ತ್ತೇನೆ. ಇಷ್ಟೂ ಇಲ್ಲದಿದ್ದರೆ ಪ್ರತಿಮಾನವನ ವ್ಯಕ್ತಿತ್ವಕ್ಕೆ ಯಾವ ಪ್ರಯೋಜನ ವಿದೆ! ಮಾನವನು ತೀರ ದರಿದ್ರ ಅವಸ್ಥೆಗೆ ಇಳಿದುಬಿಡುತ್ತಾನೆ. ನಾವು ನಮ್ಮ ಸಮಾಜದಲ್ಲಿ ಕಂಡುಬರುವ ಈ ದರಿದ್ರ, ಹೀನ ದೃಶ್ಯವನ್ನು ಇಲ್ಲದಂತೆ ಮಾಡದೆ ಹೋದರೆ ಜಗತ್ತಿನ ಜನರ ಕಣ್ಣಿಗೆ ನಾವು ಅದೆಷ್ಟು ಅವಮಾನಿತರಾಗಿ ಕಂಡುಬರುವೆ ವೆಂಬ ಕಲ್ಪನೆಯನ್ನೂ ಕೂಡ ನಾನು ಮಾಡಲಾರದವನಾಗಿದ್ದೇನೆ.

ಇನ್ನೊಂದು ದೃಶ್ಯವು, ಮುಂಬೈನಗರದಲ್ಲಿ ನನ್ನ ಕಣ್ಣಿಗೆ ಅತಿ ಮಹತ್ವ ವಾದುದೆಂದು ಕಂಡುಬಂತು. ಅದೆಂದರೆ ಇಲ್ಲಿಯ ಸ್ವದೇಶೀ ಜನರ ಶ್ರೀಮಂತಿಕೆ. ಅದೆಷ್ಟು ಪಾರ್ಸಿ, ಮುಸಲ್ಮಾನ ಹಾಗೂ ಗುಜರಾತಿ ವರ್ತಕರ ಹೆಸರುಗಳು ಇಲ್ಲಿಯ ಭವ್ಯ, ಬೆಲೆಯುಳ್ಳ ಕಟ್ಟಡಗಳ ಮೇಲೆ ಕೆತ್ತಿರುತ್ತವೆ! ಇಷ್ಟೊಂದು ಹೆಸರುಗಳು ಕಲಕತ್ತೆಯಲ್ಲಿ ಎಲ್ಲಿಯೂ ನೋಡಲು ದೊರೆಯುವುದಿಲ್ಲ. ಅಲ್ಲಿಯ ಶ್ರೀಮಂತಿಕೆಯೆಲ್ಲ ಅಧಿಕಾರಿ ಜನರಲ್ಲಿ ಹಾಗೂ ಜಮೀನದಾರರಲ್ಲಿ ಕಂಡುಬರುತ್ತದೆ. ಈ ಕಾರಣಕ್ಕಾ ಗಿಯೇ ಈ ಶ್ರೀಮಂತಿಕೆಯು ಮ್ಲಾನವಾಗಿದೆ. ಜಮೀನದಾರರ ಸಂಪತ್ತು ನಿಂತ ನೀರಿನಂತೆ. ಆ ನೀರು ವ್ಯವಹಾರಕ್ಕೆ ಅತಿ ಅಲ್ಪಪ್ರಮಾಣದಲ್ಲಿ ಹರಿದುಹೋಗು ತ್ತದೆ. ಹಾಗೂ ಉಳಿದ ನೀರು ವಿಲಾಸದಿಂದ ದೂಷಿತವಾಗಿರುತ್ತದೆ. ಅದರಲ್ಲಿ

ಪೌರುಷವು ಪ್ರಕಾಶವಾದದ್ದು ಕಂಡುಬರುವುದಿಲ್ಲ. ಹೊಸ ಹಣ ಹರಿದು ಬರುವುದು ಅಲ್ಲಿ ಕಾಣಿಸುವುದಿಲ್ಲ. ಹೀಗಾಗಿ ದೇಶದಲ್ಲಿ ಇರುವ ಅಲ್ಪಸ್ವಲ್ಪ ಸಂಪತ್ತಿನ ಅತ್ಯಂತ ಕಡಿಮೆ ಭಾಗವು ನಮ್ಮಲ್ಲಿ ಇರುತ್ತದೆ. ಮಾರವಾಡಿ, ಪಾರ್ಸಿ, ಗುಜರಾತಿ, ಪಂಜಾಬಿ ಜನರಲ್ಲಿ ಮುಕ್ತ ಹಸ್ತದಿಂದ ದಾನಮಾಡುವ ದಾನಿಗಳನ್ನು ನಾನು ಹೆಚ್ಚಾಗಿ ಕಂಡಿದ್ದೇನೆ. ಆದರೆ ಬಂಗಾಲಿ ಜನರು ಎಲ್ಲರಿಗಿಂತ ಕಡಿಮೆ ದಾನ ಮಾಡಿದ್ದಾರೆ. ನಮ್ಮ ದೇಶದಲ್ಲಿ ದಾನಕೊಡುವುದಕ್ಕೆಂದು ಇರಿಸಿದ ಧನದ ಖಾತೆಯು ನಮ್ಮ ಪಶುಸಂಗೋಪನ ಖಾತೆಯಂತಿದೆ. ಆದಕ್ಕಾಗಿ ಒಂದು ಪ್ರತ್ಯೇಕವಾದ ಸ್ಥಾನವು ಇಲ್ಲವೆಂದರೂ ಸರಿಯಾದೀತು. ಧನವೆಂಬ ವಸ್ತುವನ್ನು ಸಜೀವ ವಸ್ತುವಿನಂತೆ ಉಪಯೋಗಿಸಿಕೊಳ್ಳಲು ನಮ್ಮ ಜನರಿನ್ನೂ ಶಕ್ತರಾಗಿಲ್ಲ. ನಮ್ಮಲ್ಲಿ ಕಂಡುಬರುವ ಕೃಪಣತೆ ಕರಾಳ ಲಕ್ಷ್ಮಿಯ ರೂಪ; ವಿಲಾಸವು ಬೀಭತ್ಸ. ಇಲ್ಲಿಯ ಶ್ರೀಮಂತರ ಜೀವನಯಾತ್ರೆಯು ಸರಳವಾಗಿದೆ. ದಾನಮಾಡುವ ಗುಣವು ಉದಾರವಾಗಿದೆ. ಇದನ್ನು ನೋಡಿ ನನಗೆ ಅತೀವ ಆನಂದವಾಗಿದೆ.

65. ಮಸ್ತಕ ವಿಕ್ರಯ

ಕೋಸಲ ನೃಪತಿಗೆ ತುಲನೆಯೆ ಇಲ್ಲ
ಜಗದಲಿ ಆತನ ಗುಣಗಾನ
ಶರಣಾಗತ ರಕ್ಷಕನಾಗಿದ್ದು
ದೀನರಿಗವನೆ ಪಿತಮಾತಾ.

ಕಾಶೀರಾಜನು ಕೇಳುತಲಿದ್ದನು
ಉರಿದೆದ್ದನು ಅಭಿಮಾನದಲಿ
"ನನ್ನಯ ಪ್ರಜರೇ ನನ್ನನು ಬಿಟ್ಟು
ಅವನನೆ ಕೊಂಡಾಡುವರೆಂದು

ಯಾರ ಮಾನವು, ಸ್ಥಾನವು ಕಡಿಮೆ
ಅವರು ಮಾಡಿದ ದಾನವೆ ಹೆಚ್ಚೆ!
ಸುಳ್ಳು ಧರ್ಮ ದಯೆ ಮಾಯೆಗಳೆಲ್ಲ!
ಇದು ಬರಿ ಅವನದು ಪೈಪೋಟಿ

ಸೇನಾಪತಿಗಳೆ, ಹಿರಿಯಿರಿ ಖಡ್ಗ
ಕರೆಯಿರಿ ಕೂಡಲೆ ಸೈನ್ಯವನು
ನನ್ನೊಡನಾತನು ಪುಣ್ಯವ ಗಳಿಸಲು
ಸ್ಪರ್ಧೆಯ ನಡಸಿಹ ಬಹು ದೊಡ್ಡ

ಕಾಶೀರಾಜನು ಯುದ್ಧವ ಗೈದನು
ಕೋಸಲ ರಾಜನು ರಣದಲಿ ಸೋತು
ನಾಚಿಕೆಯಾಗಲು ರಾಜ್ಯವ ಬಿಟ್ಟು
ದೂರದ ಕಾಡಿಗೆ ಓಡಿದನು.

ಕಾಶೀರಾಜನು ನಗುತಿಂದೆಂದನು
ತನ್ನಯ ಜನರಿಹ ಸಭೆಯಲ್ಲಿ

ಧನವನು ಅಂಕಿತದಲ್ಲಿಡುವವನೇ
  ಜಗದಲಿ ದಾನಿಯು ಆಗುವನು.

" ಇಂತಹ ಚಂದ್ರಗು ದಾರುಣ ರಾಹು
  ಹಲ್ಲೆಯ ಗೈಯದೆ ಬಿಡಲಿಲ್ಲ.
ಲಕ್ಷ್ಮಿ ಹುಡುಕುವಳು ಬಲವಂತರ ಬಾಹು
  ಧರ್ಮದ ಕೈ ಹಿಡಿಯುವದಿಲ್ಲ.

" ತಂದೆಯನ್ನು ಕಳಕೊಂಡೆವು ನಾವು
  ಎಂದು ಮೊರೆದು ಹೇಳಿತು ದಶದಿಕ್ಕು
ಯಾವನು ಲೋಕಕೆ ಆದನೊ ಬಂಧು
  ಆತಗೆ ಶತ್ರು ! ಧಿಕ್ಕಾರವು " ಎಂದು.

ಕಾಶೀರಾಜನು ಕೇಳಿದನಿದನು
  ಸಿಟ್ಟಿಗೆದ್ದು ಕೂಗಾಡಿದನು.
ನಗರದಿ ಜನ ಶೋಕಿಸುವುದು ಏಕೆ ?
  ನಾವಿರಲಾ ಜನ ದುಃಖಿಸಬೇಕೆ !

ಯುದ್ಧವ ಗೈದರು ಜಯವೆಮಗಿಲ್ಲ !
  ವೈರಿಯು ಜೀವಿಸೆ ಸುಖವಿಲ್ಲ.
ಧರ್ಮಶಾಸ್ತ್ರದಲಿ ಹೇಳಿದ ತೆರೆದಲಿ
  ವೈರಿಯನುಳುಗೊಡುವಂತಿಲ್ಲ.

ಡಂಗುರ ಸಾರಲು ರಾಜನು ಮಂತ್ರಿಗೆ
  ಆಜ್ಞೆಯನುಸುರುತ ಹೇಳಿದನು.
" ವೈರಿಯ ಮಸ್ತಕ ತಂದೊಪ್ಪಿಸಿದರೆ
  ನೂರು ಹೊನ್ನು ಕೊಡುವೆವು " ಎಂದು.

ರಾಜನ ದೂತರು ಡಂಗುರ ಸಾರುತ
  ಹೋದರು ನಗರದಿ ಮನೆಮನೆಗೆ
ಇದ ಕೇಳಿದ ಜನ ಶ್ರೀಹರಿ ಎಂದಿತು
  ಕಿವಿಗಳ ಮೇಲೆ ಕೈಯಿಡುತ.

ರಾಜ್ಯವ ನೀಗಿದ ರಾಜನು ಕಾಡಲಿ
  ಇದ್ದನು ಚಿಂದಿಯ ಬಟ್ಟೆಯಲಿ
ಕಂಬನಿ ಸೊಸುತ ಯಾರೋ ಪಥಿಕನು
  ಸಂದರ್ಶಿಸಿದನು ಅವನನ್ನು

ಕೋಶಲನಗರಕೆ ಹೋಗುವ ದಾರಿಯು
ಎಲ್ಲಿದೆ? ಎಂದವ ಕೇಳುತಲೆ
ಏತಕೆ ಹೋಗುವೆ ದುರ್ದೈವದ ಆ
ನಗರಕೆ" ಎಂದನು ನೃಪ ಮರಳಿ.

ಪಥಿಕನು ಹೇಳಿದ ತನ್ನಯ ಕತೆಯನು
"ನಾನೊಬ್ಬನು ವರ್ತಕ"ನೆಂದು
ನನ್ನಯ ನಾವೆಯು ನದಿಯಲಿ ಮುಳುಗಲು
ಅನ್ನವಿಲ್ಲದಲೆಯುತಲಿಹೆನು.

ಎಷ್ಟು ದಿವಸ ನಾ ಸಿಕ್ಕ ಸೊಪ್ಪುಗಳ
ತಿನ್ನುತ ಪ್ರಾಣವ ಹಿಡಿಯುವೆನು.
ಕಷ್ಟದಿಂದಲಿ ದಾರಿಯ ನಡೆಯುತ
ಇಲ್ಲಿಯ ವರೆಗೂ ಬಂದಿಹೆನು.

ಕರುಣಾಸಾಗರ ಕೋಸಲ ರಾಜನ
ಹೆಸರನು ಕೇಳುತ ಹೊರಟಿಹೆನು
ದೀನದರಿದ್ರರ ಪಾಲಕನವನೆ!
ಅವನ ಮನೆಗೆ ನಾ ಹೋಗುವೆನು.

ಕೋಸಲ ರಾಜನು ಕೇಳುತಲಿದ್ದನು
ಮಂದಹಾಸ ನಸು ಬೀರಿದನು
ಮೌನದಿ ಅರೆಕ್ಷಣ ಯೋಚಿಸಿ ನುಡಿದನು
ಉಜ್ಜುತ ತನ್ನಯ ಕಣ್ಣೀರನ್ನು

"ಪಥಿಕನೆ ನಿನ್ನಯ ಇಚ್ಛೆಯು ಪೂರ್ತಿ—
ಗೊಳ್ಳುವ ಎಡೆ ನಾ ತೋರಿಸುವೆ
ದೂರದಿಂದ ನೀ ಬಂದಿಹೆ ದುಗುಡದಿ
ನಿನ್ನ ಬಯಕೆ ಕೈಗೂಡುವುದು.

ಕಾಶೀರಾಜನು ಕುಳಿತಿಹ ಸಭೆಯಲಿ
ಜಟಾಧಾರಿ ಆಗಮಿಸಿದನೊಬ್ಬ
"ಇಲ್ಲಿಗೆ ದಯೆಮಾಡಿಸಿದುದು ಏತಕೆ?"
ಎಂದನು ರಾಜನು ನಗುನಗುತ.

"ವನದಲಿ ಇರುತಿಹ ಕೋಸಲರಾಜನು
ನಾನೇ" ಎಂದನು ವನವಾಸಿ

ತನ್ನ ವಸ್ತ್ರಕಕೆ ಕಟ್ಟಿದ ಪಣವನು
ಜೊತೆಗಾರಗೆ ಕೊಡಲುಸಿರಿದನು

ಅಚ್ಚರಿಗೊಂಡರು ಸಭಿಕರು ಎಲ್ಲರು
ಮೌನವ ತಳೆಯಿತು ಅರಮನೆಯು
ದ್ವೇಷವ ತೊರೆದರು; ಕಣ್ಣೀರ್ಗರೆದರು
ದುಃಖವ ತಡೆಯದೆ ನೆರೆದವರು

ಕಾಶೀರಾಜನು ಕೇಳುತಲಿದ್ದನು
ಸುಮ್ಮನೆ ಕುಳಿತನು ಕ್ಷಣಹೊತ್ತು
ನಂತರ ನುಡಿದನು "ಸೆರೆ ಬಂದವನೆ
ಸೆರೆ ಹಿಡಿದಿಹನು ಎನ್ನನ್ನು"

ಅಂದು ಯುದ್ಧದಲಿ ನಿನ್ನನು ಗೆದ್ದೆ
ಇಂದು ನೀನು ಬಂದೆನ್ನನು ಗೆದ್ದೆ
ನಿನ್ನಯ ರಾಜ್ಯವ ನಿನಗೊಪ್ಪಿಸುವೆನು
ಅದರೊಂದಿಗೆ ಈ ಮನವನ್ನು

"ದಯಮಾಡಿಸಿ ಮಹರಾಜರೆ" ಎಂದು
ವನವಾಸಿಯ ಕೈ ಪಿಡಿಯುತ್ತ
ಸಿಂಹಾಸನದಲಿ ಅವನನು ಕೂಡಿಸಿ
ಮುಕುಟವನಿಟ್ಟನು ಅಪ್ಪುತ್ತ

ಪುರಜನ ನೆರೆದರು ಸಂತಸಬಟ್ಟರು
ಕಾಶೀರಾಜನ ಕೊಂಡಾಡಿದರು
"ಧನ್ಯ ಕೋಸಲ ರಾಜನೆ ಧನ್ಯ"
ಎನ್ನುತ ಕುಣಿಕುಣಿದಾಡಿದರು

66. ಪ್ರತಿಷ್ಠಾ ದಿನದ ಉಪದೇಶ

ಬಹುಕಾಲದ ಹಿಂದೆ ಈ ದೇಶವು, ಇದೇ ಭರತವರ್ಷವು ಎಲ್ಲ ವಿಷಯಗಳಲ್ಲಿ ಯಥಾರ್ಥವಾಗಿ ದೊಡ್ಡ ದೇಶವಾಗಿತ್ತು. ಆಗ ಇಲ್ಲಿಯ ಜನರು ವೀರ ಪುರುಷರಾಗಿದ್ದರು. ಅವರೇ ನಮ್ಮ ಪುರಾತನ ಪುರುಷರು.

ಯಾವುದಕ್ಕೆ ಯಥಾರ್ಥವಾಗಿ ದೊಡ್ಡದು ಎಂದು ಕರೆಯುತ್ತಾರೆ? ನಮ್ಮ ಪೂರ್ವಜರು ಯಾವುದನ್ನು ದೊಡ್ಡದು ಎಂದು ಮನ್ನಿಸುತಿದ್ದರು? ಇಂದಿನ ನಮ್ಮ ಜನರಿಗೆ ಯಾವುದನ್ನು ದೊಡ್ಡದು ಎಂದು ಕರೆಯಬೇಕೆಂಬುದೇ ಗೊತ್ತಿಲ್ಲ. ಅಂತೆಯೆ ಅವರು ಧನವೇ ದೊಡ್ಡವರನ್ನಾಗಿ ಮಾಡುವುದಕ್ಕೆ ಸಾಧನವೆಂದು ಭಾವಿಸಿದ್ದಾರೆ. ಧನವಂತನೇ ನಮಗಿಂದು ದೊಡ್ಡ ಮನುಷ್ಯನಾಗಿದ್ದಾನೆ. ನಮ್ಮ ಪೂರ್ವಜನರು ಹೀಗೆ ತಿಳಿದಿರಲಿಲ್ಲ. ಅವರಲ್ಲಿ ಎಲ್ಲರಿಗಿಂತ ದೊಡ್ಡಮನುಷ್ಯರಾಗಿ ಬಾಳಿದ ಬ್ರಾಹ್ಮಣರು ಧನವನ್ನು ತುಚ್ಛವೆಂದು ಕಡೆಗಣಿಸಿದ್ದರು. ಅವರ ಉಡಿಗೆತೊಡಿಗೆಗಳಲ್ಲಿ ಯಾವುದೇ ಬಗೆಯ ವಿಲಾಸವು ಕಂಡುಬರುತ್ತಿರಲಿಲ್ಲ. ಹೀಗಿದ್ದರೂ ದೊಡ್ಡದೊಡ್ಡ ರಾಜ ಮಹಾರಾಜರು ಅವರಿದ್ದೆಡೆಗೆ ಬಂದು ಅವರಿಗೆ ತಲೆಬಾಗಿ ವಂದಿಸುತ್ತಿದ್ದರು.

ಯಾವ ಮನುಷ್ಯನು ತಾನು ತೊಟ್ಟಿದ್ದ ಬಟ್ಟೆಬರೆ, ಉಡುಪುತೊಡುಪು, ಕಾಲಲ್ಲಿ ಮೆಟ್ಟಿದ್ದ ಜೋಡು ಹಾಗೂ ಕೈಯಲ್ಲಿ ಹಿಡಿದಿದ್ದ ಕೊಡೆ ಇವುಗಳಿಂದ ತನ್ನನ್ನು ದೊಡ್ಡ ಮನುಷ್ಯನೆಂದು ಭಾವಿಸಿಕೊಳ್ಳುವನೊ, ವಿಚಾರಮಾಡಿ ನೋಡಿದರೆ ಅವನೇ ಅದೆಷ್ಟು ಸಣ್ಣವನು ಎಂಬುದು ತಿಳಿದುಬರುತ್ತದೆ. ಈ ಮೆಟ್ಟುಗಳೇನಾದರೂ ಮನುಷ್ಯನನ್ನು ದೊಡ್ಡವನನ್ನಾಗಿ ಮಾಡಬಲ್ಲವೇ? ಬೆಲೆಯುಳ್ಳ ಬಟ್ಟೆ, ಬೆಲೆಯುಳ್ಳ ಮೆಟ್ಟು ನಮ್ಮ ಗುಣದ ನಿಜವಾದ ಪರಿಚಯವನ್ನು ಮಾಡಿಕೊಡಬಲ್ಲವೇ? ನಮ್ಮ ಪ್ರಾಚೀನ ಕಾಲದಲ್ಲಿದ್ದ ಋಷಿಗಳ ಕಾಲಲ್ಲಿ ಮೆಟ್ಟುಗಳು ಇರಲಿಲ್ಲ; ಮೈಯಲ್ಲಿ ಬಟ್ಟೆಬರೆಯೂ ಇರಲಿಲ್ಲ. ಅವರೇನೂ ಸಾಹೇಬರ ಮನೆಯ ಬೂಟುಗಳನ್ನೂ, ಪರದೇಶಿ ಅಂಗಡಿಯಲ್ಲಿ ದೊರೆಯುವ ಬಟ್ಟೆಗಳನ್ನೂ ಹಾಕಿಕೊಂಡು ನಮಗಿಂತ ದೊಡ್ಡವರಾಗಿರಲಿಲ್ಲ. ಇಂದು ಅದೇ ಯಾಜ್ಞವಲ್ಕ್ಯ, ಅದೇ ವಸಿಷ್ಠ ಋಷಿಗಳು ಬರಿ ಮೈಯಿಂದ, ಬರಿ ಕಾಲಿನಿಂದ ತಮ್ಮ ಹೊಳೆಯುವ ಕಣ್ಣು ಹಾಗೂ ಬಂಗಾರದಂತೆ ಕಾಣುವ ಜಟೆಯೊಂದಿಗೆ ನಮ್ಮ ನಡುವೆ ಬಂದು ನಿಂತರೆ, ಆಗ ತಮ್ಮ ಕಾಲಲ್ಲಿಯ ಬೂಟುಗಳನ್ನೂ, ತಲೆಯ ಮೇಲಿನ ಹ್ಯಾಟುಗಳನ್ನೂ ತೆಗೆದು ಧಾವಿಸಿ ಆ ದರಿದ್ರ ಬ್ರಾಹ್ಮಣರ ಪಾದದ ಧೂಳಿಯನ್ನು ತೆಗೆದುಕೊಂಡು ತಮ್ಮ ಜೀವನ ಕೃತಾರ್ಥವಾಯಿತೆಂದು ಭಾವಿಸಲಾರದ ರಾಜರಾಗಲಿ ದೊಡ್ಡ ಸಾಹೇಬ ಜನರಾಗಲಿ ಯಾರಿದ್ದಾರೆ? ಇಂದು ತಮ್ಮ ಬಳಿ ಇರುವ ಎಲ್ಲ

ವಾಹನ ವೈಭವಗಳನ್ನು ಸಕಲೈಶ್ವರ್ಯದೊಂದಿಗೆ ಸುವರ್ಣದ ಸರಪಳಿಯಿಂದ ಕಟ್ಟಿಕೊಂಡು ಹೋದರೂ ಈ ಋಷಿಗಳ ಮುಂದೆ ತಲೆ ಮೇಲಕ್ಕೆತ್ತಿ ಯಾರಾದರೂ ನಿಲ್ಲಬಲ್ಲರೆ!

ಇವರೇ, ಈ ಋಷಿಗಳೇ ನಮ್ಮ ಹಿಂದಿನ ಕಾಲದ ಪಿತಾಮಹರು. ಪರಮ ಪೂಜ್ಯರಾದ ಈ ಬ್ರಾಹ್ಮಣರಿಗೆ ನಾವಿಂದು ನಮ್ಮ ವಂದನೆಗಳನ್ನು ಸಮರ್ಪಿಸುತ್ತೇವೆ. ತಲೆ ಬಗ್ಗಿಸಿ ನಮಸ್ಕಾರ ಮಾಡಿದರೆ ಸಾಲದು. ಅವರು ಕಲಿಸಿಕೊಟ್ಟ ಪಾಠಗಳನ್ನು ಗ್ರಹಣಮಾಡಬೇಕು. ಅವರು ತೋರಿಸಿಕೊಟ್ಟ ದೃಷ್ಟಾಂತದ ಅನುಸರಣ ಮಾಡಬೇಕು. ಅವರಂತೆ ನಾವೂ ಆಗಬೇಕೆಂಬ ಪ್ರಬಲವಾದ ಇಚ್ಛೆಯಿಂದ ಅವರ ಮೇಲೆ ಭಕ್ತಿಯನ್ನು ಇರಿಸಿ ನಡೆಯಬೇಕು.

ನಿರ್ಜನವಾದ ಈ ಆಶ್ರಮಕ್ಕೆ ನಾನು ನಿಮ್ಮೆಲ್ಲರನ್ನು ಆಹ್ವಾನ ಮಾಡಿದ್ದೇನೆ. ನೀವು ನನ್ನ ಬಳಿಗೆ ಬಂದಿರುವಿರಿ. ಅದೇ ಪ್ರಾಚೀನ ಋಷಿಗಳ ಸತ್ಯವಾಕ್ಯಗಳಲ್ಲಿ ಕಂಡ ಅವರ ಉಜ್ವಲ ಜೀವನವನ್ನು ನನ್ನ ಮನದಲ್ಲಿ ಸದಾ ಇರಿಸಿಕೊಂಡು, ನಿಮ್ಮನ್ನೆಲ್ಲ ಆ ಮಹಾಪುರುಷರು ನಡೆದ ದಾರಿಯಲ್ಲಿ ಕರೆದುಕೊಂಡು ಹೋಗಲು ನಾನು ಮನಃಪೂರ್ವಕವಾಗಿ ಪ್ರಯತ್ನಿಸುತ್ತೇನೆ. ಇದೊಂದು ಮಹಾವ್ರತವೆಂದು ನಾನು ಭಾವಿಸಿದ್ದೇನೆ. ನನ್ನೆದುರು ಇರಿಸಿಕೊಂಡ ಈ ವ್ರತದ ಅಧಿಪತಿಯಾದ ಈಶ್ವರನು ನನಗೆ ಆ ಬಲವನ್ನೂ, ಕಾರ್ಯಕ್ಷಮತೆಯ ಸಾಮರ್ಥ್ಯವನ್ನೂ ಅನುಗ್ರಹಿಸಲಿ. ನಾನು ಕೈಕೊಂಡಿರುವ ಈ ಕಾರ್ಯದಲ್ಲಿ ನನಗೆ ಜಯವು ದೊರೆತದ್ದೇ ಆದರೆ ನೀವು ಪ್ರತಿಯೊಬ್ಬರೂ ಖಂಡಿತವಾಗಿ ವೀರಪುರುಷರಾಗುವಿರಿ! ನೀವು ಹೆದರಿಕೆಯಿಂದ ಎಂದೂ ಕಂಪಿತರಾಗಲಾರಿರಿ. ದುಃಖ ಬಂದರೂ ನೀವು ವಿಚಲಿತರಾಗುವುದಿಲ್ಲ. ನಿರಾಶೆಯು ನಿಮ್ಮನ್ನು ಮರಣಪ್ರಾಯರನ್ನಾಗಿ ಮಾಡಲಾರದು. ಧನಮದದಿಂದ ನೀವು ಕೊಬ್ಬಿಕೊಳ್ಳುವುದಿಲ್ಲ. ಸಾವನ್ನು ನೀವು ಬಯಸುವುದಿಲ್ಲ. ಸತ್ಯವನ್ನು ನಾವು ಅರಿಯಬೇಕು. ಅಸತ್ಯವನ್ನು ನಾವು ನಮ್ಮ ಮಾತಿನಿಂದ, ಕೃತಿಯಿಂದ ಹಾಗೂ ಮನಸ್ಸಿನಿಂದ ದೂರ ಇರಿಸಬೇಕು. ಜಗತ್ತಿನಲ್ಲಿ ಹೊರಗೆ, ಹಾಗೂ ನಮ್ಮ ಮನದೊಳಗೆ ದೇವರು ಸದಾ ವಾಸಿಸುವನೆಂದು ಖಚಿತವಾಗಿ ತಿಳಿದುಕೊಂಡು ಆ ಆನಂದಮಯ ಮನಸ್ಸಿನಿಂದ ದುಷ್ಕರ್ಮಗಳನ್ನು ತ್ಯಜಿಸಬೇಕು. ಅವುಗಳಿಂದ ದೂರ ಇರಬೇಕು. ಪ್ರಾಣದ ಪಣವಿಟ್ಟು ಕರ್ತವ್ಯವನ್ನು ನೆರವೇರಿಸಬೇಕು. ಧರ್ಮದ ದಾರಿಯಿಂದ ಸಂಸಾರದ ಉನ್ನತಿಯನ್ನು ಮಾಡಬೇಕು. ಅದೇ ರೀತಿಯಾಗಿ ಕರ್ತವ್ಯದ ಪ್ರಚೋದನೆಯಿಂದ ಧನ ಸಂಪಾದನೆಯನ್ನೂ ಸಂಸಾರವನ್ನೂ ತ್ಯಾಗಮಾಡುವ ಪ್ರಸಂಗ ಬಂದರೆ ಆಗ ಎಷ್ಟು ಮಾತ್ರಕ್ಕೂ ವ್ಯಾಕುಲರಾಗಬಾರದು. ಅಂದರೆ ನಿಮ್ಮ ಸಾಹಸದಿಂದ ಭರತವರ್ಷವು ಮತ್ತೆ ಉಜ್ವಲವಾಗಿ ಎದ್ದುನಿಲ್ಲುವುದು. ನೀವು ನಿಂತಲ್ಲಿ ನಿಮಗೆ ಜಯವಾಗುವುದು. ನಿಮ್ಮಿಂದ ಎಲ್ಲರಿಗೂ ಒಳಿತಾಗುವಂತೆ ಕೆಲಸವಾಗುವುದು. ಎಲ್ಲರೂ ನಿಮ್ಮನ್ನು ನೋಡಿ ಸಂತೋಷಭರಿತರಾಗುವರು. ಅಭಿಮಾನ ತಾಳುವರು. ಅವರು ಯಾವಾಗಲೂ ನಿಮಗೆ ಒಳಿತನ್ನೇ ಮಾಡುವರು. ನಿಮ್ಮನ್ನು ನೋಡಿ ತಾವೂ ಒಳ್ಳೆಯವರಾಗುವರು.

ನಮ್ಮ ಪೂರ್ವಜರು ಅದೆಂತಹ ವ್ರತಬದ್ಧ ಜೀವನವನ್ನು ನಡೆಸುತ್ತಿದ್ದರು? ಅವರು ತಮ್ಮ ಬಾಲ್ಯಾವಸ್ಥೆಯಲ್ಲಿಯೇ ಮನೆಯನ್ನು ಬಿಟ್ಟು ನಿರ್ಜನದಲ್ಲಿದ್ದ ಗುರುಗಳ ಮನೆಗೆ ಹೋಗುತ್ತಿದ್ದರು. ಅಲ್ಲಿ ಆತ್ಮಸಂಯಮನವನ್ನು ಸಾಧಿಸುವುದಕ್ಕಾಗಿ ಅತ್ಯಂತ ಕಠಿಣ ನಿಯಮಗಳನ್ನು ಪಾಲಿಸುತ್ತಿದ್ದರು. ಏಕಾಂತ ಮನಸ್ಸಿನಿಂದ ಭಕ್ತಿಪೂರ್ವಕವಾಗಿ ಗುರುಗಳ ಸೇವೆಯನ್ನು ಮಾಡುತ್ತಿದ್ದರು. ಗುರುಗಳ ಎಲ್ಲ ಕೆಲಸಗಳನ್ನೂ ಮಾಡಿಕೊಡುತ್ತಿದ್ದರು. ಸೌದೆ ಕಡಿಯುವುದು, ನೀರು ಹೊತ್ತು ತರುವುದು, ಗೋವುಗಳನ್ನು ಕಾಯುವುದು ಇತ್ಯಾದಿ ಎಲ್ಲ ಕೆಲಸಗಳನ್ನೂ ಸಂತೋಷದಿಂದ ನಿತ್ಯ ಮಾಡುತ್ತಿದ್ದರು. ಹತ್ತಿರದ ಊರುಗಳಿಗೆ ಹೋಗಿ ಭಿಕ್ಷಾನ್ನವನ್ನು ತಂದು ಗುರುಗಳಿಗೆ ಕೊಡುತ್ತಿದ್ದರು. ಅವರು ಶ್ರೀಮಂತರ ಮಕ್ಕಳಾಗಿದ್ದರೂ ಕೂಡ ಸ್ವಸಂತೋಷದಿಂದ ಈ ಎಲ್ಲ ಕೆಲಸಗಳನ್ನು ಗುರುಸೇವೆಯೆಂದು ಮಾಡುತ್ತಿದ್ದರು. ಅಲ್ಲದೆ ತಮ್ಮ ದೇಹವನ್ನೂ ಮನಸ್ಸನ್ನೂ ಪರಮ ಪವಿತ್ರವಾಗಿ ಇರಿಸಿಕೊಳ್ಳುತ್ತಿದ್ದರು. ಯಾವುದೇ ಪ್ರಕಾರದ ದೋಷವು ಅಂಟದಂತೆ ಅವರು ಜಾಗ್ರತೆ ವಹಿಸಿಕೊಳ್ಳುತ್ತಿದ್ದರು. ಕಾವಿಯ ಬಟ್ಟೆ ಧರಿಸುತ್ತಿದ್ದರು. ಬಿರುಸಾದ ಹಾಸಿಗೆಯ ಮೇಲೆ ಮಲಗುತ್ತಿದ್ದರು. ಕಾಲಿಗೆ ಮೆಟ್ಟು ಹಾಕುತ್ತಿರಲಿಲ್ಲ. ತಲೆಗೆ ಕೊಡೆಯನ್ನು ಹಿಡಿಯುತ್ತಿರಲಿಲ್ಲ. ಇಂದಿನ ದೊಡ್ಡವರಲ್ಲಿ ಕಂಡುಬರುವ ಯಾವ ಪೊಳ್ಳು ದೊಡ್ಡಿಸ್ತನವೂ, ಆಡಂಬರವೂ ಅವರಲ್ಲಿ ಕಂಡುಬರುತ್ತಿರಲಿಲ್ಲ. ಕೇವಲ ಜ್ಞಾನಾರ್ಜನೆಗಾಗಿ ಪೂರ್ಣ ಮನಸ್ಸಿನಿಂದ ತಮ್ಮೆಲ್ಲ ಕ್ರಿಯೆಗಳನ್ನೂ ಮೀಸಲಾಗಿರಿಸುತ್ತಿದ್ದರು. ಕೇವಲ ಸತ್ಯ ಸಂಧಾನಕ್ಕಾಗಿ, ಕೇವಲ ದುಷ್ಪ್ರವೃತ್ತಿಗಳ ದಮನಕ್ಕಾಗಿ ಅವರು ಸದಾ ನಿರತರಾಗಿರುತ್ತಿದ್ದರು. ಸದ್ಗುಣಗಳನ್ನು ತಮ್ಮಲ್ಲಿ ಬರಮಾಡಿಕೊಳ್ಳುವುದಕ್ಕಾಗಿ ತಪಿಸುತ್ತಿದ್ದರು; ಜಪಿಸುತ್ತಿದ್ದರು.

ಇದೇ ರೀತಿಯಾಗಿ ನೀವೂ ಕೂಡ ಕಷ್ಟದ ಜೀವನವನ್ನು ಅಂಗೀಕರಿಸಬೇಕು. ಕಠಿಣ ನಿಯಮಗಳನ್ನು ಪಾಲಿಸಬೇಕು. ಬಾಹ್ಯಾಡಂಬರ ಜೀವನವನ್ನು ತ್ಯಜಿಸಬೇಕು. ಯಾವುದೇ ಪ್ರಕಾರದ ಪೊಳ್ಳು ದೊಡ್ಡಿಸ್ತನಕ್ಕೆ ಆಸ್ಪದ ಕೊಡಕೂಡದು. ಅದನ್ನು ತುಚ್ಛವೆಂದು ಭಾವಿಸಿ ಈ ಗುರುಗೃಹದಲ್ಲಿ ವಾಸಿಸಬೇಕು. ಸರ್ವಭಾವದಿಂದ ಗುರುಗಳಲ್ಲಿ ಶ್ರದ್ಧೆಯನ್ನಿರಿಸಬೇಕು. ಕಾಯಾ, ವಾಚಾ, ಮನಸಾ ಗುರುಗಳಿಗೆ ಅವಜ್ಞೆಯನ್ನು ಎಳ್ಳಷ್ಟೂ ಕೂಡ ತೋರಬಾರದು. ದೇಹವನ್ನು ಪವಿತ್ರವಾಗಿ ಇರಿಸಿಕೊಳ್ಳಬೇಕು. ನಮ್ಮ ದೇಹಗಳನ್ನು ಸ್ಪರ್ಶಿಸುವುದಕ್ಕೆ ಯಾವ ದೋಷಗಳಿಗೂ ಆಸ್ಪದ ಕೊಡಬಾರದು. ಗುರುಗಳ ಉಪದೇಶವನ್ನು ಗ್ರಹಣಮಾಡುವ ತೆರದಲ್ಲಿ ಮನವನ್ನು ಸದಾ ತೆರೆದಿಟ್ಟುಕೊಳ್ಳಬೇಕು.

ಇಂದಿನಿಂದ ನೀವು ಸತ್ಯವ್ರತವನ್ನು ಗ್ರಹಣಮಾಡಿದಂತೆ. ಅಸತ್ಯವನ್ನು ಕಾಯಾ, ವಾಚಾ, ಮನಸಾ ದೂರ ಇರಿಸಬೇಕು. ಸತ್ಯವನ್ನು ತಿಳಿಯುವುದಕ್ಕಾಗಿ ನೀವು ಪ್ರಾರಂಭಕ್ಕೆ ನಿಮ್ಮ ತನು, ಮನ, ಬುದ್ಧಿಗಳನ್ನು ವಿನಯದಿಂದ ಅಧೀನಗೊಳಿಸಬೇಕು. ಯಾವುದು ಸತ್ಯವೆಂದು ನಿಮಗೆ ಗೊತ್ತಾಗುವುದೊ ಅದನ್ನು ನೀವು ನಿರ್ಭಯದಿಂದ ಘಂಟಾಘೋಷವಾಗಿ ಆತ್ಮವಿಶ್ವಾಸದಿಂದ ಸಾರಬೇಕು.

ಇಂದಿನಿಂದ ನೀವು ಅಭಯವ್ರತವನ್ನು ಧಾರಣಮಾಡಿದಂತೆ. ಈ ಜಗತ್ತಿನಲ್ಲಿ

ಧರ್ಮವೊಂದನ್ನು ಬಿಟ್ಟರೆ ನಿಮ್ಮನ್ನು ಹೆದರಿಸುವ ಬೇರೆ ವಿಷಯವು ಯಾವುದೂ ಇಲ್ಲ. ಯಾವುದೇ ಬಗೆಯ ಕಷ್ಟವಾಗಲಿ, ಸಂಕಟವಾಗಲಿ, ಕೊನೆಗೆ ಸಾವೇ ಆಗಲಿ ನಿಮ್ಮನ್ನು ಹೆದರಿಸುವ ವಿಷಯವಾಗಲಾರದು. ಸದಾಸರ್ವದಾ, ಹಗಲು ರಾತ್ರಿ ಪ್ರಫುಲ್ಲಚಿತ್ತದಿಂದ, ಪ್ರಸನ್ನಮುಖದಿಂದ, ಶ್ರದ್ಧೆಯ ಜೊತೆಗೂಡಿ ಸತ್ಯಲಾಭಕ್ಕಾಗಿ, ಧರ್ಮಲಾಭಕ್ಕಾಗಿ ನಿಯುಕ್ತರಾಗಿ ನೀವು ನಿಲ್ಲಬೇಕು.

ಇಂದಿನಿಂದ ನೀವು ಪುಣ್ಯವ್ರತವನ್ನು ಧಾರಣಮಾಡಿದಂತೆ. ಯಾವುದು ಎಷ್ಟು ಮಾತ್ರಕ್ಕೂ ಅಪವಿತ್ರವೂ, ಕಲುಷಿತವೂ ಆಗಿರುವುದೋ ಹಾಗೂ ಯಾವುದನ್ನು ಹೇಳುವುದಕ್ಕೆ ನಾಚಿಕೆ ಅನಿಸುತ್ತದೊ ಅದನ್ನು ಕಾಯಾ-ವಾಚಾ-ಮನಸಾ ತ್ಯಜಿಸಬೇಕು. ನಿತ್ಯ ಬೆಳಗಿನಲ್ಲಿ ಅರಳುವ ಸುಮಗಳಂತೆ ಮನವನ್ನು ಇರಿಸಿಕೊಂಡು ಪುಣ್ಯಲಾಭವನ್ನು ಮಾಡಿಕೊಳ್ಳುವುದಕ್ಕಾಗಿ ಪ್ರಾಣಪಣವನ್ನೇ ತೊಟ್ಟು ಹೃದಯ ತೆರೆದು ನಿಂತಂತೆ ಇರಬೇಕು.

ಇಂದಿನಿಂದ ನೀವು ಮಂಗಲವ್ರತವನ್ನು ಧಾರಣಮಾಡಿದಂತೆ. ಯಾವುದರಿಂದ ಪರಸ್ಪರರ ಕಲ್ಯಾಣವಾಗುವುದೋ ಅದೇ ನಿಮ್ಮ ಕರ್ತವ್ಯವಾಗಿದೆ. ಅದಕ್ಕಾಗಿ ನಿಮ್ಮ ಸ್ವಾರ್ಥವನ್ನು ನೀವು ತ್ಯಜಿಸಬೇಕು.

ಒಂದೇ ಮಾತಿನಲ್ಲಿ, ಎಲ್ಲವನ್ನೂ ಸಂಗ್ರಹಿಸಿ ಹೇಳುವುದೆಂದರೆ—ಇಂದಿನಿಂದ ನೀವು ಬ್ರಹ್ಮವ್ರತವನ್ನು ಧಾರಣಮಾಡಿದಂತೆ. ಒಬ್ಬನೇ ಬ್ರಹ್ಮನು ನಿಮ್ಮೊಳಗೂ, ಹೊರಗೂ, ಸದಾಕಾಲ ಎಲ್ಲೆಡೆಯಲ್ಲಿಯೂ ವಾಸಿಸಿರುವನು. ಅವನಿಂದ ಯಾವುದನ್ನೂ ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಅವನು ನಿಮ್ಮ ಮನಸ್ಸಿನಲ್ಲಿ ಸ್ತಬ್ಧವಾಗಿದ್ದು ಎಲ್ಲವನ್ನೂ ನೋಡುತ್ತಾನೆ. ನೀವು ಎಲ್ಲಿ ಹೋದರೂ, ಬೇಕಾದಲ್ಲಿ ನಿಂತರೂ, ಮಲಗಿದರೂ, ಕುಳಿತರೂ ಅದೆಲ್ಲ ನಡೆದುದು ಅವನಲ್ಲಿಯೇ ಎಂದು ನೀವು ಭಾವಿಸಬೇಕು. ನಿಮ್ಮ ಸಂಚಾರವೆಲ್ಲ ಬ್ರಹ್ಮನಲ್ಲಿಯೇ ಇರುತ್ತದೆ. ನಿಮ್ಮ ಸರ್ವ ಅಂಗಗಳಿಗೂ ಅವನ ಸ್ಪರ್ಶವಿದೆ. ನಿಮ್ಮ ಎಲ್ಲ ಭಾವನೆಗಳೂ ಅವನಿಗೆ ತಿಳಿದಿರುತ್ತವೆ. ಅವನೇ ನಿಮ್ಮ ಏಕಮಾತ್ರ ಭಯಸ್ಥಾನವಾಗಿದ್ದಾನೆ. ಅದೇ ಕಾಲಕ್ಕೆ ಅವನೇ ನಿಮ್ಮ ಏಕಮಾತ್ರ ಅಭಯಸ್ಥಾನವೂ ಆಗಿದ್ದಾನೆ.

ದಿನಾಲು ಒಂದು ಸಲವಾದರೂ ಅವನ ಧ್ಯಾನ ಚಿಂತನೆಯನ್ನು ಮಾಡಬೇಕು. ಅವನ ಚಿಂತನೆಯನ್ನು ಮಾಡುವ ಮಂತ್ರ ನಮ್ಮ ವೇದದಲ್ಲಿ ಇದೆ. ಈ ಮಂತ್ರವನ್ನೇ ನಮ್ಮ ಪೂರ್ವಜರು, ಋಷಿಗಳು ದಿನಾಲು ಪಠಿಸುತ್ತಿದ್ದರು. ಜಗದೀಶ್ವರನ ಮುಂದೆ ದಂಡಾಯಮಾನರಾಗಿ ಅವರು ಅವನನ್ನು ವಂದಿಸುತ್ತಿದ್ದರು. ಅದೇ ಮಂತ್ರವನ್ನು ನೀವು ಇಂದು ನನ್ನೊಂದಿಗೆ ಉಚ್ಚರಿಸಿರಿ.

ಓಂ ಭೂರ್ಭುವಃ ಸ್ವಃ ತತ್ಸವಿತುರ್ವರೇಣ್ಯಂ
ಭರ್ಗೋದೇವಸ್ಯ ಧೀಮಹಿ
ಧಿಯೋಯೋನಃಪ್ರಚೋದಯಾತ್

67. ವೀರಪುರುಷ

ದೇಶದೇಶಗಳನ್ನು ತೋರಿಸಲು ಅಂದು
ತಿಳಿ ನೀನು ತಾಯಿಯನು ಕರೆದೊಯ್ದೆ ಎಂದು
ಮೇಣೆಯಲಿ ನೀ ಕುಳಿತು ಬರುವೆಯಲ್ಲಮ್ಮ !
ಬಾಗಿಲೆರಡನು ನಸುವೆ ತೆರೆದುಕೊಳ್ಳವ್ಮ !
ಕೆಂಪುಕುದುರೆಯನೇರಿ ನಾ ಜೊತೆಗೆ ಬರುವೆ
ಇಂಪಾಗಿ ಹರಟುತ್ತ ನಿನ್ನ ಬಳಿ ಇರುವೆ.
ಖುರಪುಟದ ಹೊಡೆತಕ್ಕೆ ಕೆಂಧೂಳಿ ಮೋಡ
ಬರುತಿಹುದು ನಮ್ಮೊಡನೆ ಬೆಂಬತ್ತಿ ನೋಡ.

ಸಂಜೆಯಾಗಲು ಸೂರ್ಯ ಬೆನ್ನ ಹಿಂದಿಳಿದು
ಮಂಜಿನಂದದಿ ತೋರ್ವ ಹೊಲದಲ್ಲಿ ಸುಳಿದು
ಸುತ್ತುಕಡೆ ಕಣ್ಬಿಟ್ಟು ಎತ್ತ ನೋಡಿದರು
ಹತ್ತಿರದಿ ಜನರಾರು ಅಲ್ಲಿ ಕಾಣಿಸರು
ನೀನು ಮನದೊಳು ಆಗ ಇಂತು ಯೋಚಿಸುವೆ
"ನಾನು ಬಂದೆನು ಎಲ್ಲಿ ?" ಎಂದು ಭಯಗೊಳುವೆ
ನಾನದಕೆ ಹೇಳುವೆನು "ಹೆದರದಿರು ಅಮ್ಮ,
ನೀನು ನೋಡಿದ್ದು ಬರಿ ನದಿಯ ತಳವಮ್ಮ"

ಅಡಗಿ ಕಳ್ಳರು ಇಹರು ಮುಳ್ಳುಕಂಟಿಯಲಿ
ನಡೆದು ಹೋಗಿದೆ ದಾರಿ ಅದರ ಮಧ್ಯದಲಿ
ಗೋವು ಕರುಗಳು ಕೂಡ ಕಾಣುವುದೆ ಇಲ್ಲ
ಗೋವುಗಳ ಜೊತೆಗೂಡಿ ಹೋಗಿರುವವಲ್ಲ.
ನಮ್ಮ ಮುಂದಿನ ದಾರಿ ಅವಕೆ ಗೊತ್ತಿತ್ತು
ಅಮ್ಮ ! ಕತ್ತಲೆ ಇಹುದು ನಮ್ಮ ಬಳಿಸುತ್ತು
ಇಲ್ಲಿ ಎನ್ನನು ನೀನು ಕರೆವೆ ಏಕಮ್ಮ ?
ಅಲ್ಲಿ ಕಾಣುವ ಬೆಳಕು ಏತರದು ಅಮ್ಮ ?

ಇಂಥ ಸಮಯದಿ ಯಾರು ಬಂದರು ಅಬಬ!
ಸಂಥದಲಿ ಎದುರಿಸುವೆ ಅವರನ್ನು ಅಬಬ!
ಮೇಣೆಯಲಿ ನೀಕುಳಿತೆ ಹೆದರಿ ಸಾಯುತ್ತ
ವೇಣುಗೋಪಾಲನಾ ನಾಮ ಜಪಿಸುತ್ತ
ಅಡಗಿಕೊಂಡರು ಎಲ್ಲಿ ಬೋವಿಗಳು ಮರೆಗೆ
ಮಡಗಿ ಮೇಣೆಯನಿಳಿಸಿ ನಡಗುತ್ತ ಕೆಳಗೆ
ನಿನಗೆ ಹೇಳುವೆ ನಾನು ಕೂಗಿ ಇಂತೆಂದು
ನಾನಿರುವೆ ಹೆದರದಿರು ಏಕೆ ಭಯವೆಂದು

ಕೋಲುಗಳು ಕೈಯಲ್ಲಿ ಕೆದರಿರುವ ತಲೆಯು
ಓಲೆಯಂದದಿ ಹೂವನಿರಿಸಿರುವ ಕಿವಿಯು
"ನಿಲ್ಲಿರಲ್ಲಿಯೆ ಜೋಕೆ" ಎಂದು ಗರ್ಜಿಸುವೆ
"ಎಲ್ಲಿ, ಒಂದಡಿ ಮುಂದೆ ಬನ್ನಿ ತೋರಿಸುವೆ
ಇಲ್ಲಿ ನೋಡಿರಿ ಎನ್ನ ಖಡ್ಗವನು ತುಸುವೆ."
ಇದ ಕೇಳಿ ಅವರೆಲ್ಲ ಓಡಿದರು ಅಬಬ!
ಹೆದರಿ ಹಿಂದಕೆ ಸರಿದು ಚೀರುತ್ತ ಅಬಬ!

"ತಡವದಿರು ಮಗು ನೀನು ಅವರನ್ನು" ಎಂಬೆ
"ಬಿಡು ನೀನು ಹೆದರಿಕೆಯ ನನ್ನನ್ನು ನಂಬೆ"
ಕುದುರೆಯನು ಓಡಿಸಿದೆ ಅವರ ಮಧ್ಯದಲಿ
ಕದನಗೈದೆನು ಖಡ್ಗ-ಢಾಲು ಪಿಡಿಯುತಲಿ
ಓಡಿಹೋದರು ಕೆಲರು ಹೊಡೆತ ತಾಳದಲೆ
ನೋಡು ಚಂಡಾಡಿದೆನು ಅಮಿತ ಶೌರ್ಯದಲೆ
ಎಂಥ ಕಾಳಗವಮ್ಮ! ಎನಿತು ಘನ ಘೋರ!
ಇಂಥ ದೃಶ್ಯವ ಕಂಡು ಆಶ್ಚರ್ಯ ತೋರ!

ಅಷ್ಟು ಜನರೊಂದಿಗೆ ಮಗು ಯುದ್ಧಗೈದು
ಕಷ್ಟದಿಂದಲೆ ಮಡಿದು ಹೋಯ್ತೆಂದು ಬಗೆದು
ನೀನು ಚಿಂತಿಸುತಿರಲು ನಾ ಬಂದು ನಿಲುವೆ
ಸ್ನಾನಗೈದಿಹ ತೆರದಿ ರಕ್ತದಲ್ಲಿ ಅದುವೆ
ಮಮತೆಯಿಂದೆನ್ನನ್ನು ಬಿಗಿದಪ್ಪಿಕೊಂಡು
ಅಮಿತ ಪ್ರೀತಿಯ ಗೈವೆ ಎನ್ನನ್ನು ಕಂಡು
"ನೀನಿದ್ದೆ ಪಾರಾದೆ; ಇಲ್ಲದಿರೆ ಈ ವರೆಗೆ
ನಾನೆಂತು ಇರುತಿದ್ದೆ" ಎಂದೆಂಬೆ ನನಗೆ

ನಿತ್ಯ ಇಂತಹ ಘಟನೆ ಜರುಗುತಿರಬಹುದು
ಸತ್ಯವಾಗಿಯೂ ನಮಗೆ ಅವು ತೋರಬಹುದು
ಇದು ಒಂದು ರಮ್ಯ ಕತೆ ಏಕಲ್ಲ ಹೇಳು
ಅದನೋದಿ ಜನ ಪುಲಕಗೊಳ್ಳುವರು ಕೇಳು.
ಅಣ್ಣನೆನ್ನುವನಿದಕೆ ಅದು ಎಂತು ಸಾಧ್ಯ!
ಸಣ್ಣಮಗು ಮೈಯಲ್ಲಿ ಬಲವಿಷ್ಟಸಾಧ್ಯ!
"ಮಗುವಿತ್ತು ತಾಯ ಬಳಿ ಇದು ಅವಳ ಪುಣ್ಯ"
ನಗುತ ಕಾಡಿನ ಜನರು ಹೇಳುವರು ಧನ್ಯ.

68. ಚಲಿಸುವ ಕಲಕತ್ತ

ಇಟ್ಟಿಗೆ ಟೊಪ್ಪಿಗೆ ತಲೆಯಲಿ ಧರಿಸಿ
ಕಲಕತ್ತಾ ನಗರ
ನೆಟ್ಟಗೆ ಚಲಿಸದೆ ಕುಳಿತಿದೆ ಇಟ್ಟಿಗೆ
ಆಸನವನೆ ಮಾಡಿ

ಫಾಲ್ಗುಣ ಬರಲಿ ವಸಂತವಿರಲಿ
ಬದಲೆಂಬುದೆ ಇಲ್ಲ
ವೈಶಾಖದ ಬಿರುಗಾಳಿಯು ಅದಕೆ
ಹೆದರಿಕೊಳ್ಳುವುದಲ್ಲ!

ಚಳಿಯಲಿ ಅಲ್ಲಿಯ ಕಂಬಗಳಾವೂ
ನಡಗುವುದೇ ಇಲ್ಲ
ಚಳಿಮಳೆ ಬಿಸಿಲುಗಳೆಲ್ಲಾ ಒಂದೇ
ಎಂದೆನ್ನುವುದಲ್ಲ

ಬಹು ದಿನಗಳ ಹಿಂದಿನ ಕತೆ ಇದುವೆ
ಕಂಡೆನು ಸ್ವಪ್ನದಲ್ಲಿ
ಒಮ್ಮೆಲೆ ಚೀರುತ ಬಿನು ಹೇಳಿದನು
ಹೊರಗೆ ನೋಡು ಅಲ್ಲಿ

ಚಲಿಸುತ ಮುಂದಕೆ ಹೊರಟಿದೆ ನೋಡು
ಕಲಕತ್ತಾ ನಗರ
ಇಟ್ಟಿಗೆ ದೇಹವ ಧರಿಸಿ ಹೊರಟಿದೆ
ಊರಿಗೆ ಊರೆಲ್ಲ

ಮೇಲಿನ ಮಾಳಿಗೆ ಕೆಳಗಿನ ಮಾಳಿಗೆ
ಆವಾರದ ಗೋಡೆ
ಇವುಗಳ ಹೆಗಲಸು ಏರಿದೆ ಬಾಸು
ಎಂದು ತೋರ್ವುದಲ್ಲ

ಹಾದಿಬೀದಿಗಳು ಚಲಿಸುತಲಿರುವವು
ಹೆಬ್ಬಾವಿನ ಹಿಂಡು
ಟ್ರಾಮಿನ ಗಾಡಿಯು ಹತ್ತಿದೆ ಬೆನ್ನು
ಹೊಯ್ದಾಡುತ ಹಿಂದೆ

ಅಂಗಡಿ ಪೇಟೆಯು ತಳವನು ಕಿತ್ತು
ಗಾಳಿನಾವೆಯಂತೆ
ಚೌರಂಗಿಯ* ಹೊಲ ಬಯಲುಗಳೆಲ್ಲ
ಸರಿಯುತಿಹವು ಅಂತೆ

ತಲೆಕೆಳಗಾಗಿ ಸ್ಮಾರಕಗಳು ತಾವ್
ತೇಲುತ ಹೊರಟಿಹವು
ಆನೆಯ ಮೇಲೆ ತೆರೆದಿರಿಸಿಹ
ಅಂಬಾರಿ ಹೋಲುತಿಹವು

ಹುಡುಗರು ಥೈಥೈ ಕುಣಿಯುತಲಿರುವರು
ಹೈಹೈಹೈ ಎನುತ
ಗಣಿತದ ಪುಸ್ತಕ ವ್ಯಾಕರಣವು ಸಹ
ಕುಣಿಯುತಿಹವು ಅತ್ತ

ಶಾಲೆಯೊಳಿರುವ ಆಂಗ್ಲ ಭಾಷೆಯ
ಪುಸ್ತಕಗಳು ಮತ್ತೆ
ಮೇಜಿನ ಹೆಗಲನು ಹತ್ತಿ ಹೊರಟಿವೆ
ಸುತ್ತಲು ನೋಡುತ್ತೆ

ಬಾನಿನಲ್ಲಿ ಭೂಪಟಗಳು ಕಂಡವು
ಹಕ್ಕಿಯಂತೆ ಮೇಲೆ
ಗಾಳಿಯು ಪಟಗಳ ಹೋಲುತಿಹವು ಅವು
ಹಿಡಿದು ಸಾಲು ಸಾಲೆ

ಗಂಟೆಗಳೆಲ್ಲ ಬಾರಿಸಿಕೊಂಡವು
ತೂಗಿ ಅತ್ತ ಇತ್ತ
ಎಲ್ಲಿಯು ನಿಲ್ಲದೆ ದಿನ ಸಾಗಿತ್ತು
ಗಜಿಬಿಜಿ ಗೈಯುತ್ತ

* ಕಲಕತ್ತಾ ನಗರದ ಒಂದು ಭಾಗದ ಹೆಸರು

ಅಡಿಗೆಯ ಮನೆಯಲಿ ಅಡಿಗೆಯ ಹೆಂಗಸು
ಕುಳಿತಿದ್ದಳು ಅಳುತ
ಅಡಿಗೆಗೆ ಇಟ್ಟ ಕೋಳಿಗಳೆದ್ದು
ಹೊರಟವು ಅತ್ತಿತ್ತ

ಸಾವಿರ ಸಾವಿರ ಜನ ಕಿರಿಚಿದರು
ನಿಲ್ಲು ನಿಲ್ಲು ಎಂದು
ಹುಚ್ಚರಂದದಿ ಹೊರಟಿದ್ದೆಲ್ಲಿಗೆ
ಬಂದುದು ಎಲ್ಲಿಂದೆ

ಹವರಾಸೇತುವೆ ಕೇಳಿತು ಆಗ
ಹೊರಟುದೆಲ್ಲಿಗೆಂದು
ಒಂದಡಿ ಮುಂದಕೆ ಬಂದರೆ ನೀನು
ನಾನು ನದಿಯ ಪಾಲು

"ಬಡೊ ಬಾಜಾರ" "ಬೆನೆ ಬಾಜಾರ"
ನಿಂತು ಕರೆದವಾಗ
"ಸ್ಥಿರವಾಗಿರು ನೀ, ಸ್ಥಿರವಾಗಿರು ನೀ"
ಎಂದು ಕೂಗಿ ಬೇಗ

"ಹೋದರೆ ಹೋಗಲಿ ಬಿಡು ಒಣ ಭಾವನೆ"
ಎಂದು ಭಾವಿಸಿದೆನು
ದಿಲ್ಲಿಗೆ ಹೋಗುವೆ ಮುಂಬೈ ಇಲ್ಲವೆ
ಕಲಕತ್ತೆಯ ಬದಲು

ಯಾರೋ ಕೂಗಿ ಕರೆದಂತಾಗಲು
ನಿದ್ದೆ ತೊರೆದು ಎದ್ದೆ
ಕಣ್ಣಿಗೆ ಕಂಡಿತು ಕಲಕತ್ತೆಯು ಅದೆ
ಮೊದಲು ಇದ್ದ ಹಾಗೆ

69. ಪೂಜಾರಿಣಿ

ಬಿಂಬಿಸಾರ ರಾಜನು
ಬುದ್ಧನನ್ನು ವಂದಿಸಿ
ಅವನ ಪಾದ ನಖದ ರಜವ
ಭಕ್ತಿಯಿಂದ ಬೇಡಿ ತಂದು
ರಾಜಗೃಹದ ವನದೊಳೊಂದು
ಏಕಾಂತದ ಸ್ಥಳವನರಸಿ
ಅದನು ಅಲ್ಲಿ ಸ್ಥಾಪಿಸಿದನು.
ಅದರ ಮೇಲೆ ಶಿಲ್ಪಕಲೆಯು
ಸಾರವೆನ್ನುವಷ್ಟು ಅಂದ—
ಚಂದವಾದ ಸ್ತೂಪವನ್ನು
ಭಕ್ತಿಯಿಂದ ನಿಲ್ಲಿಸಿದನು.

ಸಂಜೆಯಾಗೆ ಮಡಿಯ ಬಟ್ಟೆ
ಉಟ್ಟುಕೊಂಡು ರಾಜಕನ್ಯೆ
ರಾಜಬಾಲೆ ಹೂವ ಮುಡಿದು
ಪುಷ್ಪಗಳನು ತಬಕದಲ್ಲಿ
ಅಂದವಾಗಿ ಇರಿಸಿಕೊಂಡು
ಹೊನ್ನ ಪ್ರಣತಿ ಹಚ್ಚಿಕೊಂಡು
ಸ್ತೂಪದಡಿಯ ಎಡೆಗೆ ಬಂದು
ತಾನೆ ತನ್ನ ಕೈಗಳಿಂದ
ಬೆಳಗಿ ಹೊನ್ನ ಬೆಳಕ ಕನಕ
ಹಾರ ದೀಪ ಮಾಲೆಯನ್ನು
ನಿತ್ಯ ಅದಕೆ ಹಾಕುತಿದ್ದಳು.

ಅಜಾತ ಶತ್ರು ರಾಜನಾಗಿ
ತಂದೆಯ ಸ್ಥಳ ಸ್ವೀಕರಿಸಿದ.
ರಾಜಪುರದೊಳಿಂದು ಪಿತನ
ಧರ್ಮವನ್ನು ರಕ್ತಹರಿಸಿ

ಹೊರಗೆ ಹಾಕಿ ಬೌದ್ಧಶಾಸ್ತ್ರ
ರಾಶಿಯನ್ನು ಯಜ್ಞವಹ್ನಿ
ಬೆಳಕಿನ ವಶ ಗೈದುಬಿಟ್ಟ

ರಾಜಪುರದ ನಾರಿಯರಸು
ಕೂಗಿ ಕರೆಸಿ ಅವರಿಗೆಲ್ಲ
ಅಜಾತ ಶತ್ರು "ಇನ್ನು ಮುಂದೆ
ದೇವ, ಬ್ರಾಹ್ಮಣ, ರಾಜನನ್ನು
ಬಿಟ್ಟು ಅನ್ಯ ಯಾವ ಪೂಜೆ
ನಡೆಯದೆಂದು ಹೇಳಿ ಮತ್ತೆ
ಇದನು ಮರೆಯೆ ಘೋರಶಿಕ್ಷೆ
ತಪ್ಪದೆಂದು ನೆನಪುಕೊಟ್ಟ.

ಶರತ್ಕಾಲದ ಸಂಜೆ ಅಂದು
ಶ್ರೀಮತಿ ಎಂದೊಬ್ಬ ದಾಸಿ
ಪುಣ್ಯತೀರ್ಥದಲ್ಲಿ ಮಿಂದು
ತಬಕದಲ್ಲಿ ಹೂವ ಇರಿಸಿ
ರಾಜಮಹಿಷಿಚರಣದಲ್ಲಿ
ಮೌನದಿಂದ ಬಂದು ನಿಂತಳು.

ದಿಗಿಲುಗೊಂಡ ಸಭೆಯೊಳಾಗ
"ಇದುವೆ ನಡೆಯು"ದೆಂದು ರಾಣಿ
ಹೇಳಿ ಮತ್ತೆ ಮುಂದುವರಿದು
"ಸ್ತೂಪಪೂಜೆ ಮಾಡಿದವರು
ಶೂಲವೇರಿ ಸಾಯಬೇಕು"
ಎಂದು ರಾಜ ಅಜಾತಶತ್ರು
ಡಂಗುರ ಹೊಯ್ಸಿರುವುದನ್ನು
ಹೇಳಿ ಉಸಿರನೊಂದು ಬಿಟ್ಟಳು.

ಇದನು ಕೇಳಿಕೊಂಡ ದಾಸಿ
ಮೆಲ್ಲನೆದ್ದು ಹೊರಗೆ ಬಂದು
ಅಮಿತಳ ಮನೆಗೈತಂದಳು.
ಅಮಿತ ತನ್ನ ಸೌಧದಲ್ಲಿ
ಸ್ವರ್ಣಮುಕುರ ಇರಿಸಿಕೊಂಡು
ದೀರ್ಘಕೇಶ ಬಾಚಿಕೊಂಡು
ಬಯ್ತಲೆಯಲಿ ಕುಂಕುಮವನು

ಹಾಕಿಕೊಳ್ಳುತಿದ್ದ ಅವಳು
ಶ್ರೀಮತಿಯನು ಕಂಡಳು.

ಪೂಜೆಯ ಸಲಕರಣೆಯಿಂದ
ಬಂದ ಅವಳ ಕಂಡೊಡನೆಯೆ
ಅಮಿತ ಹೆದರ ನಡುಕ ಹುಟ್ಟಿ
ಬಯ್ತುಲೆ ಕುಂಕುಮದ ಗೀಟು
ಅತ್ತ ಇತ್ತ ಸರಿದು ಹೋಯ್ತು.
ಶ್ರೀಮತಿಯನು ಕುರಿತು ಆಗ
"ಎಂಥ ನಿನ್ನ ಸಾಹಸ! ಕಲ್ಪನೆಗೂ
ಮೀರಿದೆ. ಪೂಜೆಗೆಂದು ಬಂದ
ನೀನು ಹಾಗೆ ಬಂದ ತೆರದಿ
ಹೊರಗೆ ಹೋಗು. ಯಾರೆ ಇರಲಿ
ಇದನು ನೋಡೆ ಘೋರ ವಿಪದ
ತಪ್ಪದೆಂದು ಅಮಿತ ನುಡಿದಳು.

ಮುಳುಗುತಿರುವ ರವಿಯ ಕಿರಣ
ತೆರೆದ ಕಿಡಿಕಿಯಿಂದ ಒಳಗೆ
ನುಗ್ಗಿಬಂದ ಬೆಳಕಿನಲ್ಲಿ
ಶುಕ್ಲ ಬಾಲೆ ಒಬ್ಬಳೆ ಕತೆ
ಕಾವ್ಯದಲ್ಲಿ ಮಗ್ನಳಾಗಿದ್ದಳು.
ಬಾಗಿಲ ಬಳಿ, ಗೆಜ್ಜೆ ಹೆಜ್ಜೆ
ಸ್ವರವ ಕೇಳಿ ಬೆಚ್ಚಿ ಬಿದ್ದು
ಅತ್ತ ನೋಡಿ ಶ್ರೀಮತಿಯನು
ಕಂಡು ಅವಳ ಬಳಿಗೆ ಹೋಗಿ
"ಇಂದು ರಾಜ ಇತ್ತ ಆಜ್ಞೆ
ಏನು ನಿನಗೆ ಗೊತ್ತಿಲ್ಲವೆ?
ಹೀಗೆ ಮಾಡಿ ಮರಣದತ್ತ
ಸಾಗಿರುವೆಯೊ ಹೇಗೆ? ಎಂದು
ಕಿವಿಯೊಳುಸಿರಿ ನಿಂತಳು.

ಇದನು ಕೇಳಿ ಸಿಂತ ಹಾಗೆ
ಶ್ರೀಮತಿ ಅಲ್ಲಿಂದ ಹೊರಟು
ಪೂಜೆಯ ಸಾಮಗ್ರಿ ಪಿಡಿದು
ಮನೆಮನೆಗೂ ಹೋದಳು.
ಪೂಜೆಯುವಧಿಯಾಯಿತೆಂದು

ಎಲ್ಲರನ್ನು ಕರೆಯಲಾಗಿ
ಕೆಲವರಿದಕೆ ಹೆದರಿಕೊಂಡು
ಸುಮ್ಮನಿರಲು ಮತ್ತೆ ಕೆಲರು
ಅವಳ ನಿಂದೆ ಗೈದರು.

ರಾಜಗೃಹದ ಬೆಳಕಿನಲ್ಲಿ
ದಿನದ ಬೆಳಕು ಕೂಡಿಹೋಯ್ತು
ಜನರಿಲ್ಲದ ರಾಜವೀಥಿ
ಕತ್ತಲಲ್ಲಿ ಮಲಗಿ ಇತ್ತು
ಪುರದ ಜನರು ಗೈಯುತಿದ್ದ
ಸದ್ದು ಕ್ಷೀಣವಾಗಿ ಹೋಯ್ತು
ಅರಸನ ಪ್ರಾಚೀನ ಗುಡಿಯ
ಆರತಿ ಘಂಟಾನಿನಾದ
ಮೊಳಗಿ ಊರ ತುಂಬಿತು.

ಶರದೃತುವಿನ ಗಾಢ ರಾತ್ರಿ
ಮಿನುಗುತಿಹವಸಂಖ್ಯ ತಾರೆ
ರಾಜಗೃಹದ ಸಿಂಹದ್ವಾರ
ರಕ್ಷಕದಳ ದಕ್ಷತೆಯಲಿ
ಕಾವಲನ್ನು ಸಾಗಿಸಿತ್ತು

ಇಂಥ ಘೋರ ರಾತ್ರಿಯಲ್ಲಿ
ರಾಜನ ಏಕಾಂತ ವನದಿ
ಸ್ತೂಪದಡಿಯ ಮೆಟ್ಟಲಲ್ಲಿ
ಏಕೆ ಬೆಳಗುತಿಹುದು ದೀಪ ?
ಎಂದು ಅದನು ಕಂಡು ಹೆದರಿ
ಪುರರಕ್ಷಕ ಬೆಚ್ಚಿಬಿದ್ದ

ಹಿರಿದ ಖಡ್ಗ ಹಿಡಿದು ಕೊಂಡು
ಪುರರಕ್ಷಕ ತ್ವರಿತದಿಂದ
ಸ್ತೂಪದೆಡೆಗೆ ಬಂದು ನಿಂತು
"ಯಾರು ನೀನು ? ಹತಭಾಗಿಯೆ
ಸಾಯಲೆಂದೆ ಆರತಿಯನು
ಗೈದೆ ಏನು ?" ಎಂದು ಕೇಳೆ
"ಶ್ರೀಮತಿ ನಾ, ಬುದ್ಧ ದಾಸಿ

ಎಂದು ಮಧುರ ಕಂಠದಿಂದ
ಮಾರುತ್ತರವನ್ನು ಪಡೆದ

ಅಂದಿನ ಆ ರಾತ್ರಿಯಲ್ಲಿ
ಸ್ತೂಪದಡಿಯ ಶುಭ್ರಶಿಲೆಯ
ಮೇಲೆ ರಕ್ತ ಚಿಮ್ಮಿ ಹರಿಯಿತು.
ಶರತ್ಕಾಲದೇಕಾಂತದ ಮಧ್ಯ
ಕಾಳರಾತ್ರಿಯಲ್ಲಿ ಕೊನೆಯ
ಬುದ್ಧಪೂಜೆ ಜರುಗಿತು.

70. ಆಶ್ರಮದ ಸ್ವರೂಪ ಮತ್ತು ವಿಕಾಸ

ನಾನು ಆಗ ಚಿಕ್ಕವನಿದ್ದೆ. ವಯಸ್ಸು ಬಹಳ ಆಗಿರಲಿಲ್ಲ. ಆ ಕಾಲಕ್ಕೆ ಇದ್ದ ಶಾಲೆಗಳ ರೀತಿ ಹಾಗೂ ಶಿಕ್ಷಕ ವಿದ್ಯಾರ್ಥಿಗಳ ನಡುವೆ ಇದ್ದ ಸಂಬಂಧ ನನ್ನ ಪಟ್ಟಿಗೆ ಅಸಹನೀಯವಾಗಿತ್ತು. ಅಂದಿನ ಶಿಕ್ಷಣಕ್ರಮದಲ್ಲಿ ಯಾವುದೇ ಬಗೆಯ ಸ್ವಾರಸ್ಯ ಇರಲಿಲ್ಲ. ಅದು ಸಂಪೂರ್ಣ ರಸಹೀನವಾಗಿತ್ತು. ಆದರೆ ನನ್ನ ಅಸಹಿಷ್ಣುತೆಗೆ ಇದೊಂದೇ ಕಾರಣವಾಗಿರಲಿಲ್ಲ. ಕಲಕತ್ತಾ ನಗರದಲ್ಲಿ ನಾನು ಬಹುಮಟ್ಟಿಗೆ ಕೈದಿಗಳ ಹಾಗೆ ಇದ್ದೆನು. ನಮ್ಮ ಮನೆಯೊಂದು ನನ್ನ ಪಾಲಿಗೆ ಕಾರಾಗೃಹವಾಗಿತ್ತು. ಆದರೂ ಈ ಕಾರಾಗೃಹದಲ್ಲಿರುವ ನನಗೆ ನಿಸರ್ಗದೊಂದಿಗೆ ಸ್ನೇಹ ಸಂಪರ್ಕವಿಟ್ಟುಕೊಂಡು ಆನಂದ ಪಡೆಯಲು ಒಂದು ಮಾರ್ಗ ತೆರೆದಿತ್ತು. ನಮ್ಮ ಮನೆಯ ದಕ್ಷಿಣಕ್ಕೆ ದೊಡ್ಡ ದಾದ ಒಂದು ಹೊಂಡವಿತ್ತು. ಆ ಹೊಂಡದ ನೀರಿನ ಮೇಲೆ ಬೆಳಗಿನಲ್ಲಿ ಹಾಗೂ ಸಂಜೆಯಲ್ಲಿ ನೆರಳು ಈ ದಂಡೆಯಿಂದ ಆ ದಂಡೆಗೂ, ಆ ದಂಡೆಯಿಂದ ಈ ದಂಡೆಗೂ ನಿತ್ಯ ಆಟವಾಡುತ್ತಿತ್ತು. ಆ ನೀರಿನಲ್ಲಿ ಅದು ಈಜುತ್ತಿತ್ತು. ಮುಳುಗು ಹಾಕುತ್ತಿತ್ತು. ನಕ್ಕುನಲಿದು ಚಿನ್ನಾಟವಾಡುತ್ತಿತ್ತು. ಆಷಾಢ ಮಾಸದಲ್ಲಿ ನೀರು ತುಂಬಿದ, ನೀಲ ವರ್ಣದ ಮೋಡಗಳು ಸಾಲಾಗಿ ನೆಟ್ಟ ತೆಂಗಿನ ಮರಗಳ ತಲೆಯ ಮೇಲೆ ಮಳೆಗರೆದು ವರ್ಷಾಕಾಲದ ಮಹೋತ್ಸವವನ್ನು ಗಂಭೀರವಾಗಿ ಆಚರಿಸುತ್ತಿದ್ದವು. ದಕ್ಷಿಣ ದಿಕ್ಕಿನಲ್ಲಿರುವ ಈ ನಮ್ಮ ತೋಟಕ್ಕೆ ನಾನು ಬರಬೇಕೆಂದು ಎಲ್ಲ ಋತುಗಳೂ ನನಗೆ ಆಮಂತ್ರಣವನ್ನಿತ್ತಿದ್ದವು. ಆ ಋತುಗಳು ಬಣ್ಣಬಣ್ಣಗಳಿಂದ ಅಂದಚಂದವಾಗಿ ಕಾಣುತ್ತಿದ್ದು ಒಂದಾದ ಮೇಲೆ ಒಂದು ಬಂದು ನನ್ನನ್ನು ಕೂಗಿ ಕರೆಯುತ್ತಿದ್ದವು. ಇದರಿಂದ ನನ್ನ ಮನಸ್ಸಿಗೆ ಸಂತೋಷವಾಗುತ್ತಿತ್ತು.

ಶಿಶುಗಳ ಜೀವನದೊಂದಿಗೆ ಇರುವ ನಿಸರ್ಗಮಾತೆಯ ಸಂಯೋಗವು ಅನಾದಿ ಕಾಲದಿಂದ ನಡೆದುಕೊಂಡು ಬಂದದ್ದು. ಇದರಿಂದ ಶಿಶುಗಳ ಮನಸ್ಸು ಹಾಗೂ ಪ್ರಾಣಗಳ ವಿಕಾಸಕ್ಕೆ ಆಗುವ ಲಾಭವೆಷ್ಟು ಎಂಬುದನ್ನು ನಗರವಾಸಿಗಳಾರೂ ತಿಳಿದುಕೊಳ್ಳಬಲ್ಲರೆಂದು ನನಗೆ ಅನಿಸುವುದಿಲ್ಲ. ಅದರ ಆವಶ್ಯಕತೆಯೂ ಅವರಿಗೆ ಇರುವುದಿಲ್ಲ. ಶಾಲೆಗಳಲ್ಲಿ ದೊರೆಯುತ್ತಿದ್ದ ಶಿಕ್ಷಣವು ನೀರಸವಾಗಿತ್ತು. ಮೇಲಿನ ತಮ್ಮ ಅಧಿಕಾರಿಗಳನ್ನು ಮೆಚ್ಚಿಸಬೇಕೆಂಬ ಮನೋವೃತ್ತಿಯುಳ್ಳ ಶಿಕ್ಷಕರು ಮಕ್ಕಳ ಮೇಲೆ ಕಠೋರವಾದ ಶಾಸನಗಳನ್ನು ಹಾಕುತ್ತಿದ್ದರು. ಇದರಿಂದ ಮಕ್ಕಳಲ್ಲಿರುವ ಕಲ್ಪಕಶಕ್ತಿಯೇ ಅಡಗಿ ಹೋಗಿ ಅವರ ನಿತ್ಯ ಜೀವನವೂ ಕೂಡ ನೀರಸವಾಗುತ್ತಿತ್ತು.

ತಮ್ಮ ಮನಸ್ಸಿಗೆ ಬೇಡವಾದುದನ್ನು ಪ್ರತಿಭಟಿಸುವ ಶಕ್ತಿಯೇ ಉಡುಗಿ ಹೋಗಿ ಮಕ್ಕಳ ಮನಸ್ಸು ಆ ದಿನಗಳಲ್ಲಿ ನಿಷ್ಠುರವಾಗಿತ್ತು. ಅವರು ಸದಾ ಏಕಾಂತಪ್ರಿಯ ರಾಗಿದ್ದು ಅವರ ಮನಸ್ಸು ಚಂಚಲವಾಗಿರುತ್ತಿತ್ತು. ನಾನು ಹದಿಮೂರು ವರ್ಷದವ ನಿರುವಾಗಲೇ ಎಜ್ಯುಕೇಶನ್ ವಿಭಾಗದವರು ಹಾಕಿದ್ದ ಸಂಕೋಲೆಗಳನ್ನು ತುಂಡರಿಸಿ ಆ ಕಾರಾಗೃಹದಿಂದ ಹೊರಬಿದ್ದು ಬಂದಿದ್ದೆ. ಅನಂತರ ನಾನು ಯಾವ ವಿದ್ಯಾಲಯ ದಲ್ಲಿ ಪ್ರವೇಶಿಸಿದೆನೊ, ಅದಕ್ಕೆ ಮಾತ್ರ ನಿಜವಾದ ವಿಶ್ವವಿದ್ಯಾಲಯವೆಂದು ಕರೆಯ ಬಹುದು. ಅಲ್ಲಿ ನಮಗೆ ವಿಶ್ರಾಂತಿ ದೊರೆಯುತ್ತಲೇ ಇರಲಿಲ್ಲ. ಏಕೆಂದರೆ ಶ್ರಮವೇ ಆಗದಂತಹ ಕೆಲಸಗಳಲ್ಲಿ ಪ್ರವೃತ್ತರಾದ ನಮಗೆ ಆ ಕೆಲಸದ ಮಧ್ಯದಲ್ಲಿಯೇ ನಮಗೆ ಬೇಕಾದ ವಿಶ್ರಾಂತಿಯು ದೊರೆಯುತ್ತಿತ್ತು. ಕೆಲಕೆಲವು ದಿನ ನಾನು ರಾತ್ರಿ ಎರಡು ಗಂಟೆಯ ವರೆಗೂ ಓದುತ್ತ ಕುಳಿತಿರುತ್ತಿದ್ದೆ. ಅಂದು ಪ್ರಖರವಾದ ದೀಪಗಳು—ಈಗಿನಂತೆ ಇರಲಿಲ್ಲ. ಮಂದ ಪ್ರಕಾಶನದ ಆ ಯುಗದಲ್ಲಿ ಊರಿಗೆ ಊರೇ ರಾತ್ರಿ ಏಕಾಂತವಾಗಿರುತ್ತಿತ್ತು. ಆಗಾಗ ಕೇಳಿ ಬರುತ್ತಿದ್ದ ಸ್ವರವೆಂದರೆ ಶ್ಮಶಾನಕ್ಕೆ ಹೆಣ ಹೊತ್ತುಕೊಂಡು ಹೊರಟ ಜನರ "ಹರಿಬೋಲ" ಎಂಬ ಪ್ರಾರ್ಥನೆ. ಹರಳೆಣ್ಣೆಯ ಎರಡು ದೀಪಗಳು ನನ್ನ ಕೋಣೆಯಲ್ಲಿ ಉರಿಯುತ್ತಿದ್ದವು. ಪ್ರಣತಿಗಳಲ್ಲಿದ್ದ ಬತ್ತಿಯು ಒಂದೊಂದು ಸಲ ಉರಿದು ಆರಿ ಹೋಗುತ್ತಿತ್ತು. ಕೆಲವೊಂದು ಸಲ ಏಕಾಂತ ಪ್ರಿಯತೆಗಾಗಿ ನಾನಾಗಿಯೆ ಒಂದು ದೀಪವನ್ನು ಆರಿಸಿ ಬಿಡುತ್ತಿದ್ದೆ. ಹರಳೆಣ್ಣೆಯ ದೀಪಗಳು ಕೊಡುತ್ತಿದ್ದ ಪ್ರಕಾಶವು ಮಂದವಾಗಿದ್ದರೂ ಅದರಿಂದ ಆಯುಷ್ಯವೃದ್ಧಿಯಾಗುವುದೆಂದು ಹೇಳುತ್ತಾರೆ. ಮಧ್ಯರಾತ್ರಿಯಲ್ಲಿ ಆಗಾಗ ಅಕ್ಕ ಅಂತಃಪುರದಿಂದ ಬಂದು ನನ್ನ ಕೈಯಲ್ಲಿದ್ದ ಪುಸ್ತಕವನ್ನು ಕಿತ್ತುಕೊಂಡು, ಸಿಟ್ಟು ಮಾಡಿ ಬಲಾತ್ಕಾರದಿಂದ ನನ್ನನ್ನು ಹಾಸಿಗೆಯ ಮೇಲೆ ಮಲಗಿಸಿ ಹೊದಿಸಿ ಹೋಗು ತ್ತಿದ್ದಳು. ನಾನು ಆಗ ಎಲ್ಲ ಪುಸ್ತಕಗಳನ್ನೂ ಓದಲು ಪ್ರಯತ್ನಿಸಿದೆ. ಅನೇಕ ಸಲ ನನ್ನ ಕೈಯಲ್ಲಿದ್ದ ಪುಸ್ತಕವನ್ನು ಶಿಕ್ಷಕರನೇಕರು ಕಂಡು ಒಂದು ಬಗೆಯ ಪೈಪೋಟಿ ಯನ್ನು ಕೂಡ ತೋರಿಸುತ್ತಿದ್ದರು. ಶಿಕ್ಷಣದ ಕಾರಾಗೃಹದಿಂದ ನಾನು ಎಂದು ಹೊರಬಿದ್ದು ಬಂದೆನೊ ಅಂದಿನಿಂದ ಸ್ವಯಂ ಶಿಕ್ಷಣದ ಹೊಣೆಯು ನನ್ನ ಮೇಲೇ ಅಧಿಕವಾಗಿ ಬಿದ್ದರೂ ನನಗೆ ದೊರೆತಿದ್ದ ಶಿಕ್ಷಣ ಸ್ವಾತಂತ್ರ್ಯದಿಂದ ಈ ಹೊಣೆಯು ನನಗೆ ಭಾರವಾಗಿರಲಿಲ್ಲ.

ಶಿಕ್ಷಣವು ಮನುಷ್ಯನ ಜೀವನದುದ್ದಕ್ಕೂ ಪ್ರತಿನಿತ್ಯ ಅವನ ಜೊತೆಗೆ ಅವಶ್ಯ ಏಕತಾನವಾಗಿ ಏಕತಾಳಹಾಕುತ್ತ ನಡೆಯಬೇಕು ಎಂದು ನನಗೆ ಬಹುದಿನಗಳಿಂದ ಅನಿಸುತ್ತ ಬಂದಿದೆ. ಅದೆಂದಿಗೂ ಕ್ಲಾಸಿನಲ್ಲಿ ಕುಳಿತು ಕಲಿಯುವ ಮಟ್ಟಿಗೆ ಇರುವು ದೆಂದು ನನಗೆ ತೋರುವುದಿಲ್ಲ. ನಿಸರ್ಗವು ನಮಗೆ ಯಾವಾಗಲೂ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಶಿಕ್ಷಣವನ್ನು ಕೊಡುತ್ತಲೇ ಇದೆ. ಈ ಶಿಕ್ಷಣದಿಂದ ನಮ್ಮ ಮನಸ್ಸಿನ ಮೇಲೆ, ದೇಶದ ಮೇಲೆ ಹಾಗೂ ಜನಾಂಗದ ಮೇಲೆ ಒಳ್ಳೇ ಪರಿಣಾಮವಾಗುತ್ತಿದ್ದು ಬೌದ್ಧಿಕ ಶಿಕ್ಷಣದೊಂದಿಗೆ ಇದು ಸಮ್ಮಿಲಿತವಾಗಿರುತ್ತದೆ. ಪ್ರಕೃತಿಯ ವಿಶ್ವ ವಿದ್ಯಾಲಯಗಳಲ್ಲಿ ಎರಡು ಬಗೆಯ ಶಿಕ್ಷಣವು ನಮಗೆ ದೊರೆಯುತ್ತದೆ. ಒಂದು

ನಿರೀಕ್ಷೆ; ಇನ್ನೊಂದು ಪರೀಕ್ಷೆ. ಇವೆರಡಕ್ಕಿಂತ ಹೆಚ್ಚಿನ ಹಾಗೂ ಅತಿ ಮಹತ್ವವಾದ ಮೂರನೆಯ ಪ್ರಯೋಜನವೆಂದರೆ ನಮ್ಮ ಜೀವನದಲ್ಲಿ ಶಿಕ್ಷಣದಿಂದ ನಮಗಾಗುವ ಆನಂದ. ಇದೇ ಬ್ರಹ್ಮನಿಂದ ಕೂಡಿದ ಪ್ರಕೃತಿ ಎಂದು ಹೇಳಬಹುದು. ಇದಲ್ಲದೆ ರಾಷ್ಟ್ರದ ಪ್ರಕೃತಿ ಎಂಬುದೂ ಒಂದು ಇದೆ. ಇದಕ್ಕೂ ಒಂದು ರೂಪವಿದೆ; ರಸವಿದೆ; ಗಂಧವಿದೆ; ವರ್ಣವಿನ್ಯಾಸವಿದೆ; ಶಬ್ದಸಾಮರ್ಥ್ಯವೂ ಇದೆ. ಭಾರತ ವರ್ಷದ ಬಹು ಪುರಾತನ ಕಾಲದಿಂದ ಬಂದಿರುವ ಈ ಶಿಕ್ಷಣವೆಲ್ಲ ಸಂಸ್ಕೃತ ಭಾಷೆಯಲ್ಲಿ ಹುದುಗಿಕೊಂಡಿರುತ್ತದೆ. ಈ ಭಾಷೆಯ ಪವಿತ್ರ ಮಾರ್ಗವಾಗಿ ನಮ್ಮ ದೇಶದ ಚಿನ್ಮಯ ಪ್ರಕೃತಿಯ ಸ್ಪರ್ಶವನ್ನು ನಾವು ನಮ್ಮೊಳಗೆ ಧಾರಣಮಾಡಿ ಕೊಳ್ಳಬಲ್ಲೆವು. ಶಿಕ್ಷಣದ ಈ ಮಹಾ ಉದ್ದೇಶವು ನನ್ನಲ್ಲಿ ಮೊದಲಿನಿಂದಲೂ ದೃಢವಾಗಿ ಬೇರೂರಿತ್ತು. ಇಂಗ್ಲೀಷ ಭಾಷೆಯ ಸಹಾಯದಿಂದ ನಾವು ತಿಳಿದು ಕೊಳ್ಳಬೇಕಾಗಿರುವ ಅನೇಕ ವಿಷಯಗಳನ್ನು ತಿಳಿದುಕೊಳ್ಳುತ್ತೇವೆ. ಆ ವಿಷಯ ಗಳೆಲ್ಲ ಅತ್ಯಂತ ಪ್ರಯೋಜನವಾದ ವಿಷಯಗಳೇ ಆಗಿವೆ. ಆದರೆ ಸಂಸ್ಕೃತ ಭಾಷೆ ಯಲ್ಲಿ ಒಂದು ಬಗೆಯ ತನ್ನದೇ ಆದ ಆನಂದವಿದೆ. ಅದು ನಮ್ಮ ಮನದ ಆಕಾಶವನ್ನು ಬಣ್ಣಬಣ್ಣಗಳಿಂದ ಚಿತ್ರಿಸಬಲ್ಲುದು. ಸಂಸ್ಕೃತ ಭಾಷೆಯಲ್ಲಿ ಆಳವಾದ ಧ್ವನಿಯಿದೆ. ಪ್ರಕೃತಿ ಮಾತೆಯಂತೆ ಇದು ಕೂಡ ನಮಗೆ ಶಾಂತಿಯನ್ನು ಕೊಡುವ ಶಕ್ತಿಯನ್ನು ಪಡೆದಿದೆ. ಅಲ್ಲದೆ ನಮ್ಮ ಚಿಂತೆಗಳನ್ನೆಲ್ಲ ಸಂಸ್ಕೃತ ಭಾಷೆಯು ದೂರಮಾಡಬಲ್ಲದು. ದೂರ ಇರಿಸಬಲ್ಲದು. ಯಾವ ಶಿಕ್ಷಣತತ್ವವನ್ನು ನಾನು ಶ್ರದ್ಧೆಯಿಂದ ಮನ್ನಿಸು ತ್ತೇನೆಯೋ ಆ ಶಿಕ್ಷಣದ ಮುನ್ನುಡಿ ಇದಾಯಿತು.

ಹಿಂದೆ ಇದ್ದ ತಪೋವನಗಳ ಬಾಹ್ಯ ಅನುಕರಣವೆಂದು ಯಾವುದಕ್ಕೆ ನಾವು ಹೇಳಬಹುದೋ ಅದು ಎಂದಿಗೂ ಅಗ್ರಾಹ್ಯವಾದದ್ದು. ಇಂದಿನ ದಿನಗಳಲ್ಲಿ ಈ ರೀತಿಯ ಅನುಕರಣವು ಅಸಂಗತವಾದದ್ದು. ಅಂತೇ ಅದು ತ್ಯಾಜ್ಯ ಹಾಗೂ ಮಿಥ್ಯ ಎಂದು ಹೇಳಬಹುದು. ಇದರ ಬದಲು ಆ ತಪೋವನಗಳ ಆಂತರಿಕ ಜೀವನವನ್ನು ಕಂಡುಹಿಡಿದು ಇಂದಿನ ಆಧುನಿಕ ಜೀವನದಲ್ಲಿ ಅದರ ಪ್ರಾಣಪ್ರತಿಷ್ಠೆ ಮಾಡುವುದು ಅತ್ಯವಶ್ಯ.

ಕೆಲವು ದಿನಗಳ ಹಿಂದೆ ನನ್ನ ಪೂಜ್ಯ ತಂದೆಯವರು ಜನಸಾಮಾನ್ಯರ ಉನ್ನತಿ ಗಾಗಿ ಎಂದು ಶಾಂತಿನಿಕೇತನ ಆಶ್ರಮವನ್ನು ಸ್ಥಾಪಿಸಿದ್ದರು. ಕೆಲವೊಂದು ವಿಶೇಷ ನಿಯಮಗಳನ್ನು ಪಾಲಿಸಬಲ್ಲ ಜನರು ಒಂದೆರಡು ದಿನಗಳ ಮಟ್ಟಿಗೆ ಶಾಂತಿನಿಕೇತನಕ್ಕೆ ಹೋಗಿ ಅಲ್ಲಿ ಇದ್ದು ಆಧ್ಯಾತ್ಮಿಕ ಶಾಂತಿಯನ್ನು ಪಡೆಯಲು ಸಾಧನ ಮಾಡುವುದಕ್ಕೆ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂಬುದೇ ಅವರ ಸಂಕಲ್ಪವಾಗಿತ್ತು. ಈ ಸಂಕಲ್ಪವು ಈಡೇರಬೇಕೆಂದು ಅವರು ಅಲ್ಲಿ ಒಂದು ಉಪಾಸನೆಯ ಮಂದಿರ ಹಾಗೂ ಒಂದು ಗ್ರಂಥಾಲಯವನ್ನು ಸ್ಥಾಪಿಸಿದ್ದಲ್ಲದೆ ವಾಸಕ್ಕೆ ಸರಿಯಾದ ಉಳಿದ ಸೌಕರ್ಯ ಗಳನ್ನೂ ಮಾಡಿದ್ದರು.

ಶಾಂತಿನಿಕೇತನಕ್ಕೆ ನಾನು ಬರುತ್ತಲೇ, ನನ್ನ ಜೀವನದಲ್ಲಿ ಈ ಮೊದಲು ನನಗೆ ದೊರೆಯದೆ ಇದ್ದ ಪ್ರಕೃತಿಮಾತೆಯ ಉಡಿಯಲ್ಲಿ ಒಂದು ಪ್ರಶಾಂತವಾದ ಸ್ಥಳವು ದೊರೆಯಿತು. ಉಪನಯನವಾದ ಮೇಲೆಯೇ ನಾನಲ್ಲಿಗೆ ಹೋದೆ. ಉಪನಯ

ಸದ ಕಾಲಕ್ಕೆ "ಭೂರ್ಭುವಃ ಸ್ವರ್ಲೋಕ"ಗಳ ಮಧ್ಯದಲ್ಲಿ ಸಂಚರಿಸುವುದಕ್ಕೆ ನಾನು ನಮ್ಮ ಪೂಜ್ಯ ತಂದೆಯವರಿಂದ ಯಾವ ಮಂತ್ರಪಾಠವನ್ನು ಹೇಳಿಸಿಕೊಂಡೆನೊ ಅದರ ಮುಂದಿನ ಪಾಠವಾದ ದೀಕ್ಷೆಯನ್ನು ಶಾಂತಿನಿಕೇತನದಲ್ಲಿ ವಿಶ್ವದೇವತೆಗಳಿಂದ ನಾನು ಪಡೆದೆನು. ನನ್ನ ಬಾಲ್ಯದಲ್ಲಿ ಈ ಸುಯೋಗವು ನನಗೆ ಘಟಿಸದೆ ಹೋಗಿದ್ದರೆ ನನ್ನ ಜೀವನವು ಕೊನೆಯವರೆಗೂ ಅಸಂಪೂರ್ಣವಾಗಿ ಉಳಿಯಬಹುದಾಗಿತ್ತು. ಪಿತೃದೇವರು ನನಗಾವ ವಿಧಿನಿಷೇಧಗಳನ್ನೂ ಹಾಕಿರಲಿಲ್ಲ. ನನ್ನನ್ನು ಯಾವುದೇ ರೀತಿಯಲ್ಲಿ ಬಂಧಿಸಿರಲಿಲ್ಲ. ದಿನಾಲು ಬೆಳಗ್ಗೆ ತುಸು ಸಮಯ ಅವರಿಂದ ನಾನು ಇಂಗ್ಲೀಷು ಹಾಗೂ ಸಂಸ್ಕೃತಗಳನ್ನು ಹೇಳಿಸಿಕೊಳ್ಳುತ್ತಿದ್ದೆ. ಅನಂತರ ನನಗೆ ಆಬಾಧಿತವಾದ ರಜೆ ದೊರೆಯುತ್ತಿತ್ತು. ಬೋಲಪುರ ಪಟ್ಟಣದಲ್ಲಿ ಈಗಿನಷ್ಟು ಆಗ ಜನಸಂದಣಿ ಇರಲಿಲ್ಲ. ಹೊಸದಾಗಿ ಕಟ್ಟಿದ ಅಲ್ಪ ಬೆಲೆಯ ಅನಾರೋಗ್ಯ ಸಾಲುಮನೆಗಳು ತಮ್ಮ ಮಲಿನವಾದ ಚಪ್ಪರಗಳಿಂದ ಸ್ವಚ್ಛವಾದ ಆಕಾಶವನ್ನು ಇನ್ನೂ ಕಲುಷಿತಗೊಳಿಸಿರಲಿಲ್ಲ. ಅದೇ ರೀತಿ ಆ ಮನೆಗಳ ಸುತ್ತು ಇದ್ದ ದುರ್ಗಂಧವು ವಾತಾವರಣವನ್ನೂ ಹಾಳುಮಾಡಿರಲಿಲ್ಲ. ಹೊಲಗಳ ಮಧ್ಯದಲ್ಲಿ ಹಾಯ್ದುಹೋಗುವ ಆ ಕೆಂಪು ದಾರಿಗಳಲ್ಲಿ ಜನರ ಸುಳಿದಾಟವು ತೀರ ವಿರಳವಾಗಿತ್ತು. ಕೆರೆಗಳಲ್ಲಿ ನೀರು ಸ್ವಚ್ಛವಾಗಿತ್ತು. ವಿಪುಲವಾಗಿತ್ತು. ತುಂಬಿ ತುಳುಕುತ್ತಿತ್ತು. ಸುತ್ತಲಿನ ಹಳ್ಳಿಯ ಹೊಲಗಳು ಒತ್ತಿಬಂದು ಈ ಕೆರೆಗಳನ್ನು ಸುತ್ತುವರಿದು ಅವುಗಳನ್ನು ಅದುಮಿ ಹತ್ತಿಕ್ಕಿ ಹಿಡಿದಿರಲಿಲ್ಲ. ಈ ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿರುವ ಎತ್ತರವಾದ ಮಣ್ಣಿನ ಗುಡ್ಡಗಳ ಮೇಲೆ ತಮಾಲವೃಕ್ಷಗಳು ಸಾಲು ಸಾಲಾಗಿ ನಿಂತಿದ್ದವು. ಗುಡ್ಡದ ಓರೆಗುಂಟ ಹರಿದ ನೀರಿನ ಝರಿಗಳು ಅಲ್ಲಲ್ಲಿ ಆಳವಾದ ತಗ್ಗುಗಳನ್ನು ಮಾಡುತ್ತ ಅಂಕಡೊಂಕವಾಗಿ ನಾನಾ ಪ್ರಕಾರದ ಕಲ್ಲುಗಳ ಮಧ್ಯದಿಂದ ಹರಿದು ಬಯಲುಭೂಮಿಯ ಕಡೆಗೆ ಸಾಗಿದ್ದವು. ಈ ಜಲಮಾರ್ಗಗಳ ಮಧ್ಯದಲ್ಲಿ ಅನೇಕ ಪ್ರಕಾರದ ಕಲ್ಲುಗಳಿದ್ದವು. ಅವುಗಳು ಅನೇಕ ಆಕೃತಿಗಳನ್ನು ತಳೆದಿದ್ದವು. ಕೆಲವೆಡೆಗಳಲ್ಲಿ ಈ ಕಲ್ಲುಗಳು ಸ್ಫಟಿಕದಂತೆ ಹೊಳೆಯುತ್ತಿದ್ದರೆ ಮತ್ತೆ ಕೆಲವೆಡೆಗಳಲ್ಲಿ ಸುಟ್ಟುಹೋದ ಕಪ್ಪುಮುಖದ ಕಲ್ಲುಗಳು ಕಾಣಿಸುತ್ತಿದ್ದವು.

ನಾನು ಮಧ್ಯಾಹ್ನ ಹೆಚ್ಚಾಗಿ ಈ ಸ್ಥಳದಲ್ಲಿಯೇ ತಿರುಗಿ ಅನೇಕ ಆಕಾರದ ಕಲ್ಲುಗಳನ್ನು ಸಂಗ್ರಹಿಸುತ್ತಿದ್ದೆ. ಧನ ಸಂಗ್ರಹಿಸುವ ಬುದ್ಧಿಯಿಂದ ನಾನು ಅಲ್ಲಿಗೆ ಹೋಗದೆ ಕಲ್ಲುಗಳನ್ನು ಸಂಗ್ರಹಿಸುವ ಮನಸ್ಸಿನಿಂದ ಹೋಗುತ್ತಿದ್ದೆ. ಕೆಲವೆಡೆ ಹೊಲದ ಒಡ್ಡಿನಿಂದ ನೀರು ರಭಸದಿಂದ ಕೆಳಗೆ ಬಿದ್ದು ಒಂದು ಚಿಕ್ಕ ಜಲಪಾತವೇ ಆಗಿರುತ್ತಿತ್ತು. ನೀರಿನ ಒತ್ತಡಕ್ಕೆ ಅಲ್ಲಿ ಹೊಂಡಗಳೂ ನಿರ್ಮಾಣವಾಗಿದ್ದವು. ಈ ಹೊಂಡಗಳಲ್ಲಿ ತುಂಬಿ ನಿಂತ ನೀರು ಚಿಕ್ಕವನಾದ ನನಗೆ ಮುಳುಗುಹಾಕಲು ಸಾಕಷ್ಟು ಆಗಿತ್ತು. ನನ್ನ ಪಾಲಿಗೆ ಅವು ಆಳವಾದ ಜಲಾಶಯಗಳೇ ಆಗಿದ್ದವು. ಈ ಜಲಾಶಯಗಳಿಂದ ನೀರು ಹರಿದು ಮುಂದೆ ಹೋಗಿ ಚಿಕ್ಕ ಚಿಕ್ಕ ಪ್ರವಾಹಗಳಾಗಿ ಸಾಗಿತ್ತು. ಈ ಪ್ರವಾಹಗಳಲ್ಲಿ ಅಂದವಾದ ಸಣ್ಣಸಣ್ಣ ಮೀನುಗಳು ಆನಂದದಿಂದ ಈಜುತ್ತಿದ್ದವು. ನಾನು ಈ ಬಾಲಪ್ರಪಂಚದಲ್ಲಿ ಅನೇಕ ಹೊಸ ಹೊಸ ನೀರಿನ ಝರಿಗಳನ್ನು ಹುಡುಕಿಕೊಂಡು ಸುತ್ತಾಡಿ ಸಂತೋಷಪಡುತ್ತಿದ್ದೆ.

ಈ ಕಂದಕಗಳ ನಡುನಡುವೆ ಮಣ್ಣು ತೇಲಿಬಂದು ಸಾಕಷ್ಟು ಪ್ರಮಾಣ ದಲ್ಲಿ ಸಂಗ್ರಹವಾಗಿದ್ದ ಎಡೆಗಳಲ್ಲಿ ಅನೇಕ ಪ್ರಕಾರದ ಕಾಡು ಹಣ್ಣಿನ ಗಿಡಗಳೂ ಬೆಳೆದು ನಿಂತಿದ್ದವು. ಕಾಡ ಖರ್ಜೂರದ ಗಿಡಗಳು ಒಂದೆಡೆ ಬೆಳೆದಿದ್ದರೆ ಇನ್ನೊಂದೆಡೆ ಕಾಡ ನೇರಲೆ, ಪೇರಲೆಹಣ್ಣಿನ ಗಿಡಗಳೂ ಇದ್ದವು. ಒಂದೆಡೆ ಅತಿ ಎತ್ತರವಾಗಿ ಒಂದು ಬಗೆಯ ಹುಲ್ಲು ಬೆಳೆದು ನಿಂತಿತ್ತು. ಮೇಲೆ ಹೊಲದಲ್ಲಿ ದನಗಳು ಮೇಯು ತ್ತಿದ್ದವು. ಸಾಂತಾಲ* ಜನರು ಅಲ್ಲಲ್ಲಿ ಬೇಸಾಯದ ನಾನಾ ಕೆಲಸಗಳನ್ನು ಮಾಡು ತ್ತಿದ್ದರು. ಇನ್ನೊಂದೆಡೆಯಲ್ಲಿ ಸರಿಯಾದ ದಾರಿ ಇಲ್ಲದೆ ಹೋದರೂ ಒಂದು ಎತ್ತಿನ ಗಾಡಿ ಸಾಗಿತ್ತು. ಆದರೆ ಈ ಕಂದಕಗಳಲ್ಲಿ ಮಾತ್ರ ಜನರ ಸುಳಿವೇ ಇರಲಿಲ್ಲ. ಉರಿ ಬಿಸಿಲಿನ ತಾಪಕ್ಕೆ ಸುಟ್ಟುಹೋದ ಈ ಭೂಮಿಯಲ್ಲಿ ಯಾವುದೇ ಬಗೆಯ ಉತ್ಪಾದನೆ ಆಗುವಂತಿರಲಿಲ್ಲ. ಆ ನೆಲದಲ್ಲಿ ಹೂವು ಹಣ್ಣುಗಳನ್ನಾಗಲಿ, ಬೇರೆ ಯಾವುದೇ ಬೆಳೆಯ ನ್ನಾಗಲಿ ಕೊಡುವ ಜೀವನ ಸತ್ವವೇ ಉಳಿದಿರಲಿಲ್ಲ. ನಿಸರ್ಗದ ಚಿತ್ರಕಾರನು ತನ್ನ ಮನಸ್ಸಿಗೆ ಬಂದಂತೆ ಅನೇಕ ಚಿತ್ರಗಳನ್ನು ಅಖಂಡವಾಗಿ ಯಾವ ಪ್ರಯೋಜನಕ್ಕೂ ಇಲ್ಲದೆ ನಿತ್ಯ ಬಿಡಿಸುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಮೋಡಗಳೇ ಇಲ್ಲದ ರಣಗುಡುತ್ತಿರುವ ಬಿಸಿಲು ಈ ನೆಲದ ಮೇಲೆ ತನ್ನ ಪ್ರಭಾವವನ್ನು ಸಾಕಷ್ಟು ಬೀರಿತ್ತು. ಇವುಗಳನ್ನು ಬಿಟ್ಟರೆ ಮತ್ತೇನೂ ಅಲ್ಲಿ ಕಂಡುಬರುತ್ತಿರಲಿಲ್ಲ. ನನ್ನಂತಹ ಚಿಕ್ಕಮಕ್ಕಳ ಆಟಕ್ಕಾಗಿಯೇ ಈ ಸ್ಥಳವು ನಿರ್ಮಾಣವಾಗಿದೆ ಎಂದು ನನಗೆ ಆಗಾಗ ಅನಿಸುತ್ತಿತ್ತು. ಇಲ್ಲಿಯ ಗುಡ್ಡ, ಇಲ್ಲಿಯ ಕಂದಕ, ಇಲ್ಲಿಯ ಹೊಂಡ, ಇಲ್ಲಿಯ ಹಳ್ಳ ಇವೆಲ್ಲವುಗಳೂ ಮಕ್ಕಳ ಆಟಕ್ಕಾಗಿಯೇ ನಿರ್ಮಾಣವಾಗಿದ್ದು ಅವರ ಆ ಬಾಲ ಮನಸ್ಸಿಗೆ ತಕ್ಕಂತೆ ಇದ್ದವು.

ಇಂದು ಶಾಂತಿನಿಕೇತನದಲ್ಲಿ ಕಾಣುವ ಛಾತಿಮ† ವೃಕ್ಷಗಳ ಸುತ್ತು ಮಾಲತಿ ಲತೆಯು ಬೆಳೆದದ್ದು ಕಂಡುಬರುತ್ತದೆ. ಆದರೆ ಆ ಎರಡೂ ವೃಕ್ಷಗಳ ಸುತ್ತು ಹಿಂದೆ ದಟ್ಟವಾದ ಕಂಟಿಗಳು ಬೆಳೆದಿದ್ದವು. ಕಳ್ಳರಿಗೆ ಅಡಗಿಕೊಂಡು ಕುಳಿತುಕೊಳ್ಳಲು ತಕ್ಕ ಸ್ಥಳವಾಗಿತ್ತು ಅದು. ಈ ಗಿಡಗಳ ಸುತ್ತಲಿನ ವಿಶಾಲವಾದ ಬಯಲಿನಲ್ಲಿ ಬೇರೆ ಮರ ಗಳೇ ಇರಲಿಲ್ಲ. ಹಿಂದಿನ ಆ ಅರಾಜಕ ದಿನಗಳಲ್ಲಿ ಪ್ರವಾಸ ಮಾಡುವುದು ಗಂಡಾಂತರ ಕಾರಿಯಾಗಿತ್ತು. ಬಿಸಿಲಲ್ಲಿ ಬೆಂದುಹೋದ ಪ್ರಯಾಣಿಕರು ನೆಳಲಿನ ಆಶೆಗಾಗಿ ಈ ಗಿಡಗಳ ಬಳಿಗೆ ಬಂದು ತಮ್ಮಲ್ಲಿದ್ದ ಹಣವನ್ನೂ ಅದರೊಂದಿಗೆ ಕೆಲವು ಸಲ ಪ್ರಾಣ ವನ್ನೂ ಕಳೆದುಕೊಂಡದ್ದುಂಟು.

ಒಂದು ಸಲ ಈ ಎರಡು ಛಾತಿಮ ವೃಕ್ಷದ ನೆರಳಲ್ಲಿ ವಿಶ್ರಾಂತಿಗೆಂದು ದೂರ ದಿಂದ ನಡೆದು ಬಂದಿದ್ದ ಪ್ರಯಾಣಿಕರು ಅಲ್ಲಿಗೆ ಹೋಗಿದ್ದರು. ಅದೇ ಕಾಲಕ್ಕೆ ನಮ್ಮ ಪಿತೃದೇವರು ರಾಯಪುರದ ಭುವನಸಿಂಹ ಅವರ ಆಮಂತ್ರಣವನ್ನು ಮುಗಿಸಿ ಕೊಂಡು ಮೇಣೆಯಲ್ಲಿ ಕುಳಿತು ಈ ಮಾರ್ಗವಾಗಿ ತಿರುಗಿ ಬರುತ್ತಿದ್ದರು. ಆಗ ಅವರಿಗೆ ಈ ಮರಗಳ ಬುಡದಿಂದ ಚೀತ್ಕಾರವು ಕೇಳಿಬಂತು. ಜೊತೆಗೆ ಈ ಮರಗಳ

---

* ಬಂಗಾಲದಲ್ಲಿರುವ ಒಂದು ಜನಾಂಗದ ಹೆಸರು.

† ಒಂದು ಬಗೆಯ ಗಿಡದ ಹೆಸರು. ಅದನ್ನು ಏಳು ಎಲೆಗಳ ಗಿಡವೆಂದು ಕರೆಯಬಹುದು.

ಅಂತರಾತ್ಮವು ಇವರನ್ನು ತಮ್ಮೆಡೆಗೆ ದೈನ್ಯದಿಂದ ಕರೆದಂತೆ ಇವರಿಗೆ ಭಾಸವಾಯಿತು. ತಮ್ಮ ಜೀವನದ ಅಭೀಷ್ಟವಾಗಿದ್ದ ಪ್ರಶಾಂತ ಶಾಂತಿಯನ್ನು ಈ ಮರಗಳ ಅಡಿಯಲ್ಲಿ ಪಡೆಯುವೆನೆಂದು ಅವರಿಗೇಕೊ ಆಗ ಅನಿಸಿತು. ಮುಂದೆ ಅವರು ಈ ಸ್ಥಳವನ್ನು ಸಿಂಹ ಅವರಿಂದ ದಾನವಾಗಿ ಪಡೆದರು. ಅಲ್ಲಿ ಒಂದು ಅಂತಸ್ತಿನ ಮನೆಯನ್ನೂ ಕಟ್ಟಿಸಿದರು. ಆಗಾಗ ಕಲಕತ್ತೆಯಿಂದ ನಮ್ಮ ಪೂಜ್ಯ ತಂದೆಯವರು ಇಲ್ಲಿಗೆ ಬಂದು ಸಾಧನೆಯನ್ನು ಮಾಡುತ್ತಿದ್ದರು.

ನನ್ನ ಚಿಕ್ಕ ವಯಸ್ಸಿನಲ್ಲಿಯೇ ನಾನು ಪ್ರಕೃತಿ ದೇವತೆಯ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆ ಬಂದಿದ್ದೆ. ನನಗೆ ಆಗ ಇಲ್ಲಿಯ ಅನಂತವಾದ ಆಕಾಶ ಹಾಗೂ ವಿಶಾಲವಾದ ಬಯಲುಗಳು ಮೊಟ್ಟಮೊದಲಿಗೆ ಸ್ವಾಗತವನ್ನು ಇತ್ತವು. ದೂರ ಕ್ಷಿತಿಜದ ಅಂಚಿನಲ್ಲಿ, ಸೂರ್ಯನ ಪ್ರಕಾಶದಲ್ಲಿ ಶಾಲ ಮತ್ತು ತಾಲ ವೃಕ್ಷಗಳು ತಮ್ಮ ಕೈಗಳನ್ನು ಚಾಚಿ ನಿಂತಿದ್ದವು. ಈ ದೃಶ್ಯವು ನನ್ನ ಆಂತರಿಕ ಜೀವನದ ಮೇಲೆ ಆಳವಾದ ಹಾಗೂ ಪ್ರಶಾಂತವಾದ ಪರಿಣಾಮವನ್ನು ಮಾಡಿದೆ. ಅದೀಗ ನನ್ನಲ್ಲಿ ನೆನಪಿನ ರೂಪದ ನಿಧಿಯಾಗಿದೆ. ನನ್ನ ಪ್ರಕೃತಿಯೊಂದಿಗೆ ಈ ಪ್ರಕೃತಿ ಸೌಂದರ್ಯವು ಸಮ್ಮಿಲನವಾಗಿ ಅಂತರ್ಭುಕ್ತವಾಗಿದೆ. ಇಲ್ಲಿಯ ಬಾನಿನಲ್ಲಿ ಹಾಗೂ ಬಯಲಿನಲ್ಲಿ ನಾನು ಪ್ರಕೃತಿ ದೇವಿಯನ್ನು ಕಂಡಿದ್ದೇನೆ. ದಿನಾಲು ಬೆಳಗ್ಗೆ ಹಾಗೂ ಸಂಜೆಗೆ ನನ್ನ ಪಿತೃದೇವರು ಪ್ರಕೃತಿ ಪೂಜೆಯನ್ನು ಮಾಡುತ್ತಿದ್ದರು. ಅವರ ಆ ಮೌನ ಪ್ರಾರ್ಥನೆಯು ಇಲ್ಲಿಯ ವಾತಾವರಣದಲ್ಲಿ ತುಂಬಿತುಳುಕಿ ಆಳವಾದ ಗಾಂಭೀರ್ಯವನ್ನು ಹೊರಸೂಸುತ್ತಿದೆ. ಆಗ ಇಲ್ಲಿ ಉಳಿದುದೇನೂ ಇರಲಿಲ್ಲ. ಈಗಿದ್ದಷ್ಟು ಗಿಡಮರಗಳಿರಲಿಲ್ಲ. ಜನಸಂದಣಿ ಇರಲಿಲ್ಲ. ಯಾವ ಕೆಲಸವೂ ನಡೆದಿರಲಿಲ್ಲ. ಸುತ್ತು ಬಹುದೂರ ವ್ಯಾಪಿಸಿದ್ದ ಮೌನದ ಮಧ್ಯದಲ್ಲಿ ಪರಿಶುದ್ಧವಾದ, ನಿರ್ಮಲವಾದ ಮಹಾಮಹಿಮೆಯು ಇಲ್ಲಿ ಅಖಂಡವಾಗಿ ನೆಲೆಸಿತ್ತು.

ಅಂದು ಚಿಕ್ಕ ಬಾಲಕನಾಗಿದ್ದು ಈ ವಾತಾವರಣದಲ್ಲಿಯೇ ದೊಡ್ಡವನಾಗಿ ಬೆಳೆದು ಪ್ರೌಢನಾದ ನನಗೆ ಒಂದು ತಪೋವನ ಸದೃಶವಾದ ಆಶ್ರಮವನ್ನು—ಅದೇಕೆ ತಪೋವನವನ್ನೇ—ಸ್ಥಾಪಿಸಬೇಕೆಂದು ಅನಿಸಿದಾಗ ಈ ಸ್ಥಳವನ್ನು ಬಿಟ್ಟು ಬೇರೆ ಎಲ್ಲಿಗೆ ತಾನೆ ಏಕೆ ನಾನು ಹೋಗಬೇಕು? ಕೂಡಲೇ ನಾನು ನನ್ನ ಪಿತೃದೇವ ಅವರನ್ನು ಕೇಳಿದೆ. ಈಗ ಶೂನ್ಯ ಅವಸ್ಥೆಯಲ್ಲಿ ಇರುವ ಈ ಶಾಂತಿನಿಕೇತನದಲ್ಲಿ ಒಂದು ಆದರ್ಶ ವಿದ್ಯಾಲಯವನ್ನು ಸ್ಥಾಪಿಸಲು ನಾನು ಸಮರ್ಥನಾದರೆ ಈ ಸ್ಥಳಕ್ಕೂ ಒಂದು ಸಾರ್ಥಕತೆ ಬರುತ್ತದೆ ಎಂದು ನಾನು ಪಿತೃದೇವ ಅವರಿಗೆ ಹೇಳಿದೆ. ಅವರು ಈ ನನ್ನ ವಿನಂತಿಗೆ ಉತ್ಸಾಹದಿಂದ ತಮ್ಮ ಸಮ್ಮತಿಯನ್ನು ಇತ್ತರು.

ಅನಂತರ ಕೇವಲ ನನ್ನ ಇಚ್ಛೆಯೇ ಅಲ್ಲ ಅದರೊಂದಿಗೆ ಕಾಲವೂ ಕೂಡ ತನ್ನ ಕೆಲಸವನ್ನು ಇಲ್ಲಿ ಮಾಡಿದೆ. ಅದೆಷ್ಟೋ ಬದಲಾವಣೆಗಳನ್ನು ತಂದಿದೆ. ಹೊಸ ಹೊಸ ಆಶೆನಿರಾಶೆಗಳನ್ನೂ ತಂದಿದೆ. ಅದೆಷ್ಟು ಸುಹೃದ ಮಹನೀಯರು ತಮ್ಮ ನಿಸ್ವಾರ್ಥ ಆತ್ಮನಿವೇದನೆಯನ್ನು ಇಲ್ಲಿ ಮಾಡಿದ್ದಾರೆ! ಅದೇ ರೀತಿ ಸಂಬಂಧವಿಲ್ಲದೆ ಹೋದರೂ ಅನೇಕ ಅಪರಿಚಿತರು ತಮ್ಮ ವೈರವನ್ನೂ ಇಲ್ಲಿ ತೋರಿಸಿದ್ದಾರೆ. ಸುಳ್ಳುನಿಂದೆಯೂ

ಆಗಿದೆ. ಅಪವಾದಗಳೂ ಬಂದಿವೆ. ಬಿಡಿಸಲು ಶಕ್ಯವಾಗದ ಆರ್ಥಿಕ ಹಾಗೂ ಪಾರಮಾರ್ಥಿಕ ಸಮಸ್ಯೆಗಳೂ ಕೂಡ ತಲೆ ಎತ್ತಿ ನಿಂತಿವೆ!

ಯಶಸ್ಸು ದೊರೆಯಲಿ ಅಥವಾ ದೊರೆಯದೆ ಇರಲಿ ಸಾಧ್ಯದ ಕೊನೆಯ ಮೇರೆಯ ವರೆಗೂ ಸ್ವಂತದ ಪ್ರಯತ್ನವನ್ನು ಮಾಡಿದ್ದಾಗಿದೆ. ದಣಿದ ದೇಹ ಹಾಗೂ ಶಿಥಿಲಗೊಂಡ ಸ್ವಾಸ್ಥ್ಯಗಳೊಂದಿಗೆ ಕೊನೆಯ ಸಿರೋಪವನ್ನು ತೆಗೆದುಕೊಳ್ಳುವ ಕಾಲವೂ ಸನ್ನಿಹಿತವಾಗಿದೆ. ಸುದೀರ್ಘವೂ ಕಠೋರವೂ ಆದ ಪಥದಲ್ಲಿ ಈ ವರೆಗೂ ಯಾವ ಶಕ್ತಿಯು ಕೈಹಿಡಿದು ಕರೆದುಕೊಂಡು ಬಂದಿದೆಯೋ ಆ ಶಕ್ತಿಗೆ ನಾನಿಂದು ವಂದಿಸುತ್ತೇನೆ. ನನ್ನ ಸಾಧನೆಯಲ್ಲಿ ಈ ವರೆಗೆ ಪಡೆದ ವಿಫಲತೆಯು ಇಲ್ಲಿ ಹೊರಗೆ ಬಂದು ಬೆಳಕು ಕಂಡಿದೆ. ಇದರ ಸಫಲತೆಯು ಮಾತ್ರ ಸಂಪೂರ್ಣವಾಗಿ ಇತಿಹಾಸದ ಅಲಿಖಿತ ಅಕ್ಷರಗಳಲ್ಲಿ ಅಡಗಿಕೊಂಡಿದೆ.

71. ಸುಖ–ದುಃಖ

ಪುಣ್ಯಸ್ನಾನಕೆಂದು ಬಂದ
ಯಾತ್ರಾಗಣ ಜನರ ಜಾತ್ರೆ
ರಥದ ಕೆರೆಯ ದಂಡೆಯಲ್ಲಿ
ಇಂದು ನೆರೆದಿದೆ.
ಬೆಳಗಿನಿಂದ ಮೋಡ ಕವಿದು
ಸ್ನಾನಸಮಯ ಮುಗಿಯ ಬಂದಿದೆ
ಇಂದು ಬಂದ ಜನಸಂದಣಿ
ಎಷ್ಟು ನಲಿವಿನಿಂದಿದೆ!
ಅಷ್ಟು ಅಮಲು ಏರಿದೆ!
ಅದರೊಳಂತು ಆ ಬಾಲೆಯ
ಸಂತಸದಿಂದುಕ್ಕಿ ಬಂದ
ನಗೆಯು, ಉಳಿದ ಎಲ್ಲ
ಜನರಿಗಿಂತ ಅಧಿಕವಾಗಿದೆ.
ತಾಲದೆಲೆಯ ಕೊಳಲನೊಂದು
ಒಂದು ಕಾಸು ಕೊಟ್ಟು ಕೊಂಡು
ಆನಂದದ ಸ್ವರದಿ ಅದನು
ಊದುತಿಹಳು ಬಾಲೆ ಅವಳು—
ತಾಲ ಎಲೆಯ ಕೊಳಲನು,
ಸಾಸಿರ ಜನ ಹರ್ಷದಿಂದ
ಗೈವ ಸದ್ದನಡಗಿಸಿ
ಅರ್ಚಕರಿಹ ಮನೆಯೊಳಿದ್ದ
ಜನಸಂದಣಿ ನೂಕುನುಗ್ಗು
ಇಲ್ಲದಾಗಿ ಹೋಗಿದೆ
ಮಳೆ ನಿಲ್ಲದೆ ಸುರಿಯುತಿಹುದು
ನಾಡೆ ತೇಲಿ ಹೊರಟಿದೆ
ಇಂದಿನ ದಿನ ಎನಿತು ದುಃಖ
ಬೇರೆಲ್ಲಿಯು ಇಷ್ಟು ಇರದು

ಅಲ್ಲಿಯ ಆ ಮಕ್ಕಳೆಲ್ಲ
ತೆರೆದ ಆಶೆಗಣ್ಣಿನಿಂದ
ಅಂಗಡಿಯನೆ ನೋಡುತಿವೆ
ಬಣ್ಣದೊಂದು ಬಡಿಗೆಯನ್ನು
ಕೊಳ್ಳಲು ಬಿಡಿಕಾಸು ಇಲ್ಲ
ಕೆಂಪು ಕಣ್ಣು ಮಾಡಿಕೊಂಡು
ಎವೆ ಇಕ್ಕದೆ ನೋಡುತಿಹರು
ಸಾವಿರ ಜನ ಸೆರೆದಿಹ ಆ
ಜಾತ್ರೆಯಲ್ಲಿ ಕರುಣೆಯನ್ನು
ಬೀರುತಿಹರು.

72. ಸ್ಪರ್ಶಮಣಿ

ವೃಂದಾವನದಿ ನದೀತೀರದಿ
ಒಂದೆ ಮನಸಿನಿಂದ
ಒಬ್ಬ ಸನಾತನ ಇದ್ದನು ದೇವನ
ನಾಮವ ಜಪಿಸುತ್ತ.

ಆ ಸಮಯಕೆ ಅತಿ ದೀನವೇಷದಲಿ
ಬಂದು ವಿಪ್ರನೊಬ್ಬ
ಆತನ ಚರಣಕೆ ವಂದಿಸಿ ನಿಂತನು
ವಿನಯದಿ ಬಳಿಸಾರಿ.

"ಯಾವೆಡೆಯಿಂದಲಿ ಬಂದಿರಿ ನೀವು?
ನಿಮ್ಮ ಹೆಸರು ಏನು?"
ಎಂದು ಸನಾತನ ಅವನನು ಕೇಳಿದ
ಪರಮಾದರದಿಂದ.
"ಹೇಳಲಿ ಏನು? ದೂರದ ನಾನು
ಬಂದೆನು. ಪಡೆದೆನು ದರುಶನವ
ವರ್ಧಮಾನವೆಂದೆನ್ನುವ ಜಿಲ್ಹೆಯ
ಮಾನಕರದಿ ಇದೆ ಮನೆಯೊಂದು
ಧನಿಕನಿದ್ದೆನು ಈಗ ಎಲ್ಲಿಯೂ
ನನ್ನಂತಹ ದೀನರೆ ಇಲ್ಲ.
ಹೊಲಮನೆ ತುಸು ಇದೆ. ತಲೆಕೆಳಗಾಗಿದೆ
ಆದಾಯವು ಇದೆ ಸ್ವಲ್ಪ
ಯಜ್ಞಯಾಗಕರ್ಮಾದಿಗಳಲ್ಲಿ
ದೊಡ್ಡಹೆಸರು ಇತ್ತು
ಇಂದದು ಯಾವುದು ಉಳಿಯದೆ ಹೋಗಿದೆ
ಕಣ್ಣಮುಂದೆ ಸತ್ತು

ನಮ್ಮ ಉನ್ನತಿಗೆ ತಪವನು ಗೈದು
ದೇವನನ್ನು ಒಲಿಸಿ
ವರವನು ಪಡೆದೆನು ಸ್ವಪ್ನದಿ ದೇವನು
ಬಂದುಸಿರಿದ ನಿಂತು.
" ಯಮುನಾ ತೀರದಿ ಇರುವ ಸನಾತನ
ಗೋಸಾಮಿಯು ಅಲ್ಲಿ
ಆತನ ಕಾಲನು ಹಿಡಿದರೆ ನಿನ್ನಯ
ಮನದ ಇಚ್ಛೆ ಪೂರ್ತಿ "

ಆಗ ಸನಾತನ ಈ ಕತೆಯನ್ನು
ಕೇಳಿ ದುಃಖಪಟ್ಟ
" ಈಗೇನುಳಿದಿದೆ ? ಇದ್ದುದನೆಲ್ಲವ
ಕೊಟ್ಟು ಹೊರಟು ಬಿಟ್ಟೆ"
ಯಾವುದೊ ನೆನಪು ಬಂದು ಸನಾತನ
ವಿಪ್ರನನ್ನು ಕರೆದು
ಹೇಳಿದ ಮಳಲಲಿ ಸ್ಪರ್ಶಮಣಿಯ ತಾ
ಹಿಂದೆ ಕಂಡುದನ್ನು
" ಅಗೊ ನೋಡಲ್ಲಿ ಆ ಮಳಲಿನಲಿ
ಮುಚ್ಚಿಹೆ ನಾನದನು
ಎಂದಾದರೂ ಅದು ದಾನವ ಮಾಡಲು
ಬರುವುದೆಂದು ಎಣಿಸಿ.
ತೆಗೆದುಕೊಂಡು ಹೋಗದನು ನೀನು
ನಾನದನು ಸ್ಪರ್ಶಿಸಿಲ್ಲ
ದುಗುಡ ನಿನ್ನದು ದೂರವಾಗುವುದು
ಅದರ ಮಹಿಮೆಯಿಂದ

ಕೂಡಲೆ ವಿಪ್ರನು ಧಾವಿಸಿ ಹೋದನು
ಅಗೆದನು ಮಳಲಿನ ರಾಶಿಯನು
ತೋಡಿ ಪಡೆದನು ಸ್ಪರ್ಶಮಣಿಯನು
ಪರಮ ಹರ್ಷದಿಂದ
ಲೋಹದ ತುಂಡಿಗೆ ತಾಗಿಸಿ ನೋಡಿದ
ಚಿನ್ನವಾಯಿತ ಅದು ಸ್ಪರ್ಶಮಾತ್ರದಿಂದ
ವಿಸ್ಮಯಗೊಂಡು ಕುಳಿತನಲ್ಲಿಯೇ
ವಿಪ್ರ ಧ್ಯಾನಿಸುತ್ತ

ಜುಳು ಜುಳು ಹರಿಯುವ ಯಮುನೆ ಸಾಗಿದಳು
ಅವನನು ರಮಿಸುತ್ತ

ಆಚೆ ದಡದಿ ರವಿ ಮುಳುಗಿ ಹೋದ ಬಲು
ದಣಿದು ಕೆಂಡವಾಗಿ
ಆಗ ವಿಪ್ರ ಅಲ್ಲಿಂದ ಎದ್ದು ಗುರುಗಳನು ಕಂಡು
ಕಣ್ತುಂಬ ನೀರು ತಂದ
"ಯಾವ ಸಿರಿಯ ಸಂಪತ್ತಿನಿಂದ
ಶ್ರೀಮಂತನಾದೆ ನೀನು!
ಆ ಸಿರಿಯ ದಯಪಾಲಿಸು ಎನಗೆ
ಬೇರೆ ಸಿರಿಯು ಬೇಡ."
ಎಂದೆನ್ನುತ ಅವ ಕೈಯೊಳಿದ್ದ ಆ
ಸ್ಪರ್ಶಮಣಿಯ ದೂರ
ನದಿಯ ನೀರಿನಲಿ ಚಲ್ಲಿಬಿಟ್ಟು ಅತಿ-
ಸ್ವಾಸ್ಥ್ಯದಿಂದ ಇದ್ದ.

VIJAYA EVENING COLLEGE,
LIBRARY
BANGALORE-4.
ACCN. NO. 1332
SECTION
COST 6=00
Date 23.8.69 Librarian.

Call No.:

Author : ಕುಲಕರ್ಣಿ F.S.G. Tr.

Title : ಬಾಲಸಾಹಿತ್ಯ

Signature	Borrowing Date

1332

ಬಾಲಸಾಹಿತ್ಯ

ಗುರುದೇವ ರವೀಂದ್ರರ ಸಾಹಿತ್ಯವು ಎಲ್ಲ ವಯಸ್ಸಿನ ವಾಚಕರಿಗೆ ಆಕರ್ಷಕವಾಗಿದೆ. ಬಾಲಸಾಹಿತ್ಯವಂತೂ ಅವರ ವಿಶೇಷ ಸಾಹಿತ್ಯ ಕೃತಿಯಾಗಿದ್ದು ತನ್ನದೇ ಆದ ಸೊಬಗಿನಿಂದ ಹೊರಸೂಸುತ್ತಿದೆ.

ವಿಚಾರಪ್ರಚೋದನಮಾಡುವ ಕವಿತೆಗಳು, ಕಿವಿಗೆ ಇಂಪು ಕೊಡುವ ಗೀತಗಳು, ವೈಭವಪೂರ್ಣ ಕಲ್ಪನಾವಿಲಾಸವುಳ್ಳ ಕತೆಗಳು, ನವರಸಗಳನ್ನೂ ಮಾರ್ಮಿಕವಾಗಿ ತೋರಿಸುವ ನಾಟಕಗಳು, ಶಬ್ದ ಚಿತ್ರಗಳಿಂದ ಶೋಭಿಸುವ ಪತ್ರಗಳು, ಉದಾತ್ತ ವಿಚಾರಗಳುಳ್ಳ ನಿಬಂಧಗಳು ಇತ್ಯಾದಿ ಕೃತಿರತ್ನಗಳು ರವೀಂದ್ರರ ಸಾಹಿತ್ಯ ವಜ್ರ ಖಣಿಯಲ್ಲಿ ಹೇರಳವಾಗಿ ದೊರೆಯುತ್ತವೆ. ಅವುಗಳಿಂದ ಕೆಲವು ಗಳನ್ನು ಆಯ್ದು ತರುಣವಾಚಕರಿಗಾಗಿ ಇಲ್ಲಿ ಪ್ರಕಟಿಸಲಾಗಿದೆ.